# ಡಿಪ್ಲೊಮಾ ಇನ್ ಎಲಿಮೆಂಟರಿ ಎಜುಕೇಶನ್

DIPLOMA IN ELEMENTARY EDUCATION D.El.Ed.

## ಸೆಮೆಸ್ಟರ್ – 2

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ

State Council of Educational Research and Training (SCERT), Kerala

## ಪೇಪರ್ 203 : ಕನ್ನಡ ಭಾಷಾಧ್ಯಯನ ಸಮೀಪನ ಮತ್ತು ರೀತಿ

ಘಟಕ 1 : ಭಾಷಾ ಕಲಿಕೆಯ ರೀತಿಶಾಸ್ತ್ರ – ವಿವಿಧ ಹಂತಗಳು

ಘಟಕ 2 : ನಮ್ಮ ಭಾಷೆ – ಪದ್ಯ ಮತ್ತು ಪದ್ಯಬೋಧನೆ

ಘಟಕ 3 : ನಮ್ಮ ಭಾಷೆ – ಗದ್ಯ ಮತ್ತು ಗದ್ಯಬೋಧನೆ

ಘಟಕ 4 : ಕಲೆ ಮತ್ತು ಸಾಹಿತ್ಯ

ಕನ್ನಡ ಭಾಷಾಧ್ಯಯನ –ಸಮೀಪನವೂ ರೀತಿಯೂ ಎಂಬ ಸೆಮೆಸ್ಟರ್–2 ರ ಈ ಪತ್ರಿಕೆ ಭಾಷಾಧ್ಯಯನದ ಆಧುನಿಕ ರೀತಿಯನ್ನು ಅರ್ಥೈಸುವುದಕ್ಕೆ ಒತ್ತು ನೀಡುತ್ತದೆ. ಭಾಷೆಯಲ್ಲಿರುವ ಪ್ರಧಾನ ಸಾಹಿತ್ಯಶಾಖೆಗಳಾದ ಕವಿತಾಬೋಧನೆ, ಗದ್ಯಬೋಧನೆ ಎಂಬಿವುಗಳ ಶೈಲಿಯನ್ನು ಪರಿಚಯಿಸಲು ಕಲೆಗೂ ಸಾಹಿತ್ಯಕ್ಕೂ ಇರುವ ಸಂಬಂಧಗಳನ್ನು ಗುರುತಿಸಲು ಇದರಲ್ಲಿರುವ ಘಟಕಗಳು ಸಹಕಾರಿಯಾಗಿವೆ. ಭಾಷಾ ವಿನಿಮಯಕ್ಕೆ ಸಂಬಂಧಿಸಿದ ವಿವಿಧ ಸಮೀಪನಗಳೂ ಶೈಲಿಗಳೂ ಇವೆ ಎಂಬುದನ್ನು, ಭಾಷೆಯ ಮೂಲ ನೈಪುಣ್ಯಗಳ ವಿಕಸನಕ್ಕೆ ಬೇಕಾಗುವ ಪ್ರಕ್ರಿಯೆಗಳನ್ನು ಗುರುತಿಸುವುದಕ್ಕೂ ಒಂದನೇ ಘಟಕ ಸಹಕಾರಿಯಾಗಿದೆ. ವಿವಿಧ ಕಾಲಘಟ್ಟಗಳಲ್ಲಿನ ಕನ್ನಡ ಕವಿತೆಗಳ ತಿರುಳು, ಭಾಷೆ, ಶೈಲಿ, ಆಸ್ವಾದನಾಂಶಗಳು, ಕವಿತಾ ಬೋಧನೆಯ ಸಮೀಪನಗಳು ಮುಂತಾದವುಗಳೆಲ್ಲ ಎರಡನೇ ಘಟಕದಲ್ಲಿ ಉಲ್ಲೇಖಿಸಲಾಗಿದೆ. ಗದ್ಯಸಾಹಿತ್ಯದ ವೈವಿಧ್ಯಮಯ ವಿನಿಮಯ ರೀತಿಯು ಮೂರನೇ ಘಟಕದಲ್ಲಿದೆ. ಕಲೆಗಳ ಹಾಗೂ ಸಾಹಿತ್ಯ ಪ್ರಕಾರಗಳ ಬೋಧನಾ ತಂತ್ರಗಳು ಹಾಗೂ ಪ್ರಸ್ತುತ ಅವುಗಳ ಪ್ರಯೋಜನಗಳನ್ನು ಘಟಕ ನಾಲ್ಕರಲ್ಲಿ ವಿವರಿಸಲಾಗಿದೆ.

## ಘಟಕ – 1

# ಭಾಷಾಕಲಿಕೆಯ ರೀತಿಶಾಸ್ತ್ರದ ವಿವಿಧ ಹಂತಗಳು

**ಮುನ್ನುಡಿ:** ಕೇರಳದಲ್ಲಿ ಪಠ್ಯಪದ್ಧತಿ ಪರಿಷ್ಕಾರದೊಂದಿಗೆ ಭಾಷಾ ಪಠ್ಯಪುಸ್ತಕದ ಕಲಿಕಾರೀತಿ ಹಾಗೂ ಮೌಲ್ಯಮಾಪನಗಳಲ್ಲಿ ಧನಾತ್ಮಕವಾದ ತುಂಬಾ ಬದಲಾವಣೆಗಳು ಆಗಿವೆ. ವಿಭಿನ್ನ ಚಿಂತನೆಗಳನ್ನು ಉದ್ದೀಪನಗೊಳಿಸುವ ಮುಕ್ತ ಸಮೀಪನವಿರುವ ಪಠ್ಯಪುಸ್ತಕಗಳನ್ನು ರಚಿಸಲಾಗಿವೆ. ಭಾಷಾ ಸಾಮರ್ಥ್ಯದೊಂದಿಗೆ ಸೃಜನಾತ್ಮಕತೆಯ ವಿಕಸನಕ್ಕೆ ಸಾಧ್ಯವಾಗುವಂತಹ ಚಟುವಟಿಕೆಗಳನ್ನು ನೀಡಲಾಗುತ್ತಿವೆ. ವಿದ್ಯಾರ್ಥಿಯನ್ನು ನಿರಂತರವಾಗಿ ಮೌಲ್ಯನಿರ್ಣಯಕ್ಕೊಳಪಡಿಸಿ ಮಗುವಿನ ಸಾಧ್ಯತೆ – ಪರಿಮಿತಿಯನ್ನು ಗುರುತಿಸಿ ಅದಕ್ಕೆ ಊರುಗೋಲಾಗಿ ಸಹಾಯ ನೀಡಿ ಮುಂದಕ್ಕೆ ಕೊಂಡೊಯ್ಯುವ ಮೌಲ್ಯಮಾಪನ ವಿಧಾನವನ್ನು ಬಳಸಲಾಯಿತು. ಮಕ್ಕಳು ಭಾಷೆಯನ್ನು ಕಲಿಯುವುದಲ್ಲ, ಬದಲಾಗಿ ಆರ್ಜಿಸಿಕೊಳ್ಳುತ್ತಾರೆಂಬುದರ ತಳಹದಿಯಲ್ಲಿ ಭಾಷಾಕಲಿಕೆಯನ್ನು ಸಜ್ಜೀಕರಿಸಲಾಗಿದೆ. ವಿವಿಧ ವ್ಯವಹಾರ ರೂಪಗಳ ಮೂಲಕ ಭಾಷೆಯು ಪ್ರಕಟಿಸಲ್ಪಡುತ್ತದೆಂಬುದನ್ನು ಗುರುತಿಸಿ ಚಟುವಟಿಕೆಗಳನ್ನು ಸಿದ್ಧಪಡಿಸಲಾಯಿತು. ಭಾಷಾ ಸಾಹಿತ್ಯವನ್ನು ಗಳಿಸಲು ಸಹಾಯಕವಾಗಬಲ್ಲ ಎಲ್ಲಾ ಸಾಮಗ್ರಿಯೂ ಭಾಷಾ ತರಗತಿಯ ಕಲಿಕಾ ಸಾಮಗ್ರಿಗಳಾದವು. ಆಶಯಗಳ ಮೂಲಕ ಅದರ ಘಟಕಗಳಾಗಿರುವ ವಾಕ್ಯಗಳ, ಪದಗಳ ಹಾಗೂ ಅಕ್ಷರಗಳ ತನಕ ಹೋಗುವ ಸಮೀಪನವು ಭಾಷಾ ತರಗತಿಯನ್ನು ಸೃಜನಾತ್ಮಕವೂ, ಜೀವನಸ್ಪರ್ಶಿಯೂ ಆಗಿಸಿತು. ಸಮಗ್ರವೂ, ಯಥಾರ್ಥವೂ ಜೀವನಕ್ಕೆ ಉಪಯುಕ್ತವಾದ ಸಂದರ್ಭಗಳಿಗೆ ಸಹಾಯಕವೂ ಆಗಬಲ್ಲ ಭಾಷಾಕಲಿಕೆಯ ವಿಧಾನವನ್ನು ಇಲ್ಲಿ ಅಳವಡಿಸಲು ಪ್ರಯತ್ನಿಸಲಾಗಿದೆ. ಸ್ವತಂತ್ರ ಓದು, ಅರ್ಥಗ್ರಹಿಕೆ ಮತ್ತು ಸ್ವತಂತ್ರ ಆವಿಷ್ಕಾರ ಎಂಬಿವುಗಳಿಗೆ ಈ ವಿಧಾನವು ಪ್ರಾಧಾನ್ಯತೆಯನ್ನು ಕೊಡುತ್ತದೆ. ಭಾಷಾ ಸಮಗ್ರತಾ ದರ್ಶನವೆಂಬ ಈ ವಿಧಾನವು ನೂತನ ಭಾಷಾ ಕಲಿಕೆಗೆ ಆಧಾರವಾದ ಸಮೀಪನವಾಗಿದೆ.

### ಭಾಷಾಕಲಿಕೆಯ ರೀತಿ ಶಾಸ್ತ್ರ – ವಿವಿಧ ಹಂತಗಳು

**ಈ ಯೂನಿಟಿನ ಕಲಿಕಾಸಾಧನೆಗಳು**

1. ಭಾಷಾ ಸಮಗ್ರತಾದರ್ಶನದ ಮೂಲಭೂತ ತಿಳುವಳಿಕೆಗಳನ್ನು ಗುರುತಿಸಿ ಮಾತೃಭಾಷೆ ಕಲಿಕೆಯಲ್ಲಿ ಉಪಯೋಗಿಸಿಕೊಳ್ಳುವರು.
2. ಅರ್ಥಪೂರ್ಣವಾದ ಪುನರ್ ಅನುಭವಗಳನ್ನು ನೀಡಬೇಕೆಂಬುದನ್ನು ಗುರುತಿಸಿ ತರಗತಿಗಳಲ್ಲಿ ಬಳಸಿಕೊಳ್ಳುವರು.
3. ಭಾಷಾವಿನಿಯಮಕ್ಕೆ ಸಂಬಂಧಿಸಿದ ವಿವಿಧ ರೀತಿಯ ಸಮೀಪನಗಳನ್ನು ತಿಳಿದು ಪ್ರಯೋಜನಪಡಿಸಿಕೊಳ್ಳುವರು.
4. ಭಾಷೆಯ ಮೂಲಭೂತ ನೈಪುಣ್ಯಗಳ ವಿಕಾಸಕ್ಕೆ ಬೇಕಾಗುವ ಮಾರ್ಗಗಳ ಕುರಿತಾದ ತಿಳುವಳಿಕೆಯನ್ನು ರೂಪಿಸಲು ಕ್ರಮೀಕರಿಸುವುದರ ಪ್ರಾಧಾನ್ಯತೆಯನ್ನು ಮನಗಂಡು ಅದಕ್ಕನುಗುಣವಾದ ಚಟುವಟಿಕೆಗಳನ್ನು ರೂಪಿಸಲು ಸಾಧ್ಯವಾಗುವುದು.

**ಈ ಅಧ್ಯಾಯದ ಪ್ರಧಾನ ಆಶಯಗಳು**

- ಸ್ವ ಕಲಿಕೆಯ ಮೂಲಕ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗುವಾಗ ಮಕ್ಕಳಲ್ಲಿ ಅತೀ ಹೆಚ್ಚು ಕಲಿಕೆಯುಂಟಾಗುವುದು.
- ಅತೀ ಹೆಚ್ಚು ವಿಷಯಗಳನ್ನು ಮಕ್ಕಳು ಕಲಿಯುವುದು ನೇರವಾದ (ಸಿದ್ಧ) ಬೋಧನೆಯಿಂದಲ್ಲ.
- ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಅನುವಾಗುವಂತೆ ಅನೇಕ ಸಂದರ್ಭಗಳನ್ನು ಮಕ್ಕಳಿಗಾಗಿ ತರಗತಿಯಲ್ಲಿ ಒದಗಿಸಬೇಕು.

- ಪೂರ್ಣತೆ (ಸಮಗ್ರ)ಯಿಂದ ಭಾಗಗಳಿಗೆ ಎಂಬಂತೆ ಭಾಷಾಗಳಿಕೆಯಾಗುವುದು.
- ದೈನಂದಿನ ವ್ಯವಹಾರದಲ್ಲಿ ಭಾಷೆಯನ್ನುಪಯೋಗಿಸುವಾಗ ಭಾಷೆ ವಿಕಾಸಗೊಳ್ಳುವುದು.
- ಏನನ್ನಾದರೂ ಬರೆಯಬೇಕು ಎಂಬ ಅಗತ್ಯತೆಯ ಅರಿವಾದಾಗ ಬರಹವು ಅರ್ಥಪೂರ್ಣವಾಗುವುದು.
- ವರ್ತುಲ ರೀತಿಯ ಪುನರಾನುಭವಗಳು, ಆಶಯಗಳು, ಅಕ್ಷರಗಳು ಜ್ಞಾನಸಂಪಾದನೆಗೆ ಅಗತ್ಯವಾಗಿವೆ.
- ಅಕ್ಷರಗಳ ಬಳಕೆಯ ರೀತಿ, ಪದಗಳ ಹಾಗೂ ಆಶಯಗಳ ಬಳಕೆಯ ರೀತಿ ಇತ್ಯಾದಿ ಭಾಷಾ ವ್ಯವಹಾರಗಳಿಗೆ ಸಂಬಂಧಿಸಿ ವಿವಿಧ ರೀತಿಯ ಸಮೀಪನಗಳಿವೆ.
- ಆಲಿಸುವಿಕೆ, ಮಾತು, ಓದುವಿಕೆ ಮತ್ತು ಬರಹ ಎಂಬೀ ಭಾಷಾ ಸಾಮರ್ಥ್ಯಗಳಿವೆ. ಇವುಗಳನ್ನು ಸ್ವಾಯತ್ತಗೊಳಿಸಲು ಕ್ರಮೀಕರಣವನ್ನು ಪಾಲಿಸಬೇಕು.

**ಜ್ಞಾನಸಂಪಾದನೆ**

ಒಂದನೇ ತರಗತಿಗೆ ತಲುಪುವ ಮಗುವಿಗೆ ಮಳೆಯ ಕುರಿತಾಗಿ ಏನೆಲ್ಲಾ ತಿಳಿದಿರಬಹುದು? ಕೆಳಗಿನ ಪದಸೂರ್ಯವನ್ನು ಭರ್ತಿಗೊಳಿಸಿರಿ.




ನಿಮ್ಮ ಶಾಲೆಯಲ್ಲಿರುವ ಪ್ರೀ ಪ್ರೈಮರಿ ಮಕ್ಕಳಲ್ಲಿ ಅಥವಾ ಮನೆಯ ಸಮೀಪದಲ್ಲಿರುವ ಪ್ರೀ ಪ್ರೈಮರಿ ಮಕ್ಕಳಲ್ಲಿ ಮಳೆಯ ಕುರಿತು ಚರ್ಚಿಸಿರಿ. (ಸೂಚಕಗಳನ್ನು ಆಧರಿಸಿ) ಹಾಗಿದ್ದರೆ ಯಾವುದೆಲ್ಲಾ ಸೂಚಕಗಳ ಅಗತ್ಯವಿದೆ?

- ಮಳೆಯಲ್ಲಿ ಆಡುತ್ತೀರಾ?
- 
- 
- 

ಅವರ ಹೇಳಿಕೆಗಳನ್ನು ಬರೆಯಿರಿ. ಈ ಮೊದಲು ನೀವು ಭರ್ತಿಗೊಳಿಸಿದ ಪದಸೂರ್ಯದಲ್ಲಿನ ತಿಳುವಳಿಕೆಯೊಂದಿಗೆ ಹೋಲಿಸಿರಿ. ಮಕ್ಕಳು ಹೇಳಿದ ಆಶಯಗಳು, ಪದಸೂರ್ಯನದಲ್ಲಿನ ಆಶಯಗಳನ್ನು ವಾಕ್ಯರೂಪದಲ್ಲಿ ಬರೆಯುವಾಗ ಯಾವುದೆಲ್ಲಾ ವಾಕ್ಯಗಳು ಲಭಿಸುವುದು? ಎಷ್ಟು ವಾಕ್ಯಗಳು ಲಭಿಸುವುದು?

- ಮಳೆ ಬರುವಾಗ ತಂಪಾಗುವುದು.
- ಮಳೆಯಲ್ಲಿ ನಡೆಯಲು ಕೊಡೆ ಬೇಕು
- 

ಐದು ವರ್ಷದ ಒಂದು ಮಗು ಮಳೆಯ ಕುರಿತು ಒಂದಷ್ಟು ವಿಚಾರಗಳನ್ನು ತಿಳಿದಿದೆ ಎಂದು ಕಂಡುಕೊಂಡಿರಲ್ಲವೇ? ಈ ಜ್ಞಾನವನ್ನು ಮಗು ಗಳಿಸಿರುವುದು ಹೇಗೆ? ಮಗು ಜನಿಸಿದಂದಿನಿಂದ ಐದು ವರ್ಷದವರೆಗೆ ಪ್ರತಿ ವರ್ಷವೂ ಮಳೆಯ ಕುರಿತಾಗಿ ಆ ಮಗುವಿಗೆ ಉಂಟಾಗಿರಬಹುದಾದ ಅನುಭವಗಳನ್ನು ಚರ್ಚಿಸಿರಿ.

- ಹೊರಚಾವಡಿಯಲ್ಲಿ ಮಲಗಿದ್ದ ಮಗುವನ್ನು ಒಳಕೋಣೆಯಲ್ಲಿ ಮಲಗಿಸುವುದು, ಹೊದಿಸುವುದು.
- ಮಳೆಯಲ್ಲಿ ಕೊಡೆ ಹಿಡಿದು ಕೊಂಡು ಹೋಗುವುದು.
- ಸಂಭಾಷಣೆಗಳು (ಬಟ್ಟೆ, ಸೌದೆ, ಒದ್ದೆಯಾಗದಂತಿಡಲು ಹೇಳುವುದು)
- ಮಳೆಗೆ ಸಂಬಂಧಿಸಿದ ಶಬ್ದಗಳನ್ನು ಕೇಳಿದ ಅನುಭವ (ಸಿಡಿಲು, ಗಾಳಿ, ಮಳೆಯ ನಿನಾದ, ನೀರಿನ ಪ್ರವಾಹ ಶಬ್ದ)
- ಮಳೆಯಲ್ಲಿ ನೆನೆದರೆ ಉಂಟಾಗುವ ಸ್ಪರ್ಶಾನುಭವಗಳು
- ಮಳೆಗೆ ಮೊದಲು, ಬರುತ್ತಿರುವಾಗ, ನಂತರದ ವೇಳೆಯಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಕಂಡ ಅನುಭವಗಳು.
- ಹೊಸ ಮಳೆಗೆ ಮಣ್ಣಿನ ವಾಸನೆಯ ಅನುಭವ

ಇನ್ನೂ ಹೆಚ್ಚಿನ ಅನುಭವಗಳನ್ನು ಹಂಚಿರಿ.

ಹೀಗೆ ಐದು ವರ್ಷಗಳಿಂದ ಮಳೆಗೆ ಸಂಬಂಧಿಸಿದ ಪೂರ್ಣವಾದ ಅನುಭವಗಳಿಂದಲೇ ಮಳೆಗೆ ಸಂಬಂಧಿಸಿದ ಆಶಯಗಳು ಮನಸ್ಸಿನಲ್ಲಿ ರೂಪುಗೊಳ್ಳುವುದು. ಆದುದರಿಂದಲೇ 'ಮಳೆ' ಎಂದು ಕೇಳುವಾಗ ಅದಕ್ಕೆ ಸಂಬಂಧಪಟ್ಟ ಪೂರ್ಣಚಿತ್ರಗಳು ಮಗುವಿನ ಮನಸ್ಸಿನಲ್ಲಿ ಮೂಡುವುದು. ಇದುವೆ ಆಶಯಮಂಡನೆಯ ಬುನಾದಿಯಾಗಿದೆ.

'ಮಳೆ' ಎಂಬುದರ ಆ ಪೂರ್ಣ ತಿಳುವಳಿಕೆಗಳೇ ಮಳೆಗೆ ಸಂಬಂಧಿಸಿದ ಪಾಠ, ಆ ಆಶಯಗಳನ್ನು ವಾಕ್ಯರೂಪದಲ್ಲಿ ಪರಿಚಯಿಸಲು, ಅಲ್ಲಿಯ ಪದಗಳನ್ನು ಗುರುತಿಸಲು ಪದಗಳನ್ನು ರೂಪಿಸಲು, ಅಕ್ಷರಗಳನ್ನು ಕಂಡುಹಿಡಿಯಲು ಸಮರ್ಥನನ್ನಾಗಿ ಮಾಡುತ್ತದೆ.

**ನೀವು ನಡೆಸಬೇಕಾದ ಚಟುವಟಿಕೆಗಳು**

- ಪೂರ್ಣತೆಯಿಂದ ಅದರ ಘಟಕಗಳ ತನಕ ಎಂಬ ಆಶಯವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಒಂದನೇ ತರಗತಿಯ ಪಠ್ಯಪುಸ್ತಕದ ಘಟಕಗಳನ್ನು ಪರಿಶೀಲಿಸಿ ಕಂಡುಕೊಳ್ಳಿ.
- ಒಂದನೇ ತರಗತಿಯ 'ಮಳೆಮೋಡ' ಎಂಬ ಪಾಠಭಾಗದಲ್ಲಿ ಓದಿಗೂ, ಬರಹಕ್ಕೂ, ಪುನರಾನುಭವಕ್ಕೂ ಸಾಧ್ಯತೆಗಳಿವೆಯೇ? ಆವರ್ತನೆಗೂ ಪುನರಾನುಭವಕ್ಕು ಇರುವ ವ್ಯತ್ಯಾಸವೇನು?
- ಒಂದನೇ ತರಗತಿಯ ಪಾಠಭಾಗವನ್ನು ಪರಿಶೀಲಿಸಿ ಒಂದು ಪಾಠದಲ್ಲಿ ಬಂದಿರುವ ಅಕ್ಷರಗಳು ಇನ್ನೊಂದು ಪಾಠದಲ್ಲಿ ಆವರ್ತಿಸುವು ಸಂದರ್ಭ ನೀಡಲಾಗಿದೆಯೋ ಎಂಬುದನ್ನು ಕಂಡುಹಿಡಿದು ಬರೆಯಿರಿ.

ಒಂದನೇ ತರಗತಿಯ ಪಠ್ಯಪುಸ್ತಕದ ಮಳೆ, ಮನೆ, ಆಹಾರ, ಆಚರಣೆ ಎಂಬಿತ್ಯಾದಿ ಹೆಚ್ಚಿನ ಪಾಠಭಾಗದ ಆಶಯಗಳ್ನು ಮಗುವಿಗೆ ಚೆನ್ನಾಗಿ ತಿಳಿದಿರುವ ಮಂಡಲವಾಗಿದೆ. ಹಾಗಿದ್ದರೆ 'ಮಳೆ' ಪಾಠಭಾಗವನ್ನು ತರಗತಿಯಲ್ಲಿ ಮಂಡಿಸುವಾಗ ಮಗುವಿನ ಅನುಭವವನ್ನು ಹೊಂದಿಸುವಿರಲ್ಲವೇ? ಮಳೆಗಾಲದ ವಿಶೇಷತೆಗಳು, ಮಳೆಗೆ ನೆನೆದ ಅನುಭವಗಳು ಎಂಬಿತ್ಯಾದಿ 'ಭಾಷಣ'ದ ಸಂದರ್ಭಗಳನ್ನು ನೀಡಬಹುದು. ಮಕ್ಕಳ ಸಂಭಾಷಣೆಯಿಂದ ಉಂಟಾಗುವ ಆಶಯಗಳನ್ನು ವಾಕ್ಯದ ರೂಪದಲ್ಲಿ ಅಧ್ಯಾಪಿಕೆಯು

ಕರಿಹಲಗೆಯಲ್ಲಿ ಬರೆಯುವರು.

ಮಳೆ ಬಂತು

ಧಾರಾಕರವಾದ ಮಳೆ

ಮಳೆ ನಿಂತಿತು

ಮಳೆ ಎಂದು ಎಲ್ಲೆಲ್ಲಾ ಬರೆದಿದೆ. ಅಕ್ಷರ ಹಾಗೂ ಶಬ್ದಗಳನ್ನು ತುಲನೆ ಮಾಡಿ ನೋಡಿರಿ. ಶಬ್ದರೂಪವನ್ನು ಅದರ ಚಿತ್ರರೂಪದಲ್ಲಿರುವ ಲಿಪಿಗೆ ಹೊಂದಿಸಿದಾಗ ಓದುವಿಕೆಯು ಉಂಟಾಗುತ್ತದೆ. ಇದರ ಮೂಲಕ ಮಳೆ ಎಂಬ ಪದವನ್ನು ಬೇರ್ಪಡಿಸಿ ತಿಳಿಸಲಾಗುತ್ತದೆ. ಮುಂದೆ ನೀಡುವ ಓದುವ ಸಾಮಗ್ರಿಯಲ್ಲಿ ಮಳೆ ಎಂಬ ಪದದ ಅರ್ಥಪೂರ್ಣವಾದ ಆವರ್ತನೆಯನ್ನು ನೀಡಬಹುದಲ್ಲವೇ?

ಮರದ ಮೇಲೆ ಮಳೆ ಸುರಿಯುತಿದೆ

ಕೊಡೆಯ ಮೇಲೆ ಮಳೆ ಸುರಿಯುತಿದೆ

ಹೊಳೆಯ ಮೇಲೆ ಮಳೆ ಸುರಿಯುತಿದೆ

....................................................

....................................................

ಮಳೆ, ಮರ ಎಂಬ ಪದಗಳನ್ನು ನೋಡಿ ಮ ಎಂಬ ಅಕ್ಷರವನ್ನು ಅರಿಯಬಹುದು. ಹೀಗೆ ಒಂದನೇ ತರಗತಿಯ ಮಗುವಿಗೆ ಲಿಪಿಯ ಪರಿಚಯವನ್ನು ಮಾಡಬೇಕಾಗಿದೆ. ಆಶಯ → ವಾಕ್ಯ →ಪದ →ಅಕ್ಷರ ಎಂಬ ಕ್ರಮದಲ್ಲಿ ಅಕ್ಷರದತ್ತ ಸಾಗಿ ಬಳಿಕ ಪರಿಚಯವಾದ ಅಕ್ಷರದ ಮೂಲಕ ಹೊಸ ಪದಗಳಿಗೂ ಅವುಗಳನ್ನು ಉಪಯೋಗಿಸಿ ಹೊಸ ವಾಕ್ಯಗಳನ್ನು ತನ್ಮೂಲಕ ಆಶಯಗಳಿಗೂ ಸಾಗಬೇಕು.

**ಭಾಷೆಯನ್ನು ಪ್ರಯೋಗಿಸುವ ಮಗು**

**ಕೆಳಗಿನ ಅನುಭವ ಟಿಪ್ಪಣಿಯನ್ನು ಓದಿರಿ:**

ಎರಡು ವರ್ಷ ಪ್ರಾಯದ ಪುಟ್ಟಿಯು ತಾನು ಕೋಣೆಯಲ್ಲಿ ಆಟವಾಡುತ್ತಾ ಇದ್ದಾಗ ಒಂದು ಮೂಲೆಯಲ್ಲಿರುವ ಪೆಟ್ಟಿಗೆಯಲ್ಲಿ ತನ್ನ ಕರಡಿಯ ಗೊಂಬೆಯನ್ನು ಕಂಡಳು. ಎಲಾ ... ಕಳ್ಳಾ.... ನೀನು ಇಲ್ಲಿ ಮಲಗಿದ್ದೀಯಾ?... ಎನ್ನುತ್ತಾ ಅವಳು ಅದನ್ನು ಎತ್ತಿಕೊಂಡಳು. ಇದನ್ನು ನೋಡಿ ಅಮ್ಮನೂ ಅಜ್ಜಿಯೂ ಜೋರಾಗಿ ನಕ್ಕರು. ನಿನಗೆಲ್ಲಿಂದ ಇಷ್ಟು ದೊಡ್ಡ ವಾಕ್ಯ ಸಿಕ್ಕಿತು? ಅಜ್ಜಿಯು ಕೆನ್ನೆಯನ್ನು ಸವರುತ್ತಾ ಕೇಳಿದರು. ಅಮ್ಮನೂ ಅಜ್ಜಿಯೂ ಈ ವಾಕ್ಯದ ಕುರಿತಾಗಿ ಚರ್ಚಿಸಿದರು.

ಅಪ್ಪ ಬಂದರು, ಅಮ್ಮ ಹೋದರು ಇತ್ಯಾದಿ ಚಿಕ್ಕ ಚಿಕ್ಕ ವಾಕ್ಯಗಳನ್ನು ಹೇಳುವ ಮಗುವು ಇಷ್ಟು ದೊಡ್ಡ ವಾಕ್ಯವನ್ನು ಹೇಳಲು ಕಲಿತುದು ಹೇಗೆ? ಎಂದು ಆಶ್ಚರ್ಯಗೊಂಡರು. ಇನ್ನೊಂದು ದಿನ ಪುಟ್ಟಿಯು ಅಮ್ಮನನ್ನು ಕೂಗುತ್ತಾ ಕೋಣೆಗಳಿಗೂ ಜಗಲಿಗೂ, ಮನೆಯ ಹೊರಕ್ಕೂ ಬಂದು ನೋಡಿದಳು. ಹಾಗೇ ಹುಡುಕುವಾಗ ಅಡುಗೆಕೋಣೆಯಲ್ಲಿ ಚಹಾ ಕುಡಿಯುತ್ತಿದ್ದ ತಂದೆಯನ್ನು ಕಂಡಳು. ತಂದೆಗೊಂದು ಬಾರಿಸಿ ಅಪ್ಪಿ ಹಿಡಿದು ಎಲಾ ಕಳ್ಳಾ ನೀನಿಲ್ಲಿ ನಿಂತಿದ್ದಿಯಾ? ಎಂದಳು. "ಏನು ಹೇಳಿದಿಯಾ? ತಂದೆಯನ್ನು ಕಳ್ಳಾ ಅಂದಿಯಾ? ಅವಳನ್ನೆತ್ತಿ ಮುದ್ದಾಗಿ ತಂದೆ ಆಟವಾಡಿಸಿದರು. ಪುಟ್ಟಿಗೆ ಇಷ್ಟುದೊಡ್ಡ ವಾಕ್ಯವು ಹೇಗೆ ಲಭಿಸಿತು ಎಂದು ತಂದೆಯು ತಾಯಿಯೊಂದಿಗೆ ಚರ್ಚಿಸಿದರು. ಮುಂದೊಂದು ದಿನ ಟಿವಿಯಲ್ಲಿ ಮಕ್ಕಳ ಕಾರ್ಟೂನ್ ಚಾನೆಲಲ್ಲಿ ಎಲಾ ಕಳ್ಳಾ ನೀನಿಲ್ಲಿ ಕುಳಿತಿದ್ದೀಯಾ? ಎಂಬುದನ್ನು ಕೇಳಿದಾಗ ಪುಟ್ಟಿಯು ಮಾತನ್ನು ಆರ್ಜಿಸಿಕೊಂಡ ಬಗೆ ತಿಳಿಯಿತು.

**ನೀವು ನಡೆಸಬೇಕಾದ ಚಟುವಟಿಕೆಗಳು**

♦ ಇಲ್ಲಿ ಪುಟ್ಟಿಯು ಟಿ.ವಿಯಿಂದ ಕೇಳಿದ ಮಾತನ್ನು ಹಾಗೆಯೇ ಹೇಳಿದ್ದಾಳೋ? ಇಲ್ಲವೋ ಸಂದರ್ಭಕ್ಕನುಸರಿಸಿ ಬದಲಾವಣೆಯನ್ನು ಮಾಡಿದ್ದಾಳೋ?

♦ ಈ ರೀತಿಯಲ್ಲಿ ಭಾಷೆಯನ್ನು ಪ್ರಯೋಗಿಸಲು ಮಕ್ಕಳಿಗೆ ಹೇಗೆ ಸಾಧ್ಯವಾಗುತ್ತದೆ? ಹೇಳುವವನಿಗೂ, ಕೇಳುವವನಿಗೂ ಆಸಕ್ತಿ ಇದ್ದರೆ ಸಂಭಾಷಣೆಯನ್ನು ಎಲ್ಲಿ ತನಕ ಮುಂದುವರಿಸಬಹುದು? ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

♦ ಈ ರೀತಿಯಲ್ಲಿ ಭಾಷೆಯನ್ನುಪಯೋಗಿಸುವ ಇತರ ಜೀವಿಗಳಿವೆಯೇ? ನಿಮ್ಮ ಅಭಿಪ್ರಾಯವನ್ನು ಚರ್ಚಿಸಿ ತರಗತಿಯಲ್ಲಿ ಮಂಡಿಸಿರಿ.

♦ ಭಾಷಾ ಸಮಗ್ರತಾದರ್ಶನದ ಪ್ರಧಾನ ಆಶಯವನ್ನು ಹ್ಯಾಂಡ್‌ಬುಕ್, ಪಾಠಪುಸ್ತಕ ಹಾಗೂ ಇತರ ರೆಫರೆನ್ಸ್ ಪುಸ್ತಕಗಳಿಂದ ಪರಿಶೀಲಿಸಿ ಭಾಷಾ ಸಮಗ್ರತೆಯ ಸ್ವಾಧೀನವು 'ತರಗತಿ ಕೋಣೆಗಳಲ್ಲಿ' ಎಂಬ ವಿಷಯದಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.

♦ 'ಭಾಷಾ ಸಮಗ್ರತಾ ದರ್ಶನ' ಎಂಬ ವಿಷಯವನ್ನು ಚರ್ಚಿಸಲು ಟಿಪ್ಪಣಿಯನ್ನು ತಯಾರಿಸಿರಿ.

ಸೆಮಿನಾರ್ ಮಂಡನೆಗೆ, ಚರ್ಚೆಗೆ ಬೇಕಾದ ಟಿಪ್ಪಣಿಯನ್ನು ತಯಾರಿಸಲು ಕೆಳಗೆ ಕೊಟ್ಟಿರುವ ಪುಸ್ತಕಗಳನ್ನು ಸಂಗ್ರಹಿಸಿರಿ.

1.

2.

3. ಕೇರಳ ಪಠ್ಯಪದ್ಧತಿ 2007 – NCERT

4.

5. ಪ್ರಾಥಮಿಕ, ಹಿರಿಯ ಪ್ರಾಥಮಿಕ ತರಗತಿ ಅಧ್ಯಾಪಕರ ಕೈಪಿಡಿ

6.

ಬ್ರೂನರ್ ವೈಗೋಸ್ಕಿ ಎಂಬಿವರು ಪ್ರತಿಪಾದಿಸಿ ಸಾಮಾಜಿಕ ನಿರ್ಮಾಣ ವಾದ, ನೋಂ ವೈಗೋಸ್ಕಿ ಆವಿಷ್ಕರಿಸಿದ ಸರ್ವಭಾಷಾ ವ್ಯಾಕರಣ ಸಿದ್ಧಾಂತ, ಗಸ್ಟಾಲ್ಟ್ ಮನಃಶಾಸ್ತ್ರಗಳು, ಮಗುವನ್ನು ಕೇಂದ್ರೀಕರಿಸಿ ವಿದ್ಯಾಭ್ಯಾಸ ಪ್ರಕ್ರಿಯೆಯ ರೀತಿಶಾಸ್ತ್ರ ಎಂಬಿವುಗಳ ಸಮನ್ವಯದಿಂದ ಭಾಷಾ ಸಮಗ್ರತಾ ದರ್ಶನವು ಸ್ವತಃ ಕಲಿಕೆಯಲ್ಲಿ ತೊಡಗುವಾಗ ಮಗುವು ಅತೀ ಹೆಚ್ಚು ಕಲಿಯುವನು ಎಂಬುದರ ಆಧಾರದಲ್ಲಿದೆ. ಸರಳವಾದ ಚಿಕ್ಕದಾದ ಭಾಷಾ ನೈಪುಣ್ಯವನ್ನು ಮೌಲ್ಯಮಾಪನ ಮಾಡಲಿರುವ ಸೂಚಕಗಳಿಗೆ ಪ್ರತಿಕ್ರಿಯಿಸಲು, ಬರೆಯಲು ಹಾಗೂ ಓದಲಿರುವ ಸಾಮರ್ಥ್ಯವನ್ನು ಹೆಚ್ಚಿನ ಮಕ್ಕಳು ಗಳಿಸುತ್ತಾರೆ. ಆದರೆ ಆಶಯಗಳನ್ನು, ನೈಪುಣ್ಯಗಳನ್ನು, ವಿಧಾನಗಳನ್ನು ಸುಲಭವಾಗಿ ಫ್ರಲಪ್ರದವಾಗಿ ಗಳಿಸಲು ಮಕ್ಕಳಿಗೆ ಸಹಾಯ ಮಾಡಲು ಅವರನ್ನು ಚಟುವಟಿಕೆಗಳಲ್ಲಿ ಭಾಗಿಗಳಾಗುವಂತೆ ಮಾಡಬೇಕು. ಶಾರೀರಿಕವಾದ ಕೆಲಸವಾದರೂ ಅದರಲ್ಲಿ ಮಕ್ಕಳ ಮನಸ್ಸೂ ಭಾಗವಹಿಸುತ್ತದೆ. ಜನ್ಮದತ್ತವಾದ ಭಾಷಾ ಸಾಮರ್ಥ್ಯ ಹಾಗೂ ತನ್ನ ಕುಟುಂಬದ ಸದಸ್ಯರೊಂದಿಗಿರುವ ಸುತ್ತಮುತ್ತಲಲ್ಲಿ ಇರುವವರೊಂದಿಗಿರುವ ಸಹವಾಸದಿಂದ ಮಗುವು ತನ್ನ ಭಾಷೆಯಲ್ಲಿ ಪೂರ್ಣವಾದ ವಿಕಾಸಗೊಂಡ ಭಾಷಾ ವಿನಿಮಯ ಸಾಮರ್ಥ್ಯವನ್ನು ಗಳಿಸಿಕೊಂಡೇ ವಿದ್ಯಾಲಯಕ್ಕೆ ತಲಪುತ್ತದೆ. ಆ ಘಟ್ಟದಲ್ಲಿ ಸಾವಿರಾರು ವಾಕ್ಯಗಳು ಮಾತ್ರವಲ್ಲ ಶಬ್ದ, ಪದ, ವಾಚಕಗಳ ಸ್ವಾಮಿತ್ವವನ್ನು ಹೊಂದಿರುತ್ತದೆ. ಅಲ್ಲದೆ ಮಕ್ಕಳಿಗೆ ಸ್ವಂತ ಭಾಷೆ(ಗಳು)ಯನ್ನು ಸರಿಯಾದ ಸಂದರ್ಭದಲ್ಲಿ ಪ್ರಯೋಗಿಸಲು ಸಾಧ್ಯವಾಗುವುದು. ಜನರು, ಸಮಯ, ಸಂದರ್ಭಗಳನ್ನು ನೋಡಿ ವ್ಯವಹರಿಸಲು, ಬೇಕಾದ ಭಾವನೆಯ ಮೂಲಕ ಮಾತನಾಡಲು ಅವರಿಗೆ ತಿಳಿಯುತ್ತದೆ. ಶಬ್ದಗಳ ಭಂಡಾರದಿಂದ ಭಾಷೆಯ ಸಂಕೀರ್ಣತೆಯನ್ನು ಬೇರ್ಪಡಿಸುವ ಸಾಮರ್ಥ್ಯವು ಅವರಿಗಿದೆ. ತರಗತಿಯಲ್ಲಿ ಈ ಸಾಮರ್ಥ್ಯವನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಿ ಭಾಷಾ ಗ್ರಹಣವನ್ನೂ ವಿನಿಮಯ ಸಾಮರ್ಥ್ಯವನ್ನೂ ಇನ್ನೂ ಮೇಲ್ಮಟ್ಟಕ್ಕೆ ತಲುಪಿಸಬೇಕೆಂಬುದು ಪ್ರಾಥಮಿಕ ಭಾಷಾ ವಿದ್ಯಾಭ್ಯಾಸದ

ಗುರಿಯಾಗಿದೆ. ಮೂರನೇ ತರಗತಿಯಿಂದ ಇನ್ನೂ ಹೆಚ್ಚಿನ ಮಟ್ಟದ ವಿನಿಮಯ ಸಾಮರ್ಥ್ಯ, ವಿಮರ್ಶಾತ್ಮಕ ಚಿಂತನೆಯ ವಿಕಸನಕ್ಕಾಗಿ ಬಾಯ್ದೆರೆಯೂ ಬರಹವೂ ಸಹಕಾರಿ. ಪ್ರಾಥಮಿಕ ಮಟ್ಟದಲ್ಲಿ ಮಕ್ಕಳ ಭಾಷೆಯನ್ನು ಹಾಗೆಯೇ ಅಂಗೀಕರಿಸಬೇಕು. ಒಳ್ಳೆಯ ರಸವತ್ತಾದ ಕಲಿಕಾ ಸಂದರ್ಭಗಳನ್ನು ಸೃಷ್ಟಿಸುವುದರಲ್ಲಿ ನಾಲ್ಕನೆ ತರಗತಿಗೆ ತಲುಪುವಾಗ ಅಕ್ಷರಗಳನ್ನಲ್ಲದೆ ಲಿಖಿತ ಭಾಷೆಯನ್ನು ಪ್ರಯೋಗಿಸಲಿರುವ ಸಾಮರ್ಥ್ಯವನ್ನು ಮಗುವು ಸ್ವಂತವಾಗಿ ಗಳಿಸಿರುತ್ತಾನೆ. ಅದೇ ವೇಳೆಯಲ್ಲಿ ಮಗು ಮನೆಯಲ್ಲಿ ಉಪಯೋಗಿಸುವ ಭಾಷೆ/ಮಾತೃಭಾಷೆಯನ್ನು ಅವಗಣಿಸಿದಂತೆಯೂ ಆಗಬಾರದು. ‘ತಪ್ಪು’ ಆಗುವುದು ಕಲಿಕಾಪ್ರಕ್ರಿಯೆಯ ಭಾಗವಾಗಿದೆ ಎಂಬುದನ್ನು ಅಂಗೀಕರಿಸಬೇಕು. ಕಾಲಕ್ರಮೇಣ ಮಕ್ಕಳು ಅದನ್ನು ಸರಿಪಡಿಸಿಕೊಳ್ಳುತ್ತಾರೆ. ಮಕ್ಕಳ ತಪ್ಪುಗಳು ಮತ್ತು ದೌರ್ಬಲ್ಯಗಳ ಮೇಲೆ ಗಮನಹರಿಸದೆ ಅರ್ಥಪೂರ್ಣವಾದ ರಸವತ್ತಾದ ಸಮಸ್ಯೆಗಳನ್ನು ಸೃಷ್ಟಿಸಿ ಅವರಿಗೆ ನೀಡುವಲ್ಲಿ ತೊಡಗಿಸಿಕೊಳ್ಳಬೇಕು.

ಮನೆಭಾಷೆಯನ್ನು ಶಾಲೆಗಳಲ್ಲಿ ಕಲಿಸುವುದರ ಪ್ರಾಧಾನ್ಯವನ್ನು ಎಷ್ಟು ಹೇಳಿದರೂ ಸಾಲದು, ಮಕ್ಕಳು ಶಾಲೆಗೆ ಸೇರುವಷ್ಟರಲ್ಲಿ ಸಾಧಾರಣ ವಿಷಯಗಳನ್ನು ಅರ್ಥೈಸುವುವಷ್ಟು ಮೂಲ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಆದರೂ ಶಾಲೆಯಲ್ಲಿ ಇನ್ನೂ ಉನ್ನತವಾದ ಅರ್ಥೈಸುವಿಕೆಗಿರುವ ಭಾಷಾ ಸಾಮರ್ಥ್ಯವನ್ನು ಹೊಂದಬೇಕಾಗುತ್ತದೆ. ಪರಿಚಿತ ಸನ್ನಿವೇಶಗಳಲ್ಲಿ ಅತೀ ಹೆಚ್ಚಿನ ಗ್ರಹಣ ಶಕ್ತಿ ಬೇಕಾದಲ್ಲೂ ಮೂಲ ಭಾಷಾ ಸಾಮರ್ಥ್ಯ ಸಾಕಾಗುತ್ತದೆ. ಉದಾ: ಗೆಳೆಯರೊಂದಿಗೆ ಸಂಭಾಷಣೆ, ಆದರೆ ಅಮೂರ್ತವಾದ ಒಂದು ವಿಷಯದ ಕುರಿತು ಪ್ರಬಂಧವನ್ನು ಹಾಗೆಯೇ ರಚಿಸುವಂತಹ ಸನ್ನಿವೇಶಗಳಲ್ಲಿ ಪರಿಚಿತವಲ್ಲದ ಸಂದರ್ಭಗಳಲ್ಲಿ, ಅತೀ ಹೆಚ್ಚಿನ ಗ್ರಹಣ ಶಕ್ತಿ ಬೇಕಾದಲ್ಲೂ ಉನ್ನತಮಟ್ಟದ ನೈಪುಣ್ಯಗಳ ಅಗತ್ಯವಿದೆ. ಉನ್ನತಮಟ್ಟದ ಭಾಷಾಸಾಮರ್ಥ್ಯ ಇದ್ದಲ್ಲಿ ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿ ವ್ಯವಹರಿಸಲು ಸುಲಭವಾಗುವುದೆಂಬುದು ಖಾತ್ರಿಯಾಗಿರುತ್ತದೆ. ಆದುದರಿಂದ ಶಾಲೆಗಳಲ್ಲಿ ನಮ್ಮ ಭಾಷಾ ಕಲಿಕೆಯನ್ನು ಬಲಪಡಿಸಲು ಬೇಕಾದುದೆಲ್ಲವನ್ನು ನಾವು ಮಾಡಬೇಕು.

ಮಕ್ಕಳ ಇಚ್ಛೆಗನುಸರಿಸಿ ಹೆತ್ತವರು ಪ್ರಧಾನವಾಗಿ ಅವರೊಂದಿಗೆ ಬೆರೆಯುವಾಗ ಮಗುವು ತನಗರಿವಿಲ್ಲದೆಯೇ ಭಾಷೆಯನ್ನು ಸ್ವಾಯತ್ತಗೊಳಿಸುವುದು. ಮೊದಲಿಗೆ ಮಗುವು ತಪ್ಪಿಲ್ಲದೆ  ಬರೆಯುತ್ತಾನೆ, ಓದುತ್ತಾನೆಂಬುದನ್ನು ನಾವು ನಿರೀಕ್ಷಿಸುವುದಿಲ್ಲ. ಆದರೆ ಆ ಸಮಯದಲ್ಲಿ ಹಿರಿಯರ ಸೂಚನೆಗಳನ್ನು ಅನುಸರಿಸುವಂತಹ ಮಗುವಿನ ಶ್ರಮವನ್ನು ನಾವು ಪ್ರೋತ್ಸಾಹಿಸಬೇಕು.

ಮಗುವು ಹೆಚ್ಚಿನ ವಿಷಯಗಳನ್ನು ಕಲಿಯುವುದು ನೇರವಾದ ಬೋಧನೆಯಿಂದಲ್ಲ, ಬಹಳ ಸಂಕೀರ್ಣವಾದ ಪ್ರಕ್ರಿಯೆಗಳನ್ನು ಕೂಡಾ ಸ್ವಾಯತ್ತಪಡಿಸುವ ಜನ್ಮಸಿದ್ಧ ಸಾಮರ್ಥ್ಯವು ಮಕ್ಕಳಿಗಿವೆ. ಅದಕ್ಕಾಗಿ ಅಂತಹ ಸಂದರ್ಭಗಳಲ್ಲಿ ಅವರನ್ನು ಭಾಗಿಗಳನ್ನಾಗಿ ಮಾಡಬೇಕಷ್ಟೇ. ಮಗುವು ಅಗತ್ಯಕ್ಕನುಸಾರವಾದ ಆಶಯಗಳನ್ನು ಕಲಿಯುವುದಕ್ಕಾಗಿ ನೇರ ಓದಬೇಕು, ಬರಹದಲ್ಲಿ ತೊಡಗಬೇಕೆಂದು ನಾವು ಆಶಿಸುತ್ತೇವೆ.

ಸಮಗ್ರತೆಯಿಂದ ಭಾಗಗಳಿಗೆ ಎಂಬ ರೀತಿಯಲ್ಲಿ ಭಾಷೆಯು ಸ್ವಾಯತ್ತವಾಗುತ್ತದೆ. ಅರ್ಥಮಾಡಲು ಸಾಧ್ಯವಿರುವ ಹಾಡುಗಳು, ಕಥೆಗಳು ಮೊದಲಾದ ಸರಳವಾದ ಭಾಷಾ ವ್ಯವಹಾರಗಳಲ್ಲಿ ಅರ್ಥಪೂರ್ಣವಾಗಿ ಆವರ್ತಿಸಲ್ಪಡುವ ಪದಗಳನ್ನು ಕಂಡುಕೊಳ್ಳಬೇಕಾಗಿದೆ. ಒಂದು ಪದದ ಎಲ್ಲಾ ಭೇದಗಳನ್ನು (ಅಂದರೆ ಒಂದು ಪದದ ಎಲ್ಲಾ ಸ್ವರ ಚಿಹ್ನೆಗಳು) ಅರ್ಥಪೂರ್ಣವಾದ ಇತರ ವ್ಯವಹಾರಗಳಲ್ಲಿ ಕಾಣುವ ವಿಧದಲ್ಲಿ ವರ್ತುಲತೆಯ ಅವಶ್ಯಕತೆಯಿದೆ. ಭಾಷಣದೊಂದಿಗೆ ಬರಹವನ್ನು ಸ್ವಾಯತ್ತ ಮಾಡಬಹುದಷ್ಟೇ. ಅದಕ್ಕಾಗಿ ಏನನ್ನಾದರೂ ಬರೆಯಬೇಕೆಂಬ ಅವಶ್ಯ ತಿಳುವಳಿಕೆಯು ಮಗುವಿಗೆ ಆಗಬೇಕು. ಕೇವಲ ಒಂದೊಂದು ಅಕ್ಷರಗಳನ್ನು ಕಲಿಯುವುದು ಕ್ಲಿಷ್ಟಕರವಾಗಿದೆ. ಅದು ಯಾಂತ್ರಿಕವೂ ಅರ್ಥಶೂನ್ಯವೂ ಆಗಿದೆ.

ನಿತ್ಯಜೀವನದಲ್ಲಿ ಭಾಷೆಯಿಂದಾಗುವ ತುಂಬಾ ಕಾರ್ಯಗಳಿವೆ. ಭಾಷೆಯ ಪ್ರಾಯೋಗಿಕ ಉಪಯೋಗಗಳನ್ನು ತಿಳಿದುಕೊಂಡು ಭಾಷೆಯನ್ನು ಅರ್ಥಪೂರ್ಣವಾಗಿ ಬಳಸುವ ಸಂದರ್ಭಗಳನ್ನು ತರಗತಿಯಲ್ಲಿ ಒದಗಿಸಬೇಕು. ಕೋಪಿ ಬರಹ, ನೋಡಿ ಬರೆವ, ಕೈಬರಹ ಮುಂತಾದವುಗಳು ಮಗುವಿಗೆ ಭಾಷಾ ಸಾಮರ್ಥ್ಯವನ್ನು  ಆರ್ಜಿಸಲು ಸಹಾಯಕವಾಗುವುದಿಲ್ಲ. ಅದರ ಬದಲಾಗಿ ಅರ್ಥಪೂರ್ಣವಾದ ಜೀವಂತಿಕೆಯ ಬರಹ ಕಾರ್ಯಗಳ ಅಗತ್ಯವಿದೆ.

ಮೊದಲೇ ದೃಢೀಕರಿಸಲ್ಪಟ್ಟ ಪಠ್ಯಪದ್ಧತಿಯು ನಿಜವಾದ ಪಠ್ಯಪದ್ಧತಿಯಲ್ಲ. ಭಾಷಾ ಸಮಗ್ರತಾ ದರ್ಶನದಲ್ಲಿ ಮಂಡಿಸಿದ ಕಲಿಕಾ ಸಾಮಗ್ರಿ ರೀತಿಗಳನ್ನು ಆರಿಸುವ ಕಾರ್ಯಗತಗೊಳಿಸುವ ಇಲ್ಲವೆ ತಿರಸ್ಕರಿಸುವ ವೈಜ್ಞಾನಿಕ ಮನೋಭಾವವು ಅಧ್ಯಾಪಕರಿಗೆ ಅಗತ್ಯವಾಗಿದೆ. ಒಂದರ್ಥದಲ್ಲಿ ಪಠ್ಯಪದ್ಧತಿಯು ಕಲಿಕೆಗಾರನಿಂದ, ಅಧ್ಯಾಪಕರಿಂದ ಅಭಿವೃದ್ಧಿಪಡಿಸಲ್ಪಡುತ್ತದೆ. ಹಳೆಯದಾದ ಅಭಿವೃದ್ಧಿಗೊಳ್ಳುತ್ತಿರುವ ಒಂದು ಪಠ್ಯಪದ್ಧತಿಯನ್ನು ನಾವು ಕೊಡುಗೆಯಾಗಿ ನೀಡುತ್ತಿದ್ದೇವೆ.

ಸಾಮಾಜಿಕ ಬೆರೆಯುವಿಕೆಯ ಮೂಲಕ ಕಲಿಕೆ ನಡೆಯುತ್ತದೆ. ಪೈಪೋಟಿಯ ಬದಲಿಗೆ ಸಹಕಾರ ವಾತಾವರಣದಲ್ಲಿ ಮಗುವು ಕಾರ್ಯಯೋಜನೆಯನ್ನು ಸ್ವೀಕರಿಸಿ, ಸಹಕಾರದೊಂದಿಗೆ ನಡೆಸಿ ಸಾಮರ್ಥ್ಯಗಳನ್ನು ಚರ್ಚಿಸಬೇಕು. ಮಕ್ಕಳಿಗೆ ಯಾವುದೇ ಕೆಲಸಗಳನ್ನು ಮಾಡುವ ಸಾಮರ್ಥ್ಯವಿದೆ ಎಂಬುದನ್ನು ನಾವು ತಿಳಿದಿರಬೇಕು. ಕೆಲವು ಕೌಶಲಗಳು ಅವರಿಗಿರುವ ಸಾಮರ್ಥ್ಯವು ದುರ್ಬಲವಾಗಿದೆ. ಅದನ್ನು ಕಂಡುಕೊಳ್ಳುವುದಕ್ಕೆ ಪ್ರಯೋಗಗಳನ್ನು ನಡೆಸಿ ಅವರನ್ನು ವಿಮರ್ಶಿಸುವುದು ನಮ್ಮ ಗುರಿಯಲ್ಲ, ಬದಲಿಗೆ ವಿಕಸಿಸಲು ಸಾಧ್ಯವಿರುವ ಅವರ ಸಾಮರ್ಥ್ಯವನ್ನು ಕಂಡುಕೊಂಡು ಪ್ರೋತ್ಸಾಹಿಸಬೇಕು. ಕಲಿಕಾಚಟುವಟಿಕೆಗಳಿಗೂ, ಮೌಲ್ಯಮಾಪನ ಚಟುವಟಿಕೆಗಳಿಗೂ ವ್ಯತ್ಯಾಸವಿಲ್ಲ. ಟರ್ಮ್ ಮೌಲ್ಯಮಾಪನದ ನ್ಯೂನತೆಗಳನ್ನು ಗುರುತಿಸಿ ನಿರಂತರವೂ, ಪೂರ್ಣವಾದ ಮೌಲ್ಯಮಾಪನವೂ ಆಗಬೇಕೆಂಬುದನ್ನು ಭಾಷಾ ಸಮಗ್ರತಾ ದರ್ಶನವು ಮುಂದಿರಿಸುತ್ತದೆ.

### ಕಲಿಕೆ ಬೋಧನಾ ರೀತಿ

ಕಲಿಕೆ–ಬೋಧನಾ ರೀತಿಗಳಲ್ಲಿ ಭಾಷಾ ಸಮಗ್ರತಾದರ್ಶನವು ಬದಲಾವಣೆಗಳನ್ನು ನಿರ್ದೇಶಿಸುತ್ತದೆ. ಪರಂಪರಾಗತವಾದ ಸಮೀಪನದಲ್ಲಿ ನೇರ ಬೋಧನೆಗೆ ನೀಡುವ ಅಧಿಕ ಪ್ರಾಧಾನ್ಯತೆಯನ್ನು ಭಾಷಾ ಸಮಗ್ರತಾ ದರ್ಶನವು ನಿರಾಕರಿಸುತ್ತದೆ. ಕಲಿಕೆಗೆ ಅನುವು ಮಾಡಿಕೊಡುವ ಕರ್ತವ್ಯವನ್ನು ಅಧ್ಯಾಪಿಕೆ ಪಾಲಿಸಬೇಕು. ಕಲಿಕೆ ಹಾಗು ವಿದ್ಯಾರ್ಥಿಗೆ ಒತ್ತು ನೀಡಬೇಕೆಂಬುದರಿಂದ ನೇರವಾದ ಬೋಧನೆಗೆ ಮಹತ್ವವಿಲ್ಲ. ಸಿದ್ಧರೂಪಗಳು ಸೂಚಿಸುವ ವ್ಯವಹಾರ ರೂಪಗಳ ಬದಲಿಗೆ ಜ್ಞಾನ ನಿರ್ಮಾಣವಾದದ್ದಲ್ಲಿ ಮಂಡಿಸಿದ ಜ್ಞಾನ ಮಾದರಿಯನ್ನು ಕಲಿಕೆಗೆ ಸ್ವೀಕರಿಸಬೇಕು.

ಅಭ್ಯಾಸಗಳ ಮೂಲಕ ಕಲಿಕೆಯು ವೀಕ್ಷಣಕ್ಕೆದುರಾಗಿ ಮಗುವು ಸ್ವಬುದ್ಧಿಯಿಂದ ನಡೆಸುವ ಸಂಕೀರ್ಣವಾದ ಪ್ರಕ್ರಿಯೆಗಳ ಫಲವಾಗಿದೆ. ಕಲಿಕೆ ಒದಗುವುದು ಎಂಬ ಸಿದ್ಧಾಂತವು ಇಲ್ಲಿಯ ಅಸ್ತಿವಾರವಾಗಿದೆ. ಕಲಿಯುವುದು ಮಾತುಗಳಿಂದ, ಬರಹಗಳ ರೂಪದಲ್ಲಿ ಪ್ರಕಟಿಸುವ ಸರಿಯಾದ ಪ್ರಕ್ರಿಯೆಗಳನ್ನು ಮಾತ್ರ ಪ್ರೋತ್ಸಾಹಿಸುವ ಹಾಗೂ ತಪ್ಪಾದುದನ್ನು ನಿರುತ್ಸಾಹಗೊಳಿಸುವ ಸಂಪ್ರದಾಯವನ್ನು ಕೈಬಿಡಬೇಕಾಗಿದೆ.

ಕಲಿಯಬೇಕಾದ ವಿಷಯಗಳನ್ನು ಆಗಿಂದಾಗಲೇ ಕಲಿಯಬೇಕೆಂಬ ವಿಚಿತ್ರವಾದ ನಿರ್ಬಂಧಗಳನ್ನು ಅಲ್ಲಗಳೆಯಬೇಕಾಗಿದೆ. ಕಲಿಯುವವನ ಕಲಿಕಾ ವೇಗವು ವ್ಯತ್ಯಸ್ತವಾಗಿರುವುದರಿಂದ ಅವರ ವೇಗಕ್ಕನುಸರಿಸಿ ಕಲಿಯಲು ಅವಕಾಶ ನೀಡುವುದರಿಂದ 'ಸೋಲು' ಎಂಬುದು ಅರ್ಥಹೀನವಾಗುತ್ತದೆ.

ಪುನಸ್ಮರಣೆಗೆ ಸಾಧ್ಯವಾಗುವುದನ್ನೇ ಕಲಿಕೆಯ ಗುರುತಾಗಿ ಸಾಂಪ್ರದಾಯಿಕ ರೀತಿಯಲ್ಲಿ ಕಾಣುತ್ತಿದ್ದರು. ಆದರೆ ಜ್ಞಾನವನ್ನು ಪ್ರಯೋಗಿಸಲು ಹಾಗೂ ವ್ಯತ್ಯಸ್ತ ರೀತಿಯಲ್ಲಿ ಚಿಂತನಾ ಸಾಮರ್ಥ್ಯವನ್ನು ಬೆಳೆಸಲು ಶ್ರಮಿಸಬೇಕಾಗಿದೆ. ಪಠ್ಯಪುಸ್ತಕದ ತಿರುಳನ್ನೇ ಪ್ರಧಾನವಾಗಿ ಕಲಿಕೆಗಾರನಿಗೆ ವರ್ಗಾಯಿಸುವುದು ಸಮಗ್ರತಾದರ್ಶನದ ಉದ್ದೇಶವಲ್ಲ. ಬದಲಾಗಿ ಸರಿಯಾಗಿ ನಿರ್ವಚಿಸಿರುವ ಪಠ್ಯಪದ್ಧತಿಯ ಹೇಳಿಕೆಗಳನ್ನು ಸಾಧನೆಗಳನ್ನು, ಗುರಿಯಾಗಿಸಿಕೊಂಡು ನೈಪುಣ್ಯಗಳನ್ನು ಗಳಿಸಲಿರುವ ವಿವಿಧ ಅನುಭವಗಳನ್ನು ಒದಗಿಸುವುದಾಗಿದೆ.

ಭಾಷಾ ಸಮಗ್ರತಾ ದರ್ಶನದ ಪ್ರಧಾನವಾದ ಆಶಯಗಳನ್ನು ಈ ಕೆಳಗೆ ನೀಡಲಾಗಿದೆ.

- ತನ್ನದೇ ಆದ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಾಗಲೇ ಮಗುವು ಅತೀ ಹೆಚ್ಚು ಕಲಿಯುತ್ತಾನೆ, ಉತ್ತಮಗೊಳ್ಳುತ್ತಾನೆ.

- ಸಕ್ರಿಯ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಾಗ ಶಿಸ್ತುಭಂಗ ಏಕಾಗ್ರತೆಯೊಂದಿಗೆ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮಕ್ಕಳನ್ನು ಇಲ್ಲಿ ಕಾಣಬಹುದು.
- ಮಕ್ಕಳು ಸಾಮರ್ಥ್ಯವುಳ್ಳವರಾಗಿದ್ದಾರೋ, ಬೆಳವಣಿಗೆ ಹೊಂದುವರೋ ಎಂಬುದನ್ನು ಭಾಷಾ ಸಮಗ್ರತಾದರ್ಶನವು ಮೌಲ್ಯಮಾಪನ ಮಾಡುತ್ತದೆ. ಮಕ್ಕಳ ಸಾಮರ್ಥ್ಯ ನೈಪುಣ್ಯಗಳನ್ನು ಕಂಡುಕೊಂಡು ಪ್ರೋತ್ಸಾಹಿಸಬೇಕು.
- ಸಮಾಜದಲ್ಲಿ ಬೆರೆಯುವಾಗ ಕಲಿಕೆಯು ಪೋಷಿಸಲ್ಪಡುತ್ತದೆ. ಚರ್ಚೆ ನಡೆಸಿ ಆಶಯವಿನಿಮಯವನ್ನು ಮಾಡುವುದು ಅಪೇಕ್ಷಣೀಯವಾಗಿದೆ. ಸ್ಪರ್ಧೆಗಳನ್ನು ಬಿಟ್ಟು ಸಹಕಾರಕ್ಕೆ ಒತ್ತು ನೀಡುವಾಗ ಮಗುವಿನ ಸೃಜನಾತ್ಮಕ ಸಾಮರ್ಥ್ಯಗಳು ವಿಕಾಸಗೊಳ್ಳುತ್ತದೆ.
- ಮಕ್ಕಳು ಕಲಿಯುತ್ತಿರುವ ಹೆಚ್ಚಿನ ವಿಷಯಗಳೂ ನೇರ ಬೋಧನೆಯ ಫಲವಲ್ಲ. ಅವರ ಬೇಕು ಬೇಡಗಳನ್ನು ಪರಿಗಣಿಸಿಕೊಂಡು ಹಿರಿಯರು ಅಥವಾ ಹೆತ್ತವರು ಅವರೊಂದಿಗೆ ಮಾತನಾಡುವಾಗಲೂ ಬೆರೆಯುವಾಗಲೂ ಅಯೋಜಿತವಾಗಿ ಮಗುವು ಭಾಷೆಯನ್ನು ಕಲಿಯುವುದು.
- ಬಹಳ ಸಂಕೀರ್ಣವಾದ ಪ್ರಕ್ರಿಯೆಗಳನ್ನು ಕೂಡಾ ಆಶ್ಚರ್ಯಕರವಾಗುವಂತೆ ಸ್ವಾಯತ್ತಮಾಡುವ ಸಾಮರ್ಥ್ಯವು ಮಗುವಿಗಿದೆ. ಆದರೆ ಅಂತಹ ಕ್ಲಿಷ್ಟಕರವಾದ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳಬೇಕಾಗಿದೆ.
- ನಿತ್ಯಜೀವನದಲ್ಲಿ ಭಾಷೆಯು ಈಡೇರಿಸುವ ಹಲವು ಕಾರ್ಯಗಳಿವೆ. ಅದಕ್ಕೆ ಪೂರಕವಾಗಿ ಭಾಷೆಯನ್ನುಪಯೋಗಿಸಿದಾಗ ಭಾಷೆಯು, ಸಾಕ್ಷರತೆಯು ವಿಕಾಸಹೊಂದುವುದು. ಇಂತಹ ಕಾರ್ಯಗಳನ್ನು ಸಹಜ ನೆರವೇರಿಸಲು ಸಂದರ್ಭಗಳು ಅವರಿಗೆ ಲಭ್ಯವಾಗಬೇಕು.
- ಈ ವಿಧಾನವು ಸಮಗ್ರತೆಯಿಂದ ಭಾಗಗಳಿಗೆ ಎಂಬಂತೆ ಭಾಷಾಕಲಿಕೆಯು ಮುಂದುವರಿಯುತ್ತದೆ. ಇದು ಆಶಯಗಳೆಂಬ ಪೂರ್ಣತೆಗೆ ಒತ್ತು ನೀಡಿ ಅಕ್ಷರಗಳೆಂಬ ಘಟಕಗಳಿಗೆ ತಲುಪುವ ಸಹಜವಾದ ಮನಃಶಾಸ್ತ್ರ ಪರವಾದ ರೀತಿಯಾಗಿದೆ.

**ಭಾಷಾವಿನಿಮಯವೂ ಹಿಂದೆ ಸಾಗಿ ಬಂದ ದಾರಿಗಳೂ**

ಭಾಷಾ ಕಲಿಕೆಗಾಗಿ ಹಲವು ರೀತಿಗಳ ಪ್ರಯೋಗಗಳು ನಡೆದು ಬಂದಿವೆ. ಆ ಕಾಲದ ಮನಃಶಾಸ್ತ್ರ, ಭಾಷಾ ಶಾಸ್ತ್ರ, ಭಾಷಾ ಸಮೀಪನದ ದೃಷ್ಟಿಕೋನ ಎಂಬಿವುಗಳಿಂದ ನಾವು ಈ ವಿಧಾನವನ್ನು ಸ್ವೀಕರಿಸಿದೆವು. 'ಅಧ್ಯಾಪಿಕೆ' ಎಂಬ ರೀತಿಯಲ್ಲಿ ಈ ವಿಧಾನದ ಕುರಿತು ತಿಳಿದರೆ ನಮ್ಮ ಆಶಯಗಳು ಉತ್ತಮವಾಗಬಹುದು.

ನೀವು ಮಾಡಬೇಕಾದ ಚಟುವಟಿಕೆಗಳು

? ನಿಮ್ಮ ಪ್ರದೇಶದ ನಿವೃತ್ತ ಹಿರಿಯ ಅಧ್ಯಾಪಕ (60 ವಯಸ್ಸು ಕಳೆದ)ರೊಂದಿಗೆ ಸಂದರ್ಶನವನ್ನು ನಡೆಸಿ ಅವರ ಶಾಲಾ ಜೀವನದ ಹಾಗೂ ಬೋಧನಾ ವೇಳೆಯಲ್ಲಿ ಅಕ್ಷರಗಳನ್ನು ಹೇಗೆ ಕಲಿಸುತ್ತಿದ್ದರೆಂಬುದರ ಮಾಹಿತಿಯನ್ನು ಕಲೆ ಹಾಕಿರಿ.

? ಭಾಷಾ ಕಲಿಕೆಯ ವಿವಿಧ ಹಂತಗಳನ್ನು ಅಕ್ಷರ ಮಂಡನಾರೀತಿ, ಪದಗಳ ಮಂಡನಾರೀತಿ, ಆಶಯಗಳ ಮಂಡನಾರೀತಿಯ ಕುರಿತು ತರಗತಿಯಲ್ಲಿ ಚರ್ಚೆಯನ್ನು ಏರ್ಪಡಿಸಿರಿ.

? ವಿವಿಧ ರೀತಿಯ ಭಾಷಾ ಸಮೀಪನಗಳ ಹಿರಿಮೆ ಮತ್ತು ಪರಿಮಿತಿಯ ಕುರಿತಾದ ಸಂವಾದಕ್ಕಾಗಿ ಟಿಪ್ಪಣಿಗಳನ್ನು ತಯಾರಿಸಿರಿ.

? ಆಶಯ ಮಂಡನಾರೀತಿಯಲ್ಲಿ ಪಾಠಭಾಗವನ್ನು ಮಂಡಿಸುವ ವಿಧವನ್ನು ಒಂದನೇ ತರಗತಿಯ ಪಠ್ಯದಿಂದ ಕಂಡುಕೊಂಡು ಟಿಪ್ಪಣಿಯನ್ನು ತಯಾರಿಸಿರಿ.

? ಲ್ಯಾಬೋ ಸ್ಕೂಲಿನ ಅಥವಾ ಸಮೀಪದ ವಿದ್ಯಾಲಯದಲ್ಲಿರುವ ಅಧ್ಯಾಪಕರೊಂದಿಗೆ ಆಶಯ ಮಂಡನಾ ರೀತಿಯ ಕುರಿತಾದ ವಿವರ ಸಂಗ್ರಹಗಳನ್ನು ಮಾಡಿ ದಾಖಲಿಸಿರಿ. ಇವುಗಳೆರಡನ್ನು ಪರಿಗಣಿಸಿ ತರಗತಿಯಲ್ಲೊಂದು ಚರ್ಚಾಕೂಟವನ್ನು ಹಮ್ಮಿಕೊಳ್ಳಿರಿ.

ಕೆಳಗಿನ ಓದುವ ಸಾಮಗ್ರಿಯನ್ನು ಓದಿನೋಡಿರಿ, ಹೆಚ್ಚಿನ ವಿಷಯ ಸಂಗ್ರಹಕ್ಕಾಗಿ ಇದನ್ನು ಉಪಯೋಗಿಸಿಕೊಳ್ಳಬಹುದು.

**ಅಕ್ಷರಮಂಡನಾ ರೀತಿ**

ಅಕ್ಷರಮಾಲಾ ರೀತಿಯು ಒಂದು ಪ್ರಧಾನವಾದ ಹಳೆಯ ಕಲಿಕಾ ವಿಧಾನಗಳಲ್ಲೊಂದಾಗಿದೆ. ಆದರೆ ಇದು ಮನಃಶಾಸ್ತ್ರಪರವಾದ ವಿಧಾನವಲ್ಲ. ಮೊದಲಿಗೆ ಅಕ್ಷರಗಳನ್ನು ಬರೆದು ಅದನ್ನು ಉಚ್ಚರಿಸಲು ಕಲಿಯುವುದೇ ಈ ವಿಧಾನವಾಗಿದೆ. ಅಕ್ಷರಮಾಲೆ ಮತ್ತು ಒತ್ತಕ್ಷರಗಳನ್ನು ಕಲಿಸಿದ ನಂತರವೇ ಓದುವಿಕೆಗೂ ಅಕ್ಷರಜ್ಞಾನವು ಅಗತ್ಯ ಎಂಬುದರ ಆಶಯವು ಈ ವಿಧಾನಕ್ಕೆ ಆಧಾರವಾಗಿದೆ. ಆದುದರಿಂದ ಅಕ್ಷರಗಳನ್ನು ಮೊದಲು ಕಲಿಸಬೇಕೆಂದೇ ಹಿಂದಿನ ಕಲಿಕಾರೀತಿಯ ಧೋರಣೆಯಾಗಿತ್ತು. ಸ್ವರ, ವ್ಯಂಜನ, ಒತ್ತಕ್ಷರ ಎಂಬೀ ಕ್ರಮದಲ್ಲಿ ಅಕ್ಷರ ಕಲಿಕೆಯು ಸಾಗಿತ್ತು.

**ಪದ ಮಂಡನಾ ರೀತಿ**

ಅಕ್ಷರಮಂಡನಾ ರೀತಿಯಲ್ಲಿ ಮೊದಲು ಕಲಿಸಬೇಕಾದುದು 'ಅ' ಎಂಬ ಅಕ್ಷರವಲ್ಲವೇ? ಈ ಅಕ್ಷರವನ್ನು ಬರೆಯುವ ರೀತಿಯು ಮೊದಲಿಗೆ ಬರೆಯುವಾಗ ಮಗುವಿಗೆ ಸಂಬಂಧಿಸಿದಂತೆ ತುಂಬಾ ಕಷ್ಟದ ವಿಚಾರ. ಆ ಕಾಲದ ಮನಃಶಾಸ್ತ್ರಜ್ಞರೂ ವಿದ್ಯಾಭ್ಯಾಸ ಸುಧಾರಕರೂ ಈ ವಿಧಾನದಲ್ಲಿ ಬದಲಾವಣೆ ಬೇಕೆಂಬುದನ್ನು ವಾದಿಸಿದರು. ಸರಳವೂ ಸುಲಭವೂ ಆದ ಅಕ್ಷರವನ್ನು ಪರಿಚಯಿಸಬೇಕು. ಸಂಕೀರ್ಣವಾದ ಅಕ್ಷರಗಳನ್ನು ಬರೆಯಿಸುವುದರಿಂದ ಮಗುವಿಗೆ ಕಲಿಕೆಯಲ್ಲಿ ನಿರಾಸಕ್ತಿಯಾಗಬಹುದೆಂದೂ ವಾದಿಸಿದರು. ಅಲ್ಲದೆ ಅಕ್ಷರಗಳಿಗೆ ಪ್ರತ್ಯೇಕವಾಗಿ ಅರ್ಥವಿಲ್ಲವಾದುದರಿಂದ ಪದಗಳ ಮೂಲಕ ಅವುಗಳ ಪರಿಚಯವಾಗಬೇಕೆಂದು ಈ ಚರ್ಚೆಗಳ ಮುಂದುವರಿಕೆಯಾಗಿ ನಮ್ಮ ಪಠ್ಯಪುಸ್ತಕಗಳಲ್ಲಿ ಪದಮಂಡನಾ ರೀತಿಯನ್ನು ಸ್ವೀಕರಿಸಲಾಯಿತು. ಅರ, ಮರ, ಸರ .......................... ಮರ ಎಂಬ ಪಾಠದಲ್ಲಿ ಒಂದು ಮರದ ಚಿತ್ರವೂ ಅದರ ಅಡಿಭಾಗದಲ್ಲಿ ಮರ ಎಂಬ ಬರಹ ರೂಪವೂ ಕಾಣುತ್ತಿತ್ತು. ಇದರಲ್ಲಿ ಹೊಸತಾಗಿ ಕಲಿಯುವ 'ರ' ಅಕ್ಷರವನ್ನು ಕೆಂಪಾಗಿ ತೋರಿಸಲಾಗುತ್ತಿತ್ತು. ಮುಂದೆ ಬರುವ ಸರ ಎಂಬ ಪಾಠಭಾಗದಲ್ಲಿ 'ಸ' ಅಕ್ಷರವನ್ನು ಕೆಂಪು ಅಕ್ಷರದಲ್ಲಿಯೂ 'ರ' ಅಕ್ಷರವನ್ನು ನೀಲಿಯಲ್ಲಿಯೂ ತೋರಿಸಲಾಗುವುದು. ಹೀಗೆ ಹೊಸತಾಗಿ ಪರಿಚಯಿಸುವ ಅಕ್ಷರಗಳನ್ನು ಆವರ್ತಿಸಿ ಬರೆಯಲು ಇತರ ಪದಗಳನ್ನು ನೀಡಲಾಗುವುದು. ಈ ರೀತಿಯಲ್ಲಿರುವ ಅನೇಕ ಪಾಠಗಳ ತರುವಾಯ ಹೆಚ್ಚು ಪದಗಳೋ ಒತ್ತಕ್ಷರಗಳೋ ಇರುವಂತಹ ವಾಕ್ಯರೂಪದಲ್ಲಿರುವ ಪಾಠ ಭಾಗಗಳು ಸಾಗಿ ಬರುವುದು.

**ಆಶಯ ವಿಶ್ಲೇಷಣಾ ವಿಧಾನ**

ಕವಿತೆಯ ಅಧ್ಯಾಪನಕ್ಕೆ ಈ ವಿಧಾನವನ್ನು ಹೆಚ್ಚು ಉಪಯೋಗಿಸಲಾಗುವುದು. ಕವಿತೆಯಲ್ಲಿ ಅಡಕವಾದ ಪ್ರತಿಯೊಂದು ಆಶಯವನ್ನು ಅರ್ಥೈಸಿ ವಿಶ್ಲೇಷಿಸಿ ಆಶಯವನ್ನು ವಿವರಿಸುವುದು ಹಿಂದಿನ ರೀತಿಯಾಗಿತ್ತು.

**ಭಾಷಣ ವಿಧಾನ**

ಇದು ಕಲಿಸಬೇಕಾದ ಆಶಯವನ್ನು ಅಧ್ಯಾಪಕನು ಭಾಷಣದ ರೂಪದಲ್ಲಿ ಮಂಡಿಸುವ ರೀತಿಯಾಗಿದೆ. ಮಕ್ಕಳು ಕೇವಲ ಶ್ರೋತೃಗಳು ಮಾತ್ರ. ಇಲ್ಲಿ ಮಕ್ಕಳ ಭಾಗವಹಿಸುವಿಕೆ ಇಲ್ಲ. ಮಕ್ಕಳು ಕೇವಲ ಕೇಳುಗರಾಗಿ ಕುಳಿತುಕೊಳ್ಳುತ್ತಾರೆ.

## ಪಾಠಪುಸ್ತಕ ವಿಧಾನ

ಇದು ತುಂಬಾ ವರ್ಷಗಳ ಕಾಲ ಅನುಸರಿಸುತ್ತಿದ್ದ ವಿಧಾನವಾಗಿತ್ತು. ಪಠ್ಯ ವಿಷಯಗಳ ಕುರಿತು ಜ್ಞಾನ ಲಭಿಸುವುದು ಪಠ್ಯ ಪುಸ್ತಕಗಳಿಂದಾಗಿದೆ. ಪಾಠಭಾಗದ ಓದುವಿಕೆ, ಅರ್ಥ, ಪರ್ಯಾಯಪದ, ವಿರೋದಾರ್ಥಕ ಪದ, ಸಮಾನ ಪದಗಳನ್ನು ಬರೆಯುವುದು, ಪ್ರಶ್ನೋತ್ತರಗಳನ್ನು ಬರೆಯುವುದು, ಕಂಠಪಾಠಗೊಳಿಸುವುದು ಮೊದಲಾದವುಗಳು ಪಠ್ಯಪುಸ್ತಕಗಳನ್ನು ಅವಲಂಬಿಸಿ ಅಧ್ಯಾಪನವನ್ನು ಮಾಡುವ ವಿಧಾನವಾಗಿದೆ.

ಪ್ರತಿಯೊಂದು ಕಾಲದಲ್ಲೂ ಪ್ರಸ್ತುತವಾಗಿದ್ದ ಮನಃಶಾಸ್ತ್ರ ಸಿದ್ಧಾಂತಗಳೂ, ಕಲಿಕಾವಿಧಾನದ ಸಂಕಲ್ಪಗಳೂ ಈ ತರದ ಕಲಿಕಾ ವಿಧಾನಗಳಿಗೆ ಆಧಾರವಾಗಿದ್ದು ವೇದಗಳು, ಮಹಾಕಾವ್ಯಗಳನ್ನು ಉಚ್ಚರಿಸಿ ಕಲಿತು ಕಂಠಪಾಠ ಮಾಡುವ ವಿಧಾನಗಳು ಗುರುಕುಲ ಪದ್ಧತಿಯಲ್ಲಿತ್ತು. ಈ ರೀತಿಯ ವಿಧಾನಗಳೆಲ್ಲ ಭಾಷಾ ಅಧ್ಯಯನದಲ್ಲಿದ್ದವು ಎಂಬುದನ್ನು ಗುರುತಿಸುವುದಕ್ಕೆ ಇದರ ಕುರಿತು ಚರ್ಚೆಯನ್ನು ನಡೆಸಬೇಕಾಗಿದೆ.

> ಪ್ರತಿಯೊಂದು ಕಾಲದಲ್ಲೂ ಅನುಸರಿಸುವ ಭಾಷಾಕಲಿಕಾ ವಿಧಾನದಲ್ಲಿ ಒಳಿತು ಕೆಡುಕುಗಳಿರಬಹುದು. ಆದರೆ ಇಂದು ಸಮಗ್ರತಾ ದರ್ಶನದ ಆಧಾರದ ಭಾಷಾಕಲಿಕೆಯ ಸಮೀಪನವನ್ನು ಲೋಕಾದ್ಯಂತ ಅಂಗೀಕರಿಸಲಾಗಿದೆ. ಹಿಂದಿನ ಕಾಲದ ಭಾಷಾ ಕಲಿಕೆಯ ವಿಧಾನವನ್ನು ಗುರುತಿಸಲು ಹಾಗೂ ಇಂದಿನ ಭಾಷಾ ಕಲಿಕಾ ವಿಧಾನದೊಂದಿಗೆ ಹೋಲಿಸಲು ಅಧ್ಯಾಪಕ ವಿದ್ಯಾರ್ಥಿಗಳಿಗೆ ಸಾಧ್ಯವಾಗಬೇಕು.
>
> ಭಾಷಾ ಕಲಿಕೆಯ ಗುರಿಯೇನು? ಮೂಲ ನೈಪುಣ್ಯಗಳು ಯಾವುದು?ವಿದ್ಯಾರ್ಥಿಗಳು ಅದನ್ನು ಪಡೆಯುವುದು ಹೇಗೆ?

## ಭಾಷಾ ಕಲಿಕೆಯ ಗುರಿಗಳು

ದೈನಂದಿನ ಜೀವನದಲ್ಲಿ ಫಲಪ್ರದವಾಗಿ ಆಶಯಗಳನ್ನು ಪ್ರಕಟಿಸಲೂ, ಸ್ವೀಕರಿಸಲೂ ವಿದ್ಯಾರ್ಥಿಯನ್ನು ಶಕ್ತರನ್ನಾಗಿಸುವುದೇ ಪ್ರಥಮ ಹಂತದ ಭಾಷಾಕಲಿಕೆಯ ಉದ್ದೇಶವಾಗಿದೆ. ಪ್ರಾಥಮಿಕ ಹಂತದಲ್ಲಿ ಭಾಷಾಕಲಿಕಾ ಪ್ರಕ್ರಿಯೆಯು ಸಾಗಬೇಕಾದುದು ಭಾಷೆಯಲ್ಲಿ ವ್ಯವಹರಿಸಲು ಮಕ್ಕಳಿಗೆ ಆತ್ಮವಿಶ್ವಾಸವನ್ನು ಉಂಟುಮಾಡುವ ರೀತಿಯಲ್ಲಿ ಆಗಿರಬೇಕು. ಉಚ್ಚಾರಸ್ಪಷ್ಟತೆ, ಬರಹದ ಪೂರ್ಣತೆ, ವ್ಯಾಕರಣ ಮುಂತಾದವುಗಳಿಗೆ ಅತಿಯಾದ ಮಹತ್ವವನ್ನು ನೀಡುವುದು ಮಕ್ಕಳ ಆತ್ಮವಿಶ್ವಾಸವನ್ನು ಕುಂದಿಸುತ್ತದೆ ಹಾಗೂ ಭಾಷಾಕಲಿಕೆಗೆ ತೊಂದರೆಯನ್ನುಂಟುಮಾಡುತ್ತದೆ ಎಂಬುದನ್ನು ನೂತನ ಪಠ್ಯಪದ್ಧತಿಯು ಮನಗಾಣುತ್ತದೆ. ಕೇಳುವಿಕೆ, ಭಾಷಣ, ಓದುವಿಕೆ, ಬರಹ, ಸೃಜನಾತ್ಮಕ ಪ್ರಕಟಣೆ ಎಂಬ ಐದು ಮಂಡಲಗಳಲ್ಲಿ ಮಕ್ಕಳು ಪಡೆಯಬೇಕಾದ ಭಾಷಾನೈಪುಣ್ಯಗಳನ್ನು ಕ್ರೋಡೀಕರಿಸಲಾಗಿದೆ.

## ಶ್ರವಣ (ಕೇಳುವಿಕೆ)

ರಸವತ್ತಾದ ಜಿಜ್ಞಾಸೆಯನ್ನುಂಟುಮಾಡಬಲ್ಲ ಅನುಭವಗಳನ್ನು ಶ್ರವಣ ನೈಪುಣ್ಯದ ವಿಕಾಸಕ್ಕಾಗಿ ನೀಡಬೇಕೆಂದೂ ಕಥೆಗಳು, ಹಾಡುಗಳು, ಕಿರುಟಿಪ್ಪಣಿಗಳು, ನಿರ್ದೇಶನಗಳು, ಸಂಭಾಷಣೆಗಳು, ಲಘುಭಾಷಣಗಳು, ಪ್ರಕಟಣೆಗಳು ಎಂಬಿವುಗಳನ್ನು ಅರ್ಥವತ್ತಾದ ಶ್ರವಣಾನುಭವಗಳನ್ನಾಗಿ ಹೊಸ ಪಠ್ಯಪದ್ಧತಿಯಲ್ಲಿ ನಿರ್ದೇಶಿಸಲಾಗಿದೆ.

## ಭಾಷಣ

ಕಿರು ಚರ್ಚೆಗಳಲ್ಲಿ ಭಾಗವಹಿಸಿ ಅಭಿಪ್ರಾಯಗಳನ್ನು ಪ್ರಕಟಿಸಲು, ಚಿಕ್ಕ ವಿವರಣೆಗಳನ್ನು ನೀಡಲು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಲು ಸಮಪ್ರಾಯದವರೊಂದಿಗೆ ಗುಂಪುಗಳಲ್ಲಿ ಮಾತನಾಡಲು ನಿರ್ದೇಶನಗಳನ್ನು ನೀಡುವ ಸಾಮರ್ಥ್ಯವನ್ನು ರೂಪುಗೊಳಿಸಲಿರುವ ಕಲಿಕಾನುಭಗಳು ಪ್ರಾಥಮಿಕ ಹಂತದಲ್ಲಿ ಮಗುವಿಗೆ ಲಭಿಸಬೇಕಾಗಿದೆ. ಕೇವಲ ಪ್ರಶ್ನೋತ್ತರಗಳಿಗಿಂತಲೂ ಹೆಚ್ಚಿನ ಸಹಜವಾದ ನಿರರ್ಗಳತೆಯಲ್ಲಿ ಸಂದರ್ಭಕ್ಕನುಸಾರವಾಗಿ ಭಾಷಣವನ್ನು ಮಾಡುವ ಸಾಮರ್ಥ್ಯವು ಮಕ್ಕಳಿಗೆ ಕರಗತವಾಗಬೇಕೆಂದು ಪಠ್ಯಪದ್ಧತಿಯು ಲಕ್ಷ್ಯವಾಗಿರಿಸಿದೆ.

### ಓದುವಿಕೆ

ಓದುವಿಕೆಯ ಮೂಲಕ ಪರಿಚಿತವಾದ ಸಂದರ್ಭಗಳಲ್ಲಿ ಕೇಳಿದ ಶಬ್ದಗಳನ್ನೂ ಅವುಗಳ ಲಿಖಿತ ರೂಪವನ್ನೂ ಪರಸ್ಪರ ಹೊಂದಿಸಿಕೊಂಡು ಅರ್ಥವನ್ನು ಕಂಡುಕೊಳ್ಳಲಾಗುತ್ತದೆ. ಓದುವಾಗ ಹೊಸಪದಗಳ ಅರ್ಥವನ್ನು ವಾಕ್ಯದಲ್ಲಿ ಅಡಕವಾದ ಆಶಯ ಹಾಗೂ ಸಂದರ್ಭಗಳಿಂದ ಮಗುವು ಗ್ರಹಿಸುತ್ತದೆ. ಅತೀ ಆಸಕ್ತಿ ಇರುವವುಗಳನ್ನು ಓದುವುದರ ಮೂಲಕ ಆತ್ಮವಿಶ್ವಾಸವು ಉಂಟಾಗುತ್ತದೆ. ಅರ್ಥಗ್ರಹಿಕೆ ಅನುಕೂಲವಾಗುವಂತಹ ವಾತಾವರಣವನ್ನು ನೀಡಬಲ್ಲ ವಾಚನ ಸಾಮಗ್ರಿಗಳನ್ನು ಮಗುವಿಗೆ ನೀಡಬೇಕಾಗಿದೆ. ಒಂದು ಅಕ್ಷರವನ್ನೋ, ಪದಗಳನ್ನೋ ಓದುವಿಕೆಗೆ ನೀಡುವ ಬದಲು ಒಂದು ಆಶಯದಲ್ಲಿ ಹೊಂದಿಸಿದಂತವುಗಳನ್ನು ಓದುವುದಕ್ಕೆ ಪ್ರೇರೇಪಿಸುವುದನ್ನು ಪ್ರಾಥಮಿಕ ಹಂತದಲ್ಲಿ ಓದಲು ನೀಡಬೇಕು. ಮಕ್ಕಳ ಕಲ್ಪನೆ, ಸೃಜನಾತ್ಮಕತೆ, ಚಿಂತನಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಂಹ ಬಾಲ ಸಾಹಿತ್ಯ ಕೃತಿಗಳನ್ನು ಓದಲು ಪ್ರಾಥಮಿಕ ಹಂತವನ್ನು ಪೂರೈಸುವಷ್ಟರಲ್ಲಿ ಮಗುವಿಗೆ ಸಾಧ್ಯವಾಗಬೇಕೆಂಬುದು ಪಠ್ಯಪುಸ್ತಕದ ಗುರಿಯಾಗಿದೆ.

### ಲೇಖನ

ವಿವಿಧ ಸಂದರ್ಭಗಳಲ್ಲಿ ಕೇಳಿದ ಪದಗಳನ್ನು ಸಂಭಾಷಣೆಯಲ್ಲಿ ಪ್ರಯೋಗಿಸುವಾಗ ಉಂಟಾಗುವ ಆತ್ಮವಿಶ್ವಾಸವೇ ಚಿರಪರಿಚಿತವಾದ ಸುಲಭ ಗ್ರಹಿಕೆಯಾಗುವ ಪದಗಳನ್ನು ಓದುವಾಗಲೂ ಹಾಗೆಯೇ ಹಲವು ಬಾರಿ ಓದಿದವುಗಳನ್ನು ಬರೆಯುವಾಗಲೂ ಮಗುವಿಗೆ ಅನುಭವಕ್ಕೆ ಬರುತ್ತದೆ. ಬರೆದ ಸೌಂದರ್ಯಕ್ಕೆ ಪ್ರಾಧಾನ್ಯ ಕೊಡುವುದಕ್ಕಿಂತಲೂ, ಬರೆಯುವ ಪದವು ಮಗುವಿಗೆ ಎಷ್ಟು ಪರಿಚಿತವಾಗಿದೆ ಹಾಗೂ ಪ್ರಿಯವುಳ್ಳದ್ದಾಗಿದೆ ಎಂಬುದಕ್ಕೆ ಪ್ರಾಧಾನ್ಯವಿರಬೇಕು. ಪ್ರಾಥಮಿಕ ಹಂತದ ಪೂರೈಕೆಯೊಂದಿಗೆ ಮಗುವು ಪರಿಚಿತವಾದ ವಸ್ತುಗಳ, ಘಟನೆಗಳ, ಅನುಭವಗಳ ಕುರಿತು ಕಿರುಟಿಪ್ಪಣಿಯನ್ನು ತಯಾರಿಸಲು, ಸರಳ ಪತ್ರವನ್ನು, ಮನವಿಯನ್ನು ಬರೆಯಲು, ಓದಿದ ಬಾಲಸಾಹಿತ್ಯ ಕೃತಿಯ ಕುರಿತಾದ ಲಘುಲೇಖನಗಳನ್ನು ತಯಾರಿಸಲು, ಹಸ್ತಪತ್ರಿಕೆಗಳಲ್ಲಿ ಲಘುಬರಹಗಳನ್ನು ನೀಡಲು ಶಕ್ತರಾಗುವ ರೀತಿಯಲ್ಲಿ ಮಕ್ಕಳಲ್ಲಿ ಬರಹದ ನೈಪುಣ್ಯಗಳನ್ನು ವಿಕಾಸಗೊಳಿಸಬೇಕು ಎಂಬುದು ಪಠ್ಯಕ್ರಮದ ದಾಖಲೆಯಲ್ಲಿದೆ. ಈ ರೀತಿಯ ಚಟುವಟಿಕೆಗಳ ಮೂಲಕ ಹಾದುಹೋಗುವ ಮಗುವಿನಲ್ಲಿ ಸೃಜನಾತ್ಮಕತೆಯ ವಿಕಾಸವು ತ್ವರಿತವಾಗಿರುತ್ತದೆ.

### ನೀವು ಮಾಡಬೇಕಾದ ಚಟುವಟಿಕೆಗಳು

- ಒಂದನೇ ತರಗತಿಯ ಪಠ್ಯಪುಸ್ತಕದಿಂದ ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ, ಬರವಣಿಗೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.
- ಒಂದನೇಯ ತರಗತಿಯ ಮಕ್ಕಳಲ್ಲಿ ಅವರು ನೋಡಿರುವ ಒಂದು ಜಾತ್ರೆಯ ಕುರಿತು ವಿವರಿಸಲು ಹೇಳುವುದು. ಮಕ್ಕಳ ಮಾತನ್ನು ಗಮನಿಸಿರಿ. (ರೆಕಾರ್ಡ್ ಮಾಡಿದರೆ ಮತ್ತೆ ಉಪಯೋಗಿಸಬಹುದು) ಎಲ್ಲರ ವಾಕ್ಯಗಳನ್ನು, ಪದಗಳನ್ನು, ನಿರರ್ಗಳತೆ, ಪ್ರಾದೇಶಿಕ ಪದಗಳನ್ನು ಪರಿಶೀಲಿಸಿ ನಿಗಮನಗಳನ್ನು ತರಗತಿಯಲ್ಲಿ ಚರ್ಚಿಸಿರಿ.
- ಆಶಯಗಳು ಸ್ಪಷ್ಟವಾಗುವುದಾದಲ್ಲಿ ಪ್ರಾದೇಶಿಕ ಪದಗಳನ್ನು ಉಪಯೋಗಿಸುವುದರಲ್ಲಿ ತಪ್ಪಿದೆಯೋ? ನಿಮ್ಮ ಅಭಿಪ್ರಾಯವೇನು? ಟಿಪ್ಪಣಿಯನ್ನು ತಯಾರಿಸಿ ಚರ್ಚಿಸಿರಿ.

### ಬಾಯ್ದೆರೆಯಾಗಿ ಹೇಳುವುದರ ಪ್ರಾಧಾನ್ಯ

ಭಾಷೆಯ ಸ್ವರೂಪ ಹಾಗೂ ಜೀವಂತಿಕೆಯು ಮಾತುಗಾರಿಕೆಯಲ್ಲಾದುದರಿಂದ ಅದಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಬೇಕು. ಅಧ್ಯಾಪಕ ಮತ್ತು ಮಕ್ಕಳ ಒಟ್ಟಾದ ಶ್ರಮದಿಂದ ಭಾಷಾನೈಪುಣ್ಯಗಳು ವಿಕಾಸಗೊಳ್ಳುವುದು. ಅಧ್ಯಾಪಕನು ತರಗತಿಯಲ್ಲಿ ಮಕ್ಕಳ ಭಾಷೆಯನ್ನೇ ಉಪಯೋಗಿಸಬೇಕು. ಲಿಖಿತ ಭಾಷೆಯನ್ನುಪಯೋಗಿಸಿದರೆ ಅದು ಮಕ್ಕಳಿಗೆ ಅಪರಿಚಿತವಾದುದಾಗಿರುತ್ತದೆ. ಮಗುವಿನ ಆತ್ಮವಿಶ್ವಾಸವನ್ನು ಇದು ಕುಂದಿಸುತ್ತದೆ.

ಪಠ್ಯಕ್ರಮವು ಶಾಲೆಗೆ ಸೇರುವ ಮೊದಲು ಮಗು ಮಾತನಾಡುವ ಭಾಷೆಯ ಮುಂದುವರಿಕೆಯೇ ಒಂದನೇ ತರಗತಿಯಲ್ಲಿಯೂ ಇರಬೇಕು ಎಂದು ಸೂಚಿಸುತ್ತದೆ. ಅಲ್ಲದೆ ಅರ್ಥಪೂರ್ಣವಾದ ಗ್ರಹಿಕೆಗೆ ಪೂರಕವಾಗುವಂತಹ ವೈವಿಧ್ಯವುಳ್ಳ ಕಲಿಕಾನುಭವಗಳನ್ನು ನೀಡಬೇಕು. ಆತ್ಮವಿಶ್ವಾಸದೊಂದಿಗೆ ಭಾಷಾ ಚಟುವಟಿಕೆಗಳಲ್ಲೇ ಭಾಗಿಯಾಗುವಂತಹ ಕಲಿಕಾ ವಿಧಾನವನ್ನು ರೂಪುಗೊಳಿಸಬೇಕು. ಯಾಂತಿಕವಾದ ಕಂಠಪಾಠ ವಿಧಾನವನ್ನು ಉಪೇಕ್ಷಿಸಬೇಕು. ಬಾಯ್ದೆರೆಯಿಂದ ಬರಹಕ್ಕೆ ಬರುವ ಸಹಜ ಕ್ರಿಯೆಯನ್ನು ದೃಢಪಡಿಸಿರಿ. ಮಗುವು ಮಾಡುವ ತಪ್ಪುಗಳು ಮುಂದೆ ಸರಿಯಾದ ಪ್ರಯೋಗಕ್ಕಿರುವ ಸಹಜ ಶ್ರಮವಾಗಿದೆ ಎಂಬುದನ್ನು ಮನಗಾಣಿರಿ.

## ಮಗುವಿನ ಭಾಷಾಕಲಿಕೆಯ ವಿಧಾನ

ಮಗುವು ಭಾಷೆಯನ್ನು ಹೇಗೆ ಕಲಿಯುತ್ತದೆ ಎಂಬುದಕ್ಕೆ ನಿಖರವಾದ ನಿಲುವನ್ನು ಹೊಸ ಪಠ್ಯಪದ್ಧತಿಯು ತಿಳಿಸಿಕೊಡುತ್ತದೆ. ಪರಿಚಿತವೂ ಅರ್ಥಪೂರ್ಣವೂ ಆದ ಸಂದರ್ಭಗಳಲ್ಲಿ ಮಗುವು ಪ್ರತಿಕ್ರಿಯಸಿ ಭಾಷೆಯನ್ನು ಕಲಿಯತೊಡಗುವನು. ತನ್ನ ಅನುಭವಗಳನ್ನು ಪರಿಚಿತ ಸಂದರ್ಭಗಳಿಗೆ ಸಂಬಂಧಿಸಿದ ವಾಕ್ಯ ಪದಗಳನ್ನು ಕೇಳಿದಾಗ ಆ ಸಂದರ್ಭದ ಪದ, ವಾಕ್ಯಗಳ ಅರ್ಥವನ್ನು ಮಗುವು ಊಹಿಸಿಕೊಳ್ಳುತ್ತಾನೆ. ಸಮಾನ ಸಂದರ್ಭಗಳಲ್ಲಿ ಈ ಊಹೆಯನ್ನು ಪ್ರಯೋಗಿಸಿ ಸರಿಯಾಯಿತೆಂಬುದನ್ನು ಖಚಿತಪಡಿಸಿದರೆ ಮುಂದೆ ಆತ್ಮವಿಶ್ವಾಸದಿಂದ ಅದನ್ನು ಉಪಯೋಗಿಸಿ ಭಾಷೆಯನ್ನು ಆರ್ಜಿಸಿಕೊಳ್ಳುತ್ತಾನೆ. ಈ ಸಹಜ ಪ್ರಕ್ರಿಯಾ ರೀತಿಯನ್ನು ಪ್ರಾಥಮಿಕ ಹಂತಗಳಲ್ಲಿ ಅನುಸರಿಸಬೇಕು. ಆತ್ಮವಿಶ್ವಾಸವನ್ನು ಬೆಳೆಸುವುದಕ್ಕೆ ಪ್ರಾಥಮಿಕ ಹಂತದಲ್ಲಿ ಪ್ರಾಧಾನ್ಯವನ್ನು ನೀಡಬೇಕು. ಉಚ್ಚಾರ ಸ್ಪಷ್ಟತೆ, ಲೇಖನದ ಪೂರ್ಣತೆ, ವ್ಯಾಕರಣ ಎಂಬಿವುಗಳಿಗೆ ಅತಿಯಾದ ಒತ್ತು ನೀಡಿದರೆ ಅದು ಮಗುವಿನ ಆತ್ಮವಿಶ್ವಾಸದ ಬೆಳವಣಿಗೆಗೆ ಬಾಧಿಸುತ್ತದೆ.

ಹೆತ್ತವರ ವಿದ್ಯಾಭ್ಯಾಸ, ಮನೆಯ ಸದಸ್ಯರೊಳಗಿನ ಸಂಬಂಧ, ಮಗುವಿನೊಂದಿಗಿರುವ ಸಂಪರ್ಕ, ದೃಶ್ಯ–ಶ್ರಾವ್ಯ ಮಾಧ್ಯಮಗಳು, ಸಮಾಜದೊಂದಿಗಿರುವ ಸಂಬಂಧ ಎಂಬಿವುಗಳೆಲ್ಲಾ ಮಗುವಿನ ಆಲಿಸುವಿಕೆ ಮೇಲೆ ಪ್ರಭಾವವನ್ನು ಬೀರುತ್ತದೆ. ಭಾಷೆಯ ಆಲಿಸುವಿಕೆಯಿಂದ ಲಭಿಸುವ ಅನುಭವಗಳಿಂದಾಗಿ ಮಕ್ಕಳು ವೇಗವಾಗಿ ಮಾತನಾಡಲು ತೊಡಗುವುದನ್ನೂ ಅವರ ಪದಸಂಪತ್ತಿನ ವರ್ಧನೆಯನ್ನೂ, ವೈವಿಧ್ಯವನ್ನು ಗಮನಿಸಿದರೆ ಅರಿವಾಗುವುದು. ನರಶಾಸ್ತ್ರಜ್ಞರ ಪ್ರಕಾರ ಭಾಷಾ ಸಾಮರ್ಥ್ಯವನ್ನು ನಿಯಂತ್ರಿಸುವ ಮೆದುಳಿನ ಭಾಗದ ಕೋಶಗಳ ಬೆಳವಣಿಗೆ, ಪ್ರಚೋದನೆಗಳು ನಡೆಯುವುದು ಭಾಷೆಯ ಶ್ರವಣಾನುಭವಗಳು ಹೆಚ್ಚು ಲಭಿಸುವವರಿಗಾಗಿದೆ. ಆದರೆ ಎಲ್ಲಾ ಮಕ್ಕಳ ಶ್ರವಣಾನುಭವಗಳು ಒಂದೇ ರೀತಿಯದ್ದಾಗಿರುವುದಿಲ್ಲವಾದುದರಿಂದ ಒಂದನೇ ತರಗತಿಯ ಮಕ್ಕಳಿಗೆ ಪ್ರತಿಯೊಂದು ಮಂಡಲಗಳಲ್ಲೂ ತುಂಬಾ ಆಲಿಸುವಿಕೆಯ ಸಂದರ್ಭಗಳನ್ನು ಒದಗಿಸಬೇಕಾಗಿದೆ. ಕಥೆಗಳು, ಹಾಡುಗಳು, ಸಂಭಾಷಣೆಗಳು, ಅನುಭವ ಕಥನಗಳು ಎಂಬಿತ್ಯಾದಿ ಧಾರಾಳ ಶ್ರವಣಾನುಭಗಳನ್ನು ಅವರಿಗೆ ನೀಡಬೇಕಾಗಿದೆ.

## ನೀವು ಮಾಡಬೇಕಾದ ಚಟುವಟಿಕೆಗಳು

- ಸಿದ್ಧತಾ ಚಟುವಟಿಕೆಗಳು ಎಂದರೇನು? ಇದನ್ನು ನೀಡುವುದು ಯಾಕೆ?

  ಓದುವಿಕೆಗೂ, ಬರಹಕ್ಕೂ ಮೊದಲು ಪ್ರೀಪ್ರೈಮರಿಯಲ್ಲೂ ಒಂದನೇ ತರಗತಿಯಲ್ಲೂ ನೀಡುವ ಸಿದ್ಧತಾ ಚಟುವಟಿಕೆಗಳನ್ನು ಆ ತರಗತಿಯ ಅಧ್ಯಾಪಕರಲ್ಲಿ ಚರ್ಚಿಸಿ ಕಿರು ವಿವರಣೆಗಳನ್ನು ತಯಾರಿಸಿರಿ. ಚರ್ಚಿಸಿರಿ.
- ಬಾಲಮಾಸಿಕದಲ್ಲಿ ಬರುವ ಕಥಾಪಾತ್ರಗಳ ಹೆಸರು ನಿಮಗೆ ತಿಳಿದಿದೆಯೋ? ಮಕ್ಕಳು ಇಷ್ಟಪಡುವ ಕಥಾಪಾತ್ರಗಳು ಯಾವುದೆಲ್ಲಾ? ತರಗತಿಯಲ್ಲಿ ಚರ್ಚಿಸಿರಿ.
- ವ್ಯಾಖ್ಯಾನ ರೀತಿಯಲ್ಲಿ ಕಥಾಪಾತ್ರಗಳನ್ನು ಹಾಗೂ ಅವುಗಳನ್ನು ಮುಂದುವರೆಸುವಂತೆ ಒಂದನೇ ತರಗತಿಯ ಪಾಠಭಾಗದಲ್ಲಿ ಹೇಳಲಾಗುತ್ತದೆ. ಯಾಕೆ?

## ಭಾಷಾ ನೈಪುಣ್ಯಗಳು – ಸಮೀಪನಗಳು

ಪಾಠ್ಯಪದ್ಧತಿಯು ಭಾಷಾನೈಪುಣ್ಯಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುತ್ತದೆ. ಆದರೆ ಅವುಗಳನ್ನು ಪರಂಪರಾಗತ ವಿಧಾನ ರೀತಿಯಲ್ಲಿ ಒಂದೊಂದಾಗಿ ಪರಿಶೀಲಿಸುವುದಿಲ್ಲ. ಪಠ್ಯ ಪುಸ್ತಕದ ಆಧಾರದಲ್ಲಿ ಮೊದಲೇ ನಿಶ್ಚಯಿಸಿದ ಕ್ರಮದಲ್ಲಿ ನೈಪುಣ್ಯಗಳನ್ನು ಅಭ್ಯಸಿಸಿ, ನೆನಪಿಸಿ, ಪ್ರಯೋಗಿಸಿ, ಪರೀಕ್ಷೆ ಬರೆಯುವ ಸಾಂಪ್ರದಾಯಿಕ ರೀತಿಯ ಬದಲು ಮಗುವಿನ ಆಸಕ್ತಿ, ಆವಶ್ಯಕತೆ, ಪ್ರಯೋಜನಕ್ಕನುಸರಿಸಿ ಭಾಷಾ ನೈಪುಣ್ಯಗಳನ್ನು ಗರಿಷ್ಠ ರೀತಿಯ, ಕಾರ್ಯದಕ್ಷತೆಯಿಂದ ಪಡಕೊಳ್ಳಲು ಪ್ರಾಪ್ತರನ್ನಾಗಿಸುವ ಭಾಷಾ ಸಮಗ್ರತಾ ದರ್ಶನದ ಆಧಾರದಲ್ಲಿ (4.2.1.) ಕಲಿಕಾ ವಿಧಾನವನ್ನು ಅಳವಡಿಸಲಾಗುವುದು. ಇದರ ಫಲವಾಗಿ ಸ್ವತಂತ್ರವಾದ ಭಾಷಾ ವ್ಯವಹಾರ ರೂಪಗಳಲ್ಲಿ ಫಲಪ್ರದವಾಗಿ ತೊಡಗಿಸಿಕೊಳ್ಳಲಿರುವ ಸಾಮರ್ಥ್ಯವನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಕೇವಲ ಅಕ್ಷರಗಳನ್ನು ಬರೆಯುವುದೇ ಭಾಷಾ ಕಲಿಕೆಯ ಕೀಲಿಕೈ ಎಂಬುದನ್ನು ಹೊಸ ಕಲಿಕಾ ವಿಧಾನವು ಪೂರ್ಣವಾಗಿಯೂ ನಿರಾಕರಿಸುತ್ತದೆ. ಎಲ್ಲಾ ಭಾಷಾ ನೈಪುಣ್ಯಗಳ ಸಮಗ್ರವಾದ ವಿಕಾಸವನ್ನು ಇದು ಉದ್ದೇಶಿಸುತ್ತದೆ. ಮೊದಲಿಗೆ ವೈವಿಧ್ಯವುಳ್ಳ ಶ್ರವಣ – ಭಾಷಣ ಸಂದರ್ಭಗಳನ್ನು ಓದುವಿಕೆ, ಬರಹದ ಚಟುವಟಿಕೆಗಳು ಮಕ್ಕಳಿಗೆ ಲಭಿಸಬೇಕು. ಭಾಷಾಪರವಾದ ಕಲಿಕಾನುಭವಗಳಿಗೆ ಆದ್ಯತೆ ನೀಡಲಾಗುವುದು. ಓದುವಿಕೆ,ನೋಡಿಬರೆಯುವುದು, ಪ್ರಶ್ನೋತ್ತರಗಳನ್ನು ಕಂಡುಕೊಳ್ಳುವುದು ಎಂಬಿವುಗಳಿಗೂ ಮೀರಿ ಪುನರಾಖ್ಯಾನ, ಭಾವನಾತ್ಮಕ ಸಂಭಾಷಣೆ, ವಿವರಣೆಗಳನ್ನು ತಯಾರಿಸುವುದು, ಶೀರ್ಷಿಕೆ ನೀಡುವುದು, ಆಡಿಬರಹ ತಯಾರಿ, ಕಥೆ, ಕವಿತೆಗಳನ್ನು ಭರ್ತಿ ಮಾಡುವುದು, ಪದಗಳ ಡಿಕ್ಷನರಿ (ಅರ್ಥಕೋಶ) ಮೊದಲಾದ ಭಾಷಾನೈಪುಣ್ಯಗಳನ್ನು ಸಮಗ್ರವಾಗಿ ನೀಡುವ ಕಲಿಕಾನುಭವಗಳನ್ನು ಪಾಠ್ಯಪದ್ಧತಿಯಲ್ಲಿ ನಿರ್ದೇಶಿಸಲಾಗಿದೆ. ಮಗುವಿಗೆ ಲಭಿಸಬೇಕಾದ ಭಾಷಾಪರವಾದ ಚಟುವಟಿಕೆಗಳನ್ನು ಮಾಡುವ ಅವಕಾಶಗಳನ್ನು ಪಾಠಪುಸ್ತಕದಲ್ಲಿರಬೇಕೆಂದೂ, ವೈವಿಧ್ಯವುಳ್ಳ ಸಂಸ್ಕಾರ, ಸಂಸ್ಕೃತಿ, ಭಾಷಾಸಂಪತ್ತುಗಳನ್ನು ಆದರ ನಾಣ್ಣುಡಿಗಳನ್ನು ಕಲಿಕಾ ಪ್ರಕ್ರಿಯೆಗಳಲ್ಲಿ ಅಳವಡಿಸಬೇಕೆಂಬುದನ್ನೂ ಪಠ್ಯಕ್ರಮವು ನಿರ್ದೇಶಿಸುತ್ತದೆ.

## ಓದುವಿಕೆಯ ರೀತಿಶಾಸ್ತ್ರ

ಶಾಲೆಗ ಸೇರುವ  ಮೊದಲೇ ಆಲಿಸುವಿಕೆ ಮತ್ತು ಮಾತುಗಾರಿಕೆಯ ನೈಪುಣ್ಯಗಳು ಮಗುವಿಗೆ ಸಿದ್ಧಿಸಿರುತ್ತದೆ. ಆದರೆಓದುವಿಕೆ, ಬರಹಗಳ ಸಾಮರ್ಥ್ಯವಿರುವುದಿಲ್ಲ. ಓದುವಿಕೆಯ ರೀತಿ, ಉದ್ದೇಶ ಎಂಬಿವುಗಳನ್ನು ಪಠ್ಯಪದ್ಧತಿಯ ದಾಖಲೆಯಲ್ಲೂ ಅಧ್ಯಾಪಕ ಕೈಪಿಡಿಯಲ್ಲೂ ಸ್ಪಷ್ಟವಾಗಿ ನೀಡಿದೆ. ಓದುವಿಕೆ ಎಂಬುದ ಲಿಪಿಯನ್ನು ಶಬ್ದವಾಗಿಸುವ ಪ್ರಕ್ರಿಯೆಯ ಬದಲು ಆಶಯವನ್ನು ಅರ್ಥೈಸುವ ಪ್ರಕ್ರಿಯೆಯಾಗಿದೆ. ಇದನ್ನು ಓದುವಿಕೆ ಎಂಬ ಮಂಡಲದ ತರಬೇತಿಯ ಆರಂಭದಿಂದಲೇ ಪರಿಗಣಿಸಲಾಗುವುದು. ಆದುದರಿಂದ ಒಂದೊಂದು ಅಕ್ಷರಗಳನ್ನು ಉಚ್ಚರಿಸಿ ಕಲಿಯುವ ಸಾಂಪ್ರದಾಯಿಕ ವಿಧಾನವನ್ನು ಉಪೇಕ್ಷಿಸಬೇಕಾಗುತ್ತದೆ. ಮಗುವು ಪ್ರಪ್ರಥಮವಾಗಿ ನಡೆಸುವ ಓದುವ ಕ್ರಿಯೆಯೂ ಅರ್ಥಪೂರ್ಣವಾಗಿರಬೇಕು.

## ಬರಹಕ್ಕೆ

ಅರ್ಥಪೂರ್ಣವಾದ ಬರಹಕ್ಕೆ ಅರ್ಥಪೂರ್ಣವಾದ ಪ್ರಾರಂಭದ ಅಗತ್ಯವಿದೆ. ಆಶಯವಿನಿಮಯ ಪ್ರಕ್ರಿಯೆಯ ಭಾಗವಾಗಿಯೇ ಬರಹವು ಆರಂಭಗೊಳ್ಳುವುದು. ಬರಹದ ಮುನ್ನುಡಿಯಾಗಿ ಲೇಖನ ಚಟುವಟಿಕೆಗಳು ನಡೆದಿರಬೇಕು. ಮಗುವಿನ ಆಸಕ್ತಿ, ಇಷ್ಟಗಳನ್ನು ಪರಿಗಣಿಸಬೇಕು. ಪಠ್ಯಪುಸ್ತಕದ ಓದಿನ ನಂತರ ಬರಹವನ್ನು ಪ್ರಾರಂಭಿಸುವುದು. ಎಲ್ಲಾ ಮಕ್ಕಳೂ ಒಂದೇ ಅಕ್ಷರವನ್ನೇ ಮೊದಲು ಬರೆಯಬೇಕೆಂದಿಲ್ಲ. ಓದು ಮತ್ತು ಬರಹವು ಪರಸ್ಪರ ಪೂರಕವಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಪ್ರಾರಂಭಿಸಬಹುದು. ಆಗ ಲಿಪಿಯನ್ನು ಮತ್ತು ಶಬ್ದಗಳನ್ನು ಜೋಡಿಸಲು ಮಗುವಿಗೆ ಸಾಧ್ಯವಾಗುತ್ತದೆ. ವ್ಯತ್ಯಸ್ತ ಪದಗಳಲ್ಲಿ ಒಂದೇ ಅಕ್ಷರವು ಪುನಃ ಪುನಃ ಬರುವಾಗ ಆ ಅಕ್ಷರವನ್ನು ಗುರುತಿಸಲು ಮಗುವಿಗೆ ಸಾಧ್ಯವಾಗುವುದು.

ಘಟಕದ ಮೊದಲ ಭಾಗದಲ್ಲಿ ಚರ್ಚೆಗೆ ಬಂದ ಮಳೆಗೆ ಸಂಬಂಧಿಸಿದ ಆಶಯಗಳನ್ನು ಬೋಧಿಸುವಾಗ 'ಮಳೆ' ಎಂಬುದು ವಿವಿಧ ಸಂದರ್ಭಗಳಲ್ಲಿ ಆವರ್ತಿಸುವ ರೀತಿಯನ್ನು ಗಮನಿಸಿದಿರಲ್ಲವೇ? ಮುಂದೆ ಮಳೆ, ಮಲೆ ಪದಗಳನ್ನು ಕಾಣುವಾಗ 'ಮ' ಎಂಬ ಪದವು ಮನಸ್ಸಿನಲ್ಲುಳಿದ 'ಮಳೆ'ಕೊನೆಯ ಅಕ್ಷರವೂ ಮಲೆ ಎಂಬ ಪದದ ಕೊನೆಯ ಅಕ್ಷರವನ್ನು ಹೋಲಿಸುತ್ತಾನೆ ಲ ಎಂಬ ಅಕ್ಷರಕ್ಕೂ 'ಳ' ಎಂಬ ಅಕ್ಷರಕ್ಕೂ ಇನ್ನೂ ಹೆಚ್ಚಿನ ಪ್ರಾಧಾನ್ಯತೆ ಲಭಿಸುವಾಗ ಆ ಅಕ್ಷರಗಳನ್ನು ಮಗುವು ಅರ್ಥೈಸಿಕೊಳ್ಳುತ್ತದೆ. ಹೀಗೆ ಅಕ್ಷರಗಳನ್ನು ಪೋಣಿಸಿ ಮಗುವು ಹೊಸ ಪದಗಳನ್ನು ನಿರ್ಮಿಸುತ್ತದೆ. ಹಾಗೆಯೇ ಅರ್ಥವನ್ನು ಉಪೇಕ್ಷಿಸದೆ ಅರ್ಥವತ್ತಾದ ಅಕ್ಷರಜ್ಞಾನದೆಡೆಗೆ ಸಾಗಿಸಲ್ಪಡುವ ರೀತಿಯನ್ನು ನಾವು ಸ್ವೀಕರಿಸಬೇಕು. ಅಕ್ಷರಜ್ಞಾನ ಲಭಿಸುವುದರೊಂದಿಗೆ ಅದರ ಬರಹದ ರೀತಿಯನ್ನು ಪರಿಚಯಿಸಬಹುದು. ಅಧ್ಯಾಪಿಕೆಯು ಬರೆಯುವುದನ್ನು ಸೂಕ್ಷ್ಮವಾಗಿ ನಿರೀಕ್ಷಿಸಲು ಅವಕಾಶವನ್ನು ನೀಡಬೇಕು. ಮೊದಲ ಹಂತದಲ್ಲಿ ಕೆಲವೊಮ್ಮೆ ಮಗುವು ತನ್ನದೇ ರೀತಿಯಲ್ಲಿ ಅಕ್ಷರಗಳನ್ನು ಬರೆದಾಗ ತಪ್ಪು ಹೇಳದೆ ಅದನ್ನು ಪರಿಗಣಿಸದೆ ಸೂಕ್ತರೀತಿಗೆ ಕೊಂಡೊಯ್ಯಬೇಕು. ಒಂದೇ ಅಕ್ಷರವನ್ನು ಬೇರೆ ಬೇರೆ ಭಾಷೆಗಳಲ್ಲಿ ಬರೆದು ನೋಡಿರಿ. ಪ್ರತಿಯೊಂದು ವ್ಯತ್ಯಸ್ತ ರೀತಿಯಲ್ಲಾಗಿದೆ ಎಂಬುದು ತಿಳಿಯುತ್ತದೆ. ಕನ್ನಡದ ರೀತಿ ಹೇಗಿರುವುದು? ಒಂದು ಅಕ್ಷರವನ್ನು ಒಂದೇ ಸಲಕ್ಕೆ ಬರೆಯುತ್ತೇವಲ್ಲವೇ? ವೇಗವಾಗಿ ಬರೆಯಲು ಇದು ಸಹಾಯಕವಾಗುತ್ತದೋ? ಚರ್ಚಿಸಿರಿ.

**ರೆಫರೆನ್ಸ್**


1.

2.

3. ಕೇರಳ ಪಠ್ಯಪುಸ್ತಕ SCERT2007

4. ವಿವಿಧ ಸಂಶೋಧನಾ ವರದಿಗಳು


* * *

ಘಟಕ – 2

# ನಮ್ಮ ಭಾಷೆ – ಪದ್ಯ ಮತ್ತು ಪದ್ಯಬೋಧನೆ

ಪದ್ಯ ಕನ್ನಡ ಸಾಹಿತ್ಯದ ಒಂದು ಪ್ರಧಾನ ಶಾಖೆಯಾಗಿದೆ. ಕನ್ನಡ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡುವವರು ಕನ್ನಡ ಪದ್ಯ ಸಾಹಿತ್ಯದ ಮಹತ್ವವನ್ನು ತಿಳಿಯಲೇಬೇಕು. ಶ್ರೇಷ್ಠ ಭಾಷೆಯಾದ ಕನ್ನಡಕ್ಕೆ 2000 ವರ್ಷಗಳ ಪ್ರಾಚೀನತೆಯಿದೆ. ಶಾಸನ ಸಾಹಿತ್ಯಗಳಿಂದ ತೊಡಗಿ ಪಂಪ, ರನ್ನ, ಪೊನ್ನ, ಜನ್ನರ ಕೃತಿಗಳು, ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ ಮುಂತಾದವರ ವಚನ ಸಾಹಿತ್ಯ, ರಾಘವಾಂಕ, ಕುಮಾರವ್ಯಾಸ ಲಕ್ಷ್ಮೀಶಾದಿಗಳ ಷಟ್ಪದಿ ಸಾಹಿತ್ಯ ಕನಕದಾಸ, ಪುರಂದರದಾಸರ ದಾಸ ಸಾಹಿತ್ಯ (ಕೀರ್ತನೆ)ಗಳನ್ನು ಹಾದುಬಂದ ಕನ್ನಡವು ಹೊಸಗನ್ನಡ ಸಾಹಿತ್ಯದಲ್ಲಿ ಹುಲುಸಾಗಿ ಬೆಳೆಯಿತು. ಕನ್ನಡ ಪದ್ಯ ಸಾಹಿತ್ಯದ ಈ ಬೆಳವಣಿಗೆಯ ಹಂತಗಳನ್ನು ಮೈಲುಗಲ್ಲುಗಳನ್ನು ತಿಳಿದುಕೊಳ್ಳುವುದಕ್ಕೂ ಕನ್ನಡ ಸಾಹಿತ್ಯದ ಜ್ಞಾನವನ್ನು ಬೆಳೆಸುವುದಕ್ಕೂ ಪದ್ಯ ಅಧ್ಯಾಪನ ರೀತಿಯ ಕುರಿತು ಆಳವಾದ ತಿಳುವಳಿಕೆ ಗಳಿಸಿಕೊಳ್ಳುವುದಕ್ಕೂ ಸಾಧ್ಯವಾಗಬೇಕು. ಈ ದೃಷ್ಟಿಕೋನಕ್ಕೆ ಸೂಕ್ತವಾದ ರೀತಿಯಲ್ಲಿ 'ನಮ್ಮ ಭಾಷೆ – ಪದ್ಯ ಮತ್ತು ಪದ್ಯಬೋಧನೆ' ಎಂಬ ಈ ಘಟಕವನ್ನು ತಯಾರಿಸಲಾಗಿದೆ.

**ಘಟಕದ ಕಲಿಕಾ ಸಾಧನೆಗಳು**

- ವಿವಿಧ ಕಾಲಘಟ್ಟಗಳ ಕನ್ನಡ ಪದ್ಯ ಕಾವ್ಯಗಳನ್ನು ಆಸ್ವಾದಿಸಿ ಅವುಗಳ ವಸ್ತು, ಭಾಷೆ, ಶೈಲಿ ಇತ್ಯಾದಿಗಳನ್ನು ತಿಳಿದುಕೊಳ್ಳುವರು.
- ಲಾವಣಿಗಳು, ಕಥನಕವನಗಳು, ಯಕ್ಷಗಾನ ಪ್ರಸಂಗಗಳು, ಸುಗ್ಗಿ ಹಾಡುಗಳು, ಕೋಲಾಟದ ಪದಗಳು ಇತ್ಯಾದಿಗಳ ಕುರಿತು ತಿಳುವಳಿಕೆ ಪಡೆಯುವರು.
- ಹೊಸ ಪದ್ಯಗಳನ್ನು ಕಂಡುಕೊಂಡು ಆಸ್ವಾದಿಸಿ ವಿಶೇಷತೆಗಳನ್ನು ತಿಳಿದುಕೊಳ್ಳುವರು.
- ಪದ್ಯಬೋಧನೆಯ ಸಮೀಪನಗಳನ್ನು ತಿಳಿದುಕೊಂಡು ವಿಮರ್ಶಾತ್ಮಕವಾಗಿ ಮೌಲ್ಯ ನಿರ್ಣಯ ಮಾಡುವರು.

**ಘಟಕದ ಪ್ರಧಾನ ಆಶಯಗಳು**

- ಪ್ರತಿಯೊಂದು ಕಾಲಘಟ್ಟದ ಪದ್ಯ ಕಾವ್ಯಗಳ ಭಾಷೆ, ವಸ್ತು, ಶೈಲಿಗಳಲ್ಲಿ ವ್ಯತ್ಯಾಸಗಳಿವೆ.
- ಕನ್ನಡ ಪದ್ಯ ಕಾವ್ಯಗಳಿಗೆ ಶ್ರೀಮಂತವಾದ ಪರಂಪರೆಯಿದೆ.
- ಪದ್ಯರೂಪದಲ್ಲಿರುವ 'ಕವಿರಾಜಮಾರ್ಗ' ನಮಗೆ ಉಪಲಬ್ಧವಾದ ಕನ್ನಡದ ಮೊದಲ ಅಲಂಕಾರ ಗ್ರಂಥವಾಗಿದೆ.
- ರತ್ನತ್ರಯರಾದ ಪಂಪ, ರನ್ನ, ಪೊನ್ನರು ಹಳೆಗನ್ನಡ ಪದ್ಯಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಪಂಪನನ್ನು ಕನ್ನಡದ ಆದಿಕವಿ ಎಂದು ಕರೆಯುತ್ತಾರೆ.
- ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ ವಚನ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ.
- ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶರು ಷಟ್ಪದಿಯಲ್ಲಿ ಕಾವ್ಯ ರಚನೆ ಮಾಡಿ ಪ್ರಸಿದ್ಧರಾಗಿದ್ದಾರೆ.
- ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರು, ಕನಕದಾಸರು ಹಲವಾರು ಕೀರ್ತನೆಗಳನ್ನು ರಚಿಸಿ ದಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ.
- ಕೀರ್ತನೆ ಸಾಹಿತ್ಯ ಭಕ್ತಿ ಪ್ರಧಾನವಾದುದ್ದಾಗಿದೆ.
- ಸರ್ವಜ್ಞನ ತ್ರಿಪದಿಗಳು ಕಿರಿದರೊಳ್ ಪಿರಿದರ್ಥವನ್ನು ತಿಳಿಸುವ ಪದ್ಯ ರಚನೆಗಳಾಗಿವೆ.
- ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಹೊಸಗನ್ನಡ ಕಾಲಘಟ್ಟದಲ್ಲಿ ಮೂಡಿಬಂದ ಮಹತ್ವ ಪೂರ್ಣ ಕೃತಿಯಾಗಿದ್ದು ಜ್ಞಾನಪೀಠ ಪ್ರಶಸ್ತಿ ಗಳಿಸಿಕೊಂಡಿದೆ.

- ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ' ಕನ್ನಡ ಸಾಹಿತ್ಯದ ಮೈಲುಗಲ್ಲುಗಳಲ್ಲಿ ಒಂದಾಗಿದೆ.
- ಲಾವಣಿ, ಕಥನ ಕವನಗಳಲ್ಲಿ ವೈಶಿಷ್ಟ್ಯ ಪೂರ್ಣವಾದ ಘಟನೆ ಕಥೆಗಳ ನಿರೂಪಣೆಯಿದೆ.
- ಜನಪದ ಹಾಡುಗಳು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿವೆ.
- ಗೋವಿಂದ ಪೈಯವರ ಗೊಲ್ಗೊಥಾ ಮತ್ತು ವೈಶಾಖಿ ಅಪೂರ್ವವಾದ ಖಂಡ ಕಾವ್ಯವಾಗಿದೆ.
- ಕುವೆಂಪು, ಪಂಜೆ ಮಂಗೇಶರಾವ್, ಬಿ.ಎಂ.ಶ್ರೀ, ಬೇಂದ್ರೆ, ಕಯ್ಯಾರ ಕಿಞ್ಞಣ್ಣ ರೈ ಮೊದಲಾದವರು ಹೊಸಗನ್ನಡ ಪದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.
- ವಿದ್ಯಾವಂತರನ್ನೂ ಅನಕ್ಷರಸ್ಥರನ್ನೂ ಮುದಗೊಳಿಸಿದ ಯಕ್ಷಗಾನ ಹಾಡುಗಳು ಕನ್ನಡ ಪದ್ಯ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿವೆ.

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ನೀಡಿರಿ.

- ಕನ್ನಡದ ಮೊದಲ ಅಲಂಕಾರ ಗ್ರಂಥ ಯಾವುದು?
- ಪಂಪನನ್ನು ಆದಿಕವಿ ಎಂದು ಕರೆಯಲು ಕಾರಣವೇನು?
- ಯಕ್ಷಗಾನ ಹಾಡುಗಳ ವೈಶಿಷ್ಟ್ಯವೇನು?
- ಕಿರಿದರೊಳ್ ಪಿರಿದರ್ಥವನ್ನು ಸಾರಿದ ಪದ್ಯಕಾವ್ಯ ಯಾವುದು?

ಅಧ್ಯಾಪಕರು ಎಂಬ ನೆಲೆಯಲ್ಲಿ ಮೇಲೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ತಿಳಿದಿರಬೇಕಾದುದು ಅಗತ್ಯವಲ್ಲವೇ?
ಕೆಳಗೆ ಕೊಟ್ಟಿರುವ ಭಾಗವನ್ನು ಓದಿ ನೋಡಿರಿ.

**ಪಂಪ**

ಪಂಪ ಎಂದರೆ ಒಂದು ಕವಿಯಲ್ಲ, ಒಂದು ಪ್ರಪಂಚ. ಅವನ ಒಂದೊಂದು ಮಾತೂ ಒಂದೊಂದು ಕಾವ್ಯ. ಆದುದರಿಂದಲೇ ಪಂಪನು ಕನ್ನಡದ ಮಹಾಕವಿ.

ದಿ। ತೆಕ್ಕುಂಜ ಗೋಪಾಲಕೃಷ್ಣ ಭಟ್

ಶ್ರೀ ವಿಜಯನ 'ಕವಿರಾಜ ಮಾರ್ಗವು' ಕನ್ನಡದಲ್ಲಿ ಉಪಲಬ್ಧವಾದ ಮೊದಲ ಕೃತಿ (ಲಕ್ಷಣಗ್ರಂಥ) ಯಾದರೆ ಪಂಪನ ಕೃತಿಗಳು ಮೊದಲನೆಯದಾಗಿ ದೊರೆತ ಕಾವ್ಯಗ್ರಂಥಗಳು. ಪಂಪನ ಕಾಲ ಕ್ರಿ.ಶ ಸು ೯೪೦. ಅದಕ್ಕೆ ಹಿಂದೆ ಕಾವ್ಯ ನಿರ್ಮಾಣ ವಾಗಿರಬಹುದು. ಆದರೆ ಅವು ನಮಗೆ ಉಪಲಬ್ಧವಲ್ಲದ ಕಾರಣ ಪಂಪನು ಕನ್ನಡದ ಆದಿಕವಿಯೆಂಬ ಬಿರುದನ್ನು ಪಡೆದಿದ್ದಾನೆ.

ಪಂಪ ರಚಿಸಿದ ಕೃತಿಗಳು ಎರಡು. ಒಂದು ಆದಿಪುರಾಣ ಇನ್ನೊಂದು ವಿಕ್ರಮಾರ್ಜುನ ವಿಜಯ. ಆದಿಪುರಾಣದಲ್ಲಿ ಮೊದಲನೆಯ ತೀರ್ಥಂಕರನಾದ ಆದಿನಾಥನ ವಿಸ್ತಾರವಾದ ಚರಿತ್ರೆಯಿದೆ. ಆದಿಪುರಾಣದ ಇತರ ಪಾತ್ರಗಳಲ್ಲಿ ಆದಿನಾಥನ ಮಕ್ಕಳಾದ ಭರತ ಚಕ್ರವರ್ತಿ ಮತ್ತು ಬಾಹುಬಲಿ ನಮ್ಮ ನೆನಪಲ್ಲಿ ಉಳಿಯುತ್ತಾರೆ.

'ವಿಕ್ರಮಾರ್ಜುನ ವಿಜಯ' ಅಥವಾ 'ಪಂಪಭಾರತ' ಇದು ಪಂಪನ ಎರಡನೆಯ ಕೃತಿ. ಪಂಪನು ಸಂಸ್ಕೃತದಲ್ಲಿರುವ ವ್ಯಾಸ ಭಾರತದ ಆಧಾರದಲ್ಲಿ 'ವಿಕ್ರಮಾರ್ಜುನ ವಿಜಯ'ವನ್ನು ಕನ್ನಡದಲ್ಲಿ ರಚಿಸಿದ್ದಾನೆ. ಮಹಾಭಾರತದ ಆದಿಪರ್ವದಿಂದ ತೊಡಗಿ ಶಾಂತಿಪರ್ವದ ವರೆಗಿನ ಕಥೆ ಇದರಲ್ಲಿದೆ. ಆದರೆ ಪಂಪ ಭಾರತದಲ್ಲಿ ಅರ್ಜುನನೇ ನಾಯಕನಾಗಿ ಚಿತ್ರಿತವಾಗಿರುವುದರಿಂದ ಅದಕ್ಕೆ ವಿಕ್ರಮಾರ್ಜುನ ವಿಜಯವೆಂಬ ಹೆಸರನ್ನು ಪಂಪನು ನೀಡಿದ್ದಾನೆ.

ಪಂಪನ ಪ್ರತಿಯೊಂದು ಪದ್ಯಗಳು ಸುಂದರವಾಗಿದೆ. ದ್ರೋಣನು ತನ್ನ ಎಳವೆಯ ಗೆಳೆಯನಾದ ದ್ರುಪದನಲ್ಲಿಗೆ ಹೋಗಿ ಅವಮಾನಿತನಾದ ಸಂದರ್ಭದಲ್ಲಿ ಬರುವ ಈ ಪದ್ಯ ನೋಡಿರಿ.

ನುಡಿ ತಡವಪ್ಪುದೊಂದು ಮೊಗದೊಳ್ ಮರುಕಂ ದೊರೆ ಕೊಳ್ವುದೊಂದು ನಾ

ಣ್ಗೆಡೆಗುಡದಿರ್ಪುದೊಂದು ನುಡಿಗಳ್ ಮೊರೆಯಂ ಮರೆಯಿಪ್ಪುದೊಂದು ಕ

ಳ್ಗುಡಿದವರಂದಂಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ

ಬಡದೆ ಜಲಕ್ಕನೀಗಳರಿತೆಂ ಸಿರಿ ಕಳ್ಳೊಡವುಟ್ಟಿತೆಂಬುದಂ

ಹೆಂಡ ಕುಡಿದವರ ನುಡಿ ತಡವರಿಸುವುದು, ಅವರ ಮುಖದಲ್ಲಿ ಮರುಕ ದೋರುವುದು, ನಾಚಿಕೆಯಿಲ್ಲದಿರುವುದು, ನಂಟುಮೊರೆಯನ್ನು ಮರೆಯುವುದು ಸ್ವಾಭಾವಿಕ. ಈ ಗುಣಗಳು ಐಶ್ವರ್ಯವಂತರಿಗೂ ಬರುತ್ತವೆ. ಆದುದರಿಂದ ಸಮುದ್ರ ಮಥನ ಕಾಲದಲ್ಲಿ ಸಿರಿ ಸುರೆಗಳು ಒಟ್ಟಿಗೆ ಜನಿಸಿದ್ದರಿಂದ ಎರಡರ ಸೇವನೆಯಿಂದ ಸಮಾನಗುಣಗಳುಂಟಾಗುತ್ತವೆ ಎಂಬುದು ಬಹಳ ಸುಂದರವಲ್ಲವೇ?

ಕನ್ನಡ ಕಾವ್ಯ ಪ್ರಪಂಚದಲ್ಲಿ ಅಗ್ರಪೀಠವನ್ನಲಂಕರಿಸುವ ಮಹಾಕಾವ್ಯಗಳಲ್ಲಿ ಕುಮಾರವ್ಯಾಸನ ಭಾರತವೂ ಮುಖ್ಯವಾದುದು. ಏಕೆಂದರೆ

ಅರಸುಗಳಿಗಿದು ವೀರದ್ವಿಜರಿಗೆ

ಪರಮವೇದದ ಸಾರ ಯೋಗೀ

ಶ್ವರರ ತತ್ವವಿಚಾರ ಮಂತ್ರೀ ಜನಕೆ ಬುದ್ಧಿಗುಣ

ವಿರಹಿಗಳ ಶೃಂಗಾರ ವಿದ್ಯಾ

ಪರಿಣತರಲಂಕಾರ ಕಾವ್ಯಕೆ

ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ.

ಈ ಕಾವ್ಯವನ್ನು ಯಾರು ಓದಿದರೂ ಅವರವರ ಅಪೇಕ್ಷಿತ ವಸ್ತು ಇದರಲ್ಲಿದೆ. ಅರಸರು ಮೆಚ್ಚುವ ವೀರರಸವು ಸಾಮಾನ್ಯರೆದೆಯಲ್ಲೂ ವೀರಾವೇಶವನ್ನುಕ್ಕಿಸುತ್ತದೆ; ದ್ವಿಜರು ವೇದದ ಸಾರವನ್ನು ಬಯಸುತ್ತಿದ್ದರೆ ಅದು ಈ ಕಾವ್ಯದಲ್ಲಿದೆ. ಯೋಗೀಶ್ವರರ ತತ್ವ ವಿಚಾರವೂ ಮಂತ್ರಿಗಳ ಬುದ್ಧಿಗುಣವೂ ಇದರಲ್ಲಿ ಅಡಕವಾಗಿದೆ. ವಿರಹಿಗಳ (ವಿಪ್ರಲಂಭ) ಶೃಂಗಾರ ಪಂಡಿತರು ಮೆಚ್ಚುವ ಪ್ರೌಢಿ ಇವನ್ನೂ ಒಳಗೊಂಡಿವೆ. ಈ ಕಾರಣದಿಂದಲೇ ಇದು 'ಕಾವ್ಯಕ್ಕೆ ಗುರು' ವೆನಿಸಿದೆ. ಇಂತಹ ಕಾವ್ಯವೇ ಮಹಾಭಾರತ. ಕವಿಯೇ ಕುಮಾರವ್ಯಾಸ.

ಪಾತ್ರ ಸೃಷ್ಟಿಯಲ್ಲಿ ಕುಮಾರವ್ಯಾಸನು ತೋರಿಸಿದ ಪ್ರತಿಭೆಯೂ ಅನ್ಯಾದೃಶವಾದುದು. ಭೀಮನು ಅಸಾಮಾನ್ಯ ಬಲಿಷ್ಠನೆಂದು ಹೊಳೆಯಿಸುವ ಒಂದೇ ಪದ್ಯವು ಕುಮಾರವ್ಯಾಸನ ಮಹತ್ವವನ್ನು ತಿಳಿಯಲು ಸಾಕಾಗುತ್ತದೆ.

ಬಕಾಸುರನ ಪೊರಗೆಯ್ದಿದ ಭೀಮನು ಬಂಡಿ ತುಂಬಿದ ಅನ್ನವನ್ನು ತುತ್ತುಗೊಳ್ಳುತ್ತಿದ್ದನು. ಆಗ ಬಕಾಸುರನು

ಎರಡು ಕೈಯನು ಬಲಿದು ಮುಷ್ಟಿಯೊ

ಳೆರಗಿದನು ಖಳ ಬೆನ್ನ ನೇನೆಂ

ದರಿಯನಿತ್ತಲು ಭೀಮ ಬಲಿದುತ್ತುಗಳ ತೋಟಿಯಲಿ

ಮರನ ಮುರಿದೆರಗಿದನೆ ಪುನರಪಿ

ಮುರಿದು ನೋಡಿದು ಬಹೆನು ನಿಲ್ಲೆನು

ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮ–

ಎರಡು ಕೈಗಳನ್ನು ಬಲವಾದ ಮುಷ್ಠಿಯಾಗಿ ಬಿಗಿದು ಆ ದುಷ್ಟನು ಭೀಮನ ಬೆನ್ನಿಗೆ ಗುದ್ದಿದನು. ಆದರೆ ಭೀಮನು ಬಂಡಿಯನ್ನವನ್ನು ತುತ್ತುಗೊಳ್ಳುತ್ತಿದ್ದುದರಿಂದ ಅದೇನಂದರಿಯದಿದ್ದನು. ಬಕನು ಪುನಃ ಮರವನ್ನೆ ಮುರಿದು ಭೀಮನನ್ನು ಬಡಿದನು.

ಆಗ ಭೀಮನು ತಿರುಗಿ ನೋಡಿದನು; "ಬರುತ್ತೇನೆ; ನಿಲ್ಲು; ಅರ್ಧ ಕಾರ್ಯವಾಗಿದೆ; ಪೂರ್ಣವಾಗಲಿ" ಎಂದು ನಗುತ್ತ ಹೇಳಿದನು.

ವಿವಿಧ ಕಾಲಘಟ್ಟಗಳ ಕನ್ನಡದ ಕೆಲವು ಶ್ರೇಷ್ಠ ಕವಿಗಳ ರಚನಾ ಶೈಲಿಗಳನ್ನು ಗಮನಿಸೋಣ.

ಹಾರಿಸಿತು ರಥಮಂ ತುರಂಗಮಂ ರುಧಿರಮಂ
ಕಾರಿಸಿತು ಸಾರಥಿಯ ಜೀವಮಂ ಸುರಲೋಕ
ಕೇರಿಸಿತು ಛತ್ರಚಾಮರ ಪತಾಕಾಳಿಯಂ ಕೆಂಗರಿಯ ಗಾಳಿಯಿಂದೆ
ತೂರಿಸಿತು ಟೆಕ್ಕೆಯದ ಮೇಲೆ ಹನುಮಂತನಂ
ಚೀರಿಸಿತು ಪಾರ್ಥನ ಶರೀರದೊಳ್ಬೊಟ್ಟೆಯಂ
ತೋರಿಸಿತು ಬಭ್ರುವಾಹನನ ಶರಸಂಕುಲಂ ಫಲುಗುಣಂ ಕಂಪಿಸಲ್ಕೆ

– ಲಕ್ಷ್ಮೀಶ

ನಟ್ಟಿರುಳು ಸುಡುಗಾಡೊಳೊಬ್ಬಳೋರಂತೆ ಬಾ
ಯ್ಬಿಟ್ಟು ಹಲುಬುವ ವೀರ ನಾರಿಯಾವಳೊ ಮೀರಿ
ಸುಟ್ಟೆಯಾದೊಡೆ ನಿನಗೆ ವೀರಬಾಹುಕನಾಣೆ ಕದ್ದು ಸುಡಬಂದೆ ನಿನ್ನ
ನಿಟ್ಟೆಲುವ ಮುರಿವೆನೆಂದುರವಣಿಸಿ ಜರಿಯುತ್ತ
ದಟ್ಟಿಸುತ ಬಂದು ಹಿಡಿದಿರ್ದ ಕಿಚ್ಚಂ ಕೆದರಿ
ಮುಟ್ಟಿಗೆಯ ಮೇಲಿರ್ದಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ ಭೂಪನು

– ರಾಘವಾಂಕ

ಬಡವಗೆ ಬಲುರೋಗ ಬಂದು ಬಾಯ್ಬಿಡಲೋರ್ವ
ರೆಡಹಿಯು ಕಾಣರುರ್ವಿಯೊಳು
ಒಡವೆಯುಳ್ಳವಗಲ್ಪರುಜೆ ಬರೆ ವಿಸ್ಮಯ
ಬಡುತ ಸಾರುವರದು ಸಹಜ

– ರತ್ನಾಕರವರ್ಣಿ

ಶಿವಸುಖಮನರಿಯದೀ ಮಾ
ನವ ಸುಖದ ನಿಮಿತ್ತದಿಂ ತಪಂಗೆಯ್ವವರೊ
ಪ್ಪುವ ಮಾಣಿಕಮಂ ತೌಡಿಂ
ಗವಯವದಿಂ ಮಾರುಗುಡುವ ಮರುಳಂ ಪೋಲ್ಗುಂ

– ಪೊನ್ನ

ಸಮರವ್ಯಾಪಾರಂ ಮಾ
ಣ್ದು ಮಗನೆ ನಿಜಶಿಬಿರದತ್ತ ಬಿಜಯಂಗೆಯ್
ಸತ್ತ ಮಗಂದಿರ್ಸತ್ತರ್ ನೀ
ನೆಮಗುಳ್ಕೊಡೆ ಸಾಲ್ವುದವರನಿಂ ತಮದಪೆವೇ

– ರನ್ನ

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನವಾಯ್ತು ಚಂದ್ರಮತಿ ಮಾತೆಯಮಾ
ತೆಮಗೆ ಬಲೆಯಾಯ್ತು ಹಿಂಸನ
ಮಮೋಘಶರಮಾಯ್ತು ಕೆಡೆದುದಾತ್ಮಕುರಂಗಂ

– ಜನ್ನ

ಜಾತಿಹೀನನ ಮನೆಯ ಜ್ಯೋತಿ ತಾಹೀನವೇ?
ಜಾತಿ ವಿಜಾತಿ ಎನಬೇಡ/ದೇವನೊಲಿ
ದಾತನೆ ಜಾತ ಸರ್ವಜ್ಞ

ಕೊಟ್ಟುಂಬ ಕಾಲದಲಿ ಕೊಟ್ಟುಣಲಿಕರಿಯದೆಲೆ
ಹುಟ್ಟಿನಾ ಒಳಗೆ ಜೇನಿಕ್ಕಿ ಪರರಿಗೆ
ಬಿಟ್ಟು ಹೋದಂತೆ ಸರ್ವಜ್ಞ

– ಸರ್ವಜ್ಞ

## ದಾಸ ಸಾಹಿತ್ಯ

ಕನ್ನಡ ಸಾಹಿತ್ಯದಲ್ಲಿ ವಚನಗಳು ಭಕ್ತಿ ಸಾಹಿತ್ಯ ಪರಂಪರೆಯ ಒಂದು ಘಟಕವಾದರೆ ಕೀರ್ತನೆಗಳು ಮತ್ತೊಂದು ಘಟ್ಟವಾಗಿದೆ. ಹದಿಮೂರನೇಯ ಶತಮಾನದಿಂದ ಕನ್ನಡದಲ್ಲಿ ಕೀರ್ತನೆಗಳು ರಚಿತವಾಗುತ್ತ ಬಂದಿವೆ. ಅಕ್ಕ ಮಹಾದೇವಿ ಮುಂತಾದ ಶಿವಶರಣರೂ ಕೀರ್ತನೆಗಳನ್ನು ರಚಿಸಿದ್ದಾರೆ. ಹದಿಮೂರನೆಯ ಶತಮಾನದಿಂದ ಮುಂದೆ ಬಂದ ಹರಿದಾಸರು ರಚಿಸಿದ ಒಂದು ಪ್ರಕಾರವನ್ನು ಕೀರ್ತನೆಗಳು ಎಂದು ಕರೆಯುವುದು ರೂಢಿ. ಕೀರ್ತನೆ ಎಂಬ ಮಾತಿಗೆ ಸ್ತುತಿ, ಸ್ತೋತ್ರ ಎಂಬ ಅರ್ಥಗಳಿವೆ. ನವವಿಧ ಭಕ್ತಿ ಮಾರ್ಗಗಳಲ್ಲಿ ಕೀರ್ತನವೂ ಒಂದು. ಕೀರ್ತನ ಭಕ್ತಿ ಎಂದರೆ ಹಾಡಿನ ಮೂಲಕ ದೇವರನ್ನು ಸ್ತುತಿಸುವುದು. ಸಾಮಾನ್ಯವಾಗಿ ಕೀರ್ತನೆಗಳಲ್ಲಿ ಪಲ್ಲವಿ, ಅನುಪಲ್ಲವಿ, ನುಡಿಗಳು, ಈ ಮೂರು ಭಾಗಗಳಿರುತ್ತದೆ. ಪಲ್ಲವಿಯಲ್ಲಿ ಕೀರ್ತನಕಾರ ತಾನು ಕಂಡುಕೊಂಡ ಸತ್ಯವನ್ನು ಪ್ರತಿಪಾದಿಸುತ್ತಾನೆ. ಅನುಪಲ್ಲವಿಯಲ್ಲಿ ಅದು ಮುಂದುವರೆದು ನುಡಿಗಳಲ್ಲಿ ಪೋಷಿತವಾಗುತ್ತದೆ. ತಮ್ಮ ಸತ್ಯವನ್ನು ಪ್ರತಿಪಾದಿಸಲು ಲೌಕಿಕವಾದ ದೃಷ್ಟಾಂತಗಳನ್ನು ನೀಡುವುದು ಇಲ್ಲಿ ಮುಖ್ಯ. ಕೀರ್ತನೆಗಳು ಸಮಾಜದಲ್ಲಿ ಸತ್ಯ, ಧರ್ಮ, ಭಕ್ತಿ, ಸಜ್ಜನಿಕೆ ಇರಬೇಕೆಂದು ಬಯಸುತ್ತವೆ. ಸಮಾಜದ ದುಷ್ಟ ರೀತಿ ನೀತಿಗಳನ್ನು ವಿರೋಧಿಸುತ್ತವೆ. ಭಕ್ತಿಗೆ ವಿಮುಖವಾದ ಸ್ವಭಾವವನ್ನು ಖಂಡಿಸುತ್ತವೆ. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ರಚಿಸಿದ ಇಂಥ ಕೀರ್ತನೆಗಳನ್ನು ಹಾಡುಗಳು ಎಂದು ಕರೆದರು. ಹದಿಮೂರನೆಯ ಶತಮಾನದಿಂದ ಈಚೆಗೆ ಹರಿದಾಸರು ಕೀರ್ತನೆಗಳ ಪರಂಪರೆ ಸೃಷ್ಟಿಸಿದರು. ನರಹರಿ ತೀರ್ಥ, ಶ್ರೀಪಾದರಾಯ, ವ್ಯಾಸರಾಯ, ವಾದಿರಾಜರು ಮೊದಲ ಹಂತದ ಕೀರ್ತನಕಾರರಾದರೆ ಪುರಂದರ ದಾಸ ಮತ್ತು ಕನಸದಾಸರು ಕನ್ನಡದ ಅತ್ಯಂತ ಜನಪ್ರಿಯ ಕೀರ್ತನಕಾರರಾಗಿದ್ದಾರೆ. ಇದೇ ಪರಂಪರೆಯಲ್ಲಿ ರಾಘವೇಂದ್ರ ತೀರ್ಥ, ಪ್ರಸನ್ನ ವೆಂಕಟದಾಸ, ವಿಜಯ ದಾಸ ಗೋಪಾಲದಾಸರು ಮುಂತಾದ ಕೀರ್ತನಕಾರರು ಬರುತ್ತಾರೆ. ಇಪ್ಪತ್ತನೆಯ ಶತಮಾನದಲ್ಲೂ ಕೆಲವರು ಕೀರ್ತನೆಗಳನ್ನು ರಚಿಸಿದ್ದಾರೆ.

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ
ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ

ಹುಟ್ಟಿಸಿದ ದೇವ ತಾ ಹೊಣೆಗಾರನಾಗಿರಲು
ಗಟ್ಯಾಗಿ ರಕ್ಷಿಪನು ಇದಕ್ಕೆ ಸಂಶಯವಿಲ್ಲ
ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಹಡೆದ ಜನನಿಯ ತೆರದೆ ಸ್ವಾಮಿ  ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ
ಕಲ್ಲಿನಲಿ ಹುಟ್ಟಿ ತಾ ಕೂಗುವ ಕಪ್ಪೆಗೆ
ಅಲ್ಲಿ ಆಹಾರವನು ತಂದೀಯುವರ್‍ಯಾರೊ
ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

– ಕನಕದಾಸರು

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನುಫಲ?
ಸಟೆಯನಾಡುವ ಮನುಜರು ಮನದಲಿ
ವಿಠಲನ ನೆನೆದರೆಯೇನುಫಲ?

ಕಪಟತನದಿ ವಂಚಿಸುವ ಮನುಜರು
ಜಪಗಳ ಮಾಡಿದರೇನುಫಲ?
ಕುಪಿತಬುದ್ಧಿಯನ್ನು ತ್ಯಜಿಸದೆ ನಿತ್ಯದಿ
ಉಪವಾಸವಿದ್ಧರಿನ್ನೇನು ಫಲ?

ಮಾತಾಪಿತರನು ಬಳಲಿಸುವ ಮಗ
ಯಾತ್ರೆಯ ಮಾಡಿದರೇನುಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನುಫಲ

ಪತಿಯನು ನಿಂದಿಸಿ ಬೊಗಳುವ ಸತಿಯಳು
ವ್ರತಗಳ ಮಾಡಿದರೇನುಫಲ?
ಅತಿಥಿಗಳೆಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನುಫಲ?

ಹೀನಕೃತ್ಯಗಳ ಮಾಡುತ ನದಿಯಲಿ
ಸ್ನಾನವ ಮಾಡಿದರೇನುಫಲ?
ಶ್ರೀನಿಧಿ ಪುರಂದರ ವಿಠಲನ ನೆನೆಯದೆ
ಮೌನವ ಮಾಡಿದರೇನುಫಲ?

–ಪುರಂದರದಾಸರು

## ವಚನ ಸಾಹಿತ್ಯ

ಸಂಸ್ಕೃತದಲ್ಲಿರುವ ವೇದ ಉಪನಿಷತ್‌ಗಳು, ಧರ್ಮ ಗ್ರಂಥಗಳು ಮತ್ತು ಹಳೆಗನ್ನಡ ಕಾವ್ಯಗಳನ್ನು ಜನಸಾಮಾನ್ಯರು ಅರ್ಥೈಸಿಕೊಳ್ಳಲು ಕಷ್ಟವಾದಾಗ, ಧರ್ಮವಿಚಾರಗಳನ್ನು ಅತ್ಯಂತ ಸರಳವಾಗಿ ಜನ ಸಾಮಾನ್ಯರಿಗೆ ಅರ್ಥವಾಗುವಂತೆ ರೂಪಿಸಿದ ಸಾಹಿತ್ಯವೇ ವಚನ ಸಾಹಿತ್ಯ. ಗದ್ಯವೂ, ಪದ್ಯವೂ ಅಲ್ಲದ ಕಾವ್ಯಂಶಗಳನ್ನು ಒಳಗೊಂಡ ಈ ವಚನ ಸಾಹಿತ್ಯವು ವಚನಕಾರರ ಉದ್ದೇಶವನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಯಿತು. ಜೇಡರ ದಾಸಿಮಯ್ಯ, ಶಂಕರದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವೇಶ್ವರ, ಸಿದ್ಧರಾಮ, ಮೊದಲಾದವರು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ವಚನ ಸಾಹಿತ್ಯವು ಮೇಲ್ತರಗತಿಯ ಸಾಹಿತ್ಯ, ಪಾಂಡಿತ್ಯ, ಪ್ರತಿಭೆಗಳ ಸಂಯೋಗದಿಂದ ಉಂಟಾದ ಗ್ರಥನ ಸಾಹಿತ್ಯವಲ್ಲ. ಅನುಭಾವಿಗಳ ಆತ್ಮ ಮಥನದಿಂದ ಹೊರಹೊಮ್ಮಿದ ಮಥನ ಸಾಹಿತ್ಯ. ವಚನಗಳಲ್ಲಿ ರಸ, ಭಾವ, ಅಲಂಕಾರಗಳು, ಉದಾತ್ತ ಧ್ಯೇಯವು ಇರುವುದರಿಂದ ಅವು ಉತ್ತಮ ಸಾಹಿತ್ಯವೆಂದು ಧಾರಾಳವಾಗಿ ಹೇಳಬಹುದು. ವಚನಗಳು ಕನ್ನಡ ಸಾಹಿತ್ಯದ ಉಪನಿಷತ್ತುಗಳು. ವಚಕಾರರು ಕನ್ನಡ ನಾಡಿನ ಋಷಿಗಳು.

ಅಗ್ನಿ ಸುಡುವುದಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೇ ಕ್ರಿಯಾ – ಜ್ಞಾನಭೇದವ ರಾಮನಾಥ

–ಜೇಡರ ದಾಸಿಮಯ್ಯ

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ?

ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

–ಅಕ್ಕಮಹಾದೇವಿ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

* * *

ದಯವಿಲ್ಲದ ಧರ್ಮವದಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ,
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲದೊಲ್ಲನಯ್ಯಾ
–ಬಸವಣ್ಣ

## ಜಾನಪದ

ಯಾವುದೇ ಸಂಸ್ಕೃತಿಯ ಮೂಲಸೆಲೆಯನ್ನು ಪರಿಚಯ ಮಾಡಿಕೊಳ್ಳಬೇಕಾದರೆ ಆ ಸಂಸ್ಕೃತಿಯಲ್ಲಿರುವ ಜನಪದ ಸಂಸ್ಕೃತಿಯ ಆಯಾಮಗಳನ್ನು ತಿಳಿಯಬೇಕು. ಕರ್ನಾಟಕದಲ್ಲಿ ಸಮೃದ್ಧವಾದ ಶ್ರೀಮಂತವಾದ ಜನಪದ ಸಂಸ್ಕೃತಿಯಿದೆ. ಇದು ಜನರ ಬದುಕು, ಅವರ ಸೃಜನಶೀಲ ಸಾಹಿತ್ಯದಲ್ಲಿ ಕಾಣುತ್ತದೆ. ಜನಪದ ಕಥೆ ಹಲವು ತಲೆಮಾರುಗಳಿಂದ ಬೆಳೆದು ಬಂದಿದೆ. ಪುರಾಣ ಮತ್ತು ಐತಿಹ್ಯಗಳು ಈ ಪ್ರಕಾರದಲ್ಲಿ ಕಂಡುಬರುತ್ತದೆ. ಜನಪದ ರಂಗಭೂಮಿ ವೈವಿಧ್ಯಪೂರ್ಣವಾಗಿದೆ. ಯಕ್ಷಗಾನದ ವಿವಿಧ ಪ್ರಕಾರಗಳು ಭೂತಾರಾಧನೆ ಗೊಂಬೆಯಾಟಗಳು, ನಾಟಕಗಳು ಬೆಳೆದು ಬಂದಿವೆ. ಜನಪದರು ಭಿನ್ನ ರೀತಿಯ ಕುಣಿತಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಕಂಸಾಳೆ,ಕೊರಗರ ಕುಣಿತ, ಆಟಿಕಳಂಜ ಹೀಗೆ ಹಲವಾರು ವೈವಿಧ್ಯಮಯ ಕುಣಿತಗಳಿವೆ. ಜನಪದರಲ್ಲಿ ಭಿನ್ನ ಭಿನ್ನ ರೀತಿಯ ಕಲಾರಚನೆಗಳು ಇವೆ. ವೇಷಭೂಷಣಗಳು ಕೂಡಾ ರಂಜನೀಯವಾಗಿದೆ. ಬಹುರೂಪಿಗಳು, ಬುಡುಬುಡಿಕೆ, ಕೊರವಂಜಿ, ಲಂಬಾಣಿ ಮುಂತಾದ ವೇಷಗಳಿವೆ. ಜನಪದದಲ್ಲಿ ಭಿನ್ನ ರುಚಿಯ ಅಡುಗೆಗಳು ಸಾಮಾನ್ಯರಿಗೂ ಎಟಕುವ ರೀತಿಯ ಆಟಗಳಿವೆ. ಗಾದೆ. ಒಗಟು ಮುಂತಾದ ದಿನಬಳಕೆಯ ರಂಜನೆಯ ರಚನೆಗಳೂ ಇವೆ.

ಜನಪದ ಗೀತ ಸಾಹಿತ್ಯ ಈ ಪ್ರಕಾರಗಳಲ್ಲಿ ಹೆಚ್ಚು ಮಹತ್ವದ್ದಾಗಿದೆ. ತ್ರಿಪದಿಗಳು, ಬೀಸುವ ಪದ, ಲಾಲಿ, ಮದುವೆ ಕಗ್ಗ, ಕೊಂತಿ ಮುಂತಾದ ಪದ್ಯಗಳು ಶಿಶುಪ್ರಾಸಗಳು,ಕಥನಗೀತಗಳು ಇರುವಂತೆ ಮಲೆಮಹಾದೇಶ್ವರ,ಮಂಟೇಸ್ವಾಮಿ ಮುಂತಾದ ವ್ಯಕ್ತಿಗಳನ್ನು ಕುರಿತ ಮಹಾಕಾವ್ಯಗಳು, ಸಿರಿಮಹಾಕಾವ್ಯ ಇವೆ. ರಾಮಾಯಣ ಮಹಾಭಾರತಗಳನ್ನು ತಮ್ಮದೇ ಆದ ರೀತಿಯಲ್ಲಿ ಜನಪದರು ಕಟ್ಟಿದ್ದಾರೆ. ಇವೆಲ್ಲ ಅಜ್ಞಾತವಾದ ಕವಿಗಳ ರಚನೆಗಳು. ಜನ ತಮ್ಮ ಶ್ರಮವನ್ನು ಮರೆಯಲು ಹಾಡಿನ ಮೊರೆ ಹೋಗಿದ್ದಾರೆ. ೨೦ನೆಯ ಶತಮಾನದಲ್ಲಿ ಜನಪದ ಸಾಹಿತ್ಯವನ್ನು ಸಂಗ್ರಹಿಸುವ, ಜನಪದ ಬದುಕನ್ನು ಅಧ್ಯಯನ ಮಾಡುವ ಕೆಲಸಗಳು ನಡೆದಿವೆ. ಮೈಸೂರು, ಬೆಂಗಳೂರು, ಮಂಗಳೂರು, ಧಾರವಾಡ ಮುಂತಾದ ಕಡೆ ಜನಪದ ವಸ್ತು ಸಂಗ್ರಹಾಲಯಗಳಿವೆ. ಅನ್ಯದೇಶದ ಜನಪದ ಸಾಹಿತ್ಯವನ್ನು ಕನ್ನಡಕ್ಕೆ ತರುವ ಕನ್ನಡದ ಜನಪದ ಸಾಹಿತ್ಯವನ್ನು ಅನ್ಯಭಾಷೆಗಳಿಗೆ ಅನುವಾದಿಸುವ ಕೆಲಸ ನಡೆದಿದೆ.

ಏಳುತಲೆ ಎದ್ದು ಯಾರ್‍ಯಾರ ನೆನಿಯಲಿ
ಎಳ್ಳು ಜೀರಿಗೆ ಬೆಳೆಯೋಳೆ।ಭೂಮಿತಾಯ
ಎದ್ದೊಂದು ಗಳಿಗಿ ನೆನದೇನ।।

ಮಳೆರಾಯ ಹುಯ್ಯಲಿ ಕೆರಿರಾಯ ತುಂಬಲಿ
ಹನ್ನೆರಡು ಕೋಟಿ ಹರಿಯSಲಿ। ಹೆರಗನ್ನಳ್ಳಿ
ಸಣ್ಣಕ್ಕಿ ಬಯಲು ಬೆಳೆಯSಲಿ।।
ಬಡಗಲ ಮಳೆ ಹೂದು ಬಾಗೀತು ಆರಂಬ
ತೆನಿ ಹೋಗಿ ತೆಂಕ ಒರಗಿದೋ। ತಮ್ಮಯ್ಯ
ಮೆದಿ ಹೋಗಿ ಗಗನ ಧುಮುಕಿದೋ।।
ಬಾಸಿಂಗ ತರುವಾಗ ಸೂಸ್ಯಾಡಿ ಮಳ್ಳೆ ಬಂದ
ಬಾಸಿಂಗ ಚಿಗತು ಬನವಾಗಿ।ನಮ್ಮೂರ
ಕೂಲಿ ಬಡವರಿಗೆ ನೆರಳಾದಿ।।
ಆಪತ್ತು ಬಂದಾಗ ಅಕ್ಕತಂಗೇರು ಬೇಕು
ಹೊಟ್ಟ್ಯಾಗಿನೆರಡು ಸಬುದಕ್ಕ।ಕೇಳಾದಕ
ಹಡದಮ್ಮ ಇರಬೇಕ ಜಲ್ಮಾಕ।।
ಸರದಾರ ಬರುವಾಗ ಸುರದಾವ ಮಲ್ಲೀಗಿ
ದೂರಿ ನನ ತಮ್ಮ ಬರುವಾಗ। ಯಾಲಕ್ಕಿ
ಗೊನಿ ಬಾಗಿ ಹಾಲ ಸುರದಾವ
ರಾಗೀಯ ಒಣರೊಟ್ಟಿ ರಾಜಗೋಲಿಯ ಪಲ್ಯ
ರಾಜ್ಯಕ ತವರು ಬಡವರ।ಮನಿಯಾಗ
ನಾಕು ದಿನವಿದ್ದು ಬರುವೇನ।।
ಹಚ್ಚೆಡದ ಪದರಾಗ ಅಚ್ಚಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಲ ಒಗಿವಂಥ। ರಾಯರನ
ಬಿಟ್ಟೆಂಗ ಬರಲೇ ಹಡೆದವ್ವ ।।

## ಹೊಸಗನ್ನಡ ಕಾವ್ಯ

ಪಂಪನಿಂದ ಪ್ರಾರಂಭವಾಗಿ ಕನ್ನಡದಲ್ಲಿ ಕಾವ್ಯದ ಸಮೃದ್ಧ ಪರಂಪರೆಯಿದೆ. ಮಹಾಕಾವ್ಯ, ವಚನ, ಷಟ್ಪದಿ, ಸಾಂಗತ್ಯ, ತ್ರಿಪದಿ, ಕೀರ್ತನೆ ಜನಪದ ಹಾಡುಗಳು. ಯಕ್ಷಗಾನದ ಹಾಡುಗಳು ಮುಂತಾದ ಭಿನ್ನ ಭಿನ್ನ ಆಯಾಮಗಳನ್ನು ಕನ್ನಡ ಕಾವ್ಯ ಒಳಗೊಳ್ಳುತ್ತ ಬಂದಿದೆ. ೧೯–೨೦ನೆಯ ಶತಮಾನದಲ್ಲಿ ಕಾವ್ಯ ತನ್ನ ಶಿಲ್ಪ, ಸಂವೇದನೆ, ಅಭಿವ್ಯಕ್ತಿ ವಿಧಾನಗಳಲ್ಲಿ ಹೊಸ ರೂಪವನ್ನು ಪಡೆಯಿತು. ಇಂಥ ಹೊಸರೂಪಕ್ಕೆ ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯೂ ಕಾರಣ. ಈ ರೂಪ ಅನುವಾದ ಅಥವಾ ರೂಪಾಂತರಗಳ ಮೂಲ ಕನ್ನಡಕ್ಕೆಬಂದಿತು. ಪಂಜೆ ಮಂಗೇಶರಾವ್, ಹಟ್ಟಿಯಂಗಡಿ ನಾರಾಯಣ ರಾವ್, ಎಸ್.ಜಿ.ನರಸಿಂಹಾಚಾರ್ಯ ಮುಂತಾದವರು ಪ್ರಾರಂಭಿಕ ರಚನೆಗಳನ್ನು ಮಾಡಿದರು. ಬಿ.ಎಂ.ಶ್ರೀಕಂಠಯ್ಯನವರು ತಮ್ಮ ಇಂಗ್ಲೀಷ್ ಗೀತೆಗಳ (೧೯೨೪) ಮೂಲಕ ಹೊಸಕಾವ್ಯ ಮುಂದುವರೆಯಬಹುದಾದ ಹಾದಿಯನ್ನು ಕಾಣಿಸಿದರು. ಮುಂದೆ ಕನ್ನಡದ ರಚನೆಗಳು ಪ್ರಾರಂಭವಾದವು. ದ.ರಾ.ಬೇಂದ್ರೆ, ಮಾಸ್ತಿ, ಕಡೆಂಗೋಡ್ಲುಶಂಕರಭಟ್ಟ, ಕುವೆಂಪು, ಪು.ತಿ.ನ. ಕೆ.ಎಸ್.ನ, ಗೋಪಾಲಕೃಷ್ಣ ಅಡಿಗ, ಕಯ್ಯಾರ ಕಿಞ್ಞಣ್ಣ ರೈ ಮುಂತಾದವರು ಈ ಸಾಹಿತ್ಯ ಪ್ರಕಾರವನ್ನು ಸಮೃದ್ಧವಾಗಿ ಬಳಸಿದರು. ಕನ್ನಡ ಕಾವ್ಯ ಆಯಾ ಕಾಲದ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗೆ ಅನುಗುಣವಾಗಿ ಬೆಳೆದುಬಂದಿದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪ್ರಕೃತಿ ಪ್ರೀತಿ, ಜೀವಪ್ರೀತಿ, ಕನ್ನಡತನ, ಸ್ವಾತಂತ್ರ್ಯದ

ಬಯಕೆ, ಹೊಸ ಸಾಮಾಜಿಕ ಬದಲಾವಣೆ ಮುಂತಾದವು ವಸ್ತುಗಳಾದವು. ಸ್ವಾತಂತ್ರ್ಯಾನಂತರದ ಕಾಲದಲ್ಲಿ ಕೈಗಾರಿಕೀಕರಣದಿಂದ ಉಂಟಾದ ಸಾಮಾಜಿಕ ಪಲ್ಲಟ, ದೇಶ ಕಟ್ಟುವ ಬಯಕೆ, ವ್ಯಕ್ತಿ ವಿಕಾಸ ಮುಂತಾದವು ವಸ್ತುಗಳಾದವು. ದೇಶ ರಾಜಕೀಯವಾಗಿ, ಸಾಮಾಜಿಕವಾಗಿ ಪಲ್ಲಟಗೊಂಡಾಗ ಸಾಮಾಜಿಕ ಬದುಕು, ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಮುಂತಾದವು ವಸ್ತುಗಳಾದವು. ಅಧ್ಯಯನದ ಅನುಕೂಲದ ದೃಷ್ಟಿಯಿಂದ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ, ಸ್ತ್ರೀಸಂವೇದನೆ ಮುಂತಾದ ರೀತಿಯಲ್ಲಿ ಕಾವ್ಯದ ಬೆಳವಣಿಗೆಯನ್ನು ಗುರುತಿಸಲಾಗಿದೆ. ಚಂದ್ರಶೇಖರ ಕಂಬಾರ, ಜಿ.ಎಸ್.ಶಿವರುದ್ರಪ್ಪ, ಚೆನ್ನವೀರ ಕಣವಿ, ಸು.ರಂ.ಎಕ್ಕುಂಡಿ, ಲಂಕೇಶ್, ಸಿದ್ಧಲಿಂಗಯ್ಯ, ವೈದೇಹಿ, ಶಶಿಕಲಾ ವೀರಯ್ಯಸ್ವಾಮಿ ಮುಂತಾದ ಹಲವು ಕವಿಗಳನ್ನು ಮೇಲೆ ಹೇಳಿದ ಕಾವ್ಯ ಮಾರ್ಗಗಳಲ್ಲಿ ಗುರುತಿಸುತ್ತಾರೆ. ಪ್ರಾರಂಭದಲ್ಲಿ ಸಾಂಪ್ರದಾಯಿಕ ಛಂದಸ್ಸಿನ ರಚನೆಗಳು ಬಂದಂತೆ, ಹೊಸ ಛಂದೋಪ್ರಕಾರಗಳ ಆವಿಷ್ಕಾರವಾಯಿತು. ಕಾಲ ಬೆಳೆಯುತ್ತ ಬಂದಂತೆ ಕಾವ್ಯಕ್ಕೆ ಛಂದಸ್ಸಿಗಿಂತ ಸುಲಲಿತ ಲಯ, ಮುಖ್ಯ ಎಂಬ ಮನೋಭಾವ ಬೆಳೆಯಿತು. ಹೀಗೆ ವಿಭಿನ್ನ ವೈವಿಧ್ಯಗಳ, ವಿಭಿನ್ನ ಲಯಗಳ, ವಿಭಿನ್ನ ಮನೋಧರ್ಮದ ಕಾವ್ಯ ಕಳೆದ ೧೦೦ ವರ್ಷಗಳಿಂದ ಬೆಳೆಯುತ್ತಾ ಬಂದಿದೆ

ಮೌನ ತಬ್ಬಿತು ನೆಲವ  
ಜುಮ್ಮನೆ ಪುಳಕಗೊಂಡಿತು ಧಾರಿಣಿ;  
ನೋಡಿ ನಾಚಿತು ಬಾನು  
ಸೇರಿತು ಕೆಂಪುಸಂಜೆಯ ಕದಪಲಿ॥

ಹಕ್ಕಿಗೊರಲಿನ ಸುರತಗಾನಕೆ  
ಬಿಗಿಯು ನಸುವೆ ಸಡಿಲಿತು  
ಬೆಚ್ಚಬೆಚ್ಚನೆಯುಸಿರಿನಂದದಿ  
ಗಾಳಿ ಮೆಲ್ಲನೆ ತೆವಳಿತು॥

ಇರುಳ ಸೆರಗಿನ ನೆಳಲು ಚಾಚಿತು  
ಬಾನು ತೆರೆಯಿತು ಕಣ್ಣನು;  
ನೆಲವು ತಣಿಯಿತು, ಬೆವರು ಹನಿಯಿತು  
ಬಾಷ್ಪ ನೆನೆಸಿತು ಹುಲ್ಲನು॥

ಮೌನ ಉರುಳಿತು, ಹೊರಳಿತೆದ್ದಿತು  
ಗಾಳಿ ಭೋರನೆ ಬೀಸಿತು  
ತೆಂಗುಗರಿಗಳ ಚಾಮರಕೆ  
ಹಾಯೆಂದು ಮನವು ಮಲಗಿತು॥  
–ಎಂ.ಗೋಪಾಲಕೃಷ್ಣ ಅಡಿಗ

ವಸಂತ ಬಂದ ಋತುಗಳ ರಾಜ ತಾ ಬಂದ,  
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ  
ಚಳಿಯನು ಕೊಂದ, ಹಕ್ಕಿಗಳುಲಿಯಗಳೆ ಚೆಂದ,  
ಕೂವೂ, ಜಗ್ ಜಗ್, ಪುವ್ವೀ ಟೂವಿಟ್ಟವೂ!

ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ,
ಇನಿಯರ ಬೇಟ, ಬನದಲಿ ಬೆಳದಿಂಗಳೂಟ
ಹೊಸ ಹೊಸ ನೋಟ, ಹಕ್ಕಿಗೆ ನಲಿವಿನ ಪಾಠ,
ಕೂವೂ, ಜಗ್ ಜಗ್, ಪುವ್ವೀ ಟೂವಿಟ್ಟವೂ!

ಮಾವಿನ ಸೊಂಪು ಮಲ್ಲಿಗೆ ಬಯಲೆಲ್ಲಾ ಕಂಪು
ಗಾಳಿಯ ತಂಪು ಜನಗಳ ಜಾತ್ರೆಯ ಗುಂಪು
ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು
ಕೂವೂ,ಜಗ್ ಜಗ್, ಪುವ್ವೀ ಟೂವಿಟ್ಟವೂ!

ಬಂದ ವಸಂತ – ನಮ್ಮಾ
ರಾಜ ವಸಂತ!

– ಬಿ.ಎಂ.ಶ್ರೀ

ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ
ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸಾ।।

ಏನು ಏನು? ಜೇನು ಜೇನು? ಏನೆ ಗುಂಗುಂ ಗಾನಾ
ಓಂಕಾರದ ಶಂಖನಾದಕ್ಕಿಂತ ಕಿಂಚಿದೂನಾ
ಕವಿಯ ಏಕತಾನ ಕವನದಂತೆ ನಾದಲೀನಾ।।

ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ
ತನ್ನ ದೈವರೇಷೆ ಬರೆಯುವಂತೆ ತಾನೆ ಬಾಲಾ
ಉಸಿರಿನಿಂದೆ ಹುಡುಕುವಂತೆ ತನ್ನ ಬಾಳ ಮೇಲಾ।।

ತಿರುಗುತಿತ್ತು ತನ್ನ ಸುತ್ತ ಮೂಕಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೊಳಗುವೊಲು ಸ್ವತಂತ್ರಾ।।

ಎಲ್ಲೆಲ್ಲೂ ಸೃಷ್ಟಿ ದೇವಿಗಿಟ್ಟ ಧೂಪ ಧೂಮಾ
ಲಹರಿ ಲಹರಿ ಕಂಪಬಳ್ಳಿ; ಚಿತ್ತರಂಗ ಭೂಮಾ
ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು ಪ್ರೇಮಾ।।

ಅಂತು ಇಂತು ಪ್ರಾಣ ತಂತು ಹೆಣೆಯುತಿತ್ತು ಬಾಳಾ
ಅಲ್ಲು, ಇಲ್ಲು ಚೆಲುವು ನಿಂತು ಹಾಕುತಿತ್ತು ತಾಳಾ
'ಬಂತೆಲ್ಲಿಗೆ?' ಕೇಳುತಿದ್ದನೀಯನಂತ ಕಾಳಾ।।

ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ

ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ
ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸಾ।।

– ದ.ರಾ.ಬೇಂದ್ರೆ

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೇ ನೂತ್ನ ಜೀವನಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ

– ಡಿ.ವಿ.ಜಿ

**ಹಾಡು ಹಳೆಯದಾದರೇನು**

ಹಾಡು ಹಳೆಯದಾದರೇನು
ಭಾವ ನವನವೀನ
ಎದೆಯ ಭಾವ ಹೊಮ್ಮುವುದಕೆ
ಭಾಷೆ ಒಂದು ಸಾಧನ
ಹಳೆಯ ಹಾಡ ಹಾಡು ಮತ್ತೆ
ಅದನ ಕೇಳಿ ತಣಿಯುವೆ
ಹಳೆಯ ಹಾಡಿನಿಂದ ಹೊಸತು
ಜೀವನವನೆ ಕಟ್ಟುವೆ
ಹಾಡನೊಲಿದು ಕೇಳುವನಿತು
ತೆರೆದ ಹೃದಯ ನನಗಿದೆ
ಅಷ್ಟೆ ಸಾಕು ಹಾಡು ನೀನು
ಅದನೆ ಕೇಳಿ ಸುಖಿಸುವೆ
ಹಮ್ಮು ಬಿಮ್ಮು ಒಂದು ಇಲ್ಲ
ಹಾಡು ಹೃದಯ ತೆರೆದಿದೆ
ಹಾಡಿನಲ್ಲಿ ಕರಗಿ ಬಿಡಲು
ನನ್ನ ಮನವು ಕಾದಿದೆ

– ಡಾ। ಜಿ.ಎಸ್.ಶಿವರುದ್ರಪ್ಪ

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನಮೈಮರೆಯುವುದು
ಕನ್ನಡ! ಕನ್ನಡ, ಹಾ, ಸವಿಗನ್ನಡ!
ಕನ್ನಡದಲಿ ಹರಿ ಬರೆಯುವನು
ಕನ್ನಡದಲಿ ಹರಿ ತಿರಿಯುವನು!
ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿವರಗಳ ಮಳೆ ಕರೆಯುವನು
ಹರ ಮುರಿಯದೆ ತಾ ಪೊರೆಯುವನು
ಬಾಳುವುದೇಕೆ? ನುಡಿ, ಎಲೆ ಜೀವ
ಸಿರಿಗನ್ನಡದಲಿ ಕವಿತೆಯ ಹಾಡೆ!
ಸಿರಿಗನ್ನಡದೇಳಿಗೆಯನು ನೋಡೆ!
ಕನ್ನಡದ ತಾಯಿಯ ಸೇವೆಯ ಮಾಡೆ!

– ಕುವೆಂಪು

ಜೀವನದ ಕಲ್ಪತರು ಪಡೆದನುಭವದ ಫಲವು
ಸಿಹಿಯೂ ಸಿಹಿ। ಬೇರೇನು ಹೇಳಲೊಲ್ಲೆ;
ಬಾಳುವೆಯ ಬಟ್ಟಲಲಿ ನಂಜೆರೆದು ಕುಡಿಯೆನಲು,
ಕಹಿಯೆನದೆ ಕುಡಿಕುಡಿದು ಬದುಕಬಲ್ಲೆ ॥೧॥

ಬದುಕು–ಮಾನವನೆದೆಯೊಳಗಿದಾಶಾಜ್ಯೋತಿ।
ಅದು ನಂದಿದಂದು ಬಲಗುಂದಲಿಹುದು;
ಬೆಳಕೆತ್ತಿ ಹಿಡಿದಂದು, ಮನುಜ ಬದುಕಿರುವಂದು,
ಹಾರಾಟ ಹೋರಾಟ ಹಲವಿರುವುದು, ॥೨॥

ಬದುಕಬೇಕೆಂದೆನುವ ಬಯಕೆಯೊಂದಿಲ್ಲದಿರೆ,
ಬಾಳ್ಗೆ ಪೌರುಷವಿಲ್ಲ – ಪಂಥವಿಲ್ಲ;
ಸಾಣೆ ಹಿಡಿಯದ ವಜ್ರ, ಮಸೆಯದಲಗಿನ ಮೊನೆಯು,
ಬೆಳಗಲಿಲ್ಲ – ಹರಿತವಾಗಲೊಲ್ಲ! ॥೩॥

ಬದುಕು ಭಾಗ್ಯದ ನಿಧಿಯು, ಕಾಪಿಡುತಿಹರು ಕೆಲರು,
ಕಾಡುತಿಹ ಖಳರಿಹರು, ಸುತ್ತಿ ಮುತ್ತಿ;
ಹೊಗಳಿಕೆಗೆ ಹಿಗ್ಗದೆಯೆ ತೆಗಳಿಕೆಗೆ ತಗ್ಗದೆಯೆ,
ನಿಧಿ ಸೂರೆಯಾಗದೆಯೇ – ಬಾಳ್ವೆ, ತೃಪ್ತಿ! ॥೪॥

– ಕಯ್ಯಾರ ಕಿಞ್ಞಣ್ಣ ರೈ

## ಪಾಠಯೋಜನೆಯ ಮಾದರಿ

### ಎಲ್ಲಾ ಭೇದ ಮರೆತು

ಎಲ್ಲಾ ಭೇದ ಮರೆತು
ಬನ್ನಿರಿ ನಾವು ಸಮಾನ
ಸಾರುವ ಇಂದು ಎಲ್ಲರು ಒಂದು
ಇದುವೆ ನವಗಾನ

ದುಡಿದರು ಕಾಣುತ ಹಿರಿಯರು ಅಂದು
ಐಕ್ಯದ ಸುಂದರ ಕನಸು
ಪಣತೊಡಿರಿಂದು ಮಾಡುವೆವೆಂದು
ಎಲ್ಲವನು ನನಸು

ಜಾತಿ ಮತಗಳ ಧನಿಕ ಬಡವರ
ಭೇದವ ತರಬೇಡಿ
ಬಿದ್ದವರನು ಮೇಲೆತ್ತುವ ಬನ್ನಿ
ಎಲ್ಲರು ಕೈನೀಡಿ

ಗಂಗೆ ತುಂಗೆ ಕಾವೇರಿಯ ಜಲ
ನಮಗಾಗಿಯೆ ಎಂದೂ
ಮನಮಾಡಿಂದು ದುಡಿಯಲು ಬಂದು
ಆಲಸ ಬಿಡುತಿಂದು

ಪುಣ್ಯದ ಮಣ್ಣಿದು ಬೆಳೆಸಲು ಬಾ
ಬಂಗಾರದ ಬೆಳೆಯನ್ನು
ಬೆವರಿನ ಹೊಳೆಯೇ ಹರಿಯಲಿ ಇಂದು
ಕೊಚ್ಚುತ ಕೊಳೆಯನ್ನು

ಕೊಲೆ ಸುಲಿಗೆಗಳ ಅತ್ಯಾಚಾರದ
ಕೊನೆಯಾಗಲಿ ಇಂದು
ಸ್ನೇಹದ ಪ್ರೇಮದ ಭ್ರಾತೃತ್ವದ ಸೆಲೆ
ಹರಿಯಲಿ ಎಂದೆಂದು

ಕುಡಿಯುವುದೊಂದೇ ಜಲ
ಉಸಿರಾಡುವುದೊಂದೇ ಗಾಳಿ
ಹರಿಯುವುದೊಂದೇ ರಕ್ತವು
ನಮ್ಮಲಿ ಭೇದವು ಏಕಾಗಿ ।।

– ಡಾ. ನಾರಾಯಣ ಭಟ್

**ಪರಿಗಣಿಸಬೇಕಾದ ವಸ್ತುತೆಗಳು**

**ಬೋಧನಾಶಾಸ್ತ್ರಪರವಾದ ವಿಶ್ಲೇಷಣೆ**

**ಪ್ರಾಥಮಿಕ ವಿವರಗಳು**

- ಸಂಸ್ಥೆ/ಶಾಲೆಯ ಹೆಸರು :
- ತರಗತಿ : ನಾಲ್ಕು
- ಅಧ್ಯಾಪಕ ವಿದ್ಯಾರ್ಥಿಯ ಹೆಸರು :
- ವಿಷಯ : ಕನ್ನಡ
- ಘಟಕ/ಪಾಠ : ಎಲ್ಲಾ ಭೇದ ಮರೆತು (ಕವಿತೆ)
- ಸಮಯ : 5 ಪಿರೇಡುಗಳು

**ಕಲಿಕಾಸಾಧನೆಗಳು**

- ಸರಳವಾದ ಕವಿತೆಗಳನ್ನು ಓದಿ ಆಸ್ವಾದಿಸುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನಾ ಟಿಪ್ಪಣಿಯನ್ನು ಬರೆಯುವುದು.
- ಕವಿತೆ, ವಿವರಣೆ, ವರ್ಣನೆ ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.

**ಆಶಯಪರ**

- ಭಾರತೀಯರೆಲ್ಲರೂ ಸಮಾನರು
- ಭಾರತೀಯರಲ್ಲಿ ಜಾತಿ, ಮತ, ಧನಿಕ, ಬಡವ ಭೇದ ಸರಿಯಲ್ಲ.
- ದೇಶಭಕ್ತಿ ಗೀತೆಗಳನ್ನು ಹಾಡುವುದರಿಂದ ದೇಶಪ್ರೇಮ ಬೆಳೆಯುವುದು.

**ಭಾಷಾಪರ/ಕಾವ್ಯಪರ**

- ಪ್ರಾಸವು ಕವಿತೆಗಳ ಸೌಂದರ್ಯವನ್ನು ಹೆಚ್ಚಿಸುತ್ತದೆ.
- ಪದವನ್ನು ವಿಂಗಡಿಸುವುದರಿಂದ ಅರ್ಥಸ್ಪುಟತೆ ಉಂಟಾಗುತ್ತದೆ.
- ಸಾಲುಗಳನ್ನು ಬೆಳೆಸುವುದರಿಂದ ಸೃಜನಶೀಲತೆ ಬೆಳೆಯುತ್ತದೆ.
- ಕವಿತೆ ನೀಡುವ ಸಂದೇಶ ತುಂಬಾ ಮೌಲ್ಯಯುತವಾಗಿದೆ.
- ಪರ್ಯಾಯ ಪದಗಳನ್ನು ತಿಳಿಯುವುದರಿಂದ, ಬಳಸುವುದರಿಂದ ನಮ್ಮ ಜ್ಞಾನ ಭಂಡಾರ ಸಂಪುಷ್ಟವಾಗುತ್ತದೆ.
- ಸಮಾನಾರ್ಥ ಪದಗಳನ್ನು ಹುಡುಕುವುದರಿಂದ ವಿಶ್ಲೇಷಣಾ ಸಾಮರ್ಥ್ಯ ಬೆಳೆಯುತ್ತದೆ.
- ಕವಿತೆಯು ಹೇಳಿರುವ ವಿಚಾರಗಳು ನಮ್ಮನ್ನು ಹೊಸ ಚಿಂತನೆಯತ್ತ ಒಯ್ಯುತ್ತದೆ.

  ಕುಡಿಯುವುದೊಂದೇ ಜಲ
  ಉಸಿರಾಡುವುದೊಂದೇ ಗಾಳಿ
  ಹರಿಯುವುದೊಂದೇ ರಕ್ತವು
  ನಮ್ಮಲಿ ಭೇದವು ಏಕಾಗಿ

- ಎಲ್ಲಾ ಭೇದವ ಮರೆತು ಎಲ್ಲರು ಒಂದು ಎನ್ನುವ ನವಗಾನ ಸಾರಿದ ರೀತಿ ತುಂಬಾ ಮನೋಹರವಾಗಿದೆ.

**ಕಲಿಕಾ ಸಾಮಗ್ರಿಗಳು**

- ಪಾಠಪುಸ್ತಕ
- ದಾರಿದೀಪ ಸಿ.ಡಿ/ಕವನದ ಸಿ.ಡಿ
- ಆಸ್ವಾದನಾ ಟಿಪ್ಪಣಿಯ ಮಾದರಿಗಳು
- ದೇಶಭಕ್ತಿಗೀತೆಗಳ ಸಂಗ್ರಹ

**ಉತ್ಪನ್ನಗಳು**

- ಆಸ್ವಾದನಾ ಟಿಪ್ಪಣಿ
- ಕವನ (ಸಾಲು ಸೇರಿಸಿದ)
- ಟಿಪ್ಪಣಿ
- ದೇಶಭಕ್ತಿ ಗೀತೆಗಳ ಸಂಗ್ರಹ

**ರೂಪುಗೊಳ್ಳಬೇಕಾದ ಮೌಲ್ಯಗಳು/ಮನೋಭಾವಗಳು**

- ಸೋಮಾರಿತನವನ್ನು ದೂರಮಾಡಿ ಶ್ರಮಪಟ್ಟು ದುಡಿಯಬೇಕು
- ಎಲ್ಲಾ ಭೇದವನ್ನು ಮರೆತು ಎಲ್ಲರೂ ಸಮಾನರೆಂಬ ಭಾವನೆಯಿಂದ ಬದುಕಬೇಕು.

* * *

ಘಟಕ – 3

# ನಮ್ಮ ಭಾಷೆ – ಗದ್ಯ ಮತ್ತು ಗದ್ಯಬೋಧನೆ

## ಮುನ್ನುಡಿ

ಮಾನವನ ಸಾಮಾಜಿಕ ಹಾಗೂ ವೈಜ್ಞಾನಿಕವಾದ ಪ್ರಗತಿಯೊಂದಿಗೆ ಗದ್ಯದ ಬೆಳವಣಿಗೆಯು ಸಂಬಂಧವನ್ನು ಹೊಂದಿದೆ. ಆಡುವ ಮಾತು, ಛಂದೋಬದ್ಧವಲ್ಲದ ವಾಕ್ಯ ಎಂಬ ಅರ್ಥದಲ್ಲಿ ಗದ್ಯ ಎಂಬ ಪದವು ಬಳಕೆಯಾಗುತ್ತದೆ. ಆರಂಭಕಾಲದಲ್ಲಿ ಪದ್ಯಗಳ ಬಳಕೆ ಹೆಚ್ಚಾಗಿದ್ದರೂ ಅನಂತರದ ಕಾಲದಲ್ಲಿ ಮಾನವನಿಗೆ ಆಶಯವಿನಿಮಯದ ಆವಶ್ಯಕತೆಯು ಹೆಚ್ಚಾದಾಗ ಭಾಷೆಯು ಸ್ವಾಭಾವಿಕವಾಗಿ ವಿಕಾಸಗೊಳ್ಳುವ ಹಂತದಲ್ಲಿ ಗದ್ಯದ ಉಗಮವಾಗಿರಬಹುದು. ಇದು ಬಾಯ್ದೆರೆಯಾಗಿಯೂ ಬರವಣಿಗೆಯ ರೂಪದಲ್ಲೂ ಬೆಳವಣಿಗೆಯಾಯಿತು. ಕನ್ನಡ ಭಾಷೆಯ ಉಗಮದೊಂದಿಗೆ ಭಾಷೆಯ ಗದ್ಯರೂಪವನ್ನು ವ್ಯವಹಾರಕ್ಕೆ ಬಳಸಲಾರಂಭಿಸಿದರೂ ಸಾಹಿತ್ಯ ಕ್ಷೇತ್ರದಲ್ಲಿ ಗದ್ಯಕ್ಕೆ ಕೇವಲ ಒಂದೆರೆಡು ಶತಮಾನಗಳ ಹಿಂದಿನಿಂದ ಮಾತ್ರ ವಿಶಿಷ್ಟ ಸ್ಥಾನ ಲಭಿಸಿದೆ. ಆರಂಭಕಾಲದ ಕನ್ನಡ ಗದ್ಯಕೃತಿಯಾದ ವಡ್ಡಾರಾಧನೆಯಿಂದ ತೊಡಗಿ ಕ್ರೈಸ್ತ ಮಿಶನರಿಗಳ ಕೊಡುಗೆಗಳ ಮೂಲಕ ಹಾಗೂ ಇನ್ನಿತರ ವ್ಯಕ್ತಿಗಳ ಮೂಲಕ ಬೆಳೆದು ಅನೇಕ ಬದಲಾವಣೆಗಳೊಂದಿಗೆ ಕನ್ನಡ ಗದ್ಯರೂಪವು ಬೆಳವಣಿಗೆಯ ಹಾದಿಯಲ್ಲಿ ನಿರಂತರವಾಗಿ ಸಾಗುತ್ತಿದೆ.ಗದ್ಯಸಾಹಿತ್ಯದಲ್ಲಿ ಇಂದು ಅನೇಕ ಸಾಹಿತ್ಯ ಪ್ರಕಾರಗಳಿವೆ. ಅವುಗಳ ಪೈಕಿ ಸಣ್ಣಕಥೆಗಳು, ಜೀವನಚರಿತ್ರೆ, ವಿಮರ್ಶೆ, ಪ್ರವಾಸಕಥನ, ಆತ್ಮಕತೆ, ಜೀವನಚರಿತ್ರೆ, ಅನುಭವ ಕಥನ ಮುಂತಾದವುಗಳನ್ನು ಅವಲೋಕಿಸುವುದರೊಂದಿಗೆ ಅವುಗಳು ಏನೆಂಬುದನ್ನು ಅರ್ಥೈಸಿಕೊಡುವುದು ಈ ಘಟಕದ ಪ್ರಧಾನ ಉದ್ದೇಶವಾಗಿದೆ. ಇದರೊಂದಿಗೆ ವ್ಯವಹಾರ ರೂಪಗಳ ಕುರಿತು ಸಾಮಾನ್ಯ ತಿಳುವಳಿಕೆಯನ್ನೂ ಗಳಿಸಬೇಕು. ಇವುಗಳ ಕುರಿತು ಜ್ಞಾನವನ್ನು ಗಳಿಸುವ ಅಧ್ಯಾಪಕ ವಿದ್ಯಾರ್ಥಿಯು ಗದ್ಯ ಬೋಧನಾಶಾಸ್ತ್ರದ ಸಮೀಪನಗಳನ್ನೂ, ತಂತ್ರಗಳನ್ನೂ ಅರ್ಥೈಸಿಕೊಂಡು ಸೂಕ್ತವಾದ ರೀತಿಯಲ್ಲಿ ಗದ್ಯವನ್ನು ಬೋಧಿಸುವುದಕ್ಕೆ ಅಗತ್ಯವಾದ ತಿಳುವಳಿಕೆಗಳನ್ನು ರೂಪಿಸಿಕೊಳ್ಳಬೇಕು.

## ಪ್ರಧಾನ ಆಶಯಗಳು

- ಕನ್ನಡದ ಸಣ್ಣಕಥೆಗಳಿಗೆ ಮಹತ್ತಾದ ಚರಿತ್ರೆಯಿದೆ.
- ಆಯಾ ಕಾಲಗಳಲ್ಲಿ ಮೂಡಿಬಂದ ಸಣ್ಣಕತೆಗಳ ಕಥಾ ಸನ್ನಿವೇಶಗಳಲ್ಲಿ, ತಂತ್ರಗಳಲ್ಲಿ ಹಾಗೂ ಭಾಷಾ ಶೈಲಿಗಳಲ್ಲಿ ವ್ಯತ್ಯಾಸವಿದೆ.
- ಲೇಖಕರು ತಮ್ಮ ಅನುಭವ, ನೆನಪು ಹಾಗೂ ಮಾನಸಿಕವಾದ ವಿಚಾರಗಳನ್ನು ಬಹಿರಂಗಗೊಳಿಸುವುದಕ್ಕೆ ಸೂಕ್ತವಾದ ಕಥಾ ತಂತ್ರಗಳನ್ನು ಆರಿಸುತ್ತಾರೆ.
- ಸರಳವೂ, ಕಾವ್ಯಾತ್ಮಕವೂ ಆಗಿದ್ದು ಜೀವನದೊಂದಿಗೆ ಹಾಸುಹೊಕ್ಕಾಗಿರುವ ಭಾಷೆಯನ್ನು ಸಣ್ಣಕತೆಗಳಲ್ಲಿ ಕಾಣಬಹುದು.
- ಕಥೆಯಲ್ಲಿ ಸೇರೋಣ, ಬೊಂಬೆಯನ್ನುಪಯೋಗಿಸಿ ಕಥಾಮಂಡನೆ, ಚಿತ್ರಗಳನ್ನು ತೋರಿಸಿ ಕಥೆ ಹೇಳುವುದು, ಪೌರಾಣಿಕ ಕಥೆಗಳು ಎಂಬೀ ವಿಭಿನ್ನ ಕಥಾಮಂಡನಾ ತಂತ್ರಗಳಿವೆ.
- ಕನ್ನಡ ಕಾದಂಬರಿಯ ಚರಿತ್ರೆ.
- ಬೇರೆ ಬೇರೆ ಕಾಲಗಳಲ್ಲಿ ರಚನೆಯಾದ ವಿಶಿಷ್ಟ ಕಾದಂಬರಿಗಳು ಹಾಗೂ ಅವುಗಳ ವಿಶೇಷತೆಗಳು
- ಆರಿಸಿಕೊಂಡ ಕೆಲವು ಕಾದಂಬರಿಗಳ ನಿರೂಪಣೆಯ ವಿಧಾನ, ಕಥಾವಸ್ತು, ಭಾಷೆ, ಕಥಾಪಾತ್ರಗಳ ವಿಶೇಷತೆಗಳು
- ಕಥೆ, ಕಾದಂಬರಿ, ಸಾಹಿತ್ಯ ರಚನೆಗಳ ಕುರಿತಾದ ಸಾಮಾನ್ಯ ದೃಷ್ಟಿಕೋನ.
- ಪಾಠಪುಸ್ತಕಗಳಲ್ಲಿರುವ ವಿಭಿನ್ನ ವ್ಯವಹಾರ ರೂಪಗಳು.

- ವಿಭಿನ್ನ ರೀತಿಗಳಲ್ಲಿ ಸಿದ್ಧಪಡಿಸಿದ ಪ್ರವಾಸಕಥನಗಳು
- ಆತ್ಮಕಥೆಗಳು, ಜೀವನಚರಿತ್ರೆಗಳು, ಅನುಭವ ಕಥನ ಟಿಪ್ಪಣಿಗಳು
- ವಿವಿಧ ಪಾಠಭಾಗಗಳು, ಅಧ್ಯಾಪಕರ ಪಠ್ಯ
- ಗದ್ಯಬೋಧನಾ ಸಮೀಪನ
- ಗದ್ಯ ಪಠ್ಯಭಾಗಗಳ ಮಂಡನಾ ವಿಧಾನ
- ಅನುಕ್ರಮಣಿಕೆ
- ಭಾಷಾ ವಿಶೇಷತೆಗಳು

## ಸಣ್ಣಕತೆ

ಕೆಲವು ಪ್ರತ್ಯೇಕ ಲಕ್ಷಣಗಳು (ಭಾವನಾತ್ಮಕ, ಏಕಾಗ್ರತೆ, ತೀವ್ರವಾದ ಮಾನಸಿಕ ಒತ್ತಡವನ್ನೀಯುವ ವಾತಾವರಣ, ಸನ್ನಿವೇಶ, ಚಿಕ್ಕದಾಗಿರುವುದು) ಇರುವ ಕತೆಗಳನ್ನು ಮಾತ್ರ ಸಣ್ಣಕತೆಗಳೆಂದು ಕೆಲವರು ವಾದಿಸುವಾಗ ಮತ್ತೆ ಕಲವರು ಸ್ವಾಭಾವಿಕವಾದ, ಸರಳವಾದ ಸಾಹಿತ್ಯ ರೂಪಗಳೇ ಸಣ್ಣ ಕಥೆಗಳೆಂದು ಅಭಿಪ್ರಾಯ ಪಡುತ್ತಾರೆ.  ಸಣ್ಣಕತೆಗಳೆಲ್ಲವೂ ಸಣ್ಣಕತೆಗಳಲ್ಲವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

### ಸಣ್ಣಕತೆಗಳಿಗೆ ಸಂಬಂಧಿಸಿದ ಕೆಲವು ದೃಷ್ಟಿಕೋನಗಳು

- ಸಣ್ಣಕತೆಗಳು ಬಾಹ್ಯ ಅಥವಾ ಆಂತರಿಕವಾದ ಒಂದೇ ಒಂದು ಘಟನೆಯನ್ನು ಪ್ರತಿಪಾದಿಸುವ ಭಾವನೆಯ ಸೃಷ್ಟಿಯಾಗಿದೆ.
- ಚಿಕ್ಕದಾದರೂ ಜೀವನಕ್ಕೆ ನಿಕಟವಾದ ಒಂದು ಅನುಭವವನ್ನು ಅಥವಾ ಘಟನೆಯನ್ನು ಭಾವನಾತ್ಮಕವಾಗಿ ನೀಡುವ ಸಣ್ಣಕತೆಗಳಿಗೆ ವಿಸ್ತಾರವಾದ ವಿಷಯಗಳ ಹಿನ್ನಲೆಯ ಆವಶ್ಯಕತೆಯಿಲ್ಲ. ಒಂದು ಸಣ್ಣ ಕತೆಯಲ್ಲಿ ಕೇವಲ ಒಂದೇ ಒಂದು ಆಶಯವನ್ನು ಮಾತ್ರ ಪ್ರತಿಪಾದಿಸತಕ್ಕದ್ದು.
- ಸಣ್ಣಕತೆಯು ನಿರಂತರವಾಗಿ ನಡೆಯುವ ಒಂದು ಘಟನೆಯ ವಿವರಣೆಯಾಗಿದೆ. ಆರಂಭದಲ್ಲಿ ನಿರೂಪಿಸುವ ಘಟನೆಗಳ ಮೂಲಕ ಒಂದು ಸಮಸ್ಯೆಯನ್ನು ಮಂಡಿಸಲಾಗುತ್ತದೆ. ಬಳಿಕ ನಿರೂಪಿಸುವ ಘಟನೆಗಳ ಮೂಲಕ ಆ ಸಮಸ್ಯೆಗೆ ಪರಿಹಾರವನ್ನು ಸೂಚಿಸಲಾಗುತ್ತದೆ.
- ಸಣ್ಣಕತೆಯು ಬಹಳ ಜಾಗರೂಕತೆಯಿಂದ ರಚಿಸಬೇಕಾದ ನಿರೂಪಣ ಶಿಲ್ಪವಾಗಿದೆ. ಸೂಕ್ಷ್ಮದೃಷ್ಟಿ, ಪ್ರತಿಪಾದನ ರೀತಿ ಭಾಷಾಶೈಲಿ ಇತ್ಯಾದಿ ವಿಚಾರಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕಾದ ರಚನೆಯಾಗಿದೆ. ಲೇಖಕನ ವ್ಯಕ್ತಿತ್ವವು ಕೂಡ ಇದರಲ್ಲಿ ಪ್ರಕಟಗೊಳ್ಳುತ್ತದೆ.
- ಟೋರ್ಚಿನ ಬೆಳಕಿನಂತೆ ಚಿಕ್ಕ ವ್ಯಾಪ್ತಿಯಲ್ಲಿ ಪಸರಿಸಿ ಸೂಕ್ತವಾದ ಹಾಗೂ ನಿಖರವಾದ ಚಿತ್ರವನ್ನು ಸಹಜವಾಗಿ ಸ್ಪಷ್ಟವಾಗಿ ತಿಳಿಸುವುದಕ್ಕೆ ಸಣ್ಣಕತೆಗಳ ಮೂಲಕ ಸಾಧ್ಯವಾಗಬೇಕು.
- ಸಣ್ಣಕತೆಯ ಪ್ರಮುಖ ಗುಣ ಏಕಾಗ್ರತೆ. ಅದರಲ್ಲಿ ಒಂದು ಘಟನೆ, ಒಂದು ಕಥಾಪಾತ್ರ, ಒಂದು ಭಾವನೆ, ಒಂದು ಅವಸ್ಥೆ/ಸ್ಥಿತಿ ಇತ್ಯಾದಿಗಳಿಗೆ ಒತ್ತು ನೀಡಲಾಗುತ್ತದೆ. ಏಕಾಗ್ರತೆಯು ಕುಂದದಂತೆ ಕೇಂದ್ರ/ಪ್ರಧಾನ ಕಥಾಪಾತ್ರವನ್ನು ಹಾಗೂ ಭಾವನೆಯನ್ನು ನಾಟಕೀಯವಾಗಿ ಬೆಳೆಸುವುದರಲ್ಲಿ ಸಣ್ಣಕತೆಯ ಯಶಸ್ಸು ಅಡಗಿದೆ.
- ಒಂದು ಕತೆಯನ್ನು ಅದರ ವಿಷಯದ ಸ್ವಭಾವ ಹಾಗೂ ರಚನಾ ವಿಧಾನಗಳು ಉತ್ತಮ ಕಲಾಸೃಷ್ಟಿಯನ್ನಾಗಿಸುತ್ತದೆ. ಹೊರತು ಆ ಕತೆಯ ವಿಸ್ತಾರವಲ್ಲ.
- ಸಣ್ಣಕತೆಯು ಏಕವ್ಯಕ್ತಿ ಕೇಂದ್ರಿತವಾಗಿದೆ.

**ಕಥೆಯ ಕಥೆ**

ಶಿಲಾಯುಗದಲ್ಲಿ ಮಾನವನು ರಾತ್ರಿಯಲ್ಲಿ ಅಗ್ನಿಕುಂಡದ ಸುತ್ತ ಕುಳಿತುಕೊಂಡು ಹೇಳಿದವುಗಳು ಆರಂಭಕಾಲದ ಸಣ್ಣಕಥೆಗಳಾಗಿವೆ. ಕ್ರಿ.ಪೂ.ನಾಲ್ಕನೇ ಶತಮಾನದಲ್ಲಿದ್ದ ಇಬ್ಬರು ಸಹೋದರರು, ಕ್ರಿ.ಪೂ.ಆರನೇ ಶತಮಾನದಲ್ಲಿ ಗ್ರೀಸ್‌ನಲ್ಲಿ ಉಂಟಾಯಿತೆಂದು ನಂಬಲಾದ ಇಸೋಪನ ಕಥೆಗಳು, ಶ್ರೀಬುದ್ಧನ ಪೂರ್ವಜನ್ಮಗಳ ಕುರಿತಾದ ವಿಚಾರಗಳಾಗಿವೆಯೆಂದು ನಂಬಲಾದ ಜಾತಕಕತೆಗಳು, ಕ್ರಿ.ಪೂ.300 ಮತ್ತು ಕ್ರಿ.ಪೂ.500ರ ಮಧ್ಯೆ ರಚಿಸಲಾಯಿತೆಂದು ಹೇಳುವ ಪಂಚತಂತ್ರ ಕತೆಗಳು, ಸೋಮವೇದ ಕವಿಯ ಕಥಾಸರಿತ್ ಸಾಗರಂ, ಬೈಬಲ್ ಕಥೆಗಳು, ಅರೇಬಿಯನ್ ಕಥೆಗಳು ಇತ್ಯಾದಿಗಳು ಸಣ್ಣಕಥೆಗಳ ಆರಂಭಕಾಲದ ರಚನೆಗಳಾಗಿವೆ. ಬಾಯ್ದೆರೆಯಾಗಿ ಕಥೆ ಹೇಳುವ ಕ್ರಮವು ಹಿಂದಿನ ಕಾಲದಿಂದಲೇ ರೂಢಿಯಲ್ಲಿತ್ತು. ಜನಪದ ಕತೆಗಳು, ಜನಪದ ಕಥನಕವನಗಳು ಕನ್ನಡದ ಕತೆಗೆ ಪರಂಪರಾಗತವಾದ ಕೊಡುಗೆಗಳಾಗಿವೆ.19ನೇ ಶತಮಾನದ ಮೊದಲ ದಶಕಗಳಲ್ಲಿ ಸಣ್ಣಕತೆಗಳೆಂಬ ಸಾಹಿತ್ಯ ಪ್ರಕಾರ ಉಗಮವಾಯಿತು. ಸಂಯುಕ್ತ ಅಮೇರಿಕಾದಲ್ಲೂ, ರಷ್ಯಾದಲ್ಲೂ, ಬ್ರಿಟನಿನಲ್ಲೂ, ಫ್ರಾನ್ಸ್‌ನಲ್ಲೂ ಬಹಳ ಬೇಗನೆ ಇದೊಂದು ಪ್ರಧಾನ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. ಈ ಹಿನ್ನಲೆ ಕನ್ನಡದಲ್ಲಿ ಸಣ್ಣಕಥೆಯೆಂಬ ಸಾಹಿತ್ಯಪ್ರಕಾರಕ್ಕಿದೆ.

**ಕನ್ನಡದಲ್ಲಿ ಸಣ್ಣಕತೆಗಳು**

ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರ. ಕನ್ನಡದಲ್ಲಿ ಸಣ್ಣಕತೆಯೆಂಬ ಸಾಹಿತ್ಯ ಪ್ರಕಾರಕ್ಕೆ ಒಂದು ಶತಕದ ಇತಿಹಾಸವಿದೆ. ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯರು, ಎಂ.ಎನ್.ಕಾಮತರು ಈ ಕ್ಷೇತ್ರದ ಆದ್ಯ ಪ್ರವರ್ತಕರೆಂದು ಹೆಸರಿಸಲಾಗುತ್ತಿದೆ.

**ಆರಂಭಕಾಲದ ಕತೆಗಳು**

1900ರಲ್ಲಿ ಸುಹಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಯವರ 'ನನ್ನ ಚಿಕ್ಕತಾಯಿ', 'ನನ್ನ ಚಿಕ್ಕ ತಂದೆ' ಪ್ರಥಮ ಕತೆಗಳು. ಎಂ.ಎನ್.ಕಾಮತ್, ಕೆರೂರು ವಾಸುದೇವಾಚಾರ್ಯರು ಈ ಕ್ಷೇತ್ರದ ಆದ್ಯ ಪ್ರವರ್ತಕರಾದರೂ ಸಣ್ಣಕತೆಗೆ ಲಯ, ಸ್ವರೂಪ ತಂದುಕೊಟ್ಟವರು ಮಾಸ್ತಿ ವೆಂಕಟೇಶ ಅಯ್ಯಂಗಾರ್. ಅವರ ಮೊದಲ ಕತೆ 'ರಂಗಪ್ಪನ ಮದುವೆ'. ಸಣ್ಣಕತೆಯಲ್ಲಿ ಜೀವನ ಮೌಲ್ಯಗಳ ಚಿತ್ರಣವನ್ನು ಮಾಧ್ಯಮ ಮಾಡಿ ಜೊತೆಗೆ ಮನುಷ್ಯ ಸ್ವಭಾವದಲ್ಲಿ ಆಸಕ್ತಿ ಉಳಿಸಿದ ಕೀರ್ತಿ ಶ್ರೀನಿವಾಸರಿಗೆ ಸಲ್ಲಬೇಕು.

**ಆರಂಭಕಾಲದ ಕಥೆಗಾರರು ಮತ್ತು ಕಥೆಗಳು**

- ಪಂಜೆ ಮಂಗೇಶರಾಯರು – ನನ್ನ ಚಿಕ್ಕ ತಾಯಿ, ನನ್ನ ಚಿಕ್ಕ ತಂದೆ, ಭಾರತಶ್ರವಣ, ಕಮಲಪುರದ ಹೋಟ್ಲಿನಲ್ಲಿ ಇತ್ಯಾದಿ
- ಕೆರೂರು ವಾಸುದೇವಾಚಾರ್ಯರು – ಪ್ರಕೃತಿಬಲ, ಮಲ್ಲೇಶಿಯ ನಲ್ಲೆಯರು, ಕರಿಗಾಲಿನ ಗಿರಿರಾಯರು, ತೊಳೆದ ಮುತ್ತು ಇತ್ಯಾದಿ..
- ಎಂ.ಎನ್.ಕಾಮತ್ – ಬೊಗ್ಗು ಮಹಾಶಯ
- ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಮೊಸರಿನ ಮಂಗಮ್ಮ, ಒಂದು ಹಳೆಯ ಕಥೆ, ವೆಂಕಟಿಗನ ಹೆಂಡತಿ, ಗೌತಮಿ ಹೇಳಿದ ಕಥೆ ಇತ್ಯಾದಿ...

ಸಾಮಾನ್ಯವಾಗಿ ಸಣ್ಣ ಕಥೆಗಾರರೆಲ್ಲ ಮನುಷ್ಯನ ಹಿರಿಮೆಯನ್ನು, ಬಾಳಿನ ಮೌಲ್ಯಗಳನ್ನು ಬೆಳಗಿಸಲು ಈ ಮಾಧ್ಯಮವನ್ನು ಬಳಸಿದರು. ಎ.ಆರ್.ಕೃಷ್ಣ ಶಾಸ್ತ್ರಿ ಸ್ವಲ್ಪ ಭಿನ್ನ ದಾರಿಯವರು. ಜೀವನದ ಕಹಿಯನ್ನು ಕಥೆಗಳಲ್ಲಿ ಕಾಣಿಸಿದರು. ಅವರ 'ಶ್ರೀಪತಿಯ ಕಥೆ', 'ಗುರುಗಳ ಮಹಿಮೆ' ತಂತ್ರದ ದೃಷ್ಟಿಯಿಂದಲೂ ಜೀವನವನ್ನು ನೋಡುವ ದೃಷ್ಟಿಯಿಂದಲೂ ವಿಶಿಷ್ಟವಾದ ಕಥೆ.

ಸಣ್ಣ ಕಥೆಯು ಕಾದಂಬರಿಯಂತೆ ವಾಸ್ತವ ಮಾರ್ಗ ಹಿಡಿಯಲಿಲ್ಲ. ದೇಶದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಭಾಗಿಗಳಾದ ತಿಲಕರು, ಗಾಂಧೀಜಿ ಮೊದಲಾದವರ ಧಾರ್ಮಿಕ ಪುನರ್‌ಚೇತನ, ಸಾಮಾಜಿಕ ಸುಧಾರಣೆಯ ಕಳಕಳಿಗಳು, ಇಂಗ್ಲೀಷ್

ಸಾಹಿತ್ಯ ಸಣ್ಣಕಥೆಯ ಮೇಲೆ ಪ್ರಭಾವ ಬೀರಿದವು. ಆನಂದಕಂದ, ಪು.ತಿ.ನ. ಕುವೆಂಪು ಈ ಕುರಿತು ಬರೆದವರು. ಆನಂದಕಂದರ 'ಮಲ್ಲಮ್ಮನ ಮಹಾಭಾರತ', 'ಇಬ್ಬಣದ ದಿಬ್ಬಣ', ಕುವೆಂಪುರವರ 'ಯಾರೂ ಅರಿಯದ ವೀರ' ಮನಸೆಳೆಯುವ ಕಥೆಗಳಾಗಿವೆ.

ಮಾಸ್ತಿಯವರ ಸಮಕಾಲೀನ ಬರಹಗಾರರಲ್ಲಿ ಸಿ.ಕೆ.ವೆಂಕಟರಾಮಯ್ಯ, ಎ.ಆರ್.ಕೃಷ್ಣ ಶಾಸ್ತ್ರಿ, ದೇವುಡು, ಭಾರತೀಪ್ರಿಯ, ಎಂ.ವಿ.ಸೀ., ಅಶ್ವತ್ಥ್, ರಂ.ಶ್ರೀ ಮುಗಳಿ, ಗೋರೂರು, ಕಡೆಂಗೋಡ್ಲು, ಕೊಡಗಿನ ಗೌರಮ್ಮ ಮುಖ್ಯರು.

ಆನಂದರ (ಎ. ಸೀತಾರಾಂ) ಕತೆಗಳಲ್ಲಿ ಭಾವತೀವ್ರತೆಯಿದೆ. ದುಃಖ, ನಲಿವು, ಅನುರಾಗ ಎಲ್ಲವೂ ಇದೆ. 'ನಾನು ಕೊಂದ ಹುಡುಗಿ', 'ಚೊಚ್ಚಲು ಸಂಭ್ರಮ', 'ಮಾಟಗಾತಿ', 'ಹೆಂಡತಿಯ ಕಾಗದ' ಇವರ ಉತ್ತಮ ಕಥೆಗಳು.

ಭಾರತೀ ಪ್ರಿಯರು 'ಮೋಚಿ' ಕಥೆಯ ಮೂಲಕ ಉತ್ಕಟ ಭಾವೋದ್ವೇಗವನ್ನು ಮಾತಿನಲ್ಲಿ ಹಿಡಿದರು. ಅಶ್ವತ್ಥರು ನಿತ್ಯ ಜೀವನದ ಅನುಭವಗಳನ್ನು, ಗೊರೂರು ಹಳ್ಳಿಯ ಜೀವನವನ್ನು ಹಾಸ್ಯದ ಕುಂಚದಿಂದ ಬರೆದರು. ಜಿ.ಪಿ.ರಾಜರತ್ನಂ ಒಳ್ಳೆಯ ಹನಿಕತೆ ನೀಡಿರುವರು.

ತ್ರಿವೇಣಿಯಿಂದ ಪ್ರಾರಂಭವಾದ ಲೇಖಕಿಯರಲ್ಲಿ ಎಂ.ಕೆ.ಇಂದಿರಾ, ಎಚ್.ಎಸ್.ಪಾರ್ವತಿ, ನೀಳಾದೇವಿ, ಅನುರಾಧಾ, ಸರಿತಾ ಜ್ಞಾನಾನಂದ ಒಳ್ಳೆಯ ಕಥೆ ಬರೆದರು.

ಗೊರೂರು ಹಳ್ಳಿಯ ಜೀವನದ ಅಸೂಯೆ, ಮೇಲು ಕೀಳುಗಳನ್ನು ಕತೆಗಳಲ್ಲಿ ಚಿತ್ರಿಸಿದರು. ಅವರ 'ಮಲ್ಲಿಗೆ ಹಳ್ಳಿಯಲ್ಲಿ ಬಯಲಾಟ', 'ಭೂತಯ್ಯನ ಮಗ ಅಯ್ಯು', 'ನಾಯಿಬಾಲ' ಒಳ್ಳೆಯ ಕಥೆಗಳು.

ಬಾಗಲೋಡಿ ದೇವರಾಯರದು ವಿಶಿಷ್ಟ ಸೃಷ್ಟಿ. ಆರೋಗ್ಯಕರವಾದ ಲೇವಡಿ, ಹರಿತ, ವಿಡಂಬನೆ, ತೀಕ್ಷ್ಣಶೈಲಿ ಅವರ ಕತೆಗಳ ಲಕ್ಷಣಗಳು. 'ಸತ್ಯಮೇವ ಜಯತೆ', 'ಪವಾಡ ಪುರುಷ', ಉತ್ತಮ ಕಥೆಗಳು. ಪ್ರಗತಿಶೀಲರಾದ ಅ.ನ.ಕೃ, 'ಕಥಾಂಜಲಿ' ಮಾಸ ಪತ್ರಿಕೆಯ ಸಂಪಾದಕರಾಗಿ ಒಳ್ಳೆಯ ಕಥೆ ಪ್ರಕಟಿಸಿದರು. ಇವರ ಜತೆಯಲ್ಲಿ ತ.ರಾ.ಸು. ಕಟ್ಟೀಮನಿ, ನಿರಂಜನ, ಕೋ.ಚೆನ್ನಬಸಪ್ಪ ಒಳ್ಳೆಯ ಕಥೆ ಬರೆದವರು.

ತ.ರಾ.ಸು. ಕಥೆಗಳಲ್ಲಿ ವೈವಿಧ್ಯವಿದೆ. ಕಲೆಯಿದೆ. 'ಆ ಎರಡು ಮುಖ' ಅವರ ಕಲಾವಂತಿಕೆಗೆ ಸಾಕ್ಷಿ.

ನಿರಂಜನರು 'ರಕ್ತ ಸರೋವರ' 'ಸಂಧಿಕಾಲ' ಕಥಾಸಂಕಲನಗಳಲ್ಲಿ ಸಮಾಜದಲ್ಲಿ ಬಡವರಿಗೆ ಆಗುತ್ತಿರುವ ಕ್ರೂರ ಅನ್ಯಾಯಗಳನ್ನು ವಸ್ತುಗಳನ್ನಾಗಿ ಬಳಸಿದರು. ಅವರ 'ಕೊನೆಯ ಗಿರಾಕಿ' ಉತ್ತಮ ಕಥೆ.

ಕಟ್ಟೀಮನಿಯವರಲ್ಲಿ ವೀರ್ಯವತ್ತಾದ ಭಾಷೆ, ತೀವ್ರಭಾವವಿದೆ. ಹಳ್ಳಿಯ ಜೀವನವನ್ನು ಅಲ್ಲಿನ ಸರಳತೆ, ದಬ್ಬಾಳಿಕೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಅವರ 'ಗಿರಿಜಾ ಕಂಡ ಸಿನೆಮಾ' ಉತ್ತಮ ಕಥೆ.

ನವ್ಯ ಕಾದಂಬರಿಯಂತೆ ನವ್ಯ ಸಣ್ಣ ಕಥೆಗಳೂ ಮನಸ್ಸಿನ ಆಸಕ್ತಿ ಧ್ವನಿ ಪ್ರತಿಮೆ ಸಂಕೇತಗಳ ಮೂಲಕ ಅನುಭವಕ್ಕೆ ಮಾತಿನ ಶರೀರ ಕೊಡಲು ಪ್ರಯತ್ನಿಸಿದೆ.

ಓದುಗರ ಸಾಮಾಜಿಕ ಪ್ರಜ್ಞೆ ಎಚ್ಚರಿಸಿ, ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಪಾಡನ್ನು ಕಣ್ಣಿಗೆ ಅಂತಃಕರಣಕ್ಕೆ ಮುಟ್ಟುವಂತೆ ಚಿತ್ರಿಸಿದರು. ಹಳ್ಳಿಯಜೀವನ, ಕಾರ್ಖಾನೆ ಜೀವನ, ಕಚೇರಿ ಜೀವನ ಸಾಹಿತ್ಯ ವಸ್ತುಗಳಾದವು.

0–0 0 ಬರೆದ ತ.ರಾ.ಸು., 'ಸೆರಗಿನ ಕೆಂಡ' ಬರೆದ ರಾಮಚಂದ್ರ ಶರ್ಮ, 'ನಲ್ಲಿಯಲ್ಲಿ ನೀರು ಬಂದಿತು' ಬರೆದ ಸದಾಶಿವ ಕನ್ನಡದಲ್ಲಿ ನವ್ಯ ಕಥೆಯ ಆದ್ಯ ಪ್ರವರ್ತಕರು. ನವ್ಯ ಮನೋಧರ್ಮವನ್ನು ಕೊನೆಯವರೆಗೂ ಉಳಿಸಿಕೊಂಡು ಬಂದವರಲ್ಲಿ ಶರ್ಮರು ಪ್ರಮುಖರು. 'ಸೆರಗಿನ ಕಂಡ', 'ಸಂಗಮ' 'ಯಾರು ಹಿತವರು' 'ಕತೆಗಾರರ ಕತೆ' ಅವರ ಉತ್ತಮ ಕತೆಗಳು.

ಅನಂತಮೂರ್ತಿಯವರ ಕಥೆಗಳಲ್ಲಿ ಎದ್ದು ಕಾಣುವುದು ಪರಂಪರಾಗತ ಮೌಲ್ಯಗಳ ಪರೀಕ್ಷೆ. ಎಲ್ಲರಿಗೆ ಅನಿವಾರ್ಯವಾದ ಮತ್ತು ಪ್ರಬಲವಾದ ಅನುಭವದ ಕಾಮ. ಅವರ ಪ್ರಸಿದ್ಧ ಕಥೆಗಳು; ಪ್ರಕೃತಿ, ಪ್ರಶ್ನೆ, ಭೋಜರಾಜ, ಕ್ಲಿಪ್ ಜಾಯಿಂಟ್, ಕಾರ್ತೀಕ, ಘಟಶ್ರಾದ್ಧ. ಇವರ ಕಥೆಗಳಲ್ಲಿ ಮನಸ್ಸಿನ ವ್ಯಾಪಾರವೇ ಮಾತ್ರ ಅಲ್ಲ, ಕಥೆಯ ಅಂಶವೂ ಇದೆ. ಆಕಾಶ ಮತ್ತು ಬೆಕ್ಕು (1981) ಸಂಕಲನದ ಕಥೆಗಳಲ್ಲಿ ಹೊಸ ಬಾಳ ಹಂಬಲ, ಮಾನವ ಜೀವನದ ಪರ್ಯಾಯ ಸಾಧ್ಯತೆಗಳು ಇವೆ. ಮೌಲ್ಯಗಳ ಶೋಧವಿದೆ.

**ಶಾಂತಿನಾಥ ದೇಸಾಯಿಯವರ** ಕಥೆಗಳಲ್ಲಿ ನವ್ಯತೆ ಪ್ರಾತಿನಿಧಿಕ ರೂಪದಲ್ಲಿದೆ. ಉದ್ವೇಗವಿಲ್ಲ. ಸತ್ಯದ ವೈಯಕ್ತಿಕ ಅನ್ವೇಷಣೆ ಮತ್ತು ದರ್ಶನ ಅವರ ಗುರಿ. ಮನೋವೈಜ್ಞಾನಿಕ ವಿಶ್ಲೇಷಣೆ ಇದೆ. ಲೈಂಗಿಕತೆ ಮುಖ್ಯ ವಸ್ತುವೆಂದು ಕಂಡರೂ ವ್ಯಕ್ತಿಯ ಆಂತರಿಕ

ಬೆಳವಣಿಗೆಯನ್ನು ತೋರಿಸುವಲ್ಲಿ ಆಸಕ್ತಿ ಇದೆ. ಕ್ಷಿತಿಜ, ದಂಡೆ ರಾಕ್ಷಸ, ಪರಿವರ್ತನೆ, ಕೂರ್ಮಾವತಾರ ಇವರ ಕಥಾಸಂಕಲನಗಳು. **ಲಂಕೇಶ್** ಒಳ್ಳೆಯ ಸಣ್ಣ ಕಥೆಗಾರರು. ಇವರ ಭಾಷೆಯಲ್ಲಿ ಶಕ್ತಿಯಿದೆ. ಸಾಮಾನ್ಯ ಎನ್ನಿಸುವ ಅನುಭವವನ್ನು ತೆಗೆದುಕೊಂಡು ಕಥೆಯ ಅಂಶವೇ ಇಲ್ಲ ಎನ್ನುವಂತೆ ಬೆಳೆಸಿ ಕ್ರಮೇಣ ವೃತ್ತಾಂತದ ಅರ್ಥವೇನು ಎಂಬುದು ತಿಳಿಯುವಂತೆ ಮಾಡುವುದು ಇವರ ರೀತಿ. ಇವರ ಮೊದಲ ಸಂಗ್ರಹ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ'(1965). ಸಾರ್ವಕಾಲಿಕ ಸತ್ಯವನ್ನು ಹುಡುಕಿಕೊಂಡು ಅವರು ಹೊರಡುವುದಿಲ್ಲ. ಅವರ ಲಕ್ಷ್ಯವೆಲ್ಲ ವರ್ತಮಾನದಲ್ಲಿಯೇ ಕೇಂದ್ರಿತವಾಗಿದೆ. ಅವರ ವಾಮನ, ನಿವೃತ್ತರು, ನಾನಲ್ಲ, ರೊಟ್ಟಿ ಮೊದಲಾದವೆಲ್ಲವು ಉತ್ತಮ ಕಥೆಗಳು.

**ವೀಣಾಶಾಂತೇಶ್ವರರ** ಕೊನೆಯ ದಾರಿ, ಹಸಿವು, ಮುಳ್ಳುಗಳು, ಕವಲು ಉತ್ತಮ ಕತೆಗಳು.

ಪೂರ್ಣಚಂದ್ರ ತೇಜಸ್ವಿಯವರ ಎರಡು ಕಥಾ ಸಂಕಲನಗಳು ಹುಲಿಯೂರಿನ ಸರ ಹದ್ದಿನಲ್ಲಿ ಮತ್ತು ಅಬಚೂರಿನ ಪೋಸ್ಟಾಫೀಸು. ಇವರು ಸಂಕೇತಗಳನ್ನು ಬಳಸುವುದಿಲ್ಲ. ಆದರೆ ದಟ್ಟವಾದ ವಿವರಗಳಿಂದ ಕಥಾಜಗತ್ತು ಸ್ಪಷ್ಟವಾಗಿ ಜೀವಂತವಾಗಿ ಸೃಷ್ಟಿಸಲ್ಪಡುತ್ತದೆ.

**ಯಶವಂತ ಚಿತ್ತಾಲ**ರು ಸ್ವಂತಿಕೆ ಸಾಧಿಸಿದವರು. ಅವರ ಮೊದಲ ಸಂಗ್ರಹಗಳು ಸಂದರ್ಶನ (1957) ಮತ್ತು ಆಬೋಲಿನ (1960). ಸೆರೆ, ಆಟ, ಪಯಣ, ಕತೆಯಾದವಳು ಹುಡುಗಿ (ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ) ಅವರ ಶ್ರೇಷ್ಠ ಕತೆಗಳು.

ಕಥಾ ಸಾಹಿತ್ಯ ಮುಂದೆ ಯಾವ ದಾರಿ ತುಳಿಯಬಹುದು ಎಂಬುದು ಪ್ರಾಯಶಃ ತೇಜಸ್ವಿಯವರಂತಹ ಕತೆಗಾರರಲ್ಲಿ ಸೂಚಿಸಲಾಗಿದೆ.

**ಬೆಸಗರ ಹಳ್ಳಿ ರಾಮಣ್ಣ**ರ 'ಗರ್ಜನೆ' ಸಂಕಲನದ ಜೀತ ಕತೆಯು ಜೀತ ಪದ್ಧತಿಯ ಕುರಿತು ಹಾಗೂ ಅಭಿಮಾನ ರಾಜಕೀಯದಲ್ಲಿ ಶೋಷಣೆ ಮಾಡುವವರ ವಿರುದ್ಧ ಪ್ರತಿಭಟನೆಯ ಧ್ವನಿಯಾಗಿದೆ.

**ದೇವನೂರ ಮಹಾದೇವ**ರು ನವೋದಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ದಲಿತ ಜೀವನದ ಸಂದರ್ಭದಲ್ಲಿ ಮಾನವೀಯ ಸಂದರ್ಭಗಳ ಒಕ್ಕಲುಗಳನ್ನು ನೇರವಾಗಿ ಮುಟ್ಟಲೆತ್ನಿಸುವುದು ಅವರ ಕತೆಗಳ ಉದ್ದೇಶ. ಅವರ ಗ್ರಸ್ತರು, ಮಾರಿಕೊಂಡವರು ಉತ್ತಮ ಕತೆಗಳು. ಕುಂ.ವೀರಭದ್ರಪ್ಪ, ಬೊಳುವಾರು ಮಹಮ್ಮದ ಕುಂಞ್, ಎಸ್.ದಿವಾಕರ ರಾಜಶೇಖರ ನೀರಮಾನ್ವಿ, ಕಾಳೇಗೌಡ ನಾಗವಾರ, ಬರಗೂರ ರಾಮಚಂದ್ರಪ್ಪ ಮುಂತಾದವರು ಹೊಸ ಸಂಪ್ರದಾಯದ ಕತೆಗಾರರು.

ತಿಳಿ ಹಾಸ್ಯದ ಕಥೆ ಬರೆದವರಲ್ಲಿ ಶ್ರೀನಿವಾಸ, ಆನಂದ, ಅಶ್ವತ್ಥ, ಕೃಷ್ಣಶಾಸ್ತ್ರಿ, ಎಂ.ವಿ.ಸೀ, ನಾ.ಕಸ್ತೂರಿ ಮೊದಲಾದವರು ಪ್ರಮುಖರು.

ವ್ಯಂಗ್ಯ ವಿಡಂಬನೆಗೆ ಹೆಸರಾದವರು ಬೀಚಿ ರಾಮಚಂದ್ರ ಶರ್ಮರು. ಅವರ 'ಮಲೆ' ಕನ್ನಡದಲ್ಲಿ ಅಪೂರ್ವವಾದ ಕೃತಿ. ಕತೆಗಳಲ್ಲಿ ಒಂದು ವಿಧದ ಅನುಕಂಪ – ಹಾಸ್ಯಗಳ ಸಂಗಮ ತಂದುಕೊಟ್ಟವರು ಟಿ.ಸುನಂದಮ್ಮ.

**ಚಟುವಟಿಕೆ**

ಆರಂಭಕಾಲದ ಕತೆಗಾರರು ಮತ್ತು ಅವರ ಕತೆಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು.

ಸಣ್ಣಕತೆಯ ಬೆಳವಣಿಗೆಯನ್ನು ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯಗಳೆಂಬ ನಾಲ್ಕು ಹಂತಗಳಲ್ಲಿ ಗುರುತಿಸಬಹುದು.

## ನವೋದಯಕಾಲ

ನವೋದಯ ಕಾಲಘಟ್ಟದ ಸಣ್ಣಕತೆಗಳು ಸಾಮಾಜಿಕ, ರಾಜಕೀಯ, ಸಾಹಿತ್ಯಕ ನೆಲೆಯಲ್ಲಿ ಮುಖ್ಯವಾದ ಕಾಲಘಟ್ಟವಾಗಿದೆ. ಈ ಕಾಲದಲ್ಲಿ ನಾಡು–ನುಡಿ ಪ್ರೇಮ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕತೆಗಳು ರಚನೆಯಾದವು. ಈ ಕಾಲದ ಕತೆಗಳಲ್ಲಿ ಸಂಘರ್ಷಕ್ಕೆ ಬದಲಾಗಿ ಸೌಹಾರ್ದ, ಸ್ತ್ರೀ ಸ್ವಾತಂತ್ರ್ಯ ಇತ್ಯಾದಿ ವಸ್ತುಗಳನ್ನು ಕಾಣಬಹುದು. ಪಂಜೆ ಮಂಗೇಶರಾಯರು, ಕೇರೂರು

ವಾಸುದೇವಾಚಾರ್ಯರು, ಎಂ.ಎನ್ ಕಾಮತರು, ಮಾಸ್ತಿ ವೆಂಕಟೇಶ ಅಯ್ಯಂಗಾರರು ಈ ಕಾಲದ ಆರಂಭದ ಕತೆಗಾರರಾಗಿದ್ದಾರೆ. ನವೋದಯ ಕಾಲದ ಸಣ್ಣಕತೆಯ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ ಮಹತ್ವಪೂರ್ಣವಾದುದು.

1900ರಲ್ಲಿ ಸುಹಾಸಿನಿ ಪತ್ರಿಕೆಯಲ್ಲಿ ಪಂಜೆಯವರ 'ನನ್ನ ಚಿಕ್ಕ ತಾಯಿ', 'ಭಾರತ ಶ್ರವಣ', 'ಕಮಲಪುರದ ಹೊಟ್ಲಿನಲ್ಲಿ' ಮೊದಲಾದ ಕತೆಗಳು ಪ್ರಕಟವಾದವು. ಇವರೆಲ್ಲರೂ ಪಾಶ್ಚಾತ್ಯ ವಿದ್ಯಾಭ್ಯಾಸವನ್ನೂ ಪಡೆದವರಾದುದರಿಂದ ಇಂಗ್ಲೀಷ್ ಕತೆಗಳ ಕಥನ ಶೈಲಿಯಿಂದ ಸಾಕಷ್ಟು ಪ್ರಭಾವಿತರಾಗಿದ್ದುದು ಸಹಜವಾಗಿತ್ತು. ಪಂಜೆಯವರ 'ಕಮಲಪುರದ ಹೊಟ್ಲಿನಲ್ಲಿ' ಹಾಗೂ ಕಾಮತರ 'ಬೊಗ್ಗು ಮಹಾಶಯ' ಗಳಂಥ ಕತೆಗಳ ಹಾಸ್ಯ ಶೈಲಿ ಕನ್ನಡಕ್ಕೆ ಹೊಸತೆಂದೇ ಹೇಳಬೇಕು. ಆದರೆ ಪಂಜೆಯವರಾಗಲಿ, ಕಾಮತರಾಗಲಿ, ಸಣ್ಣ ಕತೆಯ ಕ್ಷೇತ್ರದಲ್ಲಿ ಗಂಭೀರ ಪ್ರಯೋಗಗಳನ್ನು ನಡೆಸಲಿಲ್ಲ. ಈ ಕೀರ್ತಿ ಸಲ್ಲಬೇಕಾದದ್ದು ಕೆರೂರಿಗೆ. ಕೆರೂರರ ಕತೆಗಳಲ್ಲಿ ವೈವಿಧ್ಯವಿದೆ. ಐತಿಹಾಸಿಕ ಸಾಮಾಜಿಕ, ಪತ್ತೇದಾರಿ ಈ ಎಲ್ಲ ಪ್ರಕಾರಗಳಲ್ಲಿಯೂ ಅವರು ಕತೆಗಳನ್ನು ಬರೆದರು. ಅವರ ಕತೆಗಳು ಅವರದೇ ಪತ್ರಿಕೆಯಾದ ಸಚಿತ್ರ ಭಾರತ ಮತ್ತು ಶುಭೋದಯ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಅವುಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಪತ್ತೇದಾರಿ ಹೀಗೆ ವೈವಿಧ್ಯಪೂರ್ಣ ಕತೆಗಳಿವೆ.

ಕನ್ನಡ ಸಣ್ಣಕತೆಯ ಇತಿಹಾಸದಲ್ಲಿ ಮೊದಲನೆಯದಲ್ಲದಿದ್ದರೂ ಅತಿದೊಡ್ಡ ಹೆಸರು ಶ್ರೀನಿವಾಸರದು. ಕನ್ನಡ ಸಣ್ಣಕತೆ ಸಮಗ್ರ ಜೀವನದೃಷ್ಟಿ ಮತ್ತು ಆಧುನಿಕ ರೂಪಗಳನ್ನು ಪಡೆದುಕೊಂಡದ್ದು ಇವರ ಕತೆಗಳಲ್ಲಿ. ಅವರ ಮೊದಲ ಕತೆ ಪ್ರಕಟಗೊಂಡುದು 1911ರಲ್ಲಿ ಮಧುರವಾಣಿ ಪತ್ರಿಕೆಯಲ್ಲಿ. ನಂತರ 1920ರಲ್ಲಿ ಮೊದಲ ಕಥಾ ಸಂಗ್ರಹ 'ಕೆಲವು ಸಣ್ಣಕತೆಗಳು' ಪ್ರಕಟವಾಯಿತು. ಇದು ಕನ್ನಡದ ಮೊದಲ ಕಥಾಸಂಗ್ರಹ. ಶ್ರೀನಿವಾಸರ ಕತೆಗಳ ಜಗತ್ತು ಮಾನವೀಯ ಆಶಯಗಳಿಂದ ತುಂಬಿದ ಜಗತ್ತು. ಅವರ ಪಾತ್ರಗಳ ಹರವೂ ದೊಡ್ಡದು. ಅವರ ಕತೆಗಳು ಒಳಗೊಳ್ಳುವ ಮಾನವೀಯ ಅನುಭವಗಳ ವಿಶಾಲತೆ ಅಗಾಧವಾದದ್ದು. ಗೌತಮಿ ಹೇಳಿದ ಕತೆ, ಹೇಮಕೂಟದಿಂದ ಬಂದ ಮೇಲೆ, ಒಂದು ಹಳೆಯ ಕತೆ, ವೆಂಕಟಿಗನ ಹೆಂಡತಿ, ಮೊಸರಿನ ಮಂಗಮ್ಮ, ಕಾಮನಹಬ್ಬದ ಒಂದು ಕತೆ, ಆಚಾರ್ಯರ ಪತ್ನಿ, ಮುಂತಾದವು ಅವರ ಯಶಸ್ವಿ ಕತೆಗಳು. ಮಾಸ್ತಿಯವರು ತಮ್ಮ ವಿಶಿಷ್ಟ ಮನೋಧರ್ಮದಿಂದಾಗಿ ನವೋದಯ ಕಾಲದ ಲೇಖಕರಲ್ಲಿ ಅನನ್ಯರೆಂದೆನಿಸಿಕೊಂಡರು.

ಪುರಾಣ, ಇತಿಹಾಸ, ಐತಿಹಾಸಿಕ ದಾಖಲೆಗಳು, ದಂತಕತೆಗಳು ಇಂಥ ಹಲವಾರು ಆಕರಗಳಿಂದ ಅವರು ತಮ್ಮ ಕತೆಗಳ ವಸ್ತುಗಳನ್ನು ಆಯ್ದುಕೊಂಡರು. ಅವರ ಕತೆಗಳಲ್ಲಿ ನಿರೂಪಕನಿಗೆ ವಿಶೇಷವಾದ ಮಹತ್ವವಿದೆ. ಶುದ್ಧ ಪ್ರಣಯ ವಸ್ತುವಾಗಿರುವ ಕತೆಗಳು ಇವರಲ್ಲಿ ಬಹಳ ವಿರಳ. ಆದರೆ ಕಾಮ, ಲೈಂಗಿಕತೆ, ವೈವಾಹಿಕ ಸಂಬಂಧಗಳು ಅವರ ಹಲವಾರು ಕತೆಗಳಲ್ಲಿ ವಸ್ತುವಾಗಿ ಕಾಣಿಸಿಕೊಳ್ಳುತ್ತವೆ. ಆನಂದ, ಕೆ.ಗೋಪಾಲಕೃಷ್ಣ ರಾವ್, ಸಿ.ಕೆ.ವೆಂಕಟರಾಮಯ್ಯ, ಭಾರತೀಪ್ರಿಯ, ಅಶ್ವತ್ಥ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ.ವಿ.ಸೀತರಾಮಯ್ಯ, ಬಾಗಲೋಡಿ ದೇವರಾಯ ಮೊದಲಾದವರ ಮೇಲೆ ಮಾಸ್ತಿಯವರ ಪ್ರಭಾವವನ್ನು ಗುರುತಿಸಬಹುದು.

ಕನ್ನಡ ಸಣ್ಣ ಕತೆಗಾರರಲ್ಲಿ ಶ್ರೀನಿವಾಸರನ್ನು ಬಿಟ್ಟರೆ ಎರಡನೆಯವರು ಶ್ರೀ ಆನಂದ. ಭವತಿ ಭಿಕ್ಷಾಂದೇಹಿ ಮತ್ತು ಇತರ ಕಥೆಗಳು, ಮಾಟಗಾತಿ ಮತ್ತು ಇತರ ಕತೆಗಳು ಮುಂತಾದವು ಇವರ ಕೆಲವು ಕತೆಗಳಾಗಿವೆ. ಮಾಸ್ತಿಯವರ ಪ್ರಭಾವದಲ್ಲಿಯೇ ಆನಂದರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಮಾಸ್ತಿಯವರಂತೆ ಆನಂದರೂ ಆಧುನಿಕರಾಗಿದ್ದರೂ ಅವರ ಮನೋಧರ್ಮ ಬೇರೆಯಾಗಿದ್ದುದರಿಂದ ಸಣ್ಣಕತೆಯಲ್ಲಿ ಅವರು ಹಿಡಿದ ದಾರಿಯೂ ಬೇರೆಯಾಯಿತು. ರಚನೆಯ ದೃಷ್ಟಿಯಿಂದಲೂ ಇವರ ಕತೆಗಳು ಮಾಸ್ತಿಯವರ ಕತೆಗಳಿಗಿಂತ ಭಿನ್ನವಾದವು. ಇವರ ಕತೆಗಳಲ್ಲಿ ಘಟನೆಗಳಿಗಿಂತ ಭಾವನೆಗಳಿಗೆ, ಕಥನಕ್ಕಿಂತ ವರ್ಣನೆಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿತು. ಬದುಕಿನ ಬಗ್ಗೆ ಹೊಸ ತಿಳಿವನ್ನು ಹುಟ್ಟಿಸುವುದು ಮಾಸ್ತಿಯವರ ಉದ್ದೇಶವಾಗಿದ್ದರೆ, ರಸಸೃಷ್ಟಿ ಮುಖ್ಯವಾಗಿ ಹಾಸ್ಯ ಹಾಗೂ ಶೃಂಗಾರಗಳ ರಸಸೃಷ್ಟಿ ಆನಂದರ ಉದ್ದೇಶವಾಗಿತ್ತು. ರೊಮ್ಯಾಂಟಿಸಂನತ್ತ ಆನಂದರ ಒಲವು ಹಾಗೂ ಅದರ ಅಪಾಯಗಳನ್ನು ಕುರಿತು ಎಚ್ಚರ ಅವರ ಪ್ರಸಿದ್ಧ ಕತೆಗಳಲ್ಲಿವೆ. 'ನಾ ಕೊಂದ ಹುಡುಗಿ', 'ರಾಧೆಯ ಕ್ಷಮೆ', 'ಮಾಟಗಾತಿ'ಗಳನ್ನು ಇದಕ್ಕೆ ಉದಾಹರಿಸಬಹುದು. ದಾಂಪತ್ಯ ಜೀವನದ ಸುಂದರ ಚಿತ್ರಗಳನ್ನು ಒಳಗೊಂಡಿರುವ ಅವರ ಪ್ರಣಯ ಕತೆಗಳ ಜಗತ್ತೇ ಬೇರೆ. ಕಲ್ಪನೆ ಹಾಗೂ ವಾಸ್ತವಗಳ ಮುಖಾಮುಖಿ ಆನಂದರ ಹಲವಾರು ಕತೆಗಳಲ್ಲಿ ನಡೆಯುವ ಕ್ರಿಯೆ.

ಇವರ ನಂತರ ಹೆಚ್ಚು ಕತೆಗಳನ್ನು ಬರೆದವರು ಆನಂದಕಂದರು. ಇವರ ಕತೆಗಳು ಮಧ್ಯಮ ವರ್ಗದ ಬದುಕಿಗೆ ಸಂಬಂಧಿಸಿದುವು. ಹಳ್ಳಿಯ ಬದುಕಿನ ಕತೆಗಳು, ನಮ್ಮ ನಾಡಿನ ಐತಿಹ್ಯ, ದಂತ ಕತೆಗಳಿಗೆ ಸಂಬಂಧಿಸಿದವು ಎಂದು ಮೂರು ಗುಂಪಾಗಿ ಇವರ ಕತೆಗಳನ್ನು ವಿಂಗಡಿಸಬಹುದು. ಇವುಗಳಲ್ಲಿ ಹಳ್ಳಿಯ ಬದುಕಿನ ಮತ್ತು ಐತಿಹ್ಯದ ಕತೆಗಳಲ್ಲಿ ಆನಂದ ಕಂದರ ವಿಶಿಷ್ಟತೆಯನ್ನು ಗುರುತಿಸಬಹುದು. ಗ್ರಾಮೀಣ ಬದುಕಿನ ಸಮಸ್ಯೆಗಳ ಸಾಮಾಜಿಕ ಸ್ವರೂಪವನ್ನು ಗುರುತಿಸಿದ ಕನ್ನಡ ಕತೆಗಾರರಲ್ಲಿ ಇವರೇ ಮೊದಲಿಗರು. ಇವರ ಕತೆಗಳ ವಸ್ತು ಗ್ರಾಮ ಜೀವನದಿಂದಲೇ ಆಯ್ದುಕೊಂಡದ್ದು. ಈ ಜೀವನವನ್ನು ಅವರು ಸಮೀಪದಿಂದ ನೋಡಿದ್ದರಲ್ಲದೆ ಆಳವಾಗಿ ಅಭ್ಯಸಿಸಿದ್ದರು. ನಾಡಿನ ಐತಿಹ್ಯಗಳನ್ನು ಕುರಿತಂತೆ ಅವರು ಬರೆದಿರುವ ಕತೆಗಳಲ್ಲಿ ಒಂದು ಕಾಲದ ಸಂಸ್ಕೃತಿಯ ಪುನನಿರ್ಮಾಣದ ದೃಷ್ಟಿಯಿದೆ.

ನವೋದಯ ಯುಗದ ಇನ್ನೊಬ್ಬ ಕತೆಗಾರ ಕುವೆಂಪು 'ಕಾನೂರು ಹೆಗ್ಗಡಿತಿ' ಹಾಗೂ 'ಮಲೆಗಳಲ್ಲಿ ಮದುಮಗಳು'ಗಳಂತ ಶ್ರೇಷ್ಠ ಕಾದಂಬರಿಗಳನ್ನು ಸೃಷ್ಟಿಸಿದ ಕುವೆಂಪುರವರದು ಅಸಾಧಾರಣ ಕಥನ ಪ್ರತಿಭೆ. ಈ ಪ್ರತಿಭೆಯ ಹೊಳಪು ಅವರ ಸಣ್ಣ ಕತೆಗಳಲ್ಲಿಯೂ ಮಿಂಚಿದೆ. 'ಸನ್ಯಾಸಿ ಮತ್ತು ಇತರ ಕಥೆಗಳು', 'ನನ್ನ ದೇವರು ಮತ್ತು ಇತರ ಕಥೆಗಳು' ಅವರ ಪ್ರಸಿದ್ಧ ಕಥಾಸಂಕಲನಗಳು. ಕುವೆಂಪುರವರ ಕತೆಗಳ ವಸ್ತು ಹೇಗೋ ಹಾಗೆಯೇ ಇಲ್ಲಿ ಕತೆಯನ್ನು ಹೇಳಿರುವ ರೀತಿಯೂ ವಿಶೇಷವಾಗಿದೆ.

ಮಾಸ್ತಿ ಮತ್ತು ಆನಂದರೊಡನೆ ನಿಕಟ ಸಂಪರ್ಕ ಹೊಂದಿದ್ದ ಬೇಂದ್ರೆಯವರು ಸಣ್ಣಕತೆಯತ್ತಲೂ ಆಕರ್ಷಿತರಾದರು. ಅವರು ಬರೆದದ್ದು ಏಳೇ ಏಳು ಕತೆಗಳು. ಬೇಂದ್ರೆಯವರ ಸಣ್ಣಕತೆಗಳ ಒಂದು ವೈಶಿಷ್ಟ್ಯ ಅವುಗಳಲ್ಲಿ ಕಂಡುಬರುವ ಪ್ರಯೋಗಶೀಲತೆ. ಅವರು ಯಾವ ಮಾದರಿಗೂ ಕಟ್ಟು ಬೀಳಲಿಲ್ಲ. ಶುದ್ಧ ಕತೆಯಿಂದ ಭಾವಗೀತಾತ್ಮಕ ರಚನೆಯವರೆಗಿನ ಅನೇಕ ಪ್ರಕಾರಗಳಲ್ಲಿ ಅವರ ಪ್ರಯೋಗಗಳಿವೆ.

ಇವಿಷ್ಟು ನವೋದಯ ಯುಗದ ಮುಖ್ಯ ಮಾದರಿಗಳು ಎನ್ನಬಹುದು. ಒಳ್ಳೆಯ ಕತೆಗಳನ್ನು ಬರೆದಿರುವ ಇನ್ನೂ ಕೆಲವು ಜನ ಕತೆಗಾರರಿದ್ದಾರೆ. ಅಂತಹವರಲ್ಲಿ ಎ.ಆರ್.ಕೃಷ್ಣಶಾಸ್ತ್ರಿ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರನ್ನು ಹೆಸರಿಸಬಹುದು. ನವೋದಯ ಯುಗ 1950ರ ಸುಮಾರಿಗೆ ಮುಗಿಯುತ್ತದೆಂದು ಹೇಳಬಹುದಾದರೂ, ಇಂದಿಗೂ ಅನೇಕ ಜನ ಕತೆಗಾರರು ಈ ಮಾರ್ಗವನ್ನು ಜೀವಂತವಾಗಿ ಇಟ್ಟಿದ್ದಾರೆ. ಒಟ್ಟಿನಲ್ಲಿ ನವೋದಯ ಕಾಲದ ಕತೆಗಾರರಲ್ಲಿ ಸಾಮಾಜಿಕ ಪ್ರಜ್ಞೆಯೊಂದು ವಿಶೇಷವಾಗಿ ಜಾಗೃತವಾಗಿತ್ತು. ವ್ಯಕ್ತಿಯ ಸಾಮಾಜಿಕ ಜೀವನ, ಅದರ ಆಗು–ಹೋಗುಗಳು, ಆಚಾರ ವಿಚಾರ–ಸಂಸ್ಕಾರಗಳು, ವ್ಯಕ್ತಿ ಸಮಾಜಗಳ ಸಂಘರ್ಷ ಇವೇ ಹೆಚ್ಚಾಗಿ ಈ ಕಾಲದ ಕತೆಗಾರರಲ್ಲಿ ಕಂಡುಬರುತ್ತವೆ ಎಂದು ತಿಳಿಯಬಹುದು.

**ಚಟುವಟಿಕೆ**

ನವೋದಯ ಕಾಲದ ಪ್ರಮುಖ ಕತೆಗಾರರು ಮತ್ತು ಆ ಕಾಲದ ಶ್ರೇಷ್ಠ ಕತೆಗಳ ಕುರಿತು ಲೇಖನ ಬರೆಯುವುದು.

**ಪ್ರಗತಿಶೀಲ ಪಂಥ**

ಪ್ರಗತಿಶೀಲ ಚಳುವಳಿಯ ಬೌದ್ಧಿಕ ನೇತೃತ್ವವನ್ನು ವಹಿಸಿದವರು ಅ.ನ.ಕೃಷ್ಣರಾಯರು. ಅವರ ವಿಚಾರಗಳು ಹೊಸದಾಗಿದ್ದರೂ ಅವುಗಳನ್ನು ಅವರು ಶಕ್ತಿಯುತವಾಗಿ ಪ್ರಕಟಿಸಿದರು. ಮಿಂಚು, ಕಿಂಡಿ, ಕಣ್ಣಮುಚ್ಚಾಲೆ, ಕಾಮನ ಸೋಲು, ಅಗ್ನಿ ಕನ್ಯೆ, ಶಿಲ್ಪ, ಸಮರ ಸುಂದರಿ ಮತ್ತು ಆಯ್ದ ಕತೆಗಳು ಇವು ಇವರ ಕಥಾ ಸಂಗ್ರಹಗಳು. 'ಅವಳ ಬಾಳು', 'ಮುಂದೇನು ಗತಿ', 'ಹಳದಿಯ ಬಾಗಿಲು', ಈ ಎಲ್ಲ ಕತೆಗಳು ಸಮಾಜದ ದಬ್ಬಾಳಿಕೆಗೆ ಸಿಕ್ಕ ನೋವಿಗೀಡಾದ ವಿಧವೆಯರ, ತಿರಸ್ಕೃತ ಸ್ತ್ರೀಯರ ಯಾತನೆಯನ್ನು ಚಿತ್ರಿಸುತ್ತವೆ. ಲೈಂಗಿಕತೆ, ಪ್ರೇಮ ಮತ್ತು ವಿವಾದಗಳಂಥ ವಿಷಯಗಳ ಬಗ್ಗೆ ಬರೆಯುವಾಗ ಅ.ನ.ಕೃ ತಮ್ಮ ಕಾದಂಬರಿಗಳಲ್ಲಿ ತೋರುವ ಧೈರ್ಯ ಮತ್ತು ಸ್ಪಷ್ಟತೆಗಳನ್ನು ಅವರ ಸಣ್ಣಕತೆಯಲ್ಲಿಯೂ ನಾವು ಕಾಣುತ್ತೇವೆ. ಇವರಲ್ಲಿ ವಿಚಾರ ಶೀಲತೆಗಿಂತ ಉದ್ವೇಗ, ಭಾವುಕತೆಗಳೇ ಜಾಸ್ತಿ. ಸಣ್ಣಕತೆಗೆ ಅಸಂಖ್ಯ ಓದುಗರನ್ನು ಒದಗಿಸಿಕೊಟ್ಟಿದ್ದಾರಲ್ಲದೆ ಅವರು ಮುಂಬರುವವರಿಗೆ ಅನೇಕ ಬಾಗಿಲುಗಳನ್ನು ತೆರೆದರು. ಕೋ.ಚೆನ್ನಬಸಪ್ಪ, ನಿರಂಜನ, ಬಸವರಾಜ ಕಟ್ಟೀಮನಿ ಇವರಲ್ಲಿ ಮುಖ್ಯಸ್ಥರು. ಕೋ.ಚೆನ್ನಬಸಪ್ಪರ 'ದಾಸಮಯ್ಯನ ಪಟ್ಟಿ', 'ಮುಕ್ಕಣ್ಣ ಮುಕ್ತಿ', ಪ್ರಗತಿಶೀಲ ಕತೆಗಳು. ಶೋಷಕವರ್ಗದ ಅನ್ಯಾಯ, ಶೋಷಿತರ ಅಸಹಾಯಕ ಸ್ಥಿತಿ ಇವುಗಳಲ್ಲಿ ಚಿತ್ರಿತವಾಗಿದೆ. 'ದಾಸಯ್ಯರ

ಪಟ್ಟಿ'ಯಲ್ಲಿ ಗೇಣಿದಾರರ ಸಮಸ್ಯೆಯಿದೆ.

ಪ್ರಗತಿಶೀಲ ಕತೆಗಾರರಲ್ಲಿ ನಿರಂಜನ (ಕುಳಕುಂದ ಶಿವರಾಯ) ರ ಹೆಸರು ಪ್ರಮುಖವಾದುದು. ಇವರು ನೂರ ಐವತ್ತಕ್ಕಿಂತ ಹೆಚ್ಚು ಕತೆಗಳನ್ನು ಬರೆದರು. ಇವೆಲ್ಲವೂ 'ಧ್ವನಿ'ಯ ಎರಡು ಸಂಪುಟಗಳಲ್ಲಿ ಲಭ್ಯವಿದೆ. ಸಾಮಾನ್ಯವಾಗಿ ನಿರಂಜನರ ಕತೆಗಳು ಎಲ್ಲವೂ ನೈಜ ಜೀವನದ ಸಂದರ್ಭದಲ್ಲಿಯೇ ಹುಟ್ಟಿಕೊಂಡವು. ಕೆಲವಂತೂ ನಡೆದುಹೋದ ಘಟನೆಗಳ ದಾಖಲೆಗಳೇ ಆಗಿವೆ. ಇವರ 'ಕರುಳಿನ ಕೂಗು' ಕತೆ ಸಂಪೂರ್ಣವಾಗಿ ಘಟನೆಗಳನ್ನೇ ಅವಲಂಬಿಸಿದ್ದು ಅದರಲ್ಲಿ ಭಾವಾಡಂಬರವಾಗಲಿ, ಅನವಶ್ಯ ವ್ಯಾಖ್ಯಾನಗಳಾಗಲಿ ಕಾಣಲಾರವು. ಹೀಗಿದ್ದೂ ಇದು ತೀರ ಸರಳ ಕತೆ ಎನಿಸುವುದಕ್ಕೆ ಕಾರಣ ಅದರ ಹಿಂದೆ ವರ್ಗ ಪ್ರಜ್ಞೆಯಾಗಲಿ, ರಾಜಕೀಯ ತಿಳಿವಾಗಲಿ ತೀವ್ರವಾಗಿ ಕೆಲಸ ಮಾಡದೇ ಇರುವುದು. ಅವರ 'ಕೊನೆಯ ಗಿರಾಕಿ' ಹೆಚ್ಚು ಯಶಸ್ವಿಯಾಗಿರುವ ಕತೆ. ಪ್ರಗತಿಶೀಲ ಕತೆಗಳಲ್ಲೇ ಇದಕ್ಕೊಂದು ವಿಶೇಷ ಸ್ಥಾನವಿದೆ.

ಪ್ರಗತಿಶೀಲತೆಯನ್ನೇ ತಮ್ಮ ಬರವಣಿಗೆಯ ಮುಖ್ಯ ಧೋರಣೆಯಾಗಿ ಸ್ವೀಕರಿಸಿದ ಕತೆಗಾರರಲ್ಲಿ ಬಸವರಾಜ ಕಟ್ಟೀಮನಿಯವರು ತಮ್ಮ ಸಮಾಜದ ಅನ್ಯಾಯ, ಡಂಬಾಚಾರ, ಭ್ರಷ್ಟತೆಗಳನ್ನು ನಿರ್ದಯವಾಗಿ ಬಯಲಿಗೆಳೆಯುವ ಹಲವಾರು ಕತೆಗಳನ್ನು ಬರೆದಿದ್ದಾರೆ. ಹಸಿವಿನ, ಬಡತನದ ಕರುಳಿರಿಯುವ ಚಿತ್ರಗಳನ್ನು ಕೊಟ್ಟಿದ್ದಾರೆ. ಅವರ ಬರವಣಿಗೆಯ ಹಿಂದೆ ಸಿಟ್ಟಿನ ಬುಸುಗುಟ್ಟುವ ಸದ್ದು ಯಾವಾಗಲೂ ಕೇಳುತ್ತದೆ. ಪ್ರಗತಿಶೀಲ ಕತೆಗಳಲ್ಲಿ ಸಾಮಾನ್ಯವಾಗಿ ಶೋಷಣೆ, ಬಡತನಗಳ ಚಿತ್ರಗಳ ಮೂಲಕ ಶೋಷಿತರ ಅಸಹಾಯಕ ಸ್ಥಿತಿಯನ್ನು ತೋರಿಸಿದರೆ ಇವರು ತಮ್ಮ ಕತೆಗಳಲ್ಲಿ ಇವುಗಳ ವಿರುದ್ಧ ಏನನ್ನಾದರೂ ಮಾಡುವ ಬಂಡೇಳಿಸುವ ಆಶಯವನ್ನು ಚಿತ್ರಿಸುತ್ತಾರೆ. ಅವರ 'ಗಿರಿಜಾ ಕಂಡ ಸಿನಿಮಾ', 'ಜೀವನಕಲೆ', 'ಬೂಟ್‌ಪಾಲಿಶ್', 'ಸೆರೆಯಿಂದ ಹೊರಗೆ' ಜನಪ್ರಿಯ ಕತೆಗಳು.

ಪ್ರಗತಿಶೀಲ ಕತೆಗಾರರು ಸಾಮಾನ್ಯ ಮನುಷ್ಯನ ಬದುಕಿನ ಚಿತ್ರಣಕ್ಕೇ ಹೆಚ್ಚಾಗಿ ತಮ್ಮನ್ನು ತಾವು ಸೀಮಿತಗೊಳಿಸಿಕೊಂಡರು. ಆದರೆ ಅವರು ಹೆಚ್ಚಾಗಿ ಲಕ್ಷ್ಯವನ್ನು ಕೇಂದ್ರಿಕರಿಸಿದ್ದು ಆರ್ಥಿಕ ಅಂಶದ ಮೇಲೆ. ಈ ಎಲ್ಲ ಮಿತಿಗಳ ನಡುವೆಯೂ ಪ್ರಗತಿಶೀಲತೆ ಕನ್ನಡ ಸಣ್ಣಕತೆಯ ಮೇಲೆ ಕೆಲವು ಗುರುತುಗಳನ್ನು ಉಳಿಸಿ ಹೋಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಸುಮಾರು, ಒಂದು ದಶಕದ ಅವಧಿಯಲ್ಲಿಯ ಪ್ರಗತಿಶೀಲ ಚಳುವಳಿ ಕನ್ನಡ ಸಣ್ಣಕತೆಗೆ ನೀಡಿದ ಕಾಣಿಕೆ ಬಹಳ ಮಹತ್ವದೆಂದೇನೂ ಹೇಳುವಂತಿಲ್ಲ. ಹಿಂದಿನ ನವೋದಯ ಕಾಲದ ಮತ್ತು ಮುಂದಿನ ನವ್ಯ ಯುಗದ ಶ್ರೇಷ್ಠ ಕತೆಗಳೊಂದಿಗೆ ಇವುಗಳನ್ನು ಹೋಲಿಸುವುದು ಕಷ್ಟ. ಪ್ರಗತಿಶೀಲ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಮೊದಲೇ ಐವತ್ತರ ದಶಕದಲ್ಲಿ ನವ್ಯ ಬರವಣಿಗೆ ಅದನ್ನು ಹಿಂದೆ ಹಾಕಿತು.

## ನವ್ಯ ಯುಗ

ನವ್ಯ ಯುಗ ಆರಂಭವಾದದ್ದು ಎಂದಿನಿಂದ ಎಂದು ಖಚಿತವಾಗಿ ಹೇಳುವುದು ಕಷ್ಟ. 1950ರಲ್ಲಿ ಮುಂಬಯಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ವಿ.ಕೃ.ಗೋಕಾಕರು ತೋರಿಸಿದ ನವ್ಯ ಕಾವ್ಯದ ರೂಪರೇಷೆಗಳೊಂದಿಗೆ ನವ್ಯ ಯುಗ ಆರಂಭವಾಯಿತೆಂದು ಹೇಳುವುದುಂಟು. ಆದರೂ ಮುಂದೆ ಅಡಿಗರ ಕಾವ್ಯ ಬರುವವರೆಗೆ ನವ್ಯತೆಗೆ ಒಂದು ಸ್ಪಷ್ಟ ರೂಪ ಬರಲಿಲ್ಲ. ಅಂತೂ ನವ್ಯತೆ ಕಾಣಿಸಿಕೊಂಡದ್ದು ಕಾವ್ಯದಲ್ಲಿ. ನಂತರ ಸಣ್ಣಕತೆಯೂ ಅದರ ಪ್ರಭಾವಕ್ಕೆ ಒಳಗಾಯಿತು. ವಸ್ತುವಿನ ಆಯ್ಕೆಯಿಂದ ಮೊದಲುಗೊಂಡು ನಿರೂಪಣ ವಿಧಾನ, ಭಾಷೆ, ತಂತ್ರ, ಪ್ರಾರಂಭ ಮತ್ತು ಮುಕ್ತಾಯ ಇವುಗಳಲ್ಲಿ ಹೊಸತನವನ್ನು ತಂದ ನವ್ಯಕತೆಗಳು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮನ್ವಂತರವನ್ನೇ ಹುಟ್ಟು ಹಾಕಿತು. ಮೇಲ್ತರಗತಿ ಮತ್ತು ಸಾಮಾನ್ಯ ಜನರ ಜೀವನ ದರ್ಶನ, ಮಾನಸಿಕ ವಿಶ್ಲೇಷಣೆ, ಪ್ರತಿಮೆ, ಸಂಕೇತ, ಡಾಂಭಿಕ ಆದರ್ಶ,ಮೂಢನಂಬಿಕೆ, ಹುಸಿಜೀವನ ಮೌಲ್ಯಗಳು ಇವುಗಳನ್ನೊಳಗೊಂಡ ನವ್ಯಕತೆಗಳು ಕಾಣಿಸಿಕೊಂಡವು.ಯಾಂತ್ರಿಕ ಯುಗದ ಜೀವನ ಮತ್ತು ವಸ್ತು ನಾವೀನ್ಯಕ್ಕೆ ಅನುಸಾರವಾಗಿ ತಂತ್ರ ನಾವೀನ್ಯ ನವ್ಯಕತೆಗಳಲ್ಲಿ ಎದ್ದು ಕಾಣುತ್ತದೆ. ಮಾನಸಿಕ ವಿಜ್ಞಾನ ವಿಶ್ಲೇಷಣೆ, ಕತೆಗಳಲ್ಲಿ ಶಬ್ದ ಜಾಲವನ್ನು ಮೀರಿದ ಧ್ವನಿ ಕೆಲವು ನವ್ಯ ಕತೆಗಳಲ್ಲಿ ಅಡಗಿರುವುದನ್ನು ಕಾಣಬಹುದು.ಹೊಸ ಹೊಸ ಸಂವೇದನೆಗೆ ಜಗ್ಗುವಂತಹ ಅಭಿವ್ಯಕ್ತಿಯಲ್ಲಿ ಸಾಮರ್ಥ್ಯವಿರುವಂಥ ತಂತ್ರಶೈಲಿಗಳನ್ನಿಟ್ಟುಕೊಂಡು ನವ್ಯ ಸಂಪ್ರದಾಯ ಕನ್ನಡ ಸಾಹಿತ್ಯದಲ್ಲಿ ಮುಖ ಚಾಚಿತು. ನವ್ಯ ಬರಹಗಾರರಗೆ ಸ್ವಾನುಭವವೇ ಸಾಹಿತ್ಯಿಕ ತಿರುಳಾಯಿತು. ನವ್ಯ ಬರಹಗಾರರಿಗೆ ವ್ಯಕ್ತಿಯ ಬದುಕಿನ ಬಾಹ್ಯ ಜಗತ್ತಿಗಿಂತಲೂ ಆಂತರಿಕ ಜಗತ್ತು ಗಂಭೀರವಾಗಿ

ಗೋಚರಿಸಿತು. ನವೋದಯದ ವ್ಯಕ್ತಿಯ ಮಾನಸಿಕ ಒಳ ವ್ಯಾಪಾರಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನೆಲ್ಲ ಕೆದಕಿ ನೋಡಿ ಅವುಗಳನ್ನು ಹೊರ ಹಾಕುವಾಗ ನೇರವಾಗಿ ಹೇಳದೆ ಸಂಕೇತವಾಗಿ ನಿರೂಪಿಸಿದರು. ಸಂಕೇತಗಳನ್ನು ತಮ್ಮ ನಿತ್ಯ ಜೀವನದಲ್ಲಿಯ ಸರಳ ವಸ್ತುಗಳಿಂದ ಆಯ್ದುಕೊಳ್ಳದೆ ಸಂಕೀರ್ಣತೆಯಿಂದ ಆಯ್ದುಕೊಂಡರು.

### ನವ್ಯಕಾಲದ ಕತೆಗಾರರು

ಬಿ.ಸಿ.ರಾಮಚಂದ್ರ ಶರ್ಮರು ನವ್ಯ ಕಥೆಯ ಆರಂಭದ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಪ್ರಗತಿಶೀಲತೆಯಿಂದ ಬಿಡಿಸಿಕೊಂಡು ನವ್ಯತೆಯನ್ನು ಹಟದಿಂದ ಸಾಧಿಸುವ ರೀತಿ ಅವರ ಆರಂಭದ ಕತೆಗಳಲ್ಲಿ ಎದ್ದು ಕಾಣುತ್ತದೆ. ಈ ದೃಷ್ಟಿಯಿಂದ 'ಸೆರಗಿನ ಕೆಂಡ' ನವ್ಯ ಯುಗದ ಆರಂಭದ ಸ್ಥಿತಿಯನ್ನು ಸರಿಯಾಗಿ ಪ್ರತಿನಿಧಿಸುತ್ತದೆ.

ಅರುವತ್ತರ ದಶಕ ಕನ್ನಡ ನವ್ಯ ಕಥೆಯ ಉಚ್ಛ್ರಾಯದ ಕಾಲ. ನವ್ಯ ಕತೆಯ ಬರವಣಿಗೆ ಈ ಅವಧಿಯಲ್ಲಿ ಒಂದು ಹದಕ್ಕೆ ಬಂತು, ಸ್ಪಷ್ಟವಾದ ಒಂದು ಮಾರ್ಗ ನಿರ್ಮಾಣವಾಯಿತು. ನವ್ಯ ರೀತಿಯಲ್ಲಿ ಮಾತ್ರ ಸಾಧ್ಯವಾಗುವಂತಹ ಅನೇಕ ಹೊಸ ಸಾಧ್ಯತೆಗಳು ಕನ್ನಡ ಸಣ್ಣ ಕತೆಯಲ್ಲಿ ಕಾಣಿಸಿಕೊಂಡವು. ಇದಕ್ಕೊಂದು ಉತ್ತಮ ಉದಾಹರಣೆ ಶಾಂತಿನಾಥ ದೇಸಾಯಿಯವರ 'ಕ್ಷಿತಿಜ'.

ಯು.ಆರ್. ಅನಂತಮೂರ್ತಿಯವರು ನವ್ಯ ಮಾರ್ಗದ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಕನ್ನಡ ಸಣ್ಣಕತೆಯ ಇತಿಹಾಸದಲ್ಲಿಯೂ ಅವರ ಸ್ಥಾನ ಮಹತ್ವದ್ದಾಗಿದೆ. ಇದರಿಂದ ನವ್ಯ ಕತೆಗೆ ದೊರೆತ ಪ್ರೇರಣೆ ಬಹುಮುಖ್ಯವಾದದ್ದು. ಅವರು ನವ್ಯ ಕತೆಯ ವೈಚಾರಿಕತೆಯನ್ನು ರೂಪಿಸಿಕೊಟ್ಟರು. ಈ ವೈಚಾರಿಕತೆಗೆ ಬೇಕಾದ ತಾಂತ್ರಿಕ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ಈ ವೈಚಾರಿಕತೆಯನ್ನು ಸಮರ್ಥವಾಗಿ ಧ್ವನಿಸಬಲ್ಲ ವಸ್ತುಗಳನ್ನು ಸೂಚಿಸಿದರು.

ಈ ಹೊತ್ತಿಗಾಗಲೇ ನವ್ಯ ಕತೆ ಸಾಕಷ್ಟು ಪ್ರಭಾವಶಾಲಿಯಾಗಿ ಬೆಳೆದಿತ್ತು. ನವೋದಯ, ಪ್ರಗತಿಶೀಲ ಮಾರ್ಗಗಳಲ್ಲಿ ಸಾಕಷ್ಟು ಪ್ರಸಿದ್ಧರಾದ ಕತೆಗಾರರು ಸಹ ನವ್ಯದ ಪ್ರಭಾವಕ್ಕೊಳಗಾದರು. ಅಂಥವರಲ್ಲಿ ವ್ಯಾಸರಾಯ ಬಲ್ಲಾಳರು ಒಬ್ಬರು. ನವೋದಯ ಮಾರ್ಗದಲ್ಲಿ ಆರಂಭಿಸಿ ಪ್ರಗತಿಶೀಲ ರೀತಿಯ ಕತೆಗಳನ್ನು ಬರೆದಿದ್ದ ಬಲ್ಲಾಳರು ನಂತರ ತಮ್ಮ ಕತೆಗಳಿಗೆ ನವ್ಯ ಅಂಶಗಳನ್ನು ಸಹ ಅಳವಡಿಸಿಕೊಂಡರು. ಟಿ.ಜಿ.ರಾಘವ ಅವರ 'ಶ್ರಾದ್ಧ' ಈಗಾಗಲೇ ಸಾಕಷ್ಟು ಪ್ರಸಿದ್ಧವಾಗಿರುವ ಕತೆ. ನವ್ಯ ಕತೆಯ ವಿಶಿಷ್ಟ ವಸ್ತುಗಳು ಮತ್ತು ನಿಲುವುಗಳು ಈ ಕತೆಯಲ್ಲಿ ಪರಿಣಾಮಕಾರಿಯಾದ ಅಭಿವ್ಯಕ್ತಿಯನ್ನು ಪಡೆದಿದೆ. ನವ್ಯಪಂಥದ ಇನ್ನೊಬ್ಬ ಪ್ರಮುಖ ಲೇಖಕರು ಯಶವಂತ ಚಿತ್ತಾಲ. ಕತೆಯಿಂದ ಕತೆಗೆ ಬೆಳೆಯುತ್ತ ಬಂದಿರುವ ಚಿತ್ತಾಲರನ್ನು ಕೇವಲ ಸಾವು ಗೀಳಾಗಿ ಕಾಡಿದವರೆಂದಾಗಲೀ, ಕಲಾತ್ಮಕತೆಯನ್ನು ಹಟದಿಂದ ಸಾಧಿಸಿದವರೆಂದಾಗಲಿ, ಅಲಕ್ಷಿಸುವುದು ಸಾಧ್ಯವಲ್ಲ. ಕಲಾವಂತಿಕೆಯನ್ನು ಪರಾಕಾಷ್ಠೆಗೆ ಒಯ್ದ ಕತೆಗಳನ್ನು ಅವರು ಬರೆದಿರುವುದು ನಿಜ. ಇವರೊಂದಿಗೆ ಕೆ.ಸದಾಶಿವರನ್ನೂ ಸೇರಿಸಬೇಕು. ಅವರ 'ಹಾವು', 'ನಲ್ಲಿಯಲ್ಲಿ ನೀರು ಬಂದಿತು' ಉತ್ತಮ ನವ್ಯಕತೆಗಳು.

### ದಲಿತ – ಬಂಡಾಯ ಕಾಲಘಟ್ಟ

ದಲಿತ–ಬಂಡಾಯ ಕಾಲಘಟ್ಟದಲ್ಲಿ ಅನೇಕ ಸಣ್ಣಕತೆಗಳು ಪ್ರಕಟವಾಗಿವೆ. ಅವುಗಳ ವಸ್ತು, ವಿಷಯ ಲೇಖಕರ ಮನೋಧರ್ಮವನ್ನಾಧರಿಸಿ ಅವುಗಳಲ್ಲಿರುವ ಸಂವೇದನೆಯನ್ನು ಗುರುತಿಸಬಹುದು. ದಲಿತ ಸಂವೇದನೆ, ಬಂಡಾಯ ಸಂವೇದನೆ, ಮುಸ್ಲಿಂ ಸಂವೇದನೆ, ಸ್ತ್ರೀವಾದಿ ಸಂವೇದನೆ, ಗ್ರಾಮೀಣ ಸಂವೇದನೆ ಎಂಬುದಾಗಿ ಇವುಗಳನ್ನು ವಿಭಾಗಿಸಬಹುದು. ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಕು.ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಬೊಳುವಾರು ಮೊಹಮ್ಮದ್ ಕುಂಞಿ, ಫಕೀರ್ ಮಹಮ್ಮದ್ ಖಟ್ಪಾಡಿ, ಸಾರಾ ಅಬೂಬಕ್ಕರ್, ಚೆನ್ನಣ್ಣ ವಾಲೀಕಾರ, ಬಾನು ಮುಷ್ತಾಕ್, ಅಬ್ದುಲ್ ಬಶೀರ್, ಕರೀಗೌಡ ಬೀಚನಹಳ್ಳಿ, ಕಾ.ತ.ಚಿಕ್ಕಣ್ಣ, ಹಳ್ಳಿ ನಾಗರಾಜ, ಗೀತಾನಾಗಭೂಷಣ, ವೈದೇಹಿ ಮುಂತಾದವರ ಕತೆಗಳಲ್ಲಿ ಜನಪರ ನಿಲುವುಗಳೇ ಪ್ರಧಾನವಾಗಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

ದೇವನೂರು ಮಹಾದೇವರ ಎಲ್ಲಾ ಕತೆಗಳಲ್ಲಿಯೂ ಜನಪದ ನಿಲುವುಗಳು ಪ್ರಮುಖವಾಗಿವೆ. ದಲಿತರ, ನೊಂದವರ ನೋವು, ನಿರಾಸೆ, ಹತಾಶೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಲೇಖಕರು ಅಭಿವ್ಯಕ್ತಿಸಿದ್ದಾರೆ. ಅವರು ತನ್ನ ಜನಾಂಗದ ನೋವನ್ನು

ಮೊದಲ ಸಲ ನೈಜವಾದ ದನಿಯಲ್ಲಿ ಪ್ರಕಟಿಸಿದರು. ಅವರ ಕತೆಗಳಲ್ಲಿ ಹೊಸತನವಿದೆ. 'ಮಾರಿಕೊಂಡವರು', 'ಗ್ರಹಸ್ಥರು', 'ಒಂದು ಧಪನದ ಕತೆ', 'ದತ್ತ', 'ಡಾಂಬರು ಬಂದುದು', 'ಅಮಾಸ' ಇತ್ಯಾದಿಗಳು ದೇವನೂರರ ಪ್ರಮುಖ ಕತೆಗಳು. ಅವರ ಎಲ್ಲ ಕತೆಗಳಲ್ಲೂ ವಿಷಾದದ ದನಿ, ಸಿಟ್ಟು, ತಿಳಿಹಾಸ್ಯ, ವಿನೋದಗಳು ತುಂಬಿಕೊಂಡಿವೆ.

ಒಬ್ಬ ವೈದ್ಯರಾಗಿ ಸಣ್ಣಕತೆಗಳಿಗೆ ಜೀವ ತುಂಬಿದವರು ಬೆಸಗರಹಳ್ಳಿ ರಾಮಣ್ಣ. ಗ್ರಾಮೀಣ ಜಮೀನ್ದಾರಿ ಶಕ್ತಿಗಳ ವಿರುದ್ಧ, ಅಧಿಕಾರಶಾಹಿ ಸಂಸ್ಕೃತಿಯ ವಿರುದ್ಧ ಅವರು ತೀವ್ರ ಪ್ರತಿಭಟನೆ ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಪರಿಸರದ ಸಣ್ಣ ಕುಟೀರಗಳಲ್ಲಿ ಚಿಗುರೊಡೆಯುವ ಇವರ ಕತೆಗಳು ಮಾನವ ಸಂಬಂಧಗಳು, ಕುಟುಂಬಗಳು ಛಿದ್ರವಾಗುವುದನ್ನು ಆವೇಶವಿಲ್ಲದೆ ಚಿತ್ರಿಸುತ್ತದೆ. 'ಗರ್ಜನೆ', 'ಸೋಲು', 'ಕಣಿವೆಯ ಅಂಚು', 'ಬೀಡ', 'ಅವ್ವ', 'ಕಳೆ', 'ಕೆಂಪುಹುಂಜ', 'ಗಾಂಧಿ', 'ಚಲುವನ ಪರಂಗಿ ಗಿಡಗಳು', 'ಒಂದು ಹುಡುಗನಿಗೆ ಬಿದ್ದ ಕನಸು' ಇತ್ಯಾದಿಗಳು ಬೆಸಗರಹಳ್ಳಿ ರಾಮಣ್ಣನವರ ಪ್ರಮುಖ ಕತೆಗಳು.

ಬಂಡಾಯ ಚಳುವಳಿಯ ಪ್ರಮುಖ ಬರಹಗಾರರಾದ ಕುಂ.ವೀರಭದ್ರಪ್ಪನವರು ಸಮಕಾಲೀನ ಕನ್ನಡ ಸಾಹಿತ್ಯದ ಮಹತ್ವದ ಕತೆಗಾರರಾಗಿದ್ದಾರೆ. ಮಧ್ಯಮ ವರ್ಗದ ಓದುಗರನ್ನು ದಿಗ್ಭ್ರಮೆಗೊಳಿಸಬಲ್ಲ ಕೆಳವರ್ಗದ ಜೀವನವನ್ನು, ಬಳ್ಳಾರಿ ಜಿಲ್ಲೆಯ ಕೊಟ್ಟೂರು ಪ್ರದೇಶದ ನುಡಿಗಟ್ಟಿನಲ್ಲಿ ವೀರಭದ್ರಪ್ಪನವರು ಸೊಗಸಾಗಿ ಹೇಳುತ್ತಾರೆ. ನಿಬಿಡವಾದ ಶೂದ್ರಾನುಭವವನ್ನು, ಶೂದ್ರರು ಮೈಕೊಡವಿಕೊಂಡು ಮೇಲೇಳುತ್ತಿದ್ದಾರೆಂಬ ಸೂಚನೆಯನ್ನು ಇವರ ಕತೆಗಳು ನೀಡುತ್ತವೆ. ಕತ್ತಲನು ತ್ರಿಕೋಣ ಹಿಡಿದ ಕತೆ, ಕಿವುಡ ನಾಯಿಯಾದ ಪ್ರಸಂಗ, ಡೋಮ, ದೇವರ ಹೆಣ, ಎಂಜಲು, ಬೇಟೆ ಇತ್ಯಾದಿಗಳು ಇವರ ಶ್ರೇಷ್ಠ ಕತೆಗಳು.

ದಲಿತ ಬಂಡಾಯ ಕಾಲಘಟ್ಟದಲ್ಲಿ ಇನ್ನೂ ಅನೇಕ ಕತೆಗಾರರನ್ನು ಮತ್ತು ಕತೆಗಳನ್ನು ಹೆಸರಿಸಬಹುದು. ಬೊಳುವಾಡಿ ಮಹಮ್ಮದ್ ಕುಂಞಿಯವರ ಇಬಾದತ್, ಫಕೀರ್ ಮಹಮ್ಮದ್ ಕಟ್ಪಾಡಿಯವರ ನೋಂಬು, ಸಾರಾ ಅಬೂಬಕ್ಕರ್‌ರವರ ಚಪ್ಪಲಿಗಳು, ವಿವೇಕ ಶ್ಯಾನುಬೋಗರ ಹುಲಿಸವಾರಿ, ವೀಣಾ ಶಾಂತೇಶ್ವರವರ ಮುಳ್ಳುಗಳು, ವೈದೇಹಿಯವರ ಸೌಗಂಧಿಯ ಸ್ವಗತಗಳು ಇತ್ಯಾದಿಗಳು ಅವುಗಳಲ್ಲಿ ಕೆಲವು.

ಈ ಕಾಲಘಟ್ಟದಲ್ಲಿ ನವೋದಯ,ನವ್ಯ, ಪ್ರಗತಿಶೀಲ, ಕಾಲಘಟ್ಟಕ್ಕಿಂತ ಭಿನ್ನವಾದ ಸಂವೇದನೆಗಳು ವ್ಯಕ್ತವಾಗಿವೆ. ಇಲ್ಲಿ ಪ್ರತಿಯೊಬ್ಬರಿಗೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವಿತ್ತು. ಇದುವರೆಗೆ ಸಾಹಿತ್ಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ದಲಿತರು, ಸ್ತ್ರೀಯರು, ಮುಸ್ಲಿಮರು, ಗ್ರಾಮೀಣ ಜನರು, ದಲಿತ ಬಂಡಾಯ ಸಾಹಿತ್ಯದಲ್ಲಿ ಬರಹಗಾರರಾದರು. ಅವರು ತಮ್ಮ ವೈಯಕ್ತಿಕ ಅನುಭವವನ್ನು, ಭಾವನೆಯನ್ನು ಮತ್ತು ನೋಡಿ ಅರಿತ ಸಂಗತಿಗಳನ್ನು ತಮ್ಮ ಬರಹಗಳಲ್ಲಿ ದಾಖಲಿಸಿದರು. ಸಣ್ಣಕತೆಯು ಅವರ ಮನದ ಭಾವನೆಯನ್ನು ಅಭಿವ್ಯಕ್ತಿಸಲು ಸಮರ್ಥ ಮಾಧ್ಯಮವಾಗಿ ದಲಿತ ಬಂಡಾಯ ಕಾಲಘಟ್ಟವು ವೇದಿಕೆಯನ್ನೊದಗಿಸಿತು.

**ಕತೆಗಳ ಮೂಲಕ**

- ಜೀವನ ಮೌಲ್ಯಗಳನ್ನು ತಿಳಿದುಕೊಳ್ಳಬಹುದು.
- ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು.
- ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬಹುದು.
- ನೈತಿಕತೆಯನ್ನು ಬೆಳೆಸಿಕೊಳ್ಳಬಹುದು.
- ಉತ್ತಮ ಗುಣನಡತೆಗಳನ್ನು ರೂಢಿಸಿಕೊಳ್ಳಬಹುದು.
- ಪ್ರಕೃತಿ ಸ್ನೇಹವನ್ನು ಬೆಳೆಸಿಕೊಳ್ಳಬಹುದು.
- ರಾಷ್ಟ್ರಪ್ರೇಮವನ್ನು ಬೆಳೆಸಿಕೊಳ್ಳಬಹುದು.
- ಮಾನವೀಯತೆ, ಅನುಕಂಪ ಇತ್ಯಾದಿ ಗುಣಗಳನ್ನು ಬೆಳೆಸಿಕೊಳ್ಳಬಹುದು.
- ಮತೀಯ ಸಾಮರಸ್ಯ ಬೆಳೆಸಿಕೊಳ್ಳಬಹುದು.

**ಕತೆಗಳನ್ನು**

- ☆ ಕೇಳಿ ಆಸ್ವಾದಿಸಬಹುದು.
- ☆ ಓದಿ ತಿಳಿದುಕೊಳ್ಳಬಹುದು
- ☆ ಹೊಸಕತೆಯನ್ನು ಹೇಳಬಹುದು
- ☆ ಬದಲಾಯಿಸಿ ಹೇಳಬಹುದು
- ☆ ದೀರ್ಘ ಮಾಡಬಹುದು
- ☆ ಸಂಕ್ಷಿಪ್ತಗೊಳಿಸಬಹುದು
- ☆ ನಾಟಕ ಮಾಡಬಹುದು
- ☆ ಕವನ ಮಾಡಬಹುದು

ಕತೆ ಹೇಳುವುದು, ತಂತ್ರಜ್ಞಾನವನ್ನು ಬಳಸಿಕೊಂಡು ಕತೆ ಹೇಳುವುದು, ಬೊಂಬೆ ಉಪಯೋಗಿಸಿ ಕತೆ ಹೇಳುವುದು, ಚಿತ್ರ ತೋರಿಸಿ ಕತೆ ಹೇಳುವುದು, ಪುರಾಣಕತೆಗಳು ಇತ್ಯಾದಿಗಳ ಮೂಲಕ ಪ್ರಾಥಮಿಕ ತರಗತಿಗಳ ಭಾಷಾ ವಿನಿಮಯವನ್ನು ಸರಳ ಸುಂದರವಾಗಿ ನಡೆಸಬಹುದು.

ಶ್ರದ್ಧಾ ಮೋಡ್ಯುಲ್‌ನಿಂದ ಆರಿಸಿದ ಕತೆ ಹೇಳುವ ತಂತ್ರಕ್ಕೆ ಸಂಬಂಧಿಸಿದ ಒಂದು ಕತೆಯ ಮಾದರಿಯನ್ನು ಕೆಳಗೆ ಕೊಡಲಾಗಿದೆ. ಇದೇ ರೀತಿ ಉಳಿದ ತಂತ್ರಗಳ ಮಾದರಿಗಳನ್ನು ತಿಳಿದುಕೊಂಡು ತರಗತಿಯಲ್ಲಿ ಮಂಡಿಸುವುದು.

**ಚಟುವಟಿಕೆ**

ಕತೆಯಲ್ಲಿ ಸೇರೋಣ

(ಮೂರು, ಐದನೇ ತರಗತಿಗಳಿಗಿರುವ ಚಟುವಟಿಕೆ)

**ಸಮಯ :** 20 ನಿಮಿಷಗಳು

**ಉದ್ದೇಶ :** ಅನುಭವಗಳು/ಕತೆಗಳು/ಸಂಭಾಷಣೆಗಳು ಇತ್ಯಾದಿಗಳನ್ನು ಕೇಳಿ ತಿಳಿದುಕೊಳ್ಳಲು.

**ಪ್ರಕ್ರಿಯೆ :** ಅಧ್ಯಾಪಕರು ಒಂದು ಕತೆ ಹೇಳುವುದು.

ಒಂದೂರಲ್ಲಿ ಪುಟ್ಟನೆಂಬ ಹುಡುಗನಿದ್ದನು. ಪುಟ್ಟನ ಗೆಳೆಯ ಒಂದು ಸೊಳ್ಳೆಯಾಗಿತ್ತು. ಅವರಿಬ್ಬರೂ ಹೊಳೆಗೆ ಸ್ನಾನಕ್ಕೆ ಹೋದರು. ಪುಟ್ಟ ಹೊಳೆಯ ನೀರಿಗೆ ಹಾರಿ ಮುಳುಗಿದ. ಆ ಮೇಲೆ ಅವನನ್ನು ಕಾಣಿಸಲೇ ಇಲ್ಲ. ಸೊಳ್ಳೆ ಪುಟ್ಟನನ್ನು ತುಂಬಾ ಹೊತ್ತು ಕಾದು ಕುಳಿತಿತು. ಆ ಮೇಲೆ ದುಃಖದಿಂದ ಊಂ... ಊಂ... ಊಂ... ಎಂದು ಅಳತೊಡಗಿತು. ಅಳುವಿನ ಸದ್ದು ಕೇಳಿದ ಹೊಳೆದಡದಲ್ಲಿರುವ ಆಲದ ಮರ ಕೇಳಿತು. ಸೊಳ್ಳೆಯೇ ಯಾಕೆ ಅಳುತ್ತಿರುವೆ. ಸೊಳ್ಳೆ ಹೇಳಿತು.

ಸೊಳ್ಳೆಯ ಮಾತು ಕೇಳಿ ಆಲಕ್ಕೆ ದುಃಖವಾಯಿತು. ಆಲದ ಮರ ಅದರ ಎಲೆಗಳನ್ನೆಲ್ಲಾ ಉದುರಿಸಿತು. ಆಲದ ಮರದಡಿಯಲ್ಲಿ ಕಟ್ಟಿ ಹಾಕಿದ ಕುಟ್ಟಪ್ಪ ಎಂಬ ಆನೆಯ ಮೇಲೆ ಆ ಎಲೆಗಳೆಲ್ಲಾ ಬಿದ್ದುವು.

ಆನೆ ಕೇಳಿತು. "ಆಲವೇ ಏನಿದು, ಹೀಗೆ ಎಲೆ ಉದುರಿಸುವುದು ಯಾಕಾಗಿ?" ಆಲ ಹೇಳಿತು ಅದೇ... (ಮಕ್ಕಳು ಕಥೆ ಹೇಳಲಿ) ಪುಟ್ಟನೂ ಸೊಳ್ಳೆಯೂ ಸ್ನಾನಕ್ಕೆ ಹೋದವು. ಪುಟ್ಟ ನೀರಿನಲ್ಲಿ ಮುಳುಗಿದ, ಆ ಮೇಲೆ ಕಾಣದಾದ ಸೊಳ್ಳೆಗೆ ದುಃಖವಾಯಿತು. ಅದಕ್ಕಾಗಿ ನಾನು ಎಲೆಗಳನ್ನುದುರಿಸಿದೆ. ಅದನ್ನು ಕೇಳಿದ ಕುಟ್ಟಪ್ಪನಿಗೆ ದುಃಖವಾಯಿತು. ಅದು ದುಃಖ ತಡೆಯಲಾರದೆ ತನ್ನ ದಾಡೆಯನ್ನು ಎಳೆದು ಮುರಿದು ಎಸೆಯಿತು. ಎಸೆದ ದಾಡೆ ಮಾವುತನ ಮುಂದೆ ಬಿತ್ತು. ಮಾವುತ ಕೇಳಿದ "ಏನು ಕುಟ್ಟಪ್ಪಾ ಯಾಕೆ ದಾಡೆಯನ್ನು ಮುರಿದು ಎಸೆದೆ?" ಆನೆ ಹೇಳಿತು. ಅದೋ (ಮಕ್ಕಳು ಕಥೆ ಹೇಳಲಿ– ಪುಟ್ಟನೂ ಸೊಳ್ಳೆಯೂ ಸ್ನಾನಕ್ಕೆ ಹೋದವು... ಅದು ಕೇಳಿದಾಗ ನನಗೆ ದುಃಖವಾಯಿತು. ನಾನು ದಾಡೆ ಮುರಿದು ಎಸೆದೆ.

ಇದನ್ನು ಕೇಳಿದಾಗ ಮಾವುತನಿಗೆ ದುಃಖವಾಯಿತು. ಮಾವುತ ತನ್ನ ಕೈಯಲ್ಲಿರುವ ಅಂಕುಶವನ್ನು ಮುರಿದು ಎಸೆದ. ಅದು ಹೋಗಿ ಜಗಲಿಯಲ್ಲಿ ಕುಳಿತ ಸುಬ್ಬಜ್ಜಿಯ ಮುಂದೆ ಬಿತ್ತು. ಅಜ್ಜಿ ಕೇಳಿದರು. ನಿನಗೇನಾಯಿತು ಮಾವುತ? ಯಾಕೆ ಅಂಕುಶವನ್ನು

ಮುರಿದೆಸೆದೆ? ಆಗ ಮಾವುತ ಹೇಳಿದ ಅದೋ (ಎಲ್ಲರೂ ಕಥೆ ಮುಂದುವರಿಸುತ್ತಾರೆ... ಪುಟ್ಟನೂ ಸೊಳ್ಳೆಯೂ, ಸ್ನಾನಕ್ಕೆ ಹೋದರು ... ಕಥೆ ಕೇಳಿ ಅಜ್ಜಿಗೆ ದುಃಖವಾಯಿತು. ಅಜ್ಜಿ ತನ್ನ ಕೈಯಲ್ಲಿದ್ದ ಸಟ್ಟುಗವನ್ನು ದೂರಕ್ಕೆಸೆದರು. ಅದು ಹೋಗಿ ಹೊಳೆ ಬದಿಯಲ್ಲಿ ಕುಳಿತಿದ್ದ ಪುಟ್ಟನ ಮೇಲೆ ಬಿತ್ತು. ಪುಟ್ಟ ಕೇಳಿದ ಯಾಕಜ್ಜಿ ತನ್ನ ಮೇಲೆ ಸಟ್ಟುಗವೆಸೆದೆ?

ಅಜ್ಜಿ ಹೇಳಲಾರಂಭಿಸಿದರು. (ಮಕ್ಕಳು ಹೇಳಲಿ..... ಪುಟ್ಟನೂ ಸೊಳ್ಳೆಯೂ ಹೊಳೆಗೆ ಸ್ನಾನಕ್ಕೆ ಹೋದರು.... ಅದಕ್ಕೆ ನಾನು ಸಟ್ಟುಗವೆಸೆದೆ. ಆಗ ಪುಟ್ಟ ಹೇಳಿದ 'ನಾನಲ್ಲವೇ? ಪುಟ್ಟ' ಆಗ ಅಜ್ಜಿ ಮಾವುತನನ್ನು ಕೂಗಿ ಕರೆದು ಇದೋ ಪುಟ್ಟ ಹೊಳೆ ದಡದಲ್ಲಿ ಆಟವಾಡುತ್ತಿದ್ದಾನೆ". ಮಾವುತ ಆನೆಯೊಡನೆ ಹೇಳಿದ. ಆನೆ ಆಲದ ಮರದೊಡನೆ ಹೇಳಿತು. ಆಲದ ಮರ ಸೊಳ್ಳೆಯೊಡನೆ ಹೇಳಿತು. ಸೊಳ್ಳೆ ಗಟ್ಟಿಯಾಗಿ ಕರೆಯಿತು. "ಪುಟ್ಟಾ......"

**ಚಟುವಟಿಕೆಗಳು**

- ಪ್ರಾಥಮಿಕ ತರಗತಿಗಳ ಮುಂದುವರಿದ ಪಠ್ಯ ಮತ್ತು ಮೂಲಪಠ್ಯಗಳಲ್ಲಿರುವ ಎಲ್ಲಾ ಕತೆಗಳನ್ನು ಪರಿಚಯಿಸಿಕೊಳ್ಳುವುದು. ಇದಕ್ಕಾಗಿ ಕಥಾ ಕಮ್ಮಟ, ಕಥಾಗೋಷ್ಠಿಗಳನ್ನು ನಡೆಸಬಹುದು.
- ಸಣ್ಣಕತೆಯ ಚರಿತ್ರೆಯ ಓದು ಚರ್ಚೆ
- ಭಾಷೆಯ ಮೈಲುಗಲ್ಲುಗಳಾಗಿರುವ ಕತೆಗಳ ಮಂಡನೆ
- ಕನ್ನಡ ಸಣ್ಣಕತೆಗಳ ವಿವಿಧ ಹಂತಗಳ ಕುರಿತು ಕಾಲರೇಖೆ (Timeline) ತಯಾರಿಸುವುದು. (ICT ಸಾಧ್ಯತೆಗಳನ್ನುಪಯೋಗಿಸಿ)
- ಗುಂಪುಗಳು ಆರಿಸಿದ ಕತೆಗಳನ್ನು ಕಥಾ ಮಂಡನೆಯ ವಿಭಿನ್ನ ರೀತಿಗಳನ್ನುಪಯೋಗಿಸಿ ಮಂಡನೆ.
- ಸಣ್ಣಕತೆಗಳು ಬೆಳೆದುಬಂದ ದಾರಿ, ವಿಚಾರಗೋಷ್ಠಿ, ಪ್ರಬಂಧ (ವಿವಿಧ ಕಾಲಘಟ್ಟಗಳ ತಂತ್ರ, ಭಾಷೆ, ಶೈಲಿ ಇತ್ಯಾದಿಗಳ ಸೇರಿರಬೇಕು)

## ಕಾದಂಬರಿ

**ವಿಶೇಷತೆಗಳು**

- ಇಂಗ್ಲೀಷ್ ಭಾಷೆಯ "Novel" ಗೆ ಪರ್ಯಾಯವಾಗಿ ಕನ್ನಡದಲ್ಲಿ ಬಳಸುವ ಪದ.
- ಮನುಷ್ಯ ಜೀವನವನ್ನು ಸಮಗ್ರವಾಗಿ ಶಕ್ತಿಯುತವಾಗಿ ಚಿತ್ರಿಸುವುದಕ್ಕೆ ಅವಕಾಶವಿರುವ ಸಾಹಿತ್ಯ ಪ್ರಕಾರವೇ ಕಾದಂಬರಿ.
- ಜೀವನದ ಸ್ಥಿತಿಗತಿಗಳನ್ನು ಸಹಜವಾಗಿ ಚಿತ್ರಿಸುವ ಆಧುನಿಕ ಸಾಹಿತ್ಯ ಪ್ರಕಾರವೇ ಕಾದಂಬರಿ
- ಮನುಷ್ಯ ಜೀವನದ ನಿಜಸ್ಥಿತಿಯನ್ನು ಚಿತ್ರಿಸುವುದರೊಂದಿಗೆ ಅಪೂರ್ವವಾದ ಮಾನವದರ್ಶನವನ್ನು ಕಾದಂಬರಿಯು ನೀಡುತ್ತದೆ.
- ಗದ್ಯರೂಪದಲ್ಲಿರುವ ಕಾಲ್ಪನಿಕ ಜೀವನದ ವಿವರಣೆಯೇ ಕಾದಂಬರಿ.
- ಓದುಗರಲ್ಲಿ ಅತ್ಯಂತ ಹೆಚ್ಚು ಪ್ರಚಾರವಿರುವ ಸಾಹಿತ್ಯ ಪ್ರಕಾರ.

**ಕಾದಂಬರಿಯ ಕುರಿತು**

- ಕಾದಂಬರಿ ಭಾವನಾತ್ಮಕವಾದ ಗದ್ಯಕತೆಯಲ್ಲ; ಅದು ಮನುಷ್ಯನನ್ನು ಪೂರ್ಣರೂಪದಲ್ಲಿ ಪ್ರಕಾಶಿಸುವಂತೆ ಮಾಡಲು ತಯಾರಾದ ಮೊದಲ ಕಲಾರೂಪ – ರಾಲ್ಫ್ ಫೋಡ್
- ಮಾನವ ಬದುಕಿನ ನಿಗೂಢ ರಹಸ್ಯಗಳು ತುಂಬಿದ ಒಳಮನಸ್ಸನ್ನು ತೆರೆದಿಡಲು ಸಾಧ್ಯವಾಗುವುದೇ ಕಾದಂಬರಿಗೆ ಇತರ ಕಲಾರೂಪಗಳಿಗಿಂತ ಇರುವ ಸಾಧನೆ– ಫೋಸ್ಟರ್.
- ಗದ್ಯರೂಪದಲ್ಲಿರುವ ರಸಾತ್ಮಕವಾದ ಇತಿಹಾಸವೇ ಕಾದಂಬರಿ – ಫೀಲ್ಡಿಂಗ್

- ✓ ಕಾದಂಬರಿಯು ಅದು ರಚನೆಯಾದ ಕಾಲಘಟ್ಟದ, ನಿಜವಾದ ಬದುಕಿನ, ಜೀವನ ರೀತಿಯ ಚಿತ್ರಣ– ಕ್ಲಾರಾ ರೀವ್ಸ್.
- ✓ ಪ್ರತಿಬಿಂಬದಲ್ಲಿ ಹುದುಗಿಕೊಂಡಿರುವ ಒಂದು ಜೀವನ ದರ್ಶನವೇ ಕಾದಂಬರಿ – ಕಾಮು
- ✓ ಸಾಮಾನ್ಯಕ್ಕೂ ವಿಶೇಷತೆಗೂ ಮಧ್ಯದಲ್ಲಿರುವ ಮನುಷ್ಯರ ನಿರಂತರವಾದ ಪ್ರಯಾಣವು ಕಾದಂಬರಿಯಲ್ಲಿ ಪ್ರತಿಬಿಂಬಿತವಾಗಿರುತ್ತದೆ – ಸಾರ್ತ್ರ್

**ಕಾದಂಬರಿಯ ಉಗಮ ಮತ್ತು ವಿಕಾಸ**

- ☆ 15ನೇ ಶತಮಾನದಲ್ಲಿ ಇಟಲಿಯಲ್ಲಿ ಮತ್ತು 16ನೇ ಶತಮಾನದಲ್ಲಿ ಫ್ರಾನ್ಸ್ ಹಾಗೂ ಇಂಗ್ಲೆಂಡಿನಲ್ಲಿ ರಚನೆಯಾದ ನೂತನ ಕತೆಗಳು ಕಾದಂಬರಿಗಳಾಗಿ ಬದಲಾದವು.
- ☆ ಡಾನಿಯಲ್ ಡಫೋನ ರಾಬಿನ್‌ಸನ್ ಕ್ರುಸೋ, ಸ್ವಿಫ್ಟನ ಗಲಿವರ್, ಜಾನ್ ಬನ್‌ಯನ್‌ನ ದಿ ಪಿಲಿಗ್ರಿಮ್ಸ್ ಪ್ರೊಗ್ರೆಸ್ ಇವು ಕಾದಂಬರಿ ಪ್ರಕಾರದ ಪ್ರಾರಂಭದ ಕೃತಿಗಳಾಗಿವೆ.
- ☆ ಕ್ರಿ.ಪೂ.1760ರಲ್ಲಿ ರಿಚಾರ್ಡ್‌ಸನ್ ಬರೆದ ಪಮೀಲ ಪ್ರಕಟಣೆಯಾದಾಗ ಕಾದಂಬರಿ (ನೋವಲ್) ಎಂಬ ಹೆಸರು ಸರ್ವಸಾಧಾರಣವಾಯಿತು.
- ☆ ಕ್ರಿ.ಪೂ.1760ರಲ್ಲಿ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದಾಗಿ ಉಂಟಾದ ಸನ್ನಿವೇಶವು ಕಾದಂಬರಿಯ ಶೀಘ್ರ ವಿಕಾಸಕ್ಕೆ ದಾರಿ ಮಾಡಿತು.
- ☆ ಫ್ರೆಂಚ್ ಸಾಹಿತ್ಯದ ವಿಕ್ಟರ್‌ಹ್ಯೂಗೋ, ಬಲ್‌ಸಾಕ್, ಮೋಪಸಾಂಗ್ ಎಮಿಲಿಸೋಳ ಎಂಬವರು ಮತ್ತು ರಷ್ಯನ್ ಸಾಹಿತ್ಯದ ಟಾಲ್‌ಸ್ಟಾಯಿ, ದಸ್ತಯೋ ವಿಸ್ಕಿ ಎಂಬಿವರು ಕಾದಂಬರಿ ಸಾಹಿತ್ಯಕ್ಕೆ ಚೈತನ್ಯ ತುಂಬಿದರು.
- ☆ ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸದ ಪ್ರಚಾರವು ವಿಶ್ವಕಾದಂಬರಿ ಸಾಹಿತ್ಯದ ಪ್ರಭಾವಕ್ಕೆ ಕಾರಣವಾಯಿತು.
- ☆ ಭಾರತದ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರವು ಹೆಚ್ಚು ಶಕ್ತಿಯುತವಾದದ್ದು ಬಂಗಾಳಿಯಲ್ಲಿ – ಬಂಕಿಂ ಚಂದ್ರ ಚಟರ್ಜಿ, ಶರತ್‌ಚಂದ್ರ ಚಟರ್ಜಿ, ತಾರಾಶಂಕರ್, ವಿಭೂತಿಭೂಷಣ್ ಮೊದಲಾದವರು ಪ್ರಮುಖ ಕಾದಂಬರಿಕಾರರು.
- ☆ ಇಂಗ್ಲೀಷ್ ಶಿಕ್ಷಣವು ಬಂಗಾಳಿ ಭಾಷೆಯ ಮೇಲೆ ಪ್ರಭಾವ ಬೀರಿದ ಕಾಲದಲ್ಲಿಯೇ ಕನ್ನಡದಲ್ಲಿಯೂ ಅದರ ಪ್ರಭಾವ ಕಾಣತೊಡಗಿತು.
- ☆ ಸು.1815ರಲ್ಲಿ ರಚನೆಯಾದ ಯಾದವನ ಕಲಾವತಿ ಪರಿಣಯ, 1821ರಲ್ಲಿ ರಚನೆಯಾದ ಮುಮ್ಮಡಿ ಕೃಷ್ಣರಾಜರ ಸೌಗಂಧಿಕಾ ಪರಿಣಯ, 1823ರಲ್ಲಿ ರಚನೆಯಾದ ಕೆಂಪುನಾರಾಯಣನ ಮುದ್ರಾ ಮಂಜೂಷ ಕೃತಿಗಳು ಕನ್ನಡದಲ್ಲಿ ಎನ್ನಬಹುದಾದ ಕೃತಿಗಳಾಗಿವೆ.
- ☆ 1892ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ ಸೂರ್ಯಕಾಂತ ಕನ್ನಡದ ಮೊದಲ ಸ್ವತಂತ್ರ ಕಾದಂಬರಿ.

**ಕನ್ನಡದಲ್ಲಿ ಕಾದಂಬರಿ**

ಸಾಮಾನ್ಯವಾಗಿ ಕಾದಂಬರಿ ಎಂಬ ಪ್ರಕಾರವು, ಇಂಗ್ಲೀಷ್ ಸಾಹಿತ್ಯದಿಂದ ಬಂದವು ಎಂದರೂ ಅದಕ್ಕಿಂತಲೂ ಮೊದಲೇ ಕಾದಂಬರಿ ಎನ್ನಬಹುದಾದ ಮೂರು ಕೃತಿಗಳು ರಚಿತವಾದುವು. ಯಾದವನ ಕಲಾವತಿ ಪರಿಣಯ (1815), ಮುಮ್ಮಡಿ ಕೃಷ್ಣರಾಜರ ಸೌಗಂಧಿಕಾ ಪರಿಣಯ (1821), ಕೆಂಪು ನಾರಾಯಣನ ಮುದ್ರಾ ಮಂಜೂಷ(1823). ಮೊದ ಮೊದಲು ಇತರ ಭಾಷೆಗಳಿಂದ ಅನುವಾದವಾದ ಕಾದಂಬರಿಗಳೇ ಹೆಚ್ಚು. ಬಂಕಿಮರ ದುರ್ಗೇಶ ನಂದಿನಿಯ ಅನುವಾದ ಮಾಡಿದ ವೆಂಕಟಾಚಾರ್ಯರು ಮೊದಲಿಗೆ ನಾವೆಲ್ ಪದ ಬಳಸಿದರು. ಕಾದಂಬರಿ ಎಂದರೇನು? ಎಂದು ಅದರಲ್ಲಿ ವಿವರಿಸಿದರು. 1892ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ ಸೂರ್ಯಕಾಂತ ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿ ಎನ್ನಬಹುದು. ಗುಬ್ಬಿ ಮುರಿಗಾರಾಧ್ಯರ ಶೃಂಗಾರ ಚಾತುರ್ಯೋಲ್ಲಾಸಿನೀ (1899), ಗಳಗನಾಥರ ಪ್ರಬುದ್ಧನಯನೆ(1898) ಹಾಗೂ ಗುಲ್ವಾಡಿಯವರ ಇಂದಿರಾಬಾಯಿ (1899),

ಕಾದಂಬರಿ ಓದುವವರ ಸಂಖ್ಯೆ ಬೆಳೆದಾಗ ಗಳಗನಾಥ, ಬಿ.ವೆಂಕಟಾಚಾರ್ಯರು ಇನ್ನಷ್ಟು ಕೃತಿಗಳನ್ನು ಅನುವಾದಿಸಿದರು. ಅನೇಕ ಅನುವಾದಿತ ಕಾದಂಬರಿಗಳು ಪ್ರಕಟವಾದವು. ಬಾಲ ಸರಸ್ವತಿ, ಭಿ.ಪ.ಕಾಳೆ ಪತ್ತೇದಾರಿ ಕಾದಂಬರಿಗಳನ್ನು ಬರೆದರು. ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದ ಮಹಿಳಾ ಲೇಖಕಿ ತಿರುಮಲಾಂಬ. ಸಾಹಿತ್ಯದ ದೃಷ್ಟಿಯಿಂದ ಕಾದಂಬರಿ ಎಂದು ಹೇಳಬಹುದಾದ ಮೊತ್ತ ಮೊದಲನೆಯ ಕೃತಿ ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ. ಅವರ 'ಮುಸುಕು ತೆಗೆಯೇ ಮಾಯಂಗನೆ', 'ಅವರಿಗಲ್ಲದೂಟ'ಗಳೂ ಉತ್ತಮ ಕೃತಿಗಳು.

20ನೇ ಶತಮಾನದ 4ನೇ ದಶಕದಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಬೆಳೆ ಹುಲುಸಾಯಿತು. 1928ರಲ್ಲಿ ಶಿವರಾಮ ಕಾರಂತರ 'ದೇವದೂತರು' ಅನಂತರ 'ಚೋಮನ ದುಡಿ' ಪ್ರಕಟವಾಯಿತು. ಆನಂದ ಕಂದರ 'ಸುದರ್ಶನ' ರಂ.ಶ್ರೀ.ಮುಗಳಿಯವರ 'ಬಾಳುರಿ', ಅನಕೃ.ರವರ 'ಜೀವನಯಾತ್ರೆ', 'ಉದಯರಾಗ', ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ', ಗೋಕಾಕರ 'ಇಜ್ಜೋಡು', ಜಡಭರತರ 'ಧರ್ಮಸೆರೆ', ಕುವೆಂಪುರವರ 'ಕಾನೂರ ಸುಬ್ಬಮ್ಮ ಹೆಗ್ಗಡತಿ', ಶ್ರೀನಿವಾಸರ 'ಸುಬ್ಬಣ್ಣ ದೇವುಡು', ನರಸಿಂಹ ಶಾಸ್ತ್ರಿಗಳ 'ಅಂತರಂಗ', 'ಮಯೂರ', ಕಾರಂತರ 'ಬೆಟ್ಟದ ಜೀವ', 'ಹೆತ್ತಳಾ ತಾಯಿ', 'ಮರಳಿ ಮಣ್ಣಿಗೆ', ನಾ ಕಸ್ತೂರಿಯವರ 'ಚಕ್ರದೃಷ್ಟಿ', ಇ.ಎಂ.ಇನಾಂದರರ 'ಎರಡು ಧ್ರುವ' ಪ್ರಕಟವಾದವು. 1920ರಿಂದ 45ರವರೆಗೆ 25 ವರ್ಷದಲ್ಲಿ ಸುಮಾರು 80 ಕಾದಂಬರಿಗಳು ಪ್ರಕಟವಾದವು. ಕಾವ್ಯದಲ್ಲಿ ಬೇಂದ್ರೆ ಕುವೆಂಪುರವರಂತೆ ಕಾದಂಬರಿಯಲ್ಲಿ ಅ.ನಕೃ. ಮತ್ತು ಕಾರಂತರ ಕೊಡುಗೆ ಅನ್ಯಾದೃಶ್ಯವಾದುದು.

ಕಾರಂತರು 38 ಕಾದಂಬರಿಗಳನ್ನು ಬರೆದಿದ್ದಾರೆ. ಕಾರಂತರ ಕಾದಂಬರಿಗಳೆಲ್ಲ ಗಟ್ಟಿಯಾದ ಅನುಭವದ ತಳಹದಿಯ ಮೇಲೆ ನಿಂತಿವೆ. ಅವರ ಬರಹದಲ್ಲಿ ಅವೇಶವಿಲ್ಲ. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಆವರಣ ಜೀವಂತವಾಗುತ್ತದೆ. ಯಾವ ಪಂಥಕ್ಕೂ ಸೇರದೆ ಅವರು ಬರೆಯುತ್ತಾರೆ. ಆದರಲ್ಲಿ ಘೋಷಣೆ, ನಾಟಕೀಯ ದೃಶ್ಯ,ಕಣ್ಣಿಗೆ ಹೊಡೆಯುವ ತಂತ್ರಗಳಿಲ್ಲ. ಹಾಗೆಂದು ಕಾರಂತರನ್ನು ಅನುಕರಿಸುವುದು ಅಸಾಧ್ಯ. ಅ.ನ.ಕೃ.ರನ್ನು ಅನುಕರಿಸುವುದು ಸುಲಭ. ಎಸ್.ಎಲ್.ಭೈರಪ್ಪ, ರಾವ್ ಬಹದ್ದೂರ್, ಬಲ್ಲಾಳ, ಯು.ಆರ್. ಅನಂತರಮೂರ್ತಿ, ಶ್ರೀನಿವಾಸ, ದೇವುಡು ನರಸಿಂಹ ಶಾಸ್ತ್ರಿ, ಶ್ರೀರಂಗ, ಕುವೆಂಪು, ಆನಂದಕಂದ ಇವರೆಲ್ಲ ಕಾರಂತರಂತೇ ಯಾವ ಪಂಥಕ್ಕೂ ಸೇರದವರು. ಇವರೆಲ್ಲ ಮನುಷ್ಯನಲ್ಲಿ ಘನತೆಯನ್ನು ಕಾಣಹೊರಡುತ್ತಾರೆ. ಕಾರಂತರ 'ಮರಳಿ ಮಣ್ಣಿಗೆ'ಯಲ್ಲಿ ಘನತೆಯ ಚಿತ್ರಣವಿದೆ. 'ಬೆಟ್ಟದ ಜೀವ'ದಲ್ಲಿ ಕತೆ ಹೇಳುವವನು ಕತೆಯಲ್ಲಿ ಸೇರಿದ್ದಾನೆ. 'ಚೋಮನ ದುಡಿ'ಯಲ್ಲಿ ಚೋಮನ ಮೂಕವೇದನೆಯಿದೆ. 'ಅಳಿದ ಮೇಲೆ', 'ಮೂಜನ್ಮ' ಗಳಲ್ಲಿ ಜೀವನ ವ್ಯಕ್ತಿತ್ವದ ವಿರಸಗಳನ್ನು ಶೋಧಿಸಲು ವರ್ತಮಾನದಿಂದ ಭೂತಕಾಲಕ್ಕೆ ಸಾಗುವ ಕ್ರಿಯೆ ಇದೆ.

ನಾಟಕಕಾರ ಶ್ರೀರಂಗರೂ ಹಲವು ಕಾದಂಬರಿಗಳನ್ನು ಬರೆದಿದ್ದಾರೆ. ಅವರ ವಿಶ್ವಾಮಿತ್ರ ಸೃಷ್ಟಿ, ಪುರುಷಾರ್ಥ, ಪ್ರಕೃತಿ, ಅನಾದಿ, ವಿಷಚಕ್ರವ್ಯೂಹ ಉತ್ತಮ ಕಾದಂಬರಿಗಳು. ತಾವು ತಾದಾತ್ಮ್ಯ ಹೊಂದದೆ ಪಾತ್ರಗಳ ಮನ ಹೊಕ್ಕು ನೋಡುವ ವಿಶಿಷ್ಟ ಪ್ರಯತ್ನ ಶ್ರೀರಂಗರದು. ತಂತ್ರದಲ್ಲಿ ಹೊಸ ಹೊಸ ಪ್ರಯೋಗಗಳು ಅವರ ಕಾದಂಬರಿಗಳಲ್ಲಿವೆ.

ಇನ್ನೊಬ್ಬ ಧೀಮಂತ ಕಾದಂಬರಿಕಾರ ದೇವುಡು ನರಸಿಂಹ ಶಾಸ್ತ್ರೀ. 1930ರಲ್ಲಿ ಪ್ರಕಟವಾದ ಅವರ ಅಂತರಂಗ ಕನ್ನಡದ ಮೊಟ್ಟ ಮೊದಲ ಮನೋ ವಿಶ್ಲೇಷಣಾತ್ಮಕ ಕಾದಂಬರಿ ಎನ್ನಬಹುದು. ಮನಸ್ಸನ್ನು ಹದ್ದುಬಸ್ತಿನಲ್ಲಿಟ್ಟು ಶ್ರೇಯಸ್ಸಿನ ಕಡೆಗೆ ತಿರುಗಿಸಬೇಕು ಎಂದು ನಾವು ಹೇಳಲು ಹೊರಟಿರುವುದಾಗಿ ದೇವುಡು ಮುನ್ನುಡಿಯಲ್ಲೇ ಹೇಳಿದ್ದಾರೆ. ಇವರ ಮುಂದಿನ ಕಾದಂಬರಿಗಳಲ್ಲೂ ದೇವುಡು ಕಾಮಜೀವನದ ಸಮಸ್ಯೆಯನ್ನು ಎತ್ತಿಕೊಂಡರು. 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', 'ಮಹಾದರ್ಶನ' ಅವರ ಬೃಹತ್ ಕಾದಂಬರಿಗಳು. ನಮ್ಮಿಂದ ಬಹುದೂರವಾದ ಪೌರಾಣಿಕ ಯುಗವನ್ನು ವ್ಯಕ್ತಿಗಳನ್ನು ಸೃಷ್ಟಿಸುವುದರಲ್ಲಿ ಬೆರಗುಗೊಳಿಸುವ ಪ್ರತಿಭೆ ಇವರದು. ವಿಶ್ವಾಮಿತ್ರ, ನಹುಷ, ಯಾಜ್ಞವಲ್ಕ್ಯ, ಗಾರ್ಗಿ ಇಂತಹ ದೈತ್ಯ ವ್ಯಕ್ತಿತ್ವದ ಸ್ತ್ರೀ ಪುರುಷರು ಇಲ್ಲಿ ಜೀವತಾಳುತ್ತಾರೆ.

ಕುವೆಂಪುರವರು 'ಕಾನೂರ ಸುಬ್ಬಮ್ಮ ಹೆಗ್ಗಡಿತಿ'ಮತ್ತು 'ಮಲೆಗಳಲ್ಲಿ ಮದುಮಗಳು' ಕೃತಿಗಳ ಮೂಲಕ ಕಾದಂಬರಿ ಲೋಕಕ್ಕೆ ಸುಪರಿಚಿತರು. ಮೊದಲ ಕಾದಂಬರಿಯಲ್ಲಿ ಕರ್ನಾಟಕದ ತೀರ್ಥಹಳ್ಳಿ ಪ್ರಾಂತದ ಹಳ್ಳಿಗಾಡಿನ ಜೀವನದ ಆವರಣದಲ್ಲಿ ಒಂದು ಸೂಕ್ಷ್ಮ ಚೇತನ ಅರಳುವುದನ್ನು ಕಾದಂಬರಿಕಾರರು 'ಕಾನೂರ ಸುಬ್ಬಮ್ಮ ಹೆಗ್ಗಡಿತಿ' ಯಲ್ಲಿ ಚಿತ್ರಿಸಿರುತ್ತಾರೆ. ಅವನೇ ಹೂವಯ್ಯ.

ಮನುಷ್ಯ–ನಿಸರ್ಗ ಇವುಗಳ ಜೀವನಗಳು ಹೆಣೆದುಕೊಂಡಿರುವುದೂ ಇಲ್ಲಿ ಅನುಭವಕ್ಕೆ ಬರುತ್ತದೆ. ಅತಿ ಆದರ್ಶ, ಅತಿಭಾವುಕತೆ ಬೆರೆತು ಪಾತ್ರ ಜೀವಂತವಾಗಿದೆ. ಆದರ್ಶದ ಚಿತ್ರವಾಗಿ ಉಳಿಯುತ್ತದೆ. ಭಾಷೆ ಕನ್ನಡದಿಂದ ಸಂಸ್ಕೃತದೆಡೆಗೆ ಒಲಿದಿದೆ. ಮಲೆಗಳಲ್ಲಿ ಮದುಮಗಳುವಿನಲ್ಲಿ ಸ್ತ್ರೀ ಪುರುಷರ ಜೀವನ, ಬಾಂಧವ್ಯಗಳಿವೆ. ಮಲೆನಾಡು ಮತ್ತೆ ಜೀವಂತವಾಗಿದೆ.

ಇದೇ ಚೌಕಟ್ಟಿನಲ್ಲಿ ಇದೇ ಮನೋಧರ್ಮದಿಂದ ಬರೆದ ಕೆಲವು ಕಾದಂಬರಿಕಾರರಲ್ಲಿ ಒಬ್ಬರು ವಿ.ಸೀ.ಮಧ್ಯಮ ವರ್ಗವನ್ನು ಮಾತ್ರ ಕುರಿತಲ್ಲದೆ 'ಮಾವನ ಮಗಳು'ನಂತಹ ಕಾದಂಬರಿಯಲ್ಲಿ ಅಸ್ಪೃಶ್ಯತೆಯ ಸಮಸ್ಯೆಯನ್ನು ಬರೆದರು. ಇವರ ಗದ್ಯ ಚಿತ್ರಮಯ.

ರಂ.ಶ್ರೀ. ಮುಗುಳಿಯವರ ಕಾದಂಬರಿಗಳಲ್ಲಿ ಆದರ್ಶತ್ವ ಎದ್ದುಕಾಣುತ್ತದೆ. ಆದರ್ಶವಾದಿತ್ವ ಅನುಕಂಪ ಬೆರೆತ ಕಾದಂಬರಿಗಳನ್ನು ಎಸ್.ಅನಂತ ನಾರಾಯಣ, ವ್ಯಾಸರಾಯ ಬಲ್ಲಾಳ, ಚದುರಂಗ ಮುಂತಾದವರು ರಚಿಸಿದರು.

ವ್ಯಾಸರಾಯ ಬಲ್ಲಾಳರು ನಗರ ಜೀವನ, ಕಾರ್ಮಿಕರ ಜೀವನ, ಪತ್ರಿಕೋದ್ಯಮಿಯ ಜೀವನ, ವ್ಯಕ್ತಿ ಜೀವನಗಳನ್ನು ಕಾದಂಬರಿಗಳಲ್ಲಿ ಮೂಡಿಸಿದರು.

ಅನಂತ ನಾರಾಯಣರ 'ಅತ್ತಿಗೆ', ಅಣ್ಣಾರಾಯರ 'ನಿಸರ್ಗ', ಚದುರಂಗರ 'ಸರ್ವಮಂಗಳ', ವರಗಿರಿಯವರ 'ಸುಹಾಸಿನಿ', ಮುಂತಾದವೂ ಒಳ್ಳೆಯ ಕಾದಂಬರಿಗಳೇ.

ಹಾಸ್ಯ ವಿಡಂಬನೆಗಳೂ ಕನ್ನಡ ಕಾದಂಬರಿಯಲ್ಲಿ ತಲೆ ಹಾಕಿವೆ. ಎಂ.ಆರ್.ಶ್ರೀಯವರ 'ರಂಗಣ್ಣನ ಕನಸಿನ ದಿನಗಳು' ಕಸ್ತೂರಿಯವರ 'ಗಾಳಿಗೋಪುರ', 'ಚಕ್ರದೃಷ್ಟಿ', 'ಶಂಖವಾದ್ಯ', 'ಗೃಹದಾರಣ್ಯಕ' ಮೊದಲಾದವು ತೀಕ್ಷ್ಣ ವಿಡಂಬನೆಯ ಕಾದಂಬರಿಗಳಿಗೆ ಉದಾಹರಣೆಗಳು. ಕಾರಂತರ ದೇವದೂತರು,ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ, ಬೀಚಿಯವರ ಭಲೇಸೂಳೆ, ಸರಸ್ವತಿ ಸಂಹಾರಗಳನ್ನು ಇವುಗಳ ಜತೆಗೆ ಹೆಸರಿಸಬಹುದು.

ಅ.ನ.ಕೃ. 5ನೇ ದಶಕದಲ್ಲಿ ಪ್ರಗತಿಶೀಲದ ಹೆಸರಿನಲ್ಲಿ ಒಂದು ಪರಂಪರೆಯನ್ನೇ ಸೃಷ್ಟಿಸುವಷ್ಟು ಪ್ರಭಾವ ಬೀರಿದವರು. ಅ.ನ.ಕೃ.112 ಕಾದಂಬರಿಗಳನ್ನು ಬರೆದವರು. ಪ್ರಗತಿಶೀಲ ಚಳುವಳಿಯ ನಾಯಕರಾಗಿ ವಿಪುಲವಾಗಿ ಬರೆದರು. ಕಾದಂಬರಿಯ ಹರಹನ್ನು ವಿಸ್ತರಿಸಿದರು. ಕುಟುಂಬ ಜೀವನ, ಗ್ರಾಮ ಜೀವನ, ನಗರ ಜೀವನ ವೇಶ್ಯಾ ಜೀವನ,ಕಾರ್ಮಿಕರ ಜೀವನ, ಅಸ್ಪೃಶ್ಯತೆ,ಕಾಮಜೀವನ ಎಲ್ಲವನ್ನು ಕಾದಂಬರಿಯ ಪರಿಧಿಯಲ್ಲಿ ತರಲು ಪ್ರಯತ್ನಿಸಿದರು. ಕಾದಂಬರಿಯನ್ನು ಸಮಸ್ಯೆಗಳ ನಿರೂಪಣೆಗೂ ಸಾಮಾಜಿಕ ಕ್ರಾಂತಿಗೂ ಸಾಧನವನ್ನಾಗಿ ಬಳಸಲು ಪ್ರಯತ್ನಿಸಿದರು. ನಿರರ್ಗಳವಾದ ಲಲಿತವಾದ ಶೈಲಿ ಅವರದು. ಆಸಕ್ತಿ ಉಳಿಯುವಂತೆ ಕತೆ ಹೇಳಬಲ್ಲವರಾದ್ದರಿಂದ ಕತೆಯ ಅರ್ಥದತ್ತ ಗಮನ ಕಡಿಮೆಯಾಯಿತು. ಪಾತ್ರಗಳ ಮಾನಸಿಕ ಜೀವನ ಸ್ಫುಟವಾಗುವುದಿಲ್ಲ. ನಾಟಕೀಯತೆ ಹೆಚ್ಚಾಯಿತು. ವಸ್ತುವಿನ ಆಯ್ಕೆ, ನಿರೂಪಣೆಗಳಲ್ಲಿ ಸಂಕೋಚ ಬಿಡಿಸಿದರು. ಪಾತ್ರಗಳ ಪರ–ವಿರೋಧ ಧೋರಣೆಯನ್ನು ನಿರ್ಧರಿಸಿಕೊಂಡು ಪಾತ್ರಗಳನ್ನು ಕಾದಂಬರಿಕಾರರೇ ನಡೆಸುತ್ತಾರೆ ಎನ್ನುವಂತೆ ರೂಪಿಸಿದ್ದು ಅವರ ಕಾದಂಬರಿಗಳಲ್ಲಿ ದೋಷವಾಯಿತು. ನಗ್ನಸತ್ಯ, ಶನಿಸಂತಾನ,ಜೀವನಯಾತ್ರೆ, ಅಪರಂಜಿ, ಕಬ್ಬಿಣದ ಕಾಗೆ ಎಲ್ಲದರಲ್ಲೂ ಕಾಮದ ಸಮಸ್ಯೆ ವಸ್ತು. ಆದರೆ ಹೆಚ್ಚಿನವು ಪ್ರಗತಿಶೀಲ ಹಣೆ ಪಟ್ಟಿ ಕಟ್ಟಿಕೊಂಡರೂ ಪ್ರಗತಿಶೀಲವಲ್ಲ. ಕಾರಣವೇನೆಂದರೆ ಸಾಹಿತ್ಯದಲ್ಲಿ ಇಂತಹ ಸಮಸ್ಯೆಗಳನ್ನು ವಸ್ತುವನ್ನಾಗಿಸಿ ಸ್ವೀಕರಿಸಿದಾಗ ಪಾತ್ರಗಳ ವಿಷಯ ಹೇಳಿಕೆಗಳು ಸಾಲವು. ಪಾತ್ರಗಳ ಮನಸ್ಸನ್ನು ಒಳಹೊಕ್ಕು ಅವುಗಳ ಮನಸ್ಸಿನ ಒಳಗಿನ ವ್ಯಾಪಾರವನ್ನು ಕಂಡುಕೊಂಡು ಅವುಗಳ ಜೀವನಾನುಭವವನ್ನು ಭಾಷೆಯಲ್ಲಿ ಹಿಡಿದಿಡಬೇಕಾಗುತ್ತದೆ. ಇದನ್ನು ಅ.ನ.ಕೃ ಮಾಡಲಾರದೆ ಹೋದರು. ಆದರೆ ಅ.ನ.ಕೃ ಕಾದಂಬರಿಯ ದಿಗಂತವನ್ನು ವಿಸ್ತರಿಸಿದರು. ಹೊಸ ಹೊಸ ವಸ್ತುಗಳನ್ನು ಆರಿಸಿ ನಿಸ್ಸಂಕೋಚವಾಗಿ ಬರೆಯುವುದನ್ನು ಸಾಧ್ಯ ಮಾಡಿಕೊಂಡರೆಂಬುದು ನಿಜ.

ಅ.ನ.ಕೃ.ರನ್ನು ಅನುಸರಿಸಿ ಬಸವರಾಜ ಕಟ್ಟೀಮನಿ, ತ.ರಾ.ಸುಬ್ಬರಾವ್, ನಿರಂಜನ,ಆರ್ಚಿಕ, ವೆಂಕಟೇಶ, ನಾಡಿಗೇರ ಕೃಷ್ಣರಾಯ, ಕುಮಾರ ವೆಂಕಣ್ಣ ಇವರೆಲ್ಲಾ ಪ್ರಗತಿಶೀಲ ಮಾರ್ಗದಲ್ಲಿ ಸಾಮಾಜಿಕ ಕಾದಂಬರಿಗಳೆನಿಸಿಕೊಳ್ಳುವ ಕೆಲವು ಕೃತಿಗಳನ್ನು ಬರೆದರು. ಜೀವನ ಆದಿ–ಮಧ್ಯ–ಅಂತ್ಯವಿಲ್ಲದ ಪ್ರವಾಹ. ಕಾದಂಬರಿ ಅದನ್ನು ಪ್ರತಿಬಿಂಬಿಸಿದರೆ ಸಾಕು ಎಂಬ ದೃಷ್ಟಿಯಿಂದ ಬರೆದರು.

ತ.ರಾ.ಸು.ರವರು ಕಲೆಗಾರಿಕೆಯಿಂದ ಚಿತ್ರಮಯವಾದ ಭಾಷೆಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವವರು. ಇವರಲ್ಲಿ ಭಾವುಕತೆಯೂ ಇದೆ. ಸಣ್ಣ ಅಂಗಡಿಯ ಮಾಲೀಕ, ಕೂಲಿಯವರು, ಅಚ್ಚು ಕೂಟದ ಕೆಲಸಗಾರ, ಪತ್ರಿಕೋದ್ಯಮಿ ಮುಂತಾದವರ ಬಾಳನ್ನಾದರೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲರು. ಅವರ ಹಂಸಗೀತೆ, ಮುಂಜಾವಿನಿಂದ ಮುಂಜಾವು, ಪುರುಷಾವತಾರ ಉತ್ತಮ ಕಾದಂಬರಿಗಳು.

ಬಸವರಾಜ ಕಟ್ಟೀಮನಿವರಲ್ಲಿ ತ.ರಾ.ಸು ಅವರ ಚಿತ್ರಗಾರಿಕೆ ಇಲ್ಲ. ಸೂಕ್ಷ್ಮತೆ ಇಲ್ಲ. ಮಠಗಳಲ್ಲಿ,ಕಾರ್ಖಾನೆಗಳಲ್ಲಿ, ಧರ್ಮಸಂಸ್ಥೆಗಳಲ್ಲಿ, ನಡೆಯುವ ಅನ್ಯಾಯವನ್ನು ಕಂಡು ರೊಚ್ಚಿಗೆದ್ದು ನಿಷ್ಠುರವಾಗಿ ಬರೆದರು. ಹೊಸ ಸಾಮಗ್ರಿಗಳನ್ನು ತಂದುಕೊಟ್ಟರು. ಮನುಷ್ಯ ಸ್ವಭಾವದ ಸಂಕೀರ್ಣತೆಯನ್ನು ಗುರುತಿಸಿದರೂ ಮೋಹದ ಬಲೆಯಲ್ಲಿ, ಜರತಾರಿಯ ಜಗದ್ಗುರು, ಜ್ವಾಲಾಮುಖಿಯ ಮೇಲೆ, ನಾನೂ ಪೋಲೀಸಾಗಿದ್ದೆ,ಖಾನಾರಳಿಯ ನೀಲಾ ಇವರ ಉತ್ತಮ ಕಾದಂಬರಿಗಳು.

ನಿರಂಜನರಲ್ಲಿ, ಕಟ್ಟೀಮನಿಯವರಲ್ಲಿ ಕಾಣದ ಸಂಯಮ ಇದೆ. ನಗರದ ಬಡವರು, ಕೆಳ ಮಧ್ಯಮವರ್ಗದವರು ಇವರ ಜೀವನವನ್ನು ಅನುಕಂಪದಿಂದ ಚಿತ್ರಿಸಿದರು. ಅವರ ಚಿರಸ್ಮರಣೆ ಉತ್ತಮ ಕಾದಂಬರಿ. 1941ರಲ್ಲಿ ಕಯ್ಯೂರಿನಲ್ಲಿ ನಡೆದ ಘಟನೆಗಳ ಆಧಾರದಿಂದ ರಚಿತವಾದ ಕಾದಂಬರಿ. ರೈತ ಸಂಘಟನೆಗಾಗಿ ದುಡಿದವರನ್ನು ಸರ್ಕಾರವೂ, ಜಮೀನ್ದಾರರೂ ಅವರ ಕಡೆಯವರೂ ತುಳಿದುದು, ನಾಲ್ವರಿಗೆ ಮರಣದಂಡನೆಯಾದುದು ಇದರ ಕತೆ. ಅವರ 'ರಂಗಮ್ಮನ ವಠಾರ', 'ಸ್ಮರಣೆಯೊಂದೇ ಸಾಲದೇ' ಉತ್ತಮ ಕೃತಿಗಳು.

ಹಾಸ್ಯ ಬರಹಗಾರ ಗೊರೂರರೂ ಇದೇ ಮಾರ್ಗದಲ್ಲಿ ಕಾದಂಬರಿ ಬರೆದಿದ್ದಾರೆ. ಅಣ್ಣಾರಾಯರ ನಿಸರ್ಗ, ರಾಷ್ಟ್ರ ಪುರುಷ, ಅಶೋಕ ಚಕ್ರ, ಆರ್ಚಿಕ ವೆಂಕಟೇಶರ ಅಸ್ಥಿಪಂಜರ ಇದೇ ಪಂಥಕ್ಕೆ ಸೇರುವಂತಹ ಕಾದಂಬರಿಗಳು.

ಒಟ್ಟಿನಲ್ಲಿ ಪ್ರಗತಿಶೀಲರು ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸುವಲ್ಲಿ ಉತ್ಸಾಹ ತೋರಿದರು.ಭಾಷೆಯ ಬಳಕೆಯಲ್ಲಿ ಸಂಯಮ ತೋರಲಿಲ್ಲ. ಮಾನವ ಸ್ವಭಾವದ ನಿರೂಪಣೆಯಲ್ಲಿ ಸಾಕಷ್ಟು ಸೂಕ್ಷ್ಮತೆ ಇರಲಿಲ್ಲ. ಆದರೆ ಇಲ್ಲಿನ ಜನತೆಯ ಜೀವನವನ್ನು ಚಿತ್ರಿಸಿದರು. ಗ್ರಾಮಜೀವನ ಮತ್ತು ಕಾರ್ಮಿಕ ವರ್ಗದ ಜೀವನವನ್ನು ಚಿತ್ರಿಸಿದರು. ಭಾಷೆಗೆ ಶಕ್ತಿಯನ್ನು ತಂದುಕೊಟ್ಟರು.

ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿ ಹೊಸ ಬಗೆಯ ಕಾದಂಬರಿಗಳನ್ನು ಬರೆದರು. ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು. ಕೆಲವರು ಧಾರ್ಮಿಕ ಇತಿಹಾಸದ ವ್ಯಕ್ತಿಗಳನ್ನು ಕುರಿತು ಬರೆದರು. ಸಾಮಾಜಿಕ ಕಾದಂಬರಿಗಳಲ್ಲಿ ಭಾರತೀಯ ಸಂಸ್ಕೃತಿಯ ಬೆಳಕನ್ನು ಕಾಣಿಸಿದರು. ಸ್ವತಂತ್ರ ಭಾರತದ ಸ್ಥಿತಿಯನ್ನು ವಿಶ್ಲೇಷಿಸಿ ಕಾದಂಬರಿ ಬರೆದರು. ಪ್ರಗತಿಶೀಲ ಕಾದಂಬರಿಕಾರರು ರಾಷ್ಟ್ರದ ಸ್ವಾತಂತ್ರ್ಯದ ಹೋರಾಟವನ್ನು ಅನೇಕ ಕಾದಂಬರಿಗಳ ಸಾಮಗ್ರಿಯನ್ನಾಗಿ ಬಳಸಿದರು. ಕನ್ನಡ ಕಾದಂಬರಿ ಬೆಳೆದುದೇ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ. ಶ್ರೀರಂಗರ ಪುರುಷಾರ್ಥ, ಚಕ್ರವ್ಯೂಹ, ಇನಾಂದಾರರ ಮೂರಾಬಟ್ಟೆ, ಕಟ್ಟೀಮನಿಯವರ 'ಸ್ವಾತಂತ್ರ್ಯದೆಡೆಗೆ', ತರಾಸುರವರ 'ರಕ್ತತರ್ಪಣ', ಗೊರೂರವರ 'ಮೆರವಣಿಗೆ', ಕಾರಂತರ 'ಔದಾರ್ಯದ ಉರುಳಲ್ಲಿ' ಇವು ಈ ಕಾಲದವುಗಳು.

ಗಳಗನಾಥ ಮತ್ತು ವೆಂಕಟಾಚಾರ್ಯರು ಐತಿಹಾಸಿಕ ಕಾದಂಬರಿಗಳನ್ನು ಕನ್ನಡಕ್ಕೆ ಇತ್ತರು. ಗಳಗನಾಥರ ಕುಮುದಿನಿ ಮೊದಲ ಐತಿಹಾಸಿಕ ಕಾದಂಬರಿ. ದೇವುಡು, ಅನಕೃ, ತರಾಸು, ಕಟ್ಟೀಮನಿ, ನಿರಂಜನ, ಶ್ರೀನಿವಾಸ, ಕೆ.ವಿಅಯ್ಯರ್ ಐತಿಹಾಸಿಕ ಕಾದಂಬರಿಗಳನ್ನು ಬರೆದವರಲ್ಲಿ ಕೆಲವರು. ಕನ್ನಡದ ಬಹುಸಂಖ್ಯೆಯ ಐತಿಹಾಸಿಕ ಕಾದಂಬರಿಗಳ ಉದ್ದೇಶ ಕನ್ನಡಿಗರ ಗತ ವೈಭವವನ್ನು ಪರಿಚಯ ಮಾಡಿಕೊಡುವುದೇ ಆಗಿದೆ.

ಇತರ ಕಾದಂಬರಿಕಾರರು ಕರ್ನಾಟಕದ ಗತವೈಭವವನ್ನು ಪುನರ್‌ಸೃಷ್ಟಿಸಲು ಉದ್ದೇಶಿಸಿದರೆ, ಮಾಸ್ತಿಯವರು 'ಚೆನ್ನ ಬಸವನಾಯಕ' ಮತ್ತು 'ಚಿಕವೀರ ರಾಜೇಂದ್ರ' ಗಳಲ್ಲಿ ಬಿದನೂರು ಮತ್ತು ಕೊಡಗುಗಳ ಭಾಗ್ಯ ಅಸ್ತಮಿಸುತ್ತಿರುವ ಕಾಲವನ್ನು ಆರಿಸಿಕೊಳ್ಳುತ್ತಾರೆ. ಇದರಿಂದ ಈ ಕಾದಂಬರಿಗಳು ವಿಶಿಷ್ಟವಾದವು.

35ನೇ ವಯಸ್ಸಿಗೆ ತೀರಿಕೊಂಡ ತ್ರಿವೇಣಿಯವರು ಕನ್ನಡ ಕಾದಂಬರಿ ಲೋಕದಲ್ಲಿ ಮನಃಶಾಸ್ತ್ರದ ತಿಳುವಳಿಕೆಯನ್ನು ಉದ್ದೇಶಪೂರ್ವಕವಾಗಿ ಬಳಸಲು ಪ್ರಯತ್ನಿಸಿದರು. ಸ್ತ್ರೀಯರು ಹೆಚ್ಚಾಗಿ ಬರೆಯದೇ ಇದ್ದ ಕಾಲದಲ್ಲಿ ಸುಮಾರು 20 ಕಾದಬಂರಿಗಳನ್ನು

ಬರೆದರು. ಮುಖ್ಯವಾಗಿ ಗಂಡು ಹೆಣ್ಣಿನ ಸಹಜೀವನ ಅವರ ಕಾದಂಬರಿಗಳ ವಸ್ತು, 'ಪುರುಷನ ಪ್ರೇಮ', 'ತಾಯ್ತನದ ಹಿಗ್ಗು'ಗಳನ್ನು ಹೆಣ್ಣು ಎಷ್ಟರ ಮಟ್ಟಿಗೆ ಬಯಸುತ್ತಾಳೆ ಎಂಬುದನ್ನು ಹೆಣ್ಣಿನ ದೃಷ್ಟಿಯಿಂದ ನಿರೂಪಿಸುತ್ತಾರೆ. ಅವರನ್ನನುಸರಿಸಿ ಹಲವಾರು ಮಹಿಳಾ ಲೇಖಕಿಯರು ಬಂದರು. ಸಾಮಾನ್ಯವಾಗಿ ಇವರಲ್ಲಿ ಕೌಟುಂಬಿಕ ಜೀವನವೇ ಕಥಾವಸ್ತು. ಒಳ್ಳೆಯ ಕತೆಗಾರ್ತಿಯರಲ್ಲಿ ಅನುಪಮಾ ನಿರಂಜನ, ಎಂ.ಕೆ.ಇಂದಿರಾ, ಹೆಚ್.ಎಸ್.ಪಾರ್ವತಿ ಮೊದಲಾದವರನ್ನು ಹೆಸರಿಸಬಹುದು.

**ನವ್ಯ :** ಶಾಂತಿನಾಥ ದೇಸಾಯರ 'ಮುಕ್ತಿ' ಕನ್ನಡದ ಮೊದಲ ನವ್ಯ ಕಾದಂಬರಿ. ಕೆ.ವಿ.ಅಯ್ಯರ 'ರೂಪದರ್ಶಿ', ಶಂಕರಮೊಕಾಶಿ ಪುಣೇಕರರ 'ಗಂಗವ್ವ' 'ಗಂಗಾಮಾಯಿ', ಬಹದ್ದೂರರ 'ಗ್ರಾಮಾಯಣ', ಶಾಂತಿನಾಥ ದೇಸಾಯಿಯವರ 'ಮುಕ್ತಿ', 'ವಿಕ್ಷೇಪ', ಯಶವಂತ ಚಿತ್ತಾಲರ 'ಮೂರು ದಾರಿಗಳು' ಲಂಕೇಶರ 'ಬಿರುಕು' ಮೊದಲಾದವು ಕೆಲವು ನವ್ಯ ಕಾದಂಬರಿಗಳು.

ಡಾ. ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ', 'ಭಾರತೀಪುರ' ಈ ನಿಟ್ಟಿನಲ್ಲಿ ಗಮನಿಸಬೇಕಾದವುಗಳು. ಕಲೆಯ ದೃಷ್ಟಿಯಿಂದ 'ಸಂಸ್ಕಾರ'ವನ್ನು ಮೀರಿಸುವ ಕಾದಂಬರಿಗಳು ಕನ್ನಡದಲ್ಲಿಲ್ಲ.

ಕುಸುಮಾಕರರ 'ಮುಗಿಯದ ಕತೆ' , 'ತೇಜಸ್ವಿಯವರ ಸ್ವರೂಪ', ರಾಮಾನುಜರವರ 'ಹಳದಿ ಮೀನು', ಗಿರಿಯವರ 'ಗತಿ–ಸ್ಥಿತಿ', ಆಲನ ಹಳ್ಳಿಯವರ 'ಕಾಡು', 'ಪರಸಂಗದ ಗೆಂಡೆತಿಮ್ಮ', ಬಿ.ವೈಕುಂಠ ರಾಜು ಅವರ 'ಅಂತ್ಯ', 'ಆಕ್ರಮಣ' ಒಳ್ಳೆಯ ಕಾದಂಬರಿಗಳು.

## ನವ್ಯೇತರರು

ಅಸಾಧಾರಣ ಜನಪ್ರಿಯತೆ ಗಳಿಸಿದ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಕಾದಂಬರಿಗಳಲ್ಲಿ ಬಾಳಿನಲ್ಲಿ ಆಳವಾದ ಶ್ರದ್ಧೆ ಮತ್ತು ಅನುಭವದ ಗಟ್ಟಿತನವಿದೆ. (ಕಾರಂತರಂತೆ) ಅವರ ವಂಶವೃಕ್ಷ ದೂರಸರಿದರು, ಧರ್ಮಶ್ರೀ ಗೃಹಭಂಗ ಉತ್ತಮ ಕಾದಂಬರಿಗಳು. ಭೈರಪ್ಪರ ಕಾದಂಬರಿಗಳ ಪಾತ್ರಗಳು ದುರ್ಬಲವಲ್ಲ. ಜೀವನ ಶ್ರದ್ಧೆ, ಮನುಷ್ಯನ ವ್ಯಕ್ತಿತ್ವದಲ್ಲಿ ನಂಬಿಕೆ, ವಿಶಾಲವಾದ ಗಟ್ಟಿಯಾದ ಅನುಭವ ಇವು ಭೈರಪ್ಪರ ಕಾದಂಬರಿಗಳಿಗೆ ಸತ್ವ ನೀಡುತ್ತವೆ.

ನವ್ಯೇತರರಲ್ಲಿ ಇತರರು– ಶಿವರಾಮ ಕಾರಂತರು, ಸೂರ್ಯನಾರಾಯಣ ಚಡಗ, ಕಾಮರೂಪಿ ಮೊದಲಾದವರು. ಇನಾಂದಾರರ ಮಂಜು ಮುಸುಕಿದ ದಾರಿ ನವಿಲು ನೌಕೆ ಚಡಗರ ಮನೆತನ ವಿಶುಕುಮಾರರ ಕರಾವಳಿ ಮದರ್ ಅರವಿಂದ ನಾಡ ಕರ್ಣಿಯವರ ಮೋಹಿತರು ಕಾಮರೂಪಿಯವರ ಕುದುರೆ ಮೊಟ್ಟೆ ಒಳ್ಳೆಯ ಕಾದಂಬರಿಗಳು.

1920ರಿಂದ 1945ರ ಅವಧಿಯಲ್ಲಿ 80 ಕಾದಂಬರಿಗಳು ಬಂದಿದೆ. 1955–65ರಲ್ಲಿ 500 ಕ್ಕೂ ಹೆಚ್ಚು ಕಾದಂಬರಿಗಳು ಬಂದಿವೆ. 1973ರ ಸಾಹಿತ್ಯ ವಾರ್ಷಿಕದಲ್ಲಿ 97 ಸ್ವತಂತ್ರ ಕಾದಂಬರಿಗಳು ಬಂದಿವೆ ಎಂದು ಉಲ್ಲೇಖಿಸಲಾಗಿದೆ.

ಕಳೆದ ದಶಕದಲ್ಲಿ ಪ್ರಬಲವಾದ ಒಂದು ಪಂಥ **ಬಂಡಾಯ ಮತ್ತು ದಲಿತ** ಇದೂ ಪ್ರಗತಿಶೀಲರಂತೆ ಒಂದು ಸಾಮಾಜಿಕ ಚಳುವಳಿಯ ಭಾಗವಾಗಿ ಬಂದ ಸಾಹಿತ್ಯದ ಚಳುವಳಿ. ಭೈರಪ್ಪರ 'ಪರ್ವ', 'ಆವೇಗ', ದೇವನೂರರ 'ಕುಸುಮಬಾಲೆ', 'ಒಡಲಾಳ ಬಲ್ಲಾಳರ 'ಬಂಡಾಯ' ತೇಜಸ್ವಿಯವರ 'ಚಿದಂಬರ ರಹಸ್ಯ', 'ಕರ್ವಾಲೋ' ಇವುಗಳು ಅಲ್ಪಮಟ್ಟಿಗೆ ಈ ಚಳುವಳಿಯ ಭಾಗವಾಗಿ ಬಂದವುಗಳು ಎನ್ನಬಹುದು.

### ಐತಿಹಾಸಿಕ ಕಾದಂಬರಿ

- ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ ಕಾದಂಬರಿ
- ಐತಿಹಾಸಿಕ ಘಟನೆಗಳಿಗೆ ರೆಕ್ಕೆ ಪುಕ್ಕ ಸೇರಿಸಿ ಆವಿಷ್ಕಾರ
- ಐತಿಹಾಸಿಕ ವ್ಯಕ್ತಿಗಳೊಂದಿಗೆ ಇತರ ಕಥಾಪಾತ್ರಗಳು
- ಓದುಗರಲ್ಲಿ ದೇಶಪ್ರೇಮವನ್ನು ಮೂಡಿಸುತ್ತದೆ.

- 1892ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ ಸೂರ್ಯಕಾಂತ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ.
- ಕನ್ನಡದಲ್ಲಿ ಹಲವಾರು ಐತಿಹಾಸಿಕ ಕಾದಂಬರಿಗಳು ರಚನೆಯಾಗಿವೆ.
- ಉದಾ: ಮಾಸ್ತಿಯವರ 'ಚಿಕವೀರ ರಾಜೇಂದ್ರ', ತರಾಸುರವರ 'ಕಂಬನಿಯ ಕುಯಿಲು', 'ರಕ್ತರಾತ್ರಿ', 'ತಿರುಗುಬಾಣ', 'ದುರ್ಗಾಸ್ಥಮಾನ', ದೇವುಡು ಅವರ 'ಮಯೂರ', ಕೆ.ವಿ.ಅಯ್ಯರ್‌ರವರ 'ಶಾಂತ' ಇತ್ಯಾದಿ..

**ಸಾಮಾಜಿಕ ಕಾದಂಬರಿ**

- ಸಾಮಾಜಿಕ ವಿಷಯಗಳು ವಸ್ತುವಾಗಿರುವ ಕಾದಂಬರಿಗಳು.
- ಕನ್ನಡದ ಬಹುಪಾಲು ಕಾದಂಬರಿಗಳು ಸಾಮಾಜಿಕ ಕಾದಂಬರಿಗಳಾಗಿವೆ.
- ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ.
- ಅತೀ ಹೆಚ್ಚು ಪ್ರಚಾರ ಪಡೆದ ಕಾದಂಬರಿ ಪ್ರಕಾರ.

**ಪತ್ತೇದಾರಿ ಕಾದಂಬರಿ**

- ಅಪರಾಧ ಪತ್ತೆ ವಿಷಯವಾಗಿರುವ ಕಾದಂಬರಿ
- ಮನುಷ್ಯನ ಸಹಜವಾದ ಸಾಹಸ ಪ್ರವೃತ್ತಿಯ ಚಿತ್ರಣವಿರುತ್ತದೆ.
- ವಾಸ್ತವಿಕ ಬದುಕಿನೊಂದಿಗೆ ಈ ಕತೆಗಳಿಗೆ ಸಂಬಂಧವಿಲ್ಲ.
- 'ಚೋರಗ್ರಹಣ ತಂತ್ರ' ಮೊದಲ ಪತ್ತೇದಾರಿ ಕಾದಂಬರಿ.
- ಕೆಲವು ಪತ್ತೇದಾರಿ ಕಾದಂಬರಿಗಳು : ಟಿ.ಕೆ. ರಾಮರಾವ್‌ರವರ 'ದಿಬ್ಬದ ಬಂಗಲೆ', ನಿಗೂಢರು', 'ಸೇಡಿನ ಹಕ್ಕಿ', ಯಂಡಮಾರಿಯವರ 'ತುಳಸೀದಳ', 'ಅಷ್ಟಾವಕ್ರ', ನರಸಿಂಹಯ್ಯನವರ 'ಕೊಲೆಪಾತಕಿ ನಾನಲ್ಲ', ಸುದರ್ಶನ ದೇಸಾಯಿಯವರ 'ಕೆಂಪು ಜೇಡ', 'ಕೆರಳಿದ ಸರ್ಪ', 'ಬಣ್ಣದ ಬೆಕ್ಕು' ಇತ್ಯಾದಿ.......

**ಚಟುವಟಿಕೆಗಳು**

- ಕಾದಂಬರಿ ಸಾಹಿತ್ಯ ಎಂಬ ವಿಷಯದ ವಿಚಾರಗೋಷ್ಠಿ (ಕನ್ನಡ ಕಾದಂರಿಗಳ ಚರಿತ್ರೆ, ವಿವಿಧ ಕಾಲಘಟ್ಟಗಳ ಗಮನಾರ್ಹ ಕಾದಂಬರಿಗಳು, ಅವುಗಳ ವಿಶೇಷತೆಗಳು – ಇತ್ಯಾದಿ ಅಂಶಗಳಿರಬೇಕು)
- ಪ್ರತಿ ಅಧ್ಯಾಪಕ ವಿದ್ಯಾರ್ಥಿಗಳು ವಿವಿಧ ಕಾಲಘಟ್ಟಗಳ ಗಮನಾರ್ಹ ಕಾದಂಬರಿಗಳಲ್ಲಿ ಒಂದನ್ನು ಆಯ್ಕೆ ಮಾಡಿ ಓದಿನ ಟಿಪ್ಪಣಿ, ಆಸ್ವಾದನ ಟಿಪ್ಪಣಿ ತಯಾರಿಸುವುದು (ಕಾದಂಬರಿಯ ತಂತ್ರ, ರೀತಿ, ಭಾಷೆ, ವಸ್ತು, ಕಥಾಪಾತ್ರಗಳ ವಿಶೇಷತೆ ಇತ್ಯಾದಿ ಅಂಶಗಳು ಆಸ್ವಾದನ ಟಿಪ್ಪಣಿಯಲ್ಲಿರಬೇಕು.)
- ಎಲ್ಲ ಆಸ್ವಾದನ ಟಿಪ್ಪಣಿಗಳನ್ನು ಒಟ್ಟು ಸೇರಿಸಿ ಸಂಚಿಕೆ ತಯಾರಿಸುವುದು.
- ಕಾದಂಬರಿಕಾರರ ಹೆಸರು ಮತ್ತು ಕೃತಿಯನ್ನೊಳಗೊಂಡು ಒಂದು ಪಟ್ಟಿ ತಯಾರಿಸುವುದು.

## ಸಾಹಿತ್ಯ ವಿಮರ್ಶೆ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಾಹಿತ್ಯ ವಿಮರ್ಶೆ ಯಾವಾಗ ಅವತರಿಸಿತು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಹೊಸ ಉತ್ಸಾಹ ಚಿಮ್ಮಿ ಹೊಸ ಸಾಹಿತ್ಯದ ಸೃಷ್ಟಿಯಾದಾಗ ಸಾಹಿತ್ಯ ಸೃಷ್ಟಿಯಲ್ಲಿ ನಿರತರಾದವರೇ ಸಾಹಿತ್ಯದ ವಿಷಯ ಮಾತನಾಡಬೇಕಾಯಿತು, ಬರೆಯಬೇಕಾಯಿತು. ಆಕಾಶವಾಣಿ ಇಲ್ಲದ, ವೃತ್ತಪತ್ರಿಕೆಗಳು ಓದುಬರಹ ಬಲ್ಲ ಕೆಲವರಿಗೆ ಸೀಮಿತವಾಗಿದ್ದ ಕಾಲದಲ್ಲಿ ಬಿ.ಎಂ.ಶ್ರೀ, ಮಾಸ್ತಿ, ಡಿ.ವಿ.ಜಿ, ಬೇಂದ್ರೆ ಮೊದಲಾದವರು ನಾಡನ್ನು ಸಂಚರಿಸಿ ಸಾಹಿತ್ಯದ ವಿಷಯ ಮಾತನಾಡಿದ್ದೇ

ಹೆಚ್ಚು. ಹಿಂದಿನ ಮೈಸೂರಿನಲ್ಲಿ 'ಪ್ರಬುದ್ಧ ಕರ್ನಾಟಕ', ಉತ್ತರ ಕರ್ನಾಟಕದಲ್ಲಿ 'ಜಯಕರ್ನಾಟಕ' ಈ ಎರಡು ನಿಯತಕಾಲಿಕಗಳು ಸಾಹಿತ್ಯವನ್ನು ಕುರಿತ ಲೇಖನಗಳಿಗೆ ಮತ್ತು ಸಾಹಿತ್ಯ ಪ್ರಕಟಣೆಗಳ ವಿಮರ್ಶೆಗೆ ಅವಕಾಶ ಮಾಡಿಕೊಟ್ಟು ಮಾಡಿದ ಉಪಕಾರ ಅಷ್ಟಿಷ್ಟಲ್ಲ.

ಸಾಹಿತ್ಯವನ್ನು ಕುರಿತ ದೀರ್ಘ ವಿವರಣೆ ಮೊದಲು ಕಂಡದ್ದು ಡಿ.ವಿ.ಜಿ. ಅವರ ಸಾಹಿತ್ಯ ಮತ್ತು ಜನಜೀವನ ಉಪನ್ಯಾಸದಲ್ಲಿ ಎಂದು ಕಾಣುತ್ತದೆ. ಇದು ಅವರು 1920ರ ಸೆಪ್ಟೆಂಬರಿನಲ್ಲಿ ಮಾಡಿದ ಭಾಷಣ. (ಪ್ರಬುದ್ಧ ಕರ್ನಾಟಕದ ಮೂರನೆಯ ಸಂಪುಟದ ಮೊದಲನೆಯ ಸಂಚಿಕೆಯಲ್ಲಿ ಪ್ರಕಟವಾಯಿತು). ಎ.ಆರ್.ಕೃಷ್ಣಶಾಸ್ತ್ರಿ, ಎಂ.ಆರ್.ಶ್ರೀನಿವಾಸಮೂರ್ತಿ ಮೊದಲಾದವರು ಕೃತಿವಿಮರ್ಶೆ, ಕವಿವಿಮರ್ಶೆಗಳ ಲೇಖನಗಳಲ್ಲಿ ಸಾಹಿತ್ಯದ ಸ್ವರೂಪ, ಮೌಲ್ಯನಿರ್ಣಯ ಇವನ್ನು ಕುರಿತ ಪ್ರಶ್ನೆಗಳನ್ನು ಎತ್ತಿದರು. ಮಾಸ್ತಿಯವರ 'ಸಾಹಿತ್ಯ ಪ್ರಬಂಧ' ೧೯೨೨ರಲ್ಲಿ, 'ಸಾಹಿತ್ಯ ವಿಮರ್ಶೆಯ ಕಾರ್ಯ' ೧೯೨೪ರಲ್ಲಿ, ಬೇಂದ್ರೆಯವರ 'ನಮಗೆ ಬೇಕಾದ ಕಾವ್ಯ' ೧೯೨೬ರಲ್ಲಿ ಪ್ರಕಟವಾದವು. ಈ ಹೊತ್ತಿಗೆ ಸಾಹಿತ್ಯದ ಗಂಭೀರ ಅಧ್ಯಯನ ಪ್ರಾರಂಭವಾಯಿತು ಎನ್ನಬೇಕು.

ಪ್ರಾರಂಭದ ವರ್ಷಗಳ ವಿಮರ್ಶಕರು ಭಾರತೀಯ ಕಾವ್ಯ ಮೀಮಾಂಸೆಯನ್ನು ಕಾವ್ಯದ ಸ್ವರೂಪ, ಅದು ಮನಸ್ಸಿನ ಮೇಲೆ ಪರಿಣಾಮ ಮಾಡುವ ರೀತಿ, ಕಾವ್ಯದಲ್ಲಿ ಔಚಿತ್ಯ ಇಂತಹ ವಿಷಯಗಳನ್ನು ಕುರಿತ ಜಿಜ್ಞಾಸೆಯನ್ನು ಅಭ್ಯಾಸ ಮಾಡಿದ್ದವರು. ಜೊತೆಗೇ ಇಂಗ್ಲಿಷ್ ಭಾಷೆಯಲ್ಲಿನ ಸಾಹಿತ್ಯ ವಿಮರ್ಶೆಯನ್ನು ಓದಿದ್ದವರು. ಮುಖ್ಯವಾಗಿ ಇವರು ಭಾರತೀಯ ಕಾವ್ಯ ಮೀಮಾಂಸೆಯನ್ನು ಅನುಸರಿಸುತ್ತಾರೆ. ಇದಕ್ಕೆ ಪೂರಕವಾಗಿ ಷೆಲ್ಲಿ, ಮ್ಯಾಥ್ಯೂ ಆರ್ನಲ್ಡ್, ಎ.ಸಿ.ಬ್ರ್ಯಾಡ್ಲಿ ಮೊದಲಾದವರ ಪ್ರತಿಪಾದನೆಗಳನ್ನು ಬಳಸುತ್ತಾರೆ. ಇವರಲ್ಲಿ ಹೊಸ ತತ್ವಗಳನ್ನು ಯಾರೂ ಪ್ರತಿಪಾದಿಸಲಿಲ್ಲ. ಹೊಸ ದೃಷ್ಟಿಯನ್ನು ಬಳಸಲಿಲ್ಲ. ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು – ಬಹುಮಟ್ಟಿಗೆ ಗ್ರಂಥಗಳಲ್ಲಿದ್ದು ಜನರಿಗೆ ಸುಲಭವಾಗಿ ದಕ್ಕದಿದ್ದವು– ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿ, ಸಾಹಿತ್ಯವನ್ನು ಕುರಿತು ಗಂಭೀರ ಚಿಂತನೆಯನ್ನು ಪ್ರಾರಂಭಿಸಿ ಅದಕ್ಕೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿದ ಕೀರ್ತಿ ಇವರದು. ಮಾಸ್ತಿ, ಆನಂದಕಂದ, ಬಿ.ಎಸ್.ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಲಸಂಗಿಯ ಚನ್ನಮಲ್ಲಪ್ಪ (ಮಧುರಚೆನ್ನ) ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಎಲ್.ಗುಂಡಪ್ಪ, ಮತಿಘಟ್ಟ ಕೃಷ್ಣಮೂರ್ತಿ, ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದರು. ಬಿ.ಎಂ.ಶ್ರೀ ಅವರಿಗೆ ಅರ್ಪಿಸಿದ 'ಸಂಭಾವನೆ' ಗ್ರಂಥ ಹಿರಿಯ ಸಾಹಿತಿಗಳಿಗೆ ಸಂಭಾವನಾ ಗ್ರಂಥವನ್ನು ಅರ್ಪಿಸುವ ಸಂಪ್ರದಾಯವನ್ನು ಪ್ರಾರಂಭಿಸಿತು. ಸಮಕಾಲೀನ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಲು ಪ್ರಚೋದನೆ ನೀಡಿತು. ಎಸ್.ವಿ.ರಂಗಣ್ಣನವರು ಶೈಲಿಯನ್ನು ಕುರಿತು ವಿಶೇಷ ಅಧ್ಯಯನ ಮಾಡಿದರು. ಡಿ.ವಿ.ಜಿಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಮಾಸ್ತಿಯವರ 'ಆದಿಕವಿ ವಾಲ್ಮೀಕಿ' ಬೇಂದ್ರೆಯವರ 'ಸಾಹಿತ್ಯ ವಿಮರ್ಶೆ' 'ಸಾಹಿತ್ಯ –ಸಂಶೋಧನೆ' ವಿ.ಸಿ.ಅವರ 'ಈಗಿನ ಕವಿ ಕಾವ್ಯದೃಷ್ಟಿ', ಕುವೆಂಪು ಅವರ 'ಸಾಹಿತ್ಯ ಪ್ರಚಾರ', 'ಕಾವ್ಯವಿಹಾರ', 'ತಪೋನಂದನ', 'ವಿಭೂತಿಪೂಜೆ', 'ದ್ರೌಪದಿಯ ಶ್ರೀಮುಡಿ', ಗೋಕಾಕರ 'ಕವಿ ಕಾವ್ಯ ಮಹೋನ್ನತಿ', ತೀ.ನಂ.ಶ್ರೀ ಅವರ 'ಕಾವ್ಯ ಸಮೀಕ್ಷೆ', 'ಸಮಾಲೋಕನ', ರಂಗಣ್ಣನವರ 'ಶೈಲಿ' ಇವು ನವೋದಯ ಕಾಲದ ವಿಮರ್ಶೆಯ ಪ್ರಾತಿನಿಧಿಕ ಕೃತಿಗಳೆನ್ನಬಹುದು.

ನವ್ಯ ವಿಮರ್ಶೆಯು ಗೋಪಾಲಕೃಷ್ಣ ಅಡಿಗರು 'ನಡೆದುಬಂದ ದಾರಿ' ಸಂಗ್ರಹಕ್ಕೆ ಬರೆದ ಮುನ್ನುಡಿಯಿಂದ ಪ್ರಾರಂಭವಾಯಿತು ಎನ್ನಬಹುದು. ಈ ವಿಮರ್ಶೆ ಬೆಳೆಯಲು ಸಾಕ್ಷಿ ಮತ್ತು ಸಂಕ್ರಮಣ ತುಂಬಾ ಸಹಾಯಕವಾದವು. ಒಂದು ಕೃತಿಯನ್ನು ಕುರಿತು ತಾತ್ವಿಕವಾಗಿ ಚರ್ಚೆಯಾಗುವುದು ಸಾಧ್ಯವಾಯಿತು. ನಾಡಿನ ಮೂಲೆ ಮೂಲೆಗಳಲ್ಲಿದ್ದ ಲೇಖಕರು ವಿಚಾರ ವಿನಿಮಯ ಮಾಡುವುದು ಸಾಧ್ಯವಾಯಿತು.

ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಎಂ.ಜಿ. ಕೃಷ್ಣಮೂರ್ತಿ, ಗಿರಡ್ಡಿ ಗೋವಿಂದರಾಜ ಮೊದಲಾದವರು ನವ್ಯ ವಿಮರ್ಶೆಯ ಮೊದಲ ಪೀಳಿಗೆಯವರು. ಈಚೆಗಿನ ವರ್ಷಗಳಲ್ಲಿ ಜಿ.ಎಚ್. ನಾಯಕ, ಜಿ.ಎನ್.ರಂಗನಾಥರಾವ್, ಬರಗೂರು ರಾಮಚಂದ್ರಪ್ಪ, ರಾಮಚಂದ್ರದೇವ ಮೊದಲಾದವರು ಗಮನಾರ್ಹವಾದ ಲೇಖನಗಳನ್ನು ಬರೆದಿದ್ದಾರೆ.

ನವ್ಯ ವಿಮರ್ಶೆ ಪಾಶ್ಚಾತ್ಯ ವಿಮರ್ಶೆಯಿಂದ ಬಹಳ ಪ್ರಭಾವಿತವಾಗಿದೆ. ಮುಖ್ಯವಾಗಿ 'ನ್ಯೂ ಕ್ರಿಟಿಸಿಸಂ' ಎಂದು ಪ್ರಸಿದ್ಧವಾದ ವಿಮರ್ಶಾ ಪಂಥದಿಂದ ಪ್ರಭಾವಿತವಾಗಿದೆ. ಸಾಹಿತ್ಯ ಕೃತಿಯ ಸಾವಯವ ಸ್ವರೂಪ, ಭಾಷೆಯ ಪ್ರಾಧಾನ್ಯ ಇವನ್ನು ಕುರಿತ ಕಲ್ಪನೆಗಳು

ಅಲ್ಲಿಂದ ಬಂದವು. ನವ್ಯ ವಿಮರ್ಶೆಯನ್ನು ಓದುವಾಗ ಮತ್ತೆ ಮತ್ತೆ ಡಿ.ಎಚ್.ಲಾರೆನ್ಸ್, ಎಫ್.ಆರ್.ಲೀವಿಸ್, ಕ್ಲಿಯಾಂತ್ ಬ್ರುಕ್ಸ್, ಐ.ಎ.ರಿಚರ್ಡ್ಸ್, ಮುರ್ರೆ ಕ್ರೀಗರ್ ಮೊದಲಾದವರ ಧ್ವನಿಗಳು ಕೇಳುತ್ತವೆ. ಉದಾಹರಣೆ : 'ಲಂಕೇಶರ ನವ್ಯ ಕಥೆ ಒಂದು ಸನ್ನಿವೇಶಕ್ಕೆ ಸಾಧ್ಯವಾದ ಪ್ರತಿಕ್ರಿಯೆಗಳನ್ನೆಲ್ಲ ಒಳಗೊಂಡಿರುತ್ತದೆ. ಅನುಭವವನ್ನು ಸರಳೀಕರಣಗೊಳಿಸುವುದಿಲ್ಲ' ಎಂದಾಗ ಮುರ್ರೆ ಕ್ರೀಗರ್ ಮತ್ತು ಕ್ಲಿಯಾಂತ್ ಬ್ರುಕ್ಸರು 'ಐರನಿ', 'ಪ್ಯಾರಡಾಕ್ಸ್' ಮೊದಲಾದ ಕಲ್ಪನೆಗಳನ್ನು ವಿವರಿಸುವುದರ ಪ್ರತಿಧ್ವನಿ ಕೇಳುತ್ತದೆ.

ಕೃಷ್ಣಮೂರ್ತಿಯವರ 'ಆಧುನಿಕ ಭಾರತೀಯ ಸಾಹಿತ್ಯ', ಜಿ.ಎಚ್.ನಾಯಕರ 'ಸಮಕಾಲೀನ', ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ 'ಹೊರಳು ದಾರಿಯಲ್ಲಿ ಕಾವ್ಯ', ಜಿ.ಎನ್.ರಂಗನಾಥರಾಯರ 'ಹೊಸತಿರುವು', ಗಿರಡ್ಡಿ ಗೋವಿಂದರಾಜರ 'ಸಣ್ಣಕಥೆಯ ಹೊಸ ಒಲವುಗಳು' ನವ್ಯ ವಿಮರ್ಶೆಯ ಕೆಲವು ಪ್ರಾತಿನಿಧಿಕ ಕೃತಿಗಳು.

ಯಾವ ಒಂದು ಮಾರ್ಗಕ್ಕೂ ಸೇರದ ವಿಮರ್ಶಕರು ಹಲವರು ಉತ್ತಮ ಕೆಲಸ ಮಾಡಿದ್ದಾರೆ. ಜಿ.ಎಸ್.ಶಿವರುದ್ರಪ್ಪನವರು 'ಸೌಂದರ್ಯ ಸಮೀಕ್ಷೆ'ಯಲ್ಲಿ ಪ್ರೌಢಗ್ರಂಥವನ್ನು ಕೊಟ್ಟರು. 'ಗತಿಬಿಂಬ'ದಲ್ಲಿ ಸಾಹಿತ್ಯ ಜೀವನದ ಪ್ರತಿಬಿಂಬವಲ್ಲ, ಗತಿಬಿಂಬ ಎಂಬ ಸೂತ್ರವನ್ನು ಕೊಟ್ಟರು. ಈ ಸಂಗ್ರಹದಲ್ಲಿ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾದ ಲೇಖನಗಳಿವೆ. ಎಸ್.ಎಲ್.ಭೈರಪ್ಪನವರ 'ಸಾಹಿತ್ಯದಲ್ಲಿ ಪ್ರತೀಕ' ಮತ್ತು 'ಕಥೆ ಮತ್ತು ಕಥಾವಸ್ತು'ಗಳಲ್ಲಿ ಪ್ರತೀಕ ಕಲ್ಪನೆಯ ಸ್ಪಷ್ಟ ವಿಶ್ಲೇಷಣೆ ಇದೆ. ಶಂಕರ ಮೊಕಾಶಿ ಪುಣೇಕರರು ಕವಿ 'ಬೇಂದ್ರೆಯವರ ಕಾವ್ಯ ಮೀಮಾಂಸೆ'ಯಲ್ಲಿ ಒಬ್ಬ ಕವಿ ಕಾವ್ಯವನ್ನು ಹೇಗೆ ಕಾಣುತ್ತಾರೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಜಿ.ಎಸ್.ಆಮೂರರ 'ಕೃತಿ ಪರೀಕ್ಷೆ' ಹಲವು ಕೃತಿಗಳ ವಿಶ್ಲೇಷಣೆ.ಎಸ್.ಅನಂತನಾರಾಯಣ 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ' ಎಂಬ ವಿಶಿಷ್ಟ ಅಭ್ಯಾಸದ ಕೃತಿಯನ್ನು ಕೊಟ್ಟರು. ಇದು ೧೯೬೨ರಲ್ಲಿ ಪ್ರಕಟವಾಯಿತು. ಪ್ರಭುಶಂಕರರು ಕನ್ನಡ ಭಾವಗೀತೆ ಅಭ್ಯಾಸ ಮಾಡಿ ಒಂದು ಉಪಯುಕ್ತ ಗ್ರಂಥವನ್ನು (ಕನ್ನಡದಲ್ಲಿ ಭಾವಗೀತೆ) ಬರೆದರು. ಎಂ.ಎಸ್. ಸುಂಕಾಪುರರು 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ದಲ್ಲಿ ಆವರೆಗೆ ಅಧ್ಯಯನವಾಗದೆ ಇದ್ದ ವಿಷಯದತ್ತ ಗಮನಹರಿಸಿದರು. ಬಿ.ಎಚ್.ಶ್ರೀಧರರ 'ಕಾವ್ಯಸೂತ್ರ' ಸಾಹಿತ್ಯ ವಿಮರ್ಶೆಯ ಹಲವು ಸಿದ್ಧಾಂತಗಳನ್ನು ಪರಿಚಯ ಮಾಡಿಕೊಡುತ್ತದೆ.

**ಚಟುವಟಿಕೆಗಳು**

- ವಿಮರ್ಶಾ ಸಾಹಿತ್ಯ ಇಂದು – ಎಂಬ ವಿಷಯದ ಕುರಿತು ಒಂದು ಲೇಖನ ಬರೆಯುವುದು, ಈ ಕಾಲಘಟ್ಟದಲ್ಲಿ ವಿಮರ್ಶಾ ಸಾಹಿತ್ಯದ ಅಗತ್ಯ, ವಿಶೇಷತೆಗಳು, ವಿಮರ್ಶಕರು ಮತ್ತು ಅವರ ಕೃತಿಗಳು – ಇತ್ಯಾದಿ ಅಂಶಗಳು ಲೇಖನದಲ್ಲಿ ರಬೇಕು.
- ಯಾವುದಾದರೊಂದು ಕೃತಿಯನ್ನು (ಕತೆ, ಕವನ ಇತ್ಯಾದಿ.... ) ಓದಿ ವಿಮರ್ಶಾಸಾಹಿತ್ಯದ ಪ್ರತ್ಯೇಕತೆಗಳನ್ನು ತಿಳಿದುಕೊಂಡು ವಿಮರ್ಶಾಟಿಪ್ಪಣಿ ತಯಾರಿಸುವುದು.

## ಪ್ರವಾಸ ಸಾಹಿತ್ಯ

ಪ್ರವಾಸ ಸಾಹಿತ್ಯ ಇತರ ದೇಶಗಳಿಗೆ ಅಥವಾ ಪ್ರದೇಶಗಳಿಗೆ ಹೋಗಲಾರದ ಅಥವಾ ಹೋಗಲೊಲ್ಲದವರಿಗೆ ಆರಾಮ ಕುರ್ಚಿಯಲ್ಲಿಯೇ ಪ್ರವಾಸದ ಲಾಭವನ್ನು ಮಾಡಿಕೊಡುತ್ತದೆ. ಪ್ರವಾಸ ಹೋದವರು ತಮ್ಮ ಅನುಭವಗಳನ್ನು ಬಿತ್ತರಿಸಿ ಓದುಗರೊಡನೆ ಹಂಚಿಕೊಳ್ಳುತ್ತಾರೆ. ಇಂತಹ ಬರಹದಿಂದ ಓದುಗರಿಗೆ ಆಗುವ ಸಂತೋಷ ಮತ್ತು ಪ್ರಯೋಜನಗಳು ಪ್ರವಾಸ ಹೋದವರು ನೋಡಿದ ಸ್ಥಳಗಳು, ನಿರೂಪಣೆಯಲ್ಲಿ ಅವರು ಆರಿಸಿಕೊಂಡ ವಿವರಗಳು, ಅವರ ದೃಷ್ಟಿ ಮತ್ತು ಚಿಂತನೆ, ನಿರೂಪಣೆಯ ಖಚಿತತೆ ಮತ್ತು ಸ್ಫುಟತ್ವ ಇವನ್ನು ಹೊಂದಿಕೊಂಡಿವೆ.

೧೮೮೦ರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಎಂಬವರು 'ದಕ್ಷಿಣ ಭಾರತಯಾತ್ರೆ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಆದರೂ ಪ್ರವಾಸ ಸಾಹಿತ್ಯ ಕನ್ನಡದಲ್ಲಿ ಪ್ರಾರಂಭವಾದದ್ದು ವಿ.ಸೀ.ಅವರ 'ಪಂಪಾಯಾತ್ರೆ' (೧೯೩೪)ಯಿಂದ ಎನ್ನಬಹುದು. ವಿ.ಸಿ. ಮತ್ತು ಅವರ ಸ್ನೇಹಿತರು ಹಾಳುಬಿದ್ದ ಹಂಪೆಯನ್ನು ಕಂಡ ಅನುಭವ ಇದು. ಗೋಕಾಕರ 'ಸಮುದ್ರದಾಚೆಯಿಂದ',

‘ಸಮುದ್ರದೀಚೆಯಿಂದ’ ಮತ್ತು ‘ಇಂದಲ್ಲ ನಾಳೆ’ ಮೂರು ಮುಖ್ಯವಾದ ಪ್ರವಾಸ ಗ್ರಂಥಗಳು. ೧೯೩೬–೩೭ ರಲ್ಲಿ ಉನ್ನತವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋದಾಗ ಬರೆದ ಪತ್ರಗಳ ಸಂಗ್ರಹ ‘ಸಮುದ್ರದಾಚೆಯಿಂದ’ ೧೯೫೭ರ ಜಪಾನ್ ಪ್ರವಾಸ ‘ಸಮುದ್ರದೀಚೆಯಿಂದ’ ಗ್ರಂಥಕ್ಕೆ ಪ್ರೇರಕ, ಅಮೇರಿಕ ಪ್ರವಾಸ ‘ಇಂದಲ್ಲ ನಾಳೆ’ಗೆ ಪ್ರೇರಕ. ಗೋಕಾಕರು ಎಲ್ಲವನ್ನೂ ಕವಿಯಾಗಿ, ಭಾರತೀಯನಾಗಿ, ಜೀವನದ ಶ್ರದ್ಧೆಯ ವಿದ್ಯಾರ್ಥಿಯಾಗಿ ಕಾಣುತ್ತಾರೆ. ವರ್ತಮಾನ ಕಟ್ಟುತ್ತಿರುವ ಭವಿಷ್ಯವನ್ನು ಕಾಣುತ್ತಾರೆ.

ಅಮೂಲ್ಯವಾದ ಪ್ರವಾಸ ಸಾಹಿತ್ಯವನ್ನು ಕೊಟ್ಟ ಮತ್ತೊಬ್ಬ ಪ್ರವಾಸಿಗರು ಶಿವರಾಮ ಕಾರಂತರು. ‘ಅಬುವಿನಿಂದ ಬರಾಮಕ್ಕೆ’ ‘ಅಪೂರ್ವ ಪಶ್ಚಿಮ’ ಅವರ ಅಪೂರ್ವ ಕೃತಿಗಳು. ಎರಡನೇ ಕೃತಿಯನ್ನು ಓದುವುದೇ ಒಂದು ಶ್ರೀಮಂತ ಅನುಭವ. ನೋಟ, ಚಿಂತನೆ, ಕೈಹಿಡಿದು ಸಾಗುತ್ತವೆ. ಅಪಾರ ವ್ಯಾಸಂಗ ಕೊಟ್ಟ ಸತ್ವವನ್ನು ತುಂಬಿಕೊಂಡ ಸ್ವತಂತ್ರ ವಿಚಾರ ರೀತಿ ಪುಸ್ತಕದುದ್ದಕ್ಕೂ ಬೆಳಕನ್ನು ಹಾಸಿಕೊಂಡು ಹೋಗುತ್ತದೆ. ಕಾರಂತರು ಅಮೇರಿಕಾದ ಪ್ರವಾಸವನ್ನು ‘ಪಾತಾಳಕ್ಕೆ ಪಯಣ’ದಲ್ಲಿ ವರ್ಣಿಸಿದ್ದಾರೆ.

ಈಚೆಗಿನ ವರ್ಷಗಳಲ್ಲಿ ಭಾರತದೊಳಗೆ, ಭಾರತದಾಚೆ ಪ್ರವಾಸ ಮಾಡಿದವರು ಹಲವರು ತಮ್ಮ ಅನುಭವಗಳನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು. ಬಿ.ಜಿ.ಎಲ್. ಸ್ವಾಮಿ ಅವರ ‘ಅಮೇರಿಕದಲ್ಲಿ ನಾನು’, ಕೃಷ್ಣಾನಂದ ಕಾಮತರ ‘ನಾನೂ ಅಮೇರಿಕೆಗೆ ಹೋಗಿದ್ದೆ’ ಮತ್ತು ಲಲಿತಾ ಸುಬ್ಬರಾವ್ ಅವರ ‘ಅಮೇರಿಕ ಮತ್ತು ನಾನು’ ಅಮೇರಿಕದ ಜೀವನದ ವಿವಿಧ ಮುಖಗಳ ಪರಿಚಯ ಮಾಡಿಸುತ್ತವೆ. ಮೊದಲಿನವರಿಬ್ಬರೂ ವಿಜ್ಞಾನಿಗಳು, ಭ್ರಾಂತಿಗಳಿಲ್ಲದೆ ತೆರೆದ ಕಣ್ಣಿನಿಂದ ಅಮೇರಿಕಾವನ್ನು ಜೊತೆಗೆ ಭಾರತವನ್ನೂ ನೋಡುತ್ತಾರೆ. ನವರತ್ನ ರಾಮ್ ಅವರ ‘ಪ್ಯಾರಿಸಿನಿಂದ ಪ್ರೇಯಸಿಗೆ’ ಫ್ರಾನ್ಸ್‌ನ್ನು ಪರಿಚಯ ಮಾಡಿಕೊಡುವ ಕೆಲವೇ ಕನ್ನಡ ಪುಸ್ತಕಗಳಲ್ಲಿ ಒಂದು. ಕು.ಶಿ.ಹರಿದಾಸಭಟ್ಟರ ‘ಇತಾಲಿಯಾ ನಾನು ಕಂಡಂತೆ’ ಇಟಲಿಯ ಪರಿಚಯ ಮಾಡಿಕೊಡುತ್ತದೆ. ರಷ್ಯವನ್ನು ಕುರಿತು ಹಲವು ಪುಸ್ತಕಗಳು ಬಂದಿವೆ. ಎಚ್.ವಿ.ಶ್ರೀರಂಗರಾಜು ತಮ್ಮ ‘ಸೋವಿಯತ್ ದಿನಚರಿ’ಯಲ್ಲಿ  ಮುಖ್ಯವಾಗಿ ಶಿಕ್ಷಕರಾಗಿ ರಷ್ಯವನ್ನು ಕಂಡಿದ್ದಾರೆ. ಜಿ.ಎಸ್. ಶಿವರುದ್ರಪ್ಪನವರ ‘ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ’ ಉತ್ತಮ ಗದ್ಯ ಬರೆಯುವ ಚಿಂತನಶೀಲ ಕವಿಯ ಕೃತಿ. ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದವರು ಪ್ರಕಟಿಸಿರುವ ‘ಎಕ್ಸ್‌ಪೋ ೭೦’ ಜಪಾನಿನಲ್ಲಿ ನಡೆದ ಎಕ್ಸ್‌ಪೋ ಪ್ರದರ್ಶನಕ್ಕೆ ಕರ್ನಾಟಕದ ಸರಕಾರ ಕಳುಹಿಸಿದ ಯುವಜನ ನಿಯೋಗದ ಕೆಲವು ಸದಸ್ಯರ ಲೇಖನಗಳ ಸಂಕಲನ. ಜಪಾನನ್ನು ಬೇರೆ ಬೇರೆ ದೃಷ್ಟಿಗಳಿಂದ ಕಾಣುವ ಅನುಭವ ಒಂದೇ ಕೃತಿಯಲ್ಲಿ ಆಗುತ್ತದೆ.

ಹಲವು ದೇಶಗಳಿಗೆ ಭೇಟಿಕೊಟ್ಟ ಕನ್ನಡಿಗರು ಬರೆದ ಪ್ರವಾಸ ಸಾಹಿತ್ಯದ ಕೆಲವು ಕೃತಿಗಳು : ಟಿ.ಕೆ ರಾಮರಾಯರ ‘ಗೋಳದ ಮೇಲೊಂದು ಸುತ್ತಿ’ನಂತೆ – ದಟ್ಟವಾದ ವಿವರಗಳು, ಪ್ರಾಮಾಣಿಕ ಪ್ರತಿಕ್ರಿಯೆಗಳಿಗೆ ಇದನ್ನು ಓದಬೇಕು. ದೇ.ಜವರೇಗೌಡರು ‘ವಿದೇಶಗಳಲ್ಲಿ ನಾಲ್ಕು ವಾರ’ ಕೃತಿಯಲ್ಲಿ ಪ್ರಾಮಾಣಿಕವಾದ, ಆಸಕ್ತಿ ಹುಟ್ಟಿಸುವ ಪ್ರತಿಕ್ರಿಯೆಗಳನ್ನು ಸಮರ್ಥ, ಸರಳ ಗದ್ಯದಲ್ಲಿ ನಿರೂಪಿಸಿದ್ದಾರೆ.

ನಾಡಿಗ ಕೃಷ್ಣಮೂರ್ತಿಯವರು ‘ಸಾಗರದಾಚೆ’ ಮತ್ತು ‘ನಮ್ಮ ಕಾಗದಗಳ’ಲ್ಲಿ ಅಮೇರಿಕಾದಲ್ಲಿ ಪತ್ರಿಕೋದ್ಯಮದ ಪರಿಚಯ ಮಾಡಿಕೊಡುತ್ತಾರೆ. ಕೆ.ಆರ್. ಕಾರಂತರ ‘ಪ್ರವಾಸಿಯ ಪತ್ರಗಳು’ ಯುರೋಪಿನ ರಾಜಕೀಯ ಮತ್ತು ಪ್ರಜಾಪ್ರಭುತ್ವವನ್ನು ವಿಶ್ಲೇಷಿಸುತ್ತದೆ. ಶ್ರೀರಂಗರ ‘ಶ್ರೀರಂಗ ಯಾತ್ರೆ’ ಯುರೋಪಿನಲ್ಲಿ ರಂಗಭೂಮಿಯನ್ನು ಕುರಿತು ವಿವರಗಳನ್ನು ಅನುಭವಿಯಾದ ನಾಟಕಕಾರ–ನಟ–ನಿರ್ದೇಶಕನ ಅಭಿಪ್ರಾಯಗಳನ್ನು ಲಭ್ಯಮಾಡಿಕೊಡುತ್ತದೆ. ದಿನಕರ ದೇಸಾಯಿವರ ‘ನಾ ಕಂಡ ಪಡುವಣ’ ಹೊರನಾಡಿನಲ್ಲಿ ಕಾರ್ಮಿಕರ ಸಂಘಟನೆ, ಸಾರಿಗೆ ವ್ಯವಸ್ಥೆ ಮೊದಲಾದವುಗಳನ್ನು ವಿವರಿಸುತ್ತದೆ. ನೃತ್ಯ ಕಲಾವಿದೆ ಶ್ರೀಮತಿ ಚಂದ್ರಭಾಗಾ ದೇವಿಯವರ ಪಾಶ್ಚಾತ್ಯ ದೇಶಗಳ ಪ್ರವಾಸ ಕಥೆ ‘ಗೆಜ್ಜೆಯ ಹೆಜ್ಜೆ ನುಡಿ’.

ಭಾರತದೊಳಗೆ ವಿವಿಧ ಪ್ರದೇಶಗಳಲ್ಲಿ ಪ್ರವಾಸ ಮಾಡಿದ ಕನ್ನಡಿಗರನೇಕರು ಪ್ರವಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಸಿದ್ದವನಹಳ್ಳಿ ಕೃಷ್ಣಶರ್ಮರ ‘ವರ್ಧಾಯಾತ್ರೆ’ ಕಾದಂಬರಿಯಂತೆ ಓದಿಸಿಕೊಂಡು ಹೋಗುತ್ತದೆ. ಶಿಲ್ಪ, ಚಿತ್ರಕಲೆಗಳ ಕೃತಿಗಳು ಕಣ್ಣಮುಂದೆ ನಿಂತಂತೆ ಭಾಸವಾಗುತ್ತದೆ. ಕರ್ನಾಟಕವನ್ನು ಕುರಿತ ಪುಸ್ತಕಗಳು ಕೆಲವೇ ಇದ್ದಾಗ ‘ಆರಯ್ಯ’ನವರು ‘ನಾ ಕಂಡ ಕರ್ನಾಟಕ’ ಬರೆದರು. ಕೆ.ಬಿ.ಪ್ರಭುಪ್ರಸಾದರ ‘ದೇಗುಲಗಳ ದಾರಿಯಲ್ಲಿ’ ಹಿರೇಮಲ್ಲೂರು ಈಶ್ವರನ್‌ರ ‘ಕವಿಕಂಡ ನಾಡು’– ಸುಂದರ ಕೃತಿಗಳು.

ಪ್ರವಾಸ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದ ಇಬ್ಬರನ್ನು ಇಲ್ಲಿ ಹೆಸರಿಸಬೇಕು. ಜಿ.ಪಿ.ರಾಜರತ್ನಂ 'ಚೀನಾದೇಶದ ಬೌದ್ಧ ಯಾತ್ರಿಕರು', 'ಫಾಹಿಯಾನನ ಕ್ಷೇತ್ರ ಯಾತ್ರೆ' ಇವುಗಳಲ್ಲಿ ನೂರಾರು ವರ್ಷಗಳ ಹಿಂದೆ ಚೀನಾ ಯಾತ್ರಿಕರು ಕಂಡ ಭಾರತವನ್ನು ನಮಗೆ ಕಾಣಿಸಿದರು. ಎಚ್.ಎಲ್.ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ'ದ ಸಂಪುಟಗಳು ಬೇರೆ ಬೇರೆ ಕಾಲಗಳಲ್ಲಿ ಪ್ರವಾಸಿಗರ ಭಾರತ ದರ್ಶನವನ್ನು ಕನ್ನಡದಲ್ಲಿ ಲಭ್ಯಮಾಡಿಕೊಟ್ಟಿವೆ.

## ಆತ್ಮಕತೆ

- ಒಬ್ಬರ ಬದುಕಿನ ಕುರಿತು ಅವರೇ ಬರೆಯುವುದು ಆತ್ಮಕತೆ.
- ಕಥಾನಾಯಕ ಮತ್ತು ಲೇಖಕ ಒಬ್ಬನೇ ಆದುದರಿಂದ ಸತ್ಯಸಂಧತೆಯಿರಬಹುದಾದರೂ, ಎಲ್ಲ ಸತ್ಯಸಂಗತಿಗಳನ್ನು ಹೇಳಬೇಕೆಂದಿಲ್ಲ.
- ಆತ್ಮನಿಷ್ಠವಾದ ಭಾವನಾತ್ಮಕ ಅಂಶಗಳು ಬಿಟ್ಟು ಹೋಗದಂತೆ ಗಮನಿಸಬೇಕು.
- ಸ್ವಂತ ಅನುಭವಗಳನ್ನು ಅವಲೋಕನ ಮಾಡಿ ತನ್ನ ವ್ಯಕ್ತಿತ್ವವನ್ನು ಪೋಷಿಸಿದ ಬಾಹ್ಯ ಘಟಕಗಳನ್ನು ಸತ್ಯಸಂಧತೆಯಿಂದ ಪ್ರಕಟಿಸಬೇಕು.
- ಪಾಶ್ಚಾತ್ಯ ಸಾಹಿತ್ಯದಲ್ಲಿ ಆತ್ಮಕತೆಯು ಆರಂಭವಾಯಿತು.
- ಸೆಂಟ್ ಆಗಸ್ಟಿನ್ ಬರೆದ ಕನ್ಫೆಷನ್ಸ್ ಈ ವಿಭಾಗದ ಮೊದಲ ಕೃತಿ.
- ಕನ್ನಡದಲ್ಲಿ ಹಲವಾರು ಆತ್ಮಕತೆಗಳು ರಚನೆಯಾಗಿವೆ.
- ಆತ್ಮಕತೆ ಬರೆದ ವ್ಯಕ್ತಿಯ ಮಹತ್ವ, ಆತ್ಮಕತೆಗಳ ಶೀರ್ಷಿಕೆಯ ವಿಶೇಷತೆ ಇತ್ಯಾದಿಗಳು ವಿಭಿನ್ನವಾಗಿರುತ್ತವೆ.
  - ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಭಾವ
  - ಶಿವರಾಮ ಕಾರಂತ – ಹುಚ್ಚು ಮನಸ್ಸಿನ ಹತ್ತು ಮುಖಗಳು
  - ದೇ.ಜ.ಗೌ. – ಹೋರಾಟದ ಬದುಕು.
  - ಜಿ.ಪಿ. ರಾಜರತ್ನಂ – ಹತ್ತು ವರುಷ
  - ಡಿ.ವಿ.ಜಿ. – ಜ್ಞಾಪಕ ಚಿತ್ರಶಾಲೆ
  - ಅ.ನ.ಕೃ – ಬರಹಗಾರನ ಬದುಕು
  - ಕಯ್ಯಾರ ಕಿಂಞಣ್ಣ ರೈ – ದುಡಿತವೇ ನನ್ನ ದೇವರು

  ಮೊದಲಾದವು ಕೆಲವು ಆತ್ಮಕತೆಗಳಾಗಿವೆ.

## ಜೀವನ ಚರಿತ್ರೆ

- ಒಬ್ಬರು ಇನ್ನೊಬ್ಬರ ಬದುಕಿನ ಕುರಿತು ಬರೆಯುವುದೇ ಜೀವನ ಚರಿತ್ರೆ
- ಬಯೋಸ್ (ಜೀವನರೀತಿ), ಗ್ರಾಫಿಯ (ಚರಿತ್ರೆ) ಎಂಬ ಪದಗಳು ಸೇರಿ ಬಯೋಗ್ರಾಫಿ (ಜೀವನಚರಿತ್ರೆ) ಎಂಬ ಪದ ಉಂಟಾಯಿತು.
- ಒಬ್ಬ ವ್ಯಕ್ತಿಯ ಚಟುವಟಿಕೆಗಳು, ಚಿಂತನೆಗಳು, ಅನುಭವಸಂಪತ್ತು ಇತ್ಯಾದಿಗಳನ್ನು ವಿವರಿಸುವುದರಿಂದ ಜೀವನ ಚರಿತ್ರೆಯನ್ನು ವ್ಯಕ್ತಿತ್ವದಿಂದ ಕೂಡಿದ ಒಂದು ಕಥಾಪಾತ್ರವಾಗಿ ಪರಿಗಣಿಸಬಹುದು.
- ಕೃತಿಯ ಹೆಸರು, ಕೃತಿಕಾರ, ಯಾರ ಕುರಿತು – ಈ ಮೂರು ವಿಚಾರಗಳನ್ನು ಜೀವನ ಚರಿತ್ರೆಯಲ್ಲಿ ಗಮನಿಸಬೇಕು.
- ಕನ್ನಡದಲ್ಲಿ ಮೊದಲ ಜೀವನ ಚರಿತ್ರೆ – 'ಕುಣಿಗಲ್ ರಾಮಶಾಸ್ತ್ರಿಗಳ ಚರಿತ್ರೆ'– ಬರೆದವರು ಎಂ.ಎಸ್.ಪುಟ್ಟಣ್ಣ

- ಶಿವರಾಮ ಕಾರಂತರ ‘ಕಲಾವಿದ ಕೃಷ್ಣ ಹೆಬ್ಬಾರರು’, ದೇ.ಜ.ಗೌ ಅವರ ‘ರಾಷ್ಟ್ರಕವಿ ಕುವೆಂಪು’, ಮುಳಿಯ ತಿಮ್ಮಪ್ಪಯ್ಯನವರ ‘ನಾಡೋಜ ಪಂಪ’, ಕಣವಿಯವರ ‘ಮಧುರಚೆನ್ನ’ ಇತ್ಯಾದಿಗಳು ಕೆಲವವು ಜೀವನ ಚರಿತ್ರೆಗಳಾಗಿವೆ.

### ಅನುಭವ ಕಥನಗಳು

- ಬದುಕು ಮತ್ತು ಅನುಭವಗಳನ್ನು ಬೇರ್ಪಡಿಸಲಾಗದಂತೆ ಚಿತ್ರಿಸುತ್ತಾ ಆಸಕ್ತಿಯನ್ನು ಕೆರಳಿಸುವವುಗಳೇ ಅನುಭವ ಕಥನಗಳು.
- ಭೂತಕಾಲದ ನೆನಪುಗಳನ್ನು ಅನುಭವಗಳನ್ನು ಮತ್ತೊಮ್ಮೆ ನೆನಪಿಸುವ ಕೃತಿಗಳು ಅನುಭವ ಕಥನಗಳಾಗಿವೆ.
- ಆತ್ಮಕತೆಯಂತೆಯೇ ಅನುಭವ ಕಥನಗಳೂ ಶ್ರೀಮಂತವಾದ ಸಾಹಿತ್ಯ ಪ್ರಕಾರವಾಗಿದೆ.
- ಕನ್ನಡದಲ್ಲಿ ಸಾಕಷ್ಟು ಅನುಭವ ಕಥನಗಳಿವೆ.
- ಗೊರೂರು ರಾಮಸ್ವಾಮಿ ಅಯ್ಯಂಗಾರರ ‘ನಮ್ಮೂರಿನ ರಸಿಕರು’, ಪೂರ್ಣಚಂದ್ರ ತೇಜಸ್ವಿಯವರ ‘ಮಿಂಚುಳ್ಳಿ’, ಕೆದಂಬಾಡಿ ಜತ್ತಪ್ಪ ರೈಯವರ ‘ಈಡೊಂದು ಹುಲಿಯೆರಡು’, ಕೃಪಾಕರ ಸೇನಾನಿಯವರ ‘ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು’, ಶಿವರಾಂ ಬಿ.ಕೆ.ಯವರ ‘ಪೋಲೀಸ್ ಕಂಡ ಕತೆಗಳು’, ಎಂ. ನರಸಿಂಹಮೂರ್ತಿಯವರ ‘ಸ್ನೇಹ ಸಂಪತ್ತು’ ಇತ್ಯಾದಿಗಳು ಅನುಭವ ಕಥನಗಳಿಗೆ ಕೆಲವು ಉದಾಹರಣೆ ಗಳಾಗಿವೆ.

**ಚಟುವಟಿಕೆಗಳು**

- ಆರಂಭಕಾಲದ ಪ್ರವಾಸ ಸಾಹಿತ್ಯಗಳು, ಈಗಿನ ಕಾಲದ ಪ್ರವಾಸ ಸಾಹಿತ್ಯಗಳು, ನಿಯತಕಾಲಿಕಗಳಲ್ಲಿ ಬರುವ ಪ್ರವಾಸ ಲೇಖನಗಳು, ಡಿಜಿಟಲ್ ಯಾತ್ರಾ ಮಾಹಿತಿಗಳು ಇತ್ಯಾದಿಯಾಗಿ ಬೇರೆ ಬೇರೆ ರೀತಿಗಳಲ್ಲಿ ಪ್ರಕಟವಾದ ಪ್ರವಾಸ ಕೃತಿಗಳನ್ನು ಸಂಗ್ರಹಿಸಿ ಅವುಗಳ ಪ್ರತ್ಯೇಕತೆಗಳು ಮತ್ತು ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸುವುದು.
- ಸಂಸ್ಥೆಯಲ್ಲಿ ಅಧ್ಯಾಪಕ ವಿದ್ಯಾರ್ಥಿಗಳು ನಡೆಸುವ ವಿವಿಧ ಪ್ರವಾಸಗಳ ಕುರಿತು ಟಿಪ್ಪಣಿಗಳನ್ನು ತಯಾರಿಸುವುದು.
- ಕನ್ನಡದ ಪ್ರಸಿದ್ಧ ಆತ್ಮಕತೆಗಳು, ಜೀವನ ಚರಿತ್ರೆಗಳು, ಅನುಭವ ಕಥನಗಳು ಇತ್ಯಾದಿಗಳನ್ನು ಅವುಗಳ ಲೇಖಕರೊಂದಿಗೆ ಸೇರಿಸಿ ಪಟ್ಟಿ ತಯಾರಿಸುವುದು.
- ‘ಸೃಜನಶೀಲ ರಚನೆಗಳಲ್ಲಿ ಕಂಡುಬರುವ ವಿಭಿನ್ನ ಭಾಷಾ ವ್ಯವಹಾರ ಪ್ರಕಾರಗಳು ಮತ್ತು ಅವುಗಳ ವಿಶೇಷತೆಗಳು’ – ಚರ್ಚೆ
- ಭಾಷಾ ವ್ಯವಹಾರ ಪ್ರಕಾರಗಳ ಮಾದರಿಗಳು – ಸಂಗ್ರಹ.

* * * * *

# ಗದ್ಯಬೋಧನೆ

ಭಾಷಾ ಪಠ್ಯಪುಸ್ತಕಗಳಲ್ಲಿ ಗದ್ಯ, ಪದ್ಯಗಳೆಂಬ ಎರಡು ವಿಭಾಗಗಳಿವೆ. ಭಾಷಾ ಕಲಿಕೆಯಲ್ಲಿ ಭಾಷಾಪರ ಹಾಗೂ ಸಾಹಿತ್ಯ ಪರವೆಂದು ಎರಡು ಹಂತಗಳಿರುವುದರಿಂದ ತರಗತಿಗಳಲ್ಲಿ ಇವುಗಳ ವಿನಿಮಯದಲ್ಲಿ ಅನೇಕ ವ್ಯತ್ಯಾಸಗಳಿವೆ. ಎರಡು ಘಟಕಗಳಲ್ಲಿ ಪದ್ಯ ಬೋಧನೆಯ ಕುರಿತು ಚರ್ಚಿಸಿದೆವಲ್ಲವೇ? ಈ ಘಟಕದಲ್ಲಿ ಗದ್ಯಬೋಧನೆಯ ಸಮೀಪನ, ಗದ್ಯಪಾಠಗಳ ಮಂಡನವಿಧಾನ, ಗದ್ಯಬೋಧನೆಯ ಉದ್ದೇಶಗಳು ಇತ್ಯಾದಿಗಳ ಕುರಿತು ಅರ್ಥೈಸಿಕೊಂಡು ಇವುಗಳ ಬೋಧನಾಶಾಸ್ತ್ರ ಪರವಾದ ವಿಶ್ಲೇಷಣೆ, ದೈನಂದಿನ ಯೋಜನೆಗಳನ್ನು ತಯಾರಿಸಿ ತರಗತಿಗಳನ್ನು ಮುನ್ನಡೆಸಲಿರುವ ತಿಳುವಳಿಕೆಯನ್ನು ಗಳಿಸಬೇಕು.

### ಗದ್ಯಬೋಧನೆಯ ಉದ್ದೇಶಗಳು

ಗದ್ಯಬೋಧನೆಯ ಉದ್ದೇಶಗಳನ್ನು ಸಾಮಾನ್ಯವಾಗಿ ಈ ಕೆಳಗಿನಂತೆ ಕ್ರೋಡೀಕರಿಸಬಹುದು.

1. ವಿದ್ಯಾರ್ಥಿಗಳ ಭಾಷಾಪರವಾದ ಸಾಮರ್ಥ್ಯವನ್ನು ವಿಕಾಸಗೊಳಿಸುವುದು.
2. ಗದ್ಯಪಾಠಗಳ ಮೂಲಕ ಜ್ಞಾನವನ್ನೊದಗಿಸಿ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸುವುದು.
3. ವ್ಯಾಕರಣ ಸಂಬಂಧವಾದ ವಿಚಾರಗಳನ್ನು ಅರ್ಥೈಸಿಕೊಳ್ಳುವುದರೊಂದಿಗೆ ಅದನ್ನು ಸಂದರ್ಭೋಚಿತವಾಗಿ ಬಳಸಲು ಅಗತ್ಯವಾದ ತರಬೇತಿಯನ್ನು ಒದಗಿಸುವುದು.
4. ಸ್ವತಂತ್ರವಾದ ಭಾಷಾಶೈಲಿಯನ್ನು ರೂಢಿಸಿಕೊಳ್ಳಲು ಹಾಗೂ ಅಭಿವೃದ್ಧಿಪಡಿಸಲು ಅಗತ್ಯವಾದ ಪ್ರೇರಣೆಯನ್ನೂ ಪ್ರಾಯೋಗಿಕ ತರಬೇತಿಯನ್ನೂ ನೀಡುವುದು.
5. ನೂತನ ಆಶಯದೊಂದಿಗೆ ಈ ಜಗತ್ತಿನಲ್ಲಿ ಸ್ವತಂತ್ರವಾಗಿ ಜೀವಿಸುವುದಕ್ಕೂ, ವ್ಯವಹರಿಸುವುದಕ್ಕೂ ಯೋಗ್ಯವಾಗಿ ಓದುವ ಹವ್ಯಾಸದೆಡೆಗೆ ಸಾಗಿಸುವುದು.
6. ಗದ್ಯಸಾಹಿತ್ಯದ ಶಾಖೆಗಳ ಕುರಿತು ಹಾಗೂ ವಿವಿಧ ಸಾಹಿತ್ಯ ಚಳುವಳಿಗಳ ಕುರಿತು ಸಾಮಾನ್ಯ ಜ್ಞಾನವನ್ನು ನೀಡುವುದು.
7. ವಿವಿಧ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಬಂಧ, ಕಿರುಪ್ರಬಂಧಗಳನ್ನು ಬರೆಯುವ ಕೌಶಲ್ಯವನ್ನು ವಿಕಾಸಗೊಳಿಸುವುದು.
8. ಸಾಹಿತ್ಯದಲ್ಲಿ ಕೆಲವು ಪ್ರಾಥಮಿಕ ತತ್ವಗಳನ್ನು ಅರ್ಥೈಸಿಕೊಳ್ಳುವುದರೊಂದಿಗೆ ಸಾಹಿತ್ಯ ಕೃತಿಗಳನ್ನು ಓದಿ ಮೌಲ್ಯಮಾಪನ ಮಾಡಲಿರುವ ತರಬೇತಿಯನ್ನು ನೀಡುವುದು.
9. ವಿದ್ಯಾರ್ಥಿಗಳ ಸೃಜನಶೀಲ ಸಾಮರ್ಥ್ಯಗಳನ್ನು ಭಾವನಾತ್ಮಕವಾಗಿ ಸೌಂದರ್ಯಪೂರ್ಣವಾಗಿ ಆವಿಷ್ಕರಿಸಲಿರುವ ಸಾಮರ್ಥ್ಯವನ್ನು ಗಳಿಸುವಂತೆ ಮಾಡುವುದು.

### ಗದ್ಯ ಅಧ್ಯಯನದ ಉದ್ದೇಶಗಳು

**ಎ) ಕಿರಿಯ ಪ್ರಾಥಮಿಕ**

1. ಇತರರು ಹೇಳುವ ಆಶಯಗಳನ್ನು ಗ್ರಹಿಸಲಿರುವ ಸಾಮರ್ಥ್ಯವನ್ನು ಗಳಿಸುವುದು.
2. ಸ್ವಂತ ಆಶಯಗಳನ್ನು ಇತರರಿಗೆ ವಾಚಿಕವಾಗಿಯೂ ಲಿಖಿತವಾಗಿಯೂ ತಿಳಿಸಲು ಅಗತ್ಯವಿರುವ ಭಾಷಾಜ್ಞಾನವನ್ನು ಗಳಿಸುವುದು.
3. ಮಾತೃಭಾಷೆಯನ್ನು ಅರ್ಥೈಸಿಕೊಂಡು ಓದಲು ಹಾಗೂ ಬರೆಯಲಿರುವ ಸಾಮರ್ಥ್ಯವನ್ನು ಗಳಿಸುವುದು.
4. ಶಬ್ದಭಂಡಾರದ ಅಭಿವೃದ್ಧಿ
5. ವ್ಯಾಕರಣ ಸಂಬಂಧವಾದ ಪ್ರಾಥಮಿಕ ವಿಚಾರಗಳನ್ನು ಕಲಿಸುವುದು
6. ಭಾಷಾಕಲಿಕೆಯಲ್ಲಿ ಆಸಕ್ತಿ ಮೂಡಿಸುವುದು.
7. ಜ್ಞಾನಾಭಿವೃದ್ಧಿಯೊಂದಿಗೆ ಚಿಂತನಾ ಸಾಮರ್ಥ್ಯವನ್ನು ಬೆಳೆಸುವುದು.
8. ರಚನೆಯಲ್ಲಿ ಪ್ರಾಥಮಿಕ ತರಬೇತಿಯನ್ನು ಗಳಿಸುವುದು.
9. ಮಾಹಿತಿಗಳನ್ನು ತಿಳಿಯಲು ಸಾಧ್ಯವಾಗುವ ವಿಧದಲ್ಲಿ ಹೆಚ್ಚಿನ ಓದುವಿಕೆಯೆಡೆಗೆ ಮಕ್ಕಳ ಆಸಕ್ತಿಯನ್ನು ಕೆರಳಿಸುವುದು.

**ಬಿ) ಹಿರಿಯ ಪ್ರಾಥಮಿಕ**

1. ಲಿಖಿತ ರೂಪದಲ್ಲೂ ವಾಚಿಕ ರೂಪದಲ್ಲೂ ಇತರರು ಪ್ರಕಟಿಸುವ ಆಶಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದು.
2. ತನ್ನ ಆಶಯಗಳನ್ನು ಸರಿಯಾಗಿ ಹಾಗೂ ಸ್ಪಷ್ಟವಾಗಿ ಲಿಖಿತವಾಗಿ ಅಥವಾ ವಾಚಿಕವಾಗಿ ಸಂದರ್ಭೋಚಿತವಾಗಿ ಪ್ರಕಟಿಸುವುದು.

3. ಗದ್ಯಪಾಠಗಳಿಗೆ ಹೊಂದಿಕೊಂಡು ವ್ಯಾಕರಣದಲ್ಲಿ ಸಾಮಾನ್ಯ ಜ್ಞಾನವನ್ನು ಗಳಿಸುವುದು.
4. ಸಾಹಿತ್ಯ ಆಸ್ವಾದನ ಮನೋಭಾವವನ್ನು ಬೆಳೆಸುವುದು.
5. ಮೌನ ಓದಿನಲ್ಲಿ ತರಬೇತಿ ನೀಡುವುದು.
6. ಓದಿನಲ್ಲಿ ಆಸಕ್ತಿ ಮೂಡಿಸುವುದು.
7. ವಾಕ್ಯ ವಿಭಜನೆ, ಲೇಖನ ಚಿಹ್ನೆ ಎಂಬಿವುಗಳಲ್ಲಿ ತರಬೇತಿ ಗಳಿಸುವುದು.
8. ಜ್ಞಾನ ಹಾಗೂ ಚಿಂತನಾ ಸಾಮರ್ಥ್ಯವನ್ನು ವಿಪುಲಗೊಳಿಸುವುದು.
9. ಸ್ಪಷ್ಟವಾದ ಉಚ್ಚಾರ ಮತ್ತು ತಪ್ಪಿಲ್ಲದಂತೆ ಬರೆಯುವ ಸಾಮರ್ಥ್ಯವನ್ನು ಗಳಿಸುವುದು.

**ಗದ್ಯಬೋಧನಾ ಸಮೀಪನ**

ಅಧ್ಯಾಪನ ಒಂದು ಕಲೆಯಾಗಿದೆ. ಜನ್ಮಸಿದ್ಧವಾದ ಅಭಿರುಚಿಯನ್ನೂ ಕರ್ಮಸಿದ್ಧವಾದ ಜ್ಞಾನವನ್ನೂ ಮೈಗೂಡಿಸಿಕೊಂಡರೆ ಮಾತ್ರವೇ ಇದರಲ್ಲಿ ಉತ್ತೀರ್ಣರಾಗಲು ಸಾಧ್ಯ. ಮಾದರಿಗಳನ್ನು ತಿಳಿದುಕೊಳ್ಳುವುದರೊಂದಿಗೆ ತನ್ನ ಸಾಮರ್ಥ್ಯಕ್ಕೆ ಹೊಂದಿಕೊಂಡು, ಶಾಲಾ ವಾತಾವರಣದ ವಿಶೇಷತೆಗಳಿಗೆ ಹೊಂದಿಕೊಂಡು ಮಾಡಬೇಕಾದ ಬದಲಾವಣೆಗಳನ್ನು ಪ್ರಾಯೋಗಿಕವಾಗಿ ಮಾಡಿಕೊಂಡರೆ ಆ ಅಧ್ಯಾಪಕನು ತನ್ನ ವಲಯದಲ್ಲಿ ಜಯಗಳಿಸುತ್ತಾನೆ. ಪದ್ಯಪುಸ್ತಕಗಳಲ್ಲಿರುವ ಗದ್ಯಭಾಗಗಳಲ್ಲಿ ಸಾಹಿತ್ಯಪರ, ವಿಜ್ಞಾನಪರ ಹಾಗೂ ಸಮ್ಮಿಶ್ರ ಎಂಬ ಮೂರು ವಿಭಾಗಗಳಿವೆ.

- ಸಾಹಿತ್ಯಪರ ವಿಭಾಗದಲ್ಲಿರುವ ಪಾಠಭಾಗಗಳು ಸಾಹಿತ್ಯದ ಮೌಲ್ಯಗಳಿಗೆ ಪ್ರಾಧಾನ್ಯವನ್ನು ನೀಡುವವುಗಳೂ ಆಸ್ವಾದನಾತ್ಮಕವೂ, ಸೃಜನಶೀಲತೆಯನ್ನು ಪ್ರಚೋದಿಸುವವುಗಳೂ ಆಗಿರುತ್ತದೆ.
- ವಿಜ್ಞಾನಪರವಾದವುಗಳು ಹೊಸ ವಿಚಾರಗಳನ್ನು ತಿಳಿಯಲು ಹಾಗೂ ಸೂಕ್ಷ್ಮವಾದ ಆಶಯಗಳನ್ನು ಪ್ರಕಟಿಸುವವುಗಳೂ ಆಗಿರುತ್ತದೆ.
- ಮಿಶ್ರಭಾಗದಲ್ಲಿ ಬರುವವುಗಳಲ್ಲಿ ಜೀವನಚರಿತ್ರೆಯ ಘಟನೆಗಳು, ಪ್ರವಾಸಕಥನದ ಭಾಗಗಳು ಇತ್ಯಾದಿಗಳಿರುತ್ತವೆ. ಇವು ಸೌಂದರ್ಯಾತ್ಮಕವೂ, ವೈಜ್ಞಾನಿಕವೂ ಆಗಿರಬಹುದು.

ಶೈಲಿಯನ್ನು ಗಮನಿಸಿದರೆ ಗದ್ಯಪಾಠಭಾಗಗಳಲ್ಲಿ ಸರಳವಾದವುಗಳೂ ಕಠಿಣವಾದವುಗಳೂ ಇವೆ. ಭಾಷೆ ಮತ್ತು ಆಶಯಗಳೊಳಗಿನ ಸಮತೋಲನವಾದ ಸಮ್ಮಿಲನದ ವೈವಿಧ್ಯಗಳನ್ನು ಅನಾವರಣಗೊಳಿಸಿ ಭಾಷಾಂಶದಲ್ಲೂ ಆಶಯಾಂಶದಲ್ಲೂ ವಿದ್ಯಾರ್ಥಿಯನ್ನು ಜ್ಞಾನದ ಬಾಗಿಲಿಗೆ ಕೊಂಡೊಯ್ಯುವಾಗ ಗದ್ಯಬೋಧನೆಯು ಅರ್ಥಪೂರ್ಣವಾಗುತ್ತದೆ. ಇದಕ್ಕಾಗಿ ಅನೇಕ ವಿಚಾರಗಳಲ್ಲಿ ಅಧ್ಯಾಪಕನು ಮಾನಸಿಕವಾಗಿಯೂ ಶಾರೀರಿಕವಾಗಿಯೂ ಅನಿವಾರ್ಯವಾಗಿ ಸಿದ್ಧನಾಗಿರಬೇಕು.

- ತಾನು ಹೊಸತಾಗಿ ಕಲಿಸಲು ಉದ್ದೇಶಿಸುವ ವಿಚಾರಗಳನ್ನು ಸ್ವೀಕರಿಸಲು ವಿದ್ಯಾರ್ಥಿಯನ್ನು ಮಾನಸಿಕವಾಗಿ ಸಜ್ಜುಗೊಳಿಸಬೇಕು.
- ಸ್ವಾಭಾವಿಕವಾದ ವಿವರಣೆಗಳ ಮೂಲಕವೂ ಸರಳವಾದ ಪ್ರಶ್ನೆಗಳ ಮೂಲಕವೂ ಪೂರ್ವಜ್ಞಾನವನ್ನು ಪರಿಶೀಲಿಸಬೇಕು.
- ಪಾಠಭಾಗಕ್ಕೆ ಯಾವ ಮನೋಭಾವವು ಸೂಕ್ತವಾಗಿರುವುದೋ ಅದನ್ನು ಗಳಿಸುವುದಕ್ಕೆ ಬೇಕಾದ ಪೂರ್ವಸಿದ್ಧತೆಯನ್ನು ಮಾಡಬೇಕು.

ಹೀಗೆ ತನ್ನ ತರಗತಿಯನ್ನು ಮುನ್ನಡೆಸುವಾಗ ನೂತನ ಕಲಿಕಾ ಸಮೀಪನಗಳನ್ನು (ಜ್ಞಾನನಿರ್ಮಾಣವಾದ, ಸಾಮಾಜಿಕ ಜ್ಞಾನನಿರ್ಮಾಣ ವಾದ, ಬ್ರೂನರ್, ನೋಂ ಚೊಂಸ್ಕಿ, ವೈಗೋಡ್‌ಸ್ಕಿ ಮೊದಲಾದವರ ಸಿದ್ಧಾಂತಗಳು) ಪಾಲಿಸಿಕೊಂಡು ಹರ್ಬಟ್‌ನ ಸಿದ್ಧಾಂತಗಳನ್ನು ಪರೋಕ್ಷವಾಗಿ ಹಿಂಬಾಲಿಸಿಕೊಂಡು ಪಠ್ಯಭಾಗಗಳನ್ನು ವಿನಿಮಯ ಮಾಡಬೇಕೆಂದೂ ಈ ಸಮೀಪನವು ಅಧ್ಯಾಪನವನ್ನು ಯಶಸ್ವಿಗೊಳಿಸಲು ಸಹಾಯಕವಾಗಬಹುದೆಂದೂ ಪ್ರೊ. ಎರುಮೇಲಿ ಪರಮೇಶ್ವರನ್ ಪಿಳ್ಳೆ ಅಭಿಪ್ರಾಯಪಡುತ್ತಾರೆ. ಇದಕ್ಕಾಗಿ ಅವರು ನಿರ್ದೇಶಿಸುವ ಹಂತಗಳು –

1. ಸಿದ್ಧತೆ

   ಎ) ಪೂರ್ವಜ್ಞಾನವನ್ನು ಪರೀಕ್ಷಿಸುವುದು

ಬಿ) ಉದ್ದೇಶವನ್ನು ಹೇಳುವುದು

2. ಪಾಠ ಮಂಡನೆ
3. ಸ್ಥೂಲಕಲಿಕೆ
4. ಸೂಕ್ಷ್ಮಕಲಿಕೆ
5. ಅಭ್ಯಾಸವನ್ನು ಓದುವುದು
6. ತುಲನಾತ್ಮಕ ಕಲಿಕೆ
7. ಪುನರಾವಲೋಕನ
8. ನಿಶ್ಚಯಿಸಿದ ಚಟುವಟಿಕೆಗಳು

ಎಂಬಿವುಗಳಾಗಿವೆ.

ಸಾಹಿತ್ಯ ಮೌಲ್ಯಗಳಿಗೆ ಪ್ರಾಧಾನ್ಯವನ್ನಿತ್ತು ವಿದ್ಯಾರ್ಥಿಗಳ ಗುಣಮಟ್ಟವನ್ನು ಅರ್ಥೈಸಿಕೊಂಡು ಬೋಧನೆಯನ್ನು ಕೈಗೊಳ್ಳಬೇಕು. ಇದಕ್ಕಾಗಿ ಆಧುನಿಕ ಕಲಿಕಾ ತಂತ್ರಗಳನ್ನೂ ವಿಧಾನಗಳನ್ನೂ ಅನುಸರಿಸಬೇಕು. ಆಗಾಗ ಬದಲಾಗುತ್ತಿರುವ ಪಾಠಪುಸ್ತಕಗಳಲ್ಲೂ ಅಧ್ಯಾಪಕರ ಪಠ್ಯಗಳಲ್ಲೂ ಸಮಗ್ರ ಪೋರ್ಟಲಿನಲ್ಲೂ ಇವುಗಳನ್ನು ಹೇಗೆ ವಿನಿಮಯ ಮಾಡಬೇಕೆಂಬುದರ ಕುರಿತು ಸ್ಪಷ್ಟವಾದ ರೀತಿ ಮತ್ತು ಮಾದರಿಗಳಿವೆ.

**ಚಟುವಟಿಕೆಗಳು**

- ಪಠ್ಯಪುಸ್ತಕ, ಅಧ್ಯಾಪಕ ಪಠ್ಯ, ಸಮಗ್ರ ಪೋರ್ಟಲ್ ಇತ್ಯಾದಿಗಳ ಸಹಾಯದಿಂದ ಒಂದು ಗದ್ಯಪಾಠಕ್ಕೆ ಬೋಧನಾ ವಿಧಾನದ ವಿಶ್ಲೇಷಣೆ, ದೈನಂದಿನ ಪಾಠಯೋಜನೆ ಇತ್ಯಾದಿಗಳನ್ನು ತಯಾರಿಸಿರಿ.
- ತಯಾರಿಸಿದ ದೈನಂದಿನ ಯೋಜನೆಯ ಆಧಾರದಲ್ಲಿ ಗದ್ಯಪಾಠಗಳಿಗೆ ಟ್ರೈಔಟ್ ತರಗತಿ ನಡೆಸಿದ ಮೇಲೆ ಚರ್ಚಿಸುವುದು.

**ಸಹಾಯಕ ಗ್ರಂಥಗಳು**

1. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ – ಕನ್ನಡ ಅಧ್ಯಯನ ಸಂಸ್ಥೆ
2. ಹೊಸಗನ್ನಡದ ಅರುಣೋದಯ – ಶ್ರೀನಿವಾಸ ಹಾವನೂರ, ಮೈಸೂರು ವಿಶ್ವವಿದ್ಯಾಲಯ
3. ಹೊಸಗನ್ನಡ ಸಾಹಿತ್ಯ ಚರಿತ್ರೆ – ಪ್ರೊ. ಎಲ್.ಎಸ್.ಶೇಷಗಿರಿ ರಾವ್
4. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ಕೀರ್ತಿನಾಥ ಕುರ್ತಕೋಟಿ
5. ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ – ಡಾ। ಮಹಾಬಲೇಶ್ವರ ರಾವ್

* * *

ಘಟಕ – 4

# ಕಲೆ ಮತ್ತು ಸಾಹಿತ್ಯ

## ನಮಗೂ ಒಂದು ಕಿರುಚಿತ್ರ – ನಾವೂ ನಿರ್ಮಿಸುವ

**ಒಂದು**

ಮೊದಲು ಒಂದು ವಿಷಯ (ವಸ್ತು) ಕಂಡುಕೊಳ್ಳುವುದು. ಒಳ್ಳೆಯ ರೀತಿಯಲ್ಲಿ ಅಧ್ಯಯನ ನಡೆಸುವುದು. ಅನಂತರ ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಸಂಭಾಷಣೆ, ವಿವರಸಂಗ್ರಹಣೆ, ಪತ್ರಿಕಾ ವಾರ್ತೆ, ಪುಸ್ತಕಗಳು ಮೊದಲಾದವುಗಳಿಂದ ವಿಷಯದ ಕುರಿತು ತಿಳುವಳಿಕೆಯನ್ನು ಪಡೆಯುವುದು. ವಿಷಯದ ಕುರಿತು ಕಲಿಯುವಾಗಲೇ ಯಾವ ರೀತಿಯಲ್ಲಿ ಕಥೆ ಮುಂದುವರಿಯಬೇಕು, ಯಾವೆಲ್ಲ ಕಥಾಪಾತ್ರಗಳು ಎಲ್ಲೆಲ್ಲಾ ಪ್ರವೇಶಿಸಬೇಕು ಎನ್ನುವ ತಿಳುವಳಿಕೆ ಉಂಟಾಗುವುದು. ಆದರೂ ಇವುಗಳಲ್ಲಿ ಎಲ್ಲಾ ಬದಲಾವಣೆ ಬರಬಹುದು. ಹಾಗೆ ವಿಷಯ (ವಸ್ತು)ವಿನ ಬಗ್ಗೆ ಗಾಢವಾದ ಅರಿವು ಮೂಡುವುದು ಮತ್ತು ನಾವು ಅವುಗಳನ್ನು ಸ್ವಾಯತ್ತಗೊಳಿಸಿಕೊಳ್ಳುವುದು. ಮುಂದೆ ಚಿತ್ರಕಥೆ ಬರೆಯಲು ಪ್ರಾರಂಭಿಸುವುದು.

**ಎರಡು**

ಚಿತ್ರಕಥೆ ಆರಂಭಿಸುವ ಹಂತದಲ್ಲಿ ಕಥೆಯನ್ನು ಮುಂದುವರಿಸುವ ರೀತಿ, ಸಂಗ್ರಹಿಸಿದ ಮಾಹಿತಿಗಳಲ್ಲಿ ಯಾವುದನ್ನೆಲ್ಲ ಉಪಯೋಗಿಸುವುದು, ಯಾವುದನ್ನು ಕೈ ಬಿಡುವುದು, ಕಥೆ ಎಲ್ಲಿಂದ ಪ್ರಾರಂಭಿಸುವುದು, ಮುಕ್ತಾಯಗೊಳಿಸುವುದು ಮೊದಲಾದ ವಿಚಾರಗಳನ್ನು ಚಿಂತಿಸಿ ಖಾತ್ರಿಪಡಿಸಿದ ಮೇಲೆ ಬರೆಯಲು ಪ್ರಾರಂಭಿಸುವುದು. ಬರೆಯುವ ಸಂದರ್ಭದಲ್ಲಿ ಕೆಲವೊಮ್ಮೆ ತೀರ್ಮಾನಿಸಿದ ರೀತಿಯಿಂದ ಭಿನ್ನವಾಗಿ ಮುಂದುವರಿಯಬೇಕಾಗಬಹುದು. ಅದು ಸಾಧಾರಣವಾದುದು. ಆ ಸಮಸ್ಯೆಯನ್ನು ಮುಂದೆ ಬರವಣಿಗೆ ಮತ್ತು ಆಲೋಚನೆಗಳ ಮೂಲಕ ಪರಿಹರಿಸಬಹುದು. ಕಥೆ ಬರೆಯುವ ರೀತಿಯಲ್ಲಲ್ಲ ಚಿತ್ರಕಥೆ ಬರೆಯುವುದು. ದೃಶ್ಯ ಕಣ್ಣಮುಂದೆ ಕಾಣುವಂತೆ ಬರೆಯಬೇಕು. ಇದನ್ನು ವಿಶ್ವಲ್ ಸ್ಟೋರಿ ಎಂದು ಕೂಡಾ ಕರೆಯುತ್ತಾರೆ. ಒಂದು ಉದಾಹರಣೆಯನ್ನು ನೋಡೋಣ.

**ದೃಶ್ಯ 1**

ಶೀರ್ಷಿಕೆಗಳು ಮುಕ್ತಾಯವಾಗುವಾಗ ನಾವು ನವಿಲೂರು ಎಂದು ಬರೆದಿರುವ ಹಳ್ಳಿಯ ಬೋರ್ಡನ್ನು ಕಾಣುತ್ತೇವೆ. ಅದರ ಕೆಳಗೆ ಕೊಳಕು ಬಟ್ಟೆಯನ್ನು ಧರಿಸಿರುವ ಒಬ್ಬ ಮಧ್ಯವಯಸ್ಕ. ಅವನ ದೃಷ್ಟಿಕೋನದಲ್ಲಿ ಹಳ್ಳಿಯ ದೂರದ ದೃಶ್ಯಗಳು. ನಾವು ಮತ್ತೆ ಬೋರ್ಡಿನ ಕೆಳಗೆ ಕುಳಿತ ಮಧ್ಯವಯಸ್ಕನನ್ನು ಕಾಣುತ್ತೇವೆ.

ಅವನ ದೂರಕ್ಕೆ ನೋಡುವ ನೋಟ

ಹಿನ್ನೆಲೆ ಧ್ವನಿ : ಒಬ್ಬನು ಇಲ್ಲಿ ಬೋರ್ಡಿನ ಕೆಳಗೆ ಕಾವಲುಗಾರನಾಗಿ ಕುಳಿತಿದ್ದಾನೆ. ಅವನಿಗೆ ಅನೇಕ ವಿಚಾರಗಳನ್ನು ಹೇಳುವುದಕ್ಕಿದೆ.

ಮಧ್ಯವಯಸ್ಕನ ಮುಖ

ಅವನು ಮಾತನಾಡುತ್ತಾನೆ. ಐದು ವರ್ಷಗಳ ಹಿಂದೆ ನಾನಿಲ್ಲಿಗೆ ಬರುವಾಗ ಇಲ್ಲಿಯ ಹೊಳೆ, ಕೆರೆ, ತೋಡು, ಮರಗಳು, ಗಿಡಗಳೂ ಇಲ್ಲಿಯ ಗಾಳಿ, ಮನುಷ್ಯರಾದಿ ಇತರ ಜೀವಜಾಲಗಳೂ ತುಂಬಾ ಸಂತುಷ್ಟರಾಗಿದ್ದರು. ಮತ್ತೆ ಹೊಳೆಯ, ಮರಗಳ, ಗಿಡಗಂಟೆಗಳ ದೃಶ್ಯಗಳು (ಚಿತ್ರಕಥೆ ಮುಂದುವರಿಯುವುದು)

**ಮೂರು**

ಚಿತ್ರಕಥೆ ಮುಕ್ತಾಯವಾದರೆ ಚಿತ್ರೀಕರಣಕ್ಕೆ ಪ್ರಾರಂಭಿಸುವುದು. ಒಬ್ಬರು ಅಥವಾ ಇಬ್ಬರು ಜೊತೆಯಾದರೆ ಮುಗಿಸಬಹುದಾದ ಕೆಲಸವಲ್ಲ ಸಿನೆಮಾ ನಿರ್ಮಾಣ. ಆದುದರಿಂದ ಸಿನೆಮಾ ನಿರ್ಮಾಣದ ವಿವಿಧ ಹಂತಗಳಲ್ಲಿ ಸಹಾಯ ಮಾಡುವುದಕ್ಕೂ ಕ್ರಿಯಾತ್ಮಕವಾಗಿ

ಕೆಲಸ ನಿರ್ವಹಿಸುವುದಕ್ಕೂ ತಕ್ಕುದಾದ ವ್ಯಕ್ತಿಗಳನ್ನು ಆಯ್ಕೆ ಮಾಡಿ ಅವರವರಿಗೆ ತಕ್ಕುದಾದ ಕೆಲಸದ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಡಬೇಕು. ಕ್ಯಾಮರ, ವಸ್ತ್ರಾಲಂಕಾರ, ಮೇಕಪ್, ಸಹಾಯಕ ನಿರ್ದೇಶನ, ಸಾರಿಗೆ, ಊಟೋಪಚಾರ, ಹಣಕಾಸಿನ ಮೇಲ್ವಿಚಾರಣೆ ಮೊದಲಾದ ಎಲ್ಲಾ ವಿಚಾರಗಳಲ್ಲೂ ಅಗತ್ಯಕ್ಕನುಸರಿಸಿ ವ್ಯಕ್ತಿಗಳಿಗೆ ಜವಾಬ್ದಾರಿ ನೀಡಬೇಕು. ಈ ರೀತಿಯಲ್ಲಿ ಜವಾಬ್ದಾರಿಗಳನ್ನು ಹಂಚಿದರೆ ಸಿನೆಮಾ ನಿರ್ಮಾಣದ ಪ್ರತಿಯೊಂದು ಹಂತಗಳ ಕುರಿತು ಸ್ಪಷ್ಟವಾದ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೂ ಅನಾಯಾಸವಾಗಿ ಮುಂದುವರಿಯುವುದಕ್ಕೂ ಸಾಧ್ಯವಾಗುವುದು. ಅನಂತರ ಚಿತ್ರಕಥೆ, ಕ್ಯಾಮರ, ಧ್ವನಿ ಸಂಕಲನ ವ್ಯವಸ್ಥೆಗಳು ಕಥೆಗೆ ಅಗತ್ಯವಾದ ಇತರ ಸಾಮಾಗ್ರಿಗಳು ಮೊದಲಾದವುಗಳನ್ನು ಯಥಾಸಮಯದಲ್ಲಿ ಕ್ರೋಡೀಕರಿಸಿ ಸಿನೆಮಾ ಚಿತ್ರೀಕರಿಸುವ ಸ್ಥಳಕ್ಕೆ ಕೊಂಡುಹೋಗಿ ಸಿನೆಮಾ ಚಿತ್ರೀಕರಣವನ್ನು ಮಾಡಿ ಮುಗಿಸಬಹುದು. ಕಥೆಗೆ ಬೇಕಾದ ಸನ್ನಿವೇಶಗಳಿರುವ ಸ್ಥಳಗಳನ್ನು (ಲೊಕೇಶನ್) ಜವಾಬ್ದಾರರು ಮೊದಲೇ ಆಯ್ಕೆ ಮಾಡಿಕೊಂಡಿರುತ್ತಾರೆ. ಚಿತ್ರಕಥೆಯ ಮುಂದುವರಿಯುವ ರೀತಿಯಲ್ಲಿಯೇ ಚಿತ್ರೀಕರಣ ಸಾಧ್ಯವಾಗಲಾರದು. ಸಾಮಾಗ್ರಿಗಳು, ಕಲಾವಿದರ ಲಭ್ಯತೆ ಮೊದಲಾದವುಗಳಿಗೆ ಅನುಸರಿಸಿ ಚಿತ್ರೀಕರಣದ ಯೋಜನೆಯನ್ನು ಮಾಡಬೇಕು. ಚಿತ್ರೀಕರಣಕ್ಕೆ ಅಗತ್ಯವಾದ ಸಾಮಾಗ್ರಿಗಳನ್ನು ಪ್ರಾದೇಶಿಕವಾಗಿ ಸಂಗ್ರಹಿಸುವುದಕ್ಕೆ ಸಾಧ್ಯವಾದರೆ ವೆಚ್ಚ ನಿಯಂತ್ರಿಸಬಹುದು. ಸ್ವಂತವಾದ ವಸ್ತ್ರ, ಮನೆಯ ಊಟ, ಸರಕಾರಿ ಬಸ್ಸಿನ ಪ್ರಯಾಣ ಇವೆಲ್ಲ ವೆಚ್ಚ ನಿಯಂತ್ರಣದ ಮಾರ್ಗಗಳು. ಚಿತ್ರೀಕರಣ ಆರಂಭವಾದರೆ ನಿರ್ದೇಶಕನಾಗಿರುತ್ತಾನೆ ತಂಡದ ನಾಯಕ. ನಿರ್ದೇಶಕನ ಸೂಚನೆ ಸಲಹೆಗಳನ್ನು ತಂಡದ ಎಲ್ಲರೂ ಪಾಲಿಸಬೇಕು. ಚಿತ್ರದ ದೃಶ್ಯಗಳ ಗುಣಮಟ್ಟ ಹೆಚ್ಚಿಸುವುದಕ್ಕಾಗಿರುವ ಮರುಚಿತ್ರೀಕರಣ,ಕ್ಯಾಮರಾದ ಸ್ಥಾನ, ಸಂಭಾಷಣೆಯ ರೀತಿ, ಹಿನ್ನೆಲ ಸೌಕರ್ಯ, ಚಿತ್ರೀಕರಣದ ಸಮಯ ಇತ್ಯಾದಿಗಳ ತೀರ್ಮಾನಗಳೆಲ್ಲ ನಿರ್ದೇಶಕನದ್ದಾಗಿರುತ್ತದೆ.

ಐದು ನಿಮಿಷದ ಸಿನೆಮಾ ಚಿತ್ರೀಕರಣವನ್ನು ಉದ್ದೇಶಿಸಿರುವುದಾದರೆ ಆ ಸಮಯಕ್ಕಿಂತ ಹೆಚ್ಚಿನ ಸಮಯದ ಚಿತ್ರೀಕರಣ ನಡೆಸಬೇಕು. ಹಾಗಾದರೆ ಮಾತ್ರವೇ ಎಡಿಟಿಂಗ್ ಕಳೆದ ಅನಂತರ ನಾವು ಉದ್ದೇಶಿಸಿರುವ ರೀತಿಯ ಐದು ನಿಮಿಷದ ಚಿತ್ರ ನಮಗೆ ಲಭ್ಯವಾಗುವುದು. ಈ ರೀತಿಯಲ್ಲಿ ಚಿತ್ರೀಕರಿಸಿದ ದೃಶ್ಯಗಳನ್ನು ರಷ್ಸ್ ಎಂದು ಕರೆಯುತ್ತಾರೆ. ಅದನ್ನು ಎಡಿಟರ್ ಬೇಕಾದ ರೀತಿಯಲ್ಲಿ ಎಡಿಟ್ ಮಾಡಿ ರಫ್‌ಕಟ್ ಮಾಡುತ್ತಾನೆ.

**ನಾಲ್ಕು**

ಚಿತ್ರೀಕರಣದಲ್ಲಿ ಕ್ಯಾಮರಾ ಪ್ರಧಾನಪಾತ್ರ ವಹಿಸುವ ಒಂದು ಉಪಕರಣ. ಆದರೆ ಇಂದು ಕ್ಯಾಮರಾದ ಲಭ್ಯತೆ ಧಾರಳವಿದೆ. ಮೊಬೈಲ್ ಫೋನುಗಳು ಕೂಡ ಉತ್ತಮ ಗುಣಮಟ್ಟದ ಕ್ಯಾಮರಗಳನ್ನು ಹೊಂದಿವೆ. ಅದಲ್ಲದೆ ಡಿ.ಎಸ್.ಆರ್.ಎಲ್. ಕ್ಯಾಮರಗಳನ್ನು ಇಂದಿನ ದಿನಗಳಲ್ಲಿ ಚಿತ್ರೀಕರಣಕ್ಕೆ ಒದಗಿಸಲು ಕಷ್ಟ ಸಾಧ್ಯವಲ್ಲ. ಹಾಗೆ selfi stick, ಕ್ಯಾಮರಾ ಸ್ಟಾಂಡುಗಳನ್ನು ಕ್ಯಾಮರ ಉಪಯೋಗಿಸುವುದಕ್ಕೆ ಉಪಯೋಗಿಸಬಹುದು. ಇನ್ನು ನಮ್ಮ ಜೊತೆಗಾರನಿಗೆ ಕ್ಯಾಮರವನ್ನು ಉಪಯೋಗಿಸಲು ಬರುವುದಿಲ್ಲವಾದರೆ ಸಾಧಾರಣ ಮದುವೆ ಸಮಾರಂಭಗಳಲ್ಲಿ ವೀಡಿಯೋ ಮಾಡುವ ವೀಡಿಯೋಗ್ರಾಫರ್‌ಗಳನ್ನು ಚಿತ್ರೀಕರಣಕ್ಕೆ ಉಪಯೋಗಿಸಬಹುದು. ಇದರಿಂದ ನಮ್ಮ ವೆಚ್ಚವನ್ನು ನಿಯಂತ್ರಿಸಬಹುದು. ಚಿತ್ರೀಕರಣದ ಸಮಯದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶ ಧ್ವನಿ ಸಂಕಲನ. ಕಡಿಮೆ ಬೆಲೆಯ ಅಥವಾ ಬಾಡಿಗೆಗೆ ಲಭ್ಯವಿರುವ ಲೇಸ್ಸರ್ ಮೈಕುಗಳನ್ನು ಉಪಯೋಗಿಸಿದರೆ ದೃಶ್ಯಗಳ ಜೊತೆಯಲ್ಲಿ ಶಬ್ದಗಳನ್ನು ಸಂಗ್ರಹಿಸಬಹುದು. ಗುಣಮಟ್ಟದಲ್ಲಿ ಸ್ವಲ್ಪ ಕಡಿಮೆಯಾದರೂ ನಮ್ಮ ಸಿನೆಮಾ ನಿರ್ಮಾಣವೆನ್ನುವ ದೊಡ್ಡ ಉದ್ದೇಶವನ್ನು ಈಡೇರಿಸುವುದಕ್ಕೆ ಅದು ಸಾಕಾಗಬಹುದು.

**ಐದು**

ಚಿತ್ರಕಥೆಯ ಮೂಲಕ ನಮಗೆ ಲಭ್ಯವಾಗುವುದು ದೃಶ್ಯಗಳ ಮೂಲಕ ಮುಂದುವರಿಯುವ ಒಂದು ಕಥೆಯಾಗಿರುತ್ತದೆ. ಈ ಚಿತ್ರಕಥೆಯನ್ನು ಉಪಯೋಗಿಸಿಕೊಂಡು ಅನಾಯಾಸವಾಗಿ ಒಂದು ಸಿನೆಮಾದ ಚಿತ್ರೀಕರಣವನ್ನು ಮಾಡಲು ಸಾಧ್ಯವಿಲ್ಲ. ಆದುದರಿಂದ ಚಿತ್ರಕಥೆಯನ್ನು ನಾವೂ ಚಿತ್ರೀಕರಣದ ಚಿತ್ರಕಥೆಯಾಗಿ ಬದಲಾಯಿಸಬೇಕು. ಒಂದು ಉದಾಹರಣೆಯನ್ನು ನೋಡುವ.

**ದೃಶ್ಯ 1**

**ಹಗಲು /ರಾತ್ರಿ**

(ಹಗಲು ಹೊರಾಂಗಣ)

**ಶೀರ್ಷಿಕೆಗಳು**

ಶೋಟ್ – 1. ಹತ್ತಿರದ ಶೋಟ್ (Close stock)

ನವಿಲೂರು ಎನ್ನುವ ಗ್ರಾಮದ ಹೆಸರಿನ ಫಲಕದ ಹತ್ತಿರದ ಚಿತ್ರ.

2. Long shot (ದೂರದ ಶೋಟ್)

ಕೊಳಕು, ಹಳೆಯ ಬಟ್ಟೆ ಧರಿಸಿದ ವ್ಯಕ್ತಿಯ ಕುಳಿತುಕೊಂಡಿರುವುದು.

3. Medium shot (MS)

ಮಧ್ಯ ವಯಸ್ಕನ ಮುಖ

4. Long shot (LS)

ಗ್ರಾಮದ ದೂರದ ದೃಶ್ಯ ಹೊಳೆ ಸಹಿತ

4ಎ. ಮಧ್ಯಮ ಶೋಟ್ (MS)

ಹರಿಯುವ ಹೊಳೆ

5. Close shot (CS)

**ಹೂಗಳು**

6. Medium shot (MS) ಎಲೆಗಳು, ಗಿಡಗಳು ವೀಕ್ಷಕ ವಿವರಣೆ, ಇದು ನವಿಲೂರು ಗ್ರಾಮ

7. M.S., L.S, C.S - ಸುಂದರವಾದ ಗ್ರಾಮ ದೃಶ್ಯಗಳು

cut to ಎಲೆಗಳು, ಗಿಡಗಳು ವೀಕ್ಷಕ ವಿವರಣೆ, ಇದು ನವಿಲೂರು ಗ್ರಾಮ

8. MS

ನಾಮಫಲಕದ ಕೆಳಗೆ ಕುಳಿತ ಮಧ್ಯವಯಸ್ಕ ಅವನು ಮಾತನಾಡುತ್ತಾನೆ.

ಧ್ವನಿ : ಐದು ವರ್ಷಗಳ ಹಿಂದೆ ನಾನಿಲ್ಲಿಗೆ ಬರುವಾಗ ಈ ಹೊಳೆ, ಮರ, ಗಿಡ, ಇಲ್ಲಿಯ ಗಾಳಿ .................... (ಈ ರೀತಿಯಲ್ಲಿ ಮಾತು ಪೂರ್ತಿಕರಿಸುವುದು)

ಈ ರೀತಿಯ ಶೂಟಿಂಗ್ ಸ್ಕ್ರಿಪ್ಟ್‌ನ ಆಧಾರದಲ್ಲಿ ಚಿತ್ರೀಕರಣ ಪೂರ್ತಿಮಾಡುವುದು.

**ಆರು**

ಸ್ಕ್ರಿಪ್ಟ್‌ನಲ್ಲಿ ಹೇಳಿರುವ ರೀತಿಯಲ್ಲಿ ಅಗತ್ಯವಿರುವುದನ್ನೆಲ್ಲ ಚಿತ್ರೀಕರಿಸಿ ಮುಗಿದಿದೆ. ಸಾಧಾರಣ ಒಂದು ಮೆಮರಿ ಕಾರ್ಡಿನಲ್ಲಿ ತುಂಬುವುದೇ ಆಗಿರಬಹುದು. ನಮ್ಮ ಕನಸುಗಳು ಸಾಕ್ಷಾತ್ಕಾರವಾಗುವುದು. ಅದರ ಎಡಿಟಿಂಗ್‌ನ ಮೂಲಕವಾಗಿರುತ್ತದೆ. ಅದಕ್ಕೆ ಊರಿನ ಪರಿಚಿತವಾದ ಸ್ಟುಡಿಯೋದವರನ್ನು ಸಂಪರ್ಕಿಸಬಹುದು. ಒಂದೆರಡು ಗಂಟೆಗಳ ಎಡಿಟಿಂಗ್ ಕೆಲಸದ ಅನಂತರ ನಮ್ಮ ಉದ್ದೇಶಿತ ಚಿತ್ರದ ರೂಪವನ್ನು ಕಾಣುವುದಕ್ಕೆ ಸಾಧ್ಯವಾಗಬಹುದು. ಇನ್ನು ಬೇಕಾಗಿರುವುದು ಕಥಾಪಾತ್ರಗಳ ಹಿನ್ನೆಲೆ ಧ್ವನಿಗಳು. ಪಾತ್ರಧಾರಿಗಳನ್ನೇ ಶಬ್ದಸಂಕಲನಕ್ಕೆ ಕರೆಯಬಹುದು. ಹಾಗೆ ಶಬ್ದವನ್ನು ಧ್ವನಿಮುದ್ರಿಸಿಕೊಳ್ಳಬೇಕು.

ಅನಂತರ ಯಥಾಪ್ರಕಾರ ಬೇಕಾದಲ್ಲಿ ಶಬ್ದದ ಜೋಡಣೆಯನ್ನು ಮಾಡಬೇಕು. ಉದಾಹರಣೆಗೆ ಸಂಭಾಷಣೆ, ಹಿನ್ನೆಲೆ, ಟೈಟಿಲ್ಸ್ ಇತ್ಯಾದಿ. ಇದೆಲ್ಲಾ ಪೂರ್ತಿಕರಿಸಿ ಎಡಿಟರ್ ನಮಗೆ ಸಿನೆಮಾದ ಪ್ರಿಂಟನ್ನು ನೀಡುವನು.

ಇಲ್ಲಿಗೆ ನಮ್ಮ ಸಿನೆಮಾ ಪೂರ್ತಿಯಾಗುವುದು. ಹೀಗೆ 5/10 ನಿಮಿಷದ ಸಿನೆಮಾವನ್ನು ಕ್ಯಾಮರ ಉಪಯೋಗಿಸಿಯೋ, ಮೊಬೈಲು ಉಪಯೋಗಿಸಿಯೋ ನಿರ್ಮಿಸಬಹುದು.

**ಚಟುವಟಿಕೆಗಳು**

- ಕಥೆ – ಚಿತ್ರಕಥೆಗಳ ವ್ಯತ್ಯಾಸವನ್ನು ಗಮನಿಸಿಕೊಂಡು ಒಂದು ಚಿತ್ರಕಥೆಯನ್ನು ರಚಿಸುವುದು. (ಉದಾ: ಧನಿಯರ ಸತ್ಯನಾರಾಯಣ– ಕೊರಡ್ಕಲ್ ಶ್ರೀನಿವಾಸರಾಯ ಕಥೆ)
- ಚಿತ್ರಕಥೆ ರಚನೆಯ ಕಮ್ಮಟಗಳನ್ನು ನಡೆಸುವುದು.

* * * * *

## ನಾಟಕ

ಆಧುನಿಕ ಕನ್ನಡ ನಾಟಕದ ಚರಿತ್ರೆ 100 ವರ್ಷ ಹಳೆಯದು. ಇದಕ್ಕೆ ಸಂಸ್ಕೃತ ಸಾಹಿತ್ಯದ ಪರಂಪರೆ ಲಭ್ಯವಾಯಿತು. ನಾಟಕ ಒಂದು ಸಂಕೀರ್ಣ ಕಲೆ. ನಾಟಕಕಾರ ಬರೆಯುವ ರಚನೆ ಒಂದು ಭಾಗ. ಇದು ಸಂಪೂರ್ಣವಾಗುವುದು ರಂಗಮಂದಿರದಲ್ಲಿ. ಕಾವ್ಯ ಕಾದಂಬರಿಗಳು ಭಾಷೆಯ ಮೂಲಕ ಪರಿಣಾಮ ಸಾಧಿಸಿದರೆ ನಾಟಕ ರಂಗದ ಮೂಲಕ ಪರಿಣಾಮ ಸಾಧಿಸುತ್ತದೆ.

ಕನ್ನಡದಲ್ಲೂ ನಾಟಕ, ನಾಟಕ ಮಂದಿರ ಒಟ್ಟಿಗೇ ಅರಳಿದಂತೆ ಕಾಣುತ್ತದೆ. ಚುರಮರಿ ಶೇಷಗಿರಿರಾಯರು, ಬೆಳ್ಳಾವೆ ನರಸಿಂಹ ಶಾಸ್ತ್ರಿಗಳು, ಬಿ. ಪುಟ್ಟಸ್ವಾಮಯ್ಯ ಎಲ್ಲರೂ ರಂಗಭೂಮಿಗಾಗಿ ಬರೆದರು. ಅನಂತರ ಕೆಲವು ಕಾಲ ನಾಟಕಕಾರರಿಗೂ ಅವರ ನಾಟಕದ ಪ್ರದರ್ಶನ ಮಾಡುವ ನಾಟಕ ಮಂದಿರಕ್ಕೂ ನಿಕಟ ಸಂಬಂಧವಿರಲಿಲ್ಲ.

ಆಧುನಿಕ ಕನ್ನಡ ನಾಟಕದ ಪ್ರಾರಂಭದ ವರ್ಷಗಳಲ್ಲಿ ಅನುವಾದಗಳು, ಭಾಷಾಂತರಗಳು, ರೂಪಾಂತರಗಳು, ಸ್ವತಂತ್ರ ಕೃತಿಗಳಿಗಿಂತ ಹೆಚ್ಚು ಬಂದವು. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಬಂದ 'ಬಾಲಿವಾಲಾ' ಪಾರ್ಸಿ ತಂಡ ಇಲ್ಲಿನ ಜನರನ್ನು ಬೆರಗುಗೊಳಿಸಿತು. ಕಲಾಭಿಮಾನಿಗಳಾದ ಚಾಮರಾಜ ಒಡೆಯರ ಪ್ರೋತ್ಸಾಹದಿಂದ ಶ್ರೀ ಜಯಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ (1882) ಪ್ರಾರಂಭವಾಯಿತು. ಬಸವಪ್ಪಶಾಸ್ತ್ರಿ 6 ಸಂಸ್ಕೃತ ನಾಟಕಗಳ ಅನುವಾದ ಮಾಡಿದರು. ಅಳಸಿಂಗಾಚಾರ್ಯರು ಭಾಸನ ಎರಡು ನಾಟಕಗಳನ್ನು ಅನುವಾದ ಮಾಡಿದರು. ಎಂ.ಎಲ್. ಶ್ರೀಕಂಠೇಗೌಡ, ಗುಂಡೋಕೃಷ್ಣ ಚುರಮುರಿ ಮೊದಲಾದವರು 'ಶೇಕ್ಸ್‌ಪಿಯರ್'ನ ನಾಟಕಗಳನ್ನು ಅನುವಾದಿಸಿದರು. ಡಿ.ವಿ.ಜಿ. 'ಮ್ಯಾಕ್‌ಬೆತ್'ನ್ನು ಅನುವಾದಿಸಿದರು. ಎಸ್.ಜಿ. ಶಾಸ್ತ್ರಿ, 'ಇಬ್ಸನ'ನ ಮೂರು ನಾಟಕಗಳನ್ನು ಅನುವಾದ ಮಾಡಿದರು.

ಪ್ರಾರಂಭದಲ್ಲಿ ನಾಟಕಗಳಲ್ಲಿ ನಟರಿಗೇ ಪ್ರಾಧಾನ್ಯವಿತ್ತು. ಕ್ರಮೇಣ ವಾಸ್ತವಿಕತೆಗೆ ಪ್ರಾಧಾನ್ಯತೆ ಬಂತು. ಬೆಳೆದು ಬಂದ ವೃತ್ತಿ ನಟರ (ಗುಬ್ಬಿ ವೀರಣ್ಣನಂತಹವರ) ಕಂಪೆನಿಗಳು ನಾಟಕವನ್ನು ಜೀವಂತವಾಗಿ ಉಳಿಸಿದವು. ಒಳ್ಳೆಯ ರಂಗಪ್ರಜ್ಞೆಯ ನಾಟಕಗಳೂ ಬಂದವು. ಬೆಳ್ಳಾವೆ ನರಸಿಂಹ ಶಾಸ್ತ್ರಿಗಳ 'ಶ್ರೀಕೃಷ್ಣ ಪಾರಿಜಾತ' ಇಂತಹುದರಲ್ಲಿ ಗುರುತಿಸುವಂಥವು. ಕಥೆಗಳನ್ನು ಹೆಣೆದು ನಾಟಕವನ್ನಾಗಿಸಿ ತರಲು ಸಮರ್ಥರಾದರು. ಗಂಭೀರವಾದ ನಾಟಕದಲ್ಲಿ ಹಾಸ್ಯವನ್ನು ತಕ್ಕಮಟ್ಟಿಗೆ ಯಶಸ್ವಿಯಾಗಿ ಬಳಸಿದರು. ರಂಗಭೂಮಿಯ ಮೇಲೆ ಆಸಕ್ತಿಯುಳಿಸುವ ಸಂಭಾಷಣೆಯನ್ನು ತಂದರು. ಈ ಕಂಪೆನಿಗಳು 'ಎಚ್ಚಮ ನಾಯಕ' ದಂತಹ ಐತಿಹಾಸಿಕ

ನಾಟಕಗಳನ್ನು 'ಸಂಸಾರ ನೌಕೆ' ಯಂತಹ ಸಾಮಾಜಿಕ ನಾಟಕಗಳನ್ನು ಅಭಿನಯಿಸಿದವು.

ನಾಟಕ ಸಾಹಿತ್ಯದ ಸೃಷ್ಟಿಯಿಂದ ಬಿ.ಎಂ.ಶ್ರೀ.ಯವರ ಕೊಡುಗೆ ಮುಖ್ಯ. ಇವರು ರನ್ನನ 'ಗದಾಯುದ್ಧ'ವನ್ನು ಅನುಸರಿಸಿ 'ಗದಾಯುದ್ಧ ನಾಟಕ' (1925) ಬರೆದರು. ವಿಧಿ ಮನುಷ್ಯನನ್ನು ಮೀರಿದ ಶಕ್ತಿ ಎಂದು ಗುರುತಿಸುವುದು ನಾಟಕ ವಸ್ತು. ಅನಂತರ ಇನ್ನೊಂದು ಮುಖ್ಯ ಕೃತಿ 'ಅಶ್ವತ್ಥಾಮನ್' (1926) ಬರೆದರು. ಇದು ಗ್ರೀಕ್‌ನ ನಾಟಕಕಾರ ಸಫೋಕ್ಲೀಸ್‌ನ 'ಅಜಾಕ್ಸ್' ನಾಟಕದ ಮಾದರಿಯಲ್ಲಿದೆ. ಹಲವು ಕಾರಣಗಳಿಗಾಗಿ ಇದು ಮುಖ್ಯ ಕೃತಿ. ದೈತ್ಯ ಪಾತ್ರಗಳ ಘರ್ಷಣೆ, ನೋವು, ನಾಟಕೀಯತೆ, ಮನುಷ್ಯನ ಹೊಣೆ, ಬಾಳು ಮುಂತಾದವುಗಳನ್ನು ಗಂಭೀರ ದೃಷ್ಟಿಯಿಂದ ಕಾಣುವ ಮೊದಲ ನಾಟಕ. ಪೌರಾಣಿಕ ಸಾಮಗ್ರಿಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ನಿರೂಪಿಸಿ, ಸಾಮಗ್ರಿಗೆ ತಮ್ಮದೇ ದೃಷ್ಟಿಯನ್ನು ಶ್ರೀ ಇಲ್ಲಿ ಇತ್ತಿದ್ದಾರೆ. ನಾಟಕದ ಕಲ್ಪಕತೆಗೆ ಹೊಸರೂಪ ಕೊಟ್ಟರು. ಕಾಲೈಕ್ಯ ಸ್ಥಳೈಕ್ಯಗಳನ್ನು ಪಾಲಿಸಿದರು. ಇಡೀ ಕೃತಿ ಒಂದೇ ಸ್ಥಳದಲ್ಲಿ ಕೆಲವೇ ಗಂಟೆಗಳಲ್ಲಿ ಮುಕ್ತಾಯವಾಗುತ್ತದೆ. ಇಡೀ ನಾಟಕವನ್ನು ಪದ್ಯ ಮಾಧ್ಯಮದಲ್ಲಿ ರಚಿಸಿದರು. ಸಮಕಾಲೀನ ಕನ್ನಡವನ್ನು ಬಳಸಲಿಲ್ಲ. ಹೀಗಾಗಿ ರಂಗಭೂಮಿಯ ಕುರಿತು ಒಂದು ಮುಖ್ಯ ಸಮಸ್ಯೆಯನ್ನು ಹಾಗೆಯೇ ಉಳಿಸಿದರು.

ಇದೇ ಪರಂಪರೆಯಲ್ಲಿ ಕುವೆಂಪುರವರು ಪೌರಾಣಿಕ ಸಾಮಗ್ರಿಯನ್ನು ನಾಟಕಕ್ಕೆ ಬಳಸಿದರು. ಕೈಲಾಸಂರ 'ಏಕಲವ್ಯ' ಉತ್ತಮ ನಾಟಕ, ಇಲ್ಲಿನ ದುರಂತ ಒಳ್ಳೆಯತನಕ್ಕಾಗಿ ಜೀವನದಲ್ಲಿ ಒಳ್ಳೆಯತನದ ನಾಶ. ಕೈಲಾಸಂರವರು ರೋಚಕ ನಾಯಕನನ್ನು ಹೊಸಬೆಳಕಿನಲ್ಲಿ ತೋರಿಸುತ್ತಾರೆ. ಪರ್ವತವಾಣಿಯ 'ಕೀಚಕ'ದಲ್ಲಿ ಎಲ್ಲ ಕೃಷ್ಣನ ಇಚ್ಛೆಯಂತೆ ನಡೆಯುತ್ತದೆ. ಶ್ರೀರಂಗರು ಪೌರಾಣಿಕ ನಾಟಕಗಳಲ್ಲಿ ಸಾಮಾನ್ಯವಾಗಿ ಒಪ್ಪಿರುವ ಅರ್ಥವನ್ನು ನಿರೂಪಿಸಲು ಹೋಗುವುದಿಲ್ಲ. ಅರ್ಥವನ್ನು ಹುಡುಕುತ್ತಾರೆ. ಗಿರೀಶ್ ಕಾರ್ನಾಡರ 'ಯಯಾತಿ' ರಂಗಭೂಮಿಯ ದೃಷ್ಟಿಯಿಂದ ಉತ್ತಮ ನಾಟಕ. ಮೆಲೊಡ್ರಾಮದ ಛಾಯೆ ಇದ್ದರೂ ಮನುಷ್ಯ ಸ್ವಭಾವ ಬಾಳಿನ ರೀತಿಗಳತ್ತ ದಯೆಯತ್ತ ಹೊರಳುತ್ತದೆ.

ಜ್ಞಾನಿಗಳು, ಸಂತರು – ಬುದ್ಧ, ಪುರಂದರದಾಸ ಕನಕದಾಸರನ್ನು ನಾಯಕರನ್ನಾಗಿಸಿದ ನಾಟಕಗಳೂ ಬೇಕಾದಷ್ಟು ಬಂದಿವೆ. ಶ್ರೀನಿವಾಸರ 'ಯಶೋಧರಾ' (1933), 'ಪುರಂದರದಾಸ', ಶ್ರೀರಂಗರ 'ಸಿರಿಪುರಂದರ', ಪರ್ವತವಾಣಿಯವರ 'ಮುಕುತಿ ಮೂಗುತಿ', ಈ ಮೂರು ನಾಟಕಗಳ ನಾಯಕ ಪುರಂದರ ದಾಸರು, ಆಧುನಿಕ ಕನ್ನಡ ನಾಟಕದ ಪ್ರಾರಂಭದಿಂದಲೇ ಐತಿಹಾಸಿಕ ಸಾಮಗ್ರಿಯನ್ನು ಸಮರ್ಥವಾಗಿ ಬಳಸಿದವರು 'ಸಂಸರು'. ಮೈಸೂರಿನ ಇತಿಹಾಸವನ್ನು ಬಳಸಿಕೊಂಡು ಅವರು ಒಂದು ನಾಟಕ ಚಕ್ರವನ್ನೇ ರಚಿಸಿದರು. ಇಂದಿಗೂ ರಂಗಭೂಮಿಯಲ್ಲಿ ಗೆಲ್ಲುವಂತಹ, ಮೆಲೊಡ್ರಾಮವನ್ನು ಅರಗಿಸಿಕೊಳ್ಳುವ ಕ್ರಿಯೆ, ಸಂಘರ್ಷ ಅವರ ನಾಟಕದಲ್ಲಿವೆ. ಪಾತ್ರಗಳು ಸರಳ, ಸ್ಪಷ್ಟ ಹಾಗೂ ಶಕ್ತಿವತ್ತಾಗಿವೆ.

ಶೇಕ್ಸ್‌ಪಿಯರ್‌ನ ಗಂಭೀರ ನಾಟಕ ಪ್ರಭಾವ ಬಿದ್ದ ಕನ್ನಡ ದುರಂತ ನಾಟಕ ಕುವೆಂಪುರವರ 'ರಕ್ತಾಕ್ಷಿ'. ಇದು 'ಹ್ಯಾಮ್ಲೆಟ್' ನಾಟಕವನ್ನನುಸರಿಸುತ್ತದೆ. 1960ರ ವರೆಗೆ ಪೌರಾಣಿಕ ಐತಿಹಾಸಿಕ ನಾಟಕಗಳೇ ಹೆಚ್ಚಾಗಿ ಬಂದಿವೆ. ಇವುಗಳೆಲ್ಲಾ ಬಹುಮಟ್ಟಿಗೆ ದುರಂತ ನಾಟಕಗಳೇ. ದುರಂತ ನಾಟಕಗಳಲ್ಲಿ ವಿಧಿಯೊಡನೆ ಹೋರಾಡುವ ನಾಯಕನನ್ನು ಕಾಣುತ್ತೇವೆ. ಆದರೆ ಶ್ರೀನಿವಾಸರ 'ಕಾಕನಕೋಟೆ' ಪರ್ವತವಾಣಿಯವರ 'ಕವಿಭಿಕ್ಷೆ' ದುರಂತ ನಾಟಕಗಳಲ್ಲ.

1887ರಲ್ಲಿ ರಚಿತವಾದ 'ಇಗ್ಗಪ್ಪ ಹೆಗ್ಗಡೇ ವಿವಾಹ ಪ್ರಹಸನ' ಮೊದಲ ಸಾಮಾಜಿಕ ನಾಟಕ. ಆದರೆ ಕನ್ನಡದಲ್ಲಿ ಸಾಮಾಜಿಕ ನಾಟಕವನ್ನು ಬೆಳೆಸಿದವರು, ಸಮೃದ್ಧ ನಾಟಕ ರಚಿಸಿ, ನಾಟಕಕ್ಕೊಂದು ರೂಪಕೊಟ್ಟವರು ಕೈಲಾಸಂ ಹಾಗೂ ಶ್ರೀರಂಗ.

ಕೈಲಾಸಂ ಇಂಗ್ಲೆಂಡಿನಲ್ಲಿ ನಾಟಕ ನೋಡಿ ಬರೆದವರು. ಕನ್ನಡ ನಾಟಕವನ್ನು ಜನಸಾಮಾನ್ಯರ ಹತ್ತಿರಕ್ಕೆ ತಂದರು. ರಾಜರು, ಸಂತರು, ದೈವಾಂಶ ಸಂಭೂತರನ್ನು ಬಿಟ್ಟು ಜನ ಸಾಮಾನ್ಯರನ್ನು ತಂದರು. ವಿಧವೆಯನ್ನು ಕಾಣುವುದೇ ಅಮಂಗಲವೆಂದ ಕಾಲದಲ್ಲಿ ಅವಳನ್ನು ರಂಗಕ್ಕೆ ತಂದರು. ಬಡಾಯಿ, ಡೌಲು, ಆಷಾಢ ಭೂತಿತನ ಎಲ್ಲವನ್ನೂ ಹಾಸ್ಯ ಮಾಡಿದರು. ಹಾಸ್ಯದಿಂದಲೂ ಗಂಭೀರ ಉದ್ದೇಶ ಸಾಧಿಸಬಹುದು ಎಂದು ತೋರಿದರು. ಅವರ ಮೊದಲ ಕೃತಿ 'ಟೊಳ್ಳು ಗಟ್ಟಿ'. ಸಮಾಜವನ್ನು ತಿದ್ದಲು ಅವರು ಬಳಸಿದ್ದು ಹಾಸ್ಯವನ್ನು. ವಿಡಂಬನೆಯನ್ನು, ಅಂತಃಕರಣ ಮಮತೆ ಬೆಳಗುವ ಜೀವನವನ್ನು ಅಭಿಮಾನದಿಂದ ಕಂಡರು. ಅವರು ಬಳಸಿದ್ದು ಸುತ್ತಮುತ್ತ ಜನ ಆಡುತ್ತಿದ್ದ ಭಾಷೆಯನ್ನು. ಅದರ ಒಂದು ಮುಖ್ಯಭಾಗ ಕನ್ನಡಾಂಗ್ಲೋ ಇಂಗ್ಲಿಷ್ ಬೆರೆತ ಕನ್ನಡ.

ಅವರು ಕೆಲವು ಗಂಭೀರ ನಾಟಕಗಳನ್ನು ಬರೆದರು. 'ಬಹಿಷ್ಕಾರ', 'ಸೂಳೆ' ಮೊದಲಾದವು. ನಾಟಕವನ್ನು ಜನಸಾಮಾನ್ಯರ ಹತ್ತಿರಕ್ಕೆ ತಂದರು. ರಂಗಭೂಮಿಯನ್ನು ವಿಚಾರ ರಂಗಭೂಮಿಯನ್ನಾಗಿ ಮಾಡಲು ಪ್ರಯತ್ನಿಸಿದರು. ಕನ್ನಡ ನಾಟಕ–ನಾಟಕ ಮಂದಿರಗಳ ಉಳಿವಿಗೆ ಇವರ ನಾಟಕಗಳು ನೆರವಾದರು.

**ಶ್ರೀರಂಗ :** ಇಂಗ್ಲೆಂಡಿನಲ್ಲಿ ನಾಟಕ ನೋಡಿದವರು. ನಾಟಕವನ್ನು ಜೀವನ ವಿಮರ್ಶೆಗಾಗಿ ಬಳಸಿದರು. ಅವರ ನಾಟಕದಲ್ಲಿ ಯೋಚನೆಯ, ವಿಚಾರಗಳ ಅಂಗ ಹೆಚ್ಚು. ವಿಡಂಬನೆಗಳೂ ಇವೆ. ಸುಮಾರು 40 ದೊಡ್ಡ 100 ಏಕಾಂಕ ನಾಟಕಗಳನ್ನು ಬರೆದಿದ್ದಾರೆ. 'ಹರಿಜನದ್ವಾರ', 'ಉದರ ವೈರಾಗ್ಯ' ಮೊದಲ ಪ್ರದರ್ಶಿತ ನಾಟಕಗಳು. ಗೊಡ್ಡು ಆಚಾರ, ಸಂಪ್ರದಾಯ ಪ್ರಿಯತೆ, ಒಳಗೆ ಸತ್ವವಿಲ್ಲದೆ ಸಮಾಜದಲ್ಲಿ ಗೌರವ ಕಾಪಾಡಿಕೊಳ್ಳುವ ಹಂಬಲ ಇವನ್ನು ವಿಡಂಬಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶದ ಭಾಗ್ಯವನ್ನು ಭವಿಷ್ಯವನ್ನು ನಾಟಕದ ಚಿಂತನೆಯ ವಸ್ತುವನ್ನಾಗಿ ಮಾಡಿಕೊಂಡರು. ಅವರ 'ಶೋಕಚಕ್ರ' ಇದಕ್ಕೆ ಉದಾಹರಣೆ. ಇವರಲ್ಲಿ ಅಭಿಪ್ರಾಯಗಳ ಘರ್ಷಣೆ ಮುಖ್ಯವಾದುದರಿಂದ ಭಾವಗಳಿಗೆ ಸಂಬಂಧಪಟ್ಟ ಮಾತುಗಳು ಬಹು ಕಡಿಮೆ. ಕನ್ನಡ ರಂಗಭೂಮಿಯಲ್ಲಿ ಭಾಷೆ ಹೊಸ ರೀತಿಯಲ್ಲಿ ದುಡಿಯಲು ಪ್ರಾರಂಭಿಸಿದ್ದು ಇವರ ನಾಟಕಗಳಿಂದ. ಇವರ ಬಹುಪಾಲು ನಾಟಕಗಳಲ್ಲಿ ವಿಷಣ್ಣತೆ ತುಂಬಿದೆ. ದುರ್ಬಲ ನಾಯಕರನ್ನೇ ಕಾಣುತ್ತೇವೆ. ಅವರ 'ಕತ್ತಲೆ ಬೆಳಕು' ಉತ್ತಮ ನಾಟಕ.

ಅತ್ಯಂತ ಜನಪ್ರಿಯ ನಾಟಕಕಾರರಲ್ಲಿ ಪರ್ವತವಾಣಿ(ಪಿ. ನರಸಿಂಗರಾವ್) ಒಬ್ಬರು. ಇವರ ಮೊದಲ ನಾಟಕ 'ಉಂಡಾಡಿ ಗುಂಡ'. ಸುಮಾರು 50 ನಾಟಕಗಳನ್ನು ರಚಿಸಿದ್ದಾರೆ. ಸೊಗಸಾದ ರಂಗಪ್ರಜ್ಞೆ ಇದೆ. ಹಲವಾರು ಪಾಶ್ಚಾತ್ಯ ನಾಟಕಕಾರರ ಕೃತಿಗಳ ರೂಪಾಂತರ ಮಾಡಿ ಕನ್ನಡಕ್ಕಿತ್ತಿದ್ದಾರೆ. ಹಾಸ್ಯ ನಾಟಕಕಾರರಾದರೂ, ಗಂಭೀರ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಗಲ್ಲಿಗೇರಿಸುವ ಪದ್ಧತಿ ಸಾಧುವೇ ಅಸಾಧುವೇ ಎಂದು 'ಹಗ್ಗದ ಕೊನೆ'ಯಲ್ಲಿ ವಿಮರ್ಶಿಸಿದ್ದಾರೆ. 'ಕನಕಾಭಿಷೇಕ'ದಲ್ಲಿ ಲೈಂಗಿಕ ಸಮಸ್ಯೆ 'ಕವಿಭಿಕ್ಷೆ'ಯಲ್ಲಿ ಪ್ರಾಣಿಬಲಿ, ಅಸ್ಪೃಶ್ಯತೆ, ಹಿಂಸೆ, ಪರಮತ ಮಾತ್ಸರ್ಯ, ಕವಿಯ ಕರ್ತವ್ಯ ಜ್ಞಾನ ವಿಮರ್ಶಿಸಿದ್ದಾರೆ. ತಾಂತ್ರಿಕವಾಗಿ ಅನೇಕ ಪ್ರಯೋಗ ಮಾಡಿದ್ದಾರೆ. ಸಂಭಾಷಣೆಯನ್ನೂ ಸಮರ್ಥವಾಗಿ ನಿರ್ವಹಿಸುತ್ತಾರೆ. ಭಾಷೆ ಚಿತ್ರಮಯ.

ಬೇಂದ್ರೆಯವರು 'ಉದ್ಧಾರ', 'ನಗೆಯ ಹೊಗೆ' ನಾಟಕಗಳನ್ನು ಬರೆದರು. 'ಉದ್ಧಾರ' ಹರಿಜನರ ಸಮಸ್ಯೆಯ ಕುರಿತದ್ದು. ಜಡಭರತರು 'ಮೂಕಬಲಿ'ಯಲ್ಲಿ ಎರಡು ಹಳ್ಳಿಗಳ ಎರಡು ಸಂಸಾರದ ಕಥೆ ಬರೆದರು. ಅವರ 'ಉತ್ತರಾರ್ಧ'. ' ಆ ಊರು ಈ ಊರು' ಇವುಗಳಲ್ಲೆ ಹೊಳೆ, ಕತ್ತಲು ಸಂಕೇತಗಳಾಗಿ ಬರುತ್ತವೆ. ಹೀಗೆ ಸಂಕೇತಗಳನ್ನು ಬಳಸುವ ಮತ್ತೊಂದು ಒಳ್ಳೆಯ ನಾಟಕಕಾರ ಕೀರ್ತಿನಾಥ ಕುರ್ತಕೋಟಿ. ಅವರ 'ಆ ಮನಿ', ಜಿ.ಬಿ. ಜೋಷಿಯವರ 'ಅನಾಮಧೇಯ', 'ಕದಡಿದ ನೀರು' ಉತ್ತಮ ದುರಂತ ನಾಟಕಗಳು.

ನಾಟಕ ರಚನೆಯಲ್ಲಿ ಒಂದು ಪಂಥ ಅಥವಾ ಮಾರ್ಗ ಎಂದು ಬಂದುದು ಅಸಂಗತ ಅಥವಾ ಅಬ್ಸರ್ಡ್ ನಾಟಕಗಳ ರಚನೆಯಲ್ಲಿ. ಇದು ಸಂಪೂರ್ಣವಾಗಿ ಪಾಶ್ಚಾತ್ಯ ಸಾಹಿತ್ಯದಿಂದ ಬಂದುದು. ಅಬ್ಸರ್ಡ್ ಎಂದರೆ 'ಹೊಂದಾಣಿಕೆ ಇಲ್ಲದ' ಎಂದು ಅರ್ಥ. ಈ ವಿಶಾಲ ಮನುಷ್ಯನ ಬಾಳಿಗೆ ಅರ್ಥವಿಲ್ಲ ಎಂಬುದು ಈ ನಾಟಕಗಳ ದೃಷ್ಟಿ. ನಾವು ಮಾಡುವುದೆಲ್ಲ ನಿರರ್ಥಕ ಎಂಬ ಭಾವನೆ ಮನುಷ್ಯನ ಚಿಂತನೆಯಲ್ಲಿ ಯಾತನೆ ಮೂಡಿಸುತ್ತದೆ. ಚಿಂತೆ ಮಾಡಿದಷ್ಟು ಯಾತನೆ ಆಳವಾಗುತ್ತದೆ.

ಈ ಜೀವನ ದೃಷ್ಟಿಯ ಮೇಲೆ ನಾಟಕವನ್ನು ರಚಿಸಿದವರು ನಾಟಕದಲ್ಲಿ ಒಂದು ಸಂಗತಿಗೂ ಇನ್ನೊಂದು ಸಂಗತಿಗೂ ಅರ್ಥವಾಗುವ ತರ್ಕಬದ್ಧ ಕೊಂಡಿಗಳನ್ನು ಬಿಟ್ಟರು. ಅನುಭವದ ಅರ್ಥಹೀನತೆ ತೋರಿಸ ಹೊರಟರು. ಒಂದು ಪಾತ್ರ ಇನ್ನೊಂದಕ್ಕೆ ಹೇಳುವುದಕ್ಕೂ ಎರಡನೆಯ ಪಾತ್ರ ಕೊಡುವ ಉತ್ತರಕ್ಕೂ ಎಷ್ಟೋ ಬಾರಿ ಸಂಬಂಧವೇ ಇರುವುದಿಲ್ಲ. ಒಬ್ಬರಿಗೆ ತಮ್ಮ ಮನದಲ್ಲಿರುವುದನ್ನು ಸ್ಪಷ್ಟವಾಗಿ ತಿಳಿಸುವ ಕ್ರಿಯೆ ಎಷ್ಟು ಕಷ್ಟ ಎಂಬುದನ್ನು ಇದು ಸೂಚಿಸುತ್ತದೆ.

1950ರ ಮೇ 11 ಯುರೋಪಿನಲ್ಲಿ ಪ್ರದರ್ಶಿತವಾದ ಅಯೊನೆಸ್ಕೊದ 'ದಿ ಬಾಲ್ಡ್ ಪ್ರಿಯಾ ದೊನ್ನಾ'ದ ಆಧಾರದಿಂದ ಸುಮತೀಂದ್ರ ನಾಡಿಗರು ರಚಿಸಿದ 'ಬೊಕ್ಕ ತಲೆಯ ನರ್ತಕಿ' (1966) ಬೆಂಗಳೂರಲ್ಲಿ ಪ್ರದರ್ಶಿತವಾಯಿತು. ಇದರೊಂದಿಗೆ ಅಸಂಗತ ನಾಟಕ ಕನ್ನಡಕ್ಕೆ ಕಾಲಿಟ್ಟಿತು. ಅರ್ಥ ಶೂನ್ಯತೆಯನ್ನು ಪ್ರೇಕ್ಷಕರಿಗೇ ಅನುಭವವಾಗುವಂತೆ ಮಾಡುವುದು ಇದರ ಉದ್ದೇಶ. ಅನಂತರ ಕಂಬಾರರ 'ಚಾಳೇಶ', ಚಂದ್ರಶೇಖರ ಪಾಟೀಲರ 'ಅಪ್ಪ, 'ಕೊಡೆಗಳು, 'ಕುಂಟಾ ಕುಂಟಾ ಕುರವತ್ತಿ, 'ಗುರ್ತಿನವರು',

‘ಟಿಂಗರ ಬುಡ್ಡಣ್ಣ’, ಎನ್. ರತ್ನರವರ ‘ಎಲ್ಲಿಗೆ’ ‘ಗೋಡೆ ಬೇಕೆ ಗೋಡೆ’, ‘ಬೊಂತೆ’, ಚಂದ್ರಕಾಂತ ಕುಸನೂರರ ಅಸಂಗತ ನಾಟಕಗಳು ಒಳ್ಳೆಯ ನಾಟಕಗಳು. ಅಸಂಗತ ನಾಟಕ ಕೆಲವು ವರ್ಷ ಬಿರುಗಾಳಿಯಂತೆ ಬೀಸಿ ಈಗ ತಣ್ಣಗಾಗುತ್ತಿದೆ.

ಅಸಂಗತ ನಾಟಕದ ಅಂಗ ಇರುವ ರಚನೆ ಲಂಕೇಶರ ‘ತೆರೆಗಳು’. ಆದರೂ ಇದು ಸಂಪೂರ್ಣ ಅಸಂಗತ ನಾಟಕವಲ್ಲ. ಇಲ್ಲಿನ ತೀವ್ರ ಸಾಮಾಜಿಕ ಪ್ರಜ್ಞೆ ಅಸಂಗತ ನಾಟಕದಲ್ಲಿ ಕಾಣುವುದಿಲ್ಲ. ಲಂಕೇಶರು ಇದೆಲ್ಲದರ ಮೂಲಕ ಹಲವರ ಬದುಕಿನ ಟೊಳ್ಳನ್ನು ತೋರಿಸುವ ನಾಟಕಗಳನ್ನು ಬರೆದರು. ಅವರ ‘ಕ್ರಾಂತಿ’ ಬಂತು ಕ್ರಾಂತಿ’ ಯಲ್ಲಿ ಕ್ರಾಂತಿಯನ್ನು ಕುರಿತ ನಿಲುವು ಸಂದಿಗ್ಧವಾಗಿದೆ. ಅವರ ತುಂಬ ಆಕಾಂಕ್ಷೆಯ ನಾಟಕ ‘ಸಂಕ್ರಾಂತಿ’ ಹನ್ನೆರಡನೆಯ ಶತಮಾನದ ಬಸವಣ್ಣ–ಬಿಜ್ಜಳರ ಸಮಸ್ಯೆ, ಐತಿಹಾಸಿಕ ಕಲೆಗಿರುವಂತೆಯೇ ಸಮಕಾಲೀನ ಶಕ್ತಿ ಲಂಕೇಶರ ಸಾಹಿತ್ಯದಲ್ಲೆಲ್ಲ ಕಾಣುತ್ತದೆ. ಆದರೆ ಸೂಕ್ಷ್ಮತೆ, ನಯವಾದ ಪಾತ್ರ ವಿಶ್ಲೇಷಣೆ ಕಾಣುವುದಿಲ್ಲ. ಅವರ ಭಾಷೆ ಕಸುವುಳ್ಳವು. ಹಳ್ಳಿಯ ಭಾಷೆಯ ಜೊತೆಗೆ ವ್ಯಂಗ್ಯವೂ ಇದೆ. ಅವರ ‘ಕ್ರಾಂತಿ ಬಂತು ಕ್ರಾಂತಿ’, ‘ನನ್ನ ತಂಗಿಗೊಂದು ಗಂಡು ಕೊಡಿ’ಗಳಲ್ಲಿ ಭಾಷೆಯನ್ನು ನೋಡಬಹುದು. ‘ಗಿಳಿಯು ಪಂಜರದೊಳಿಲ್ಲ’ ‘ತೆರೆಗಳು’ ಅವರ ಪ್ರಮುಖ ನಾಟಕಗಳು.

ಗಿರೀಶ್ ಕಾರ್ನಾಡ್ ಅವರ ‘ಯಯಾತಿ’ ಮತ್ತು ‘ತುಘಲಕ್’ ಉತ್ತಮ ನಾಟಕಗಳು. ರಂಗಭೂಮಿಯ ದೃಷ್ಟಿಯಿಂದಲೂ ಮಹತ್ವದ ಕೃತಿಗಳು. ಇವುಗಳಲ್ಲಿ ಕ್ರಿಯೆ ವೇಗವಾಗಿ ಸಾಗುತ್ತದೆ. ಅವರ ಇನ್ನೊಂದು ನಾಟಕ ನಾಟ್ಯರಂಗ ಪ್ರಶಸ್ತಿ ಪಡೆದ ಕೃತಿ – ‘ಹಯವದನ’, ಇದೊಂದು ಬಯಲಾಟ. ರಂಗಭೂಮಿಯ ದೃಷ್ಟಿಯಿಂದ ಸೊಗಸಾದ ನಾಟಕವಿದು. ನಾಟ್ಯರಂಗ ಪ್ರಶಸ್ತಿ ಪಡೆದ ಮತ್ತೊಬ್ಬ ನಾಟಕಕಾರರು ಚಂದ್ರಶೇಖರ ಕಂಬಾರರು. ಅವರ ‘ಋಷ್ಯಶೃಂಗ’ ‘ನಾರ್ಸಿಸಸ್’, ‘ಜೋಕುಮಾರಸ್ವಾಮಿ’ ಉತ್ತಮ ನಾಟಕಗಳು.

ಇನ್ನೊಬ್ಬ ಶ್ರೇಷ್ಠ ನಾಟಕಕಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ಅವರ ‘ಯಮಳ ಪ್ರಶ್ನೆ’ ಒಳ್ಳೆಯ ಒಂದು ನಾಟಕ. ಎಚ್.ಎಮ್. ಚನ್ನಯ್ಯನವರ ‘ಎಲ್ಲರಂಥವನಲ್ಲ ನನ್ನ ಗಂಡ’. ಜಾನಪದ ಮಾಧ್ಯಮ ಬಳಸಿಕೊಂಡ ಇನ್ನೊಂದು ಸತ್ವಶಾಲಿ ನಾಟಕ. ಅನಂತಮೂರ್ತಿಯವರ ‘ಆವಾಹನೆ’, ‘ಆರ್ಯರ ಯಜ್ಞ’, ಎಚ್.ಕೆ. ರಂಗನಾಥ್‌ರವರ ‘ಅಮೃತವರ್ಷ’ ಎ. ಮೂರ್ತಿಯವರ ‘ಹುಚ್ಚಿ’, ‘ಅಯ್ಯಾ ನಾನು ಯಾರು’ ಉತ್ತಮ ನಾಟಕಗಳು.

ಕನ್ನಡದಲ್ಲಿ ಗಂಭೀರ ಹಾಗೂ ಅಸಂಗತ ನಾಟಕಗಳು ಸಂಕೇತಗಳನ್ನು ಬಳಸಿತು. ಫ್ಯಾಂಟಸಿಯನ್ನು ಬಳಸಿತು. ಇತಿಹಾಸವನ್ನು ಬಳಸಿತು. ಹಾಡನ್ನು ಒಮ್ಮೆ ದೂರವಿಟ್ಟು ಮತ್ತೆ ತೆಗೆದುಕೊಂಡಿತು. ನಾಟಕಗಳಲ್ಲಿ ನಗರಭಾಷೆ, ಗ್ರಾಮಭಾಷೆ ಬಳಸಲ್ಪಟ್ಟಿತು. ಪ್ರಾಚೀನ ಗ್ರೀಸಿನಿಂದ ಆಧುನಿಕ ಫ್ರಾನ್ಸ್, ರಷ್ಯಗಳವರೆಗೆ ಹಲವು ದೇಶ ಕಾಲಗಳ ಬೀಜವನ್ನು ಇಲ್ಲಿ ನಾಟಕಕಾರರು ಬಿತ್ತಿದ್ದಾರೆ. ಪ್ರಾರಂಭದಲ್ಲಿ ನಾಟಕಕಾರರ ವೈಯಕ್ತಿಕ ಪ್ರಭಾವಗಳನ್ನು ಕಂಡರೆ, ಕಳೆದ 30 ವರ್ಷಗಳಲ್ಲಿ ಅಲ್ಲಿನ ಪಂಥಗಳು ಪಶ್ಚಿಮ ದೇಶದಲ್ಲಿ ಸತ್ವ ಕುಗ್ಗುವ ಹೊತ್ತಿಗೆ ಇಲ್ಲಿ ಅವತರಿಸುವುದನ್ನು ಕಾಣುತ್ತೇವೆ.

ನಾಟಕ ಸಾಹಿತ್ಯದ ಜತೆಗೇ ಪಾಶ್ಚಾತ್ಯರಿಂದ ಪ್ರೇರಿತವಾದ ಗೀತನಾಟಕಗಳೂ ಬಂದವು. ಗೀತ ನಾಟಕಗಳಲ್ಲಿ ಪು.ತಿ.ನರ ಕೊಡುಗೆ ವಿಶಿಷ್ಟ. ಅವರ ‘ಅಹಲ್ಯೆ’, ‘ಗೋಕುಲ ನಿರ್ಗಮನ’, ‘ವಿಕಟ ಕವಿ ವಿಜಯ’ ಉತ್ತಮ ವರ್ಗದವು. ಕಾರಂತರ ‘ಯಾರೋ ಬಂದರು’ ಕೂಡಾ. ಕೆ.ವಿ. ಸುಬ್ಬಣ್ಣ, ಕೀರ್ತಿನಾಥ ಕುರ್ತಕೋಟಿ ಮುಂತಾದವರೂ ಗೀತನಾಟಕ ಪ್ರಯೋಗ ಮಾಡಿದ್ದಾರೆ.

## 4. ಕನ್ನಡ ನಾಟಕ ಸಾಹಿತ್ಯದ ವಿವಿಧ ಘಟ್ಟಗಳು

ನಾಟಕ ಎಂಬುದು ಆಧುನಿಕ ಸಂದರ್ಭದಲ್ಲಿ ಹುಟ್ಟಿಕೊಂಡದ್ದು. ಆಧುನಿಕ ಕನ್ನಡ ನಾಟಕ ಅರವತ್ತರ ದಶಕದವರೆಗೆ ಮುಖ್ಯವಾಗಿ ಸಾಹಿತ್ಯ ಪರಂಪರೆಯ ಒಂದು ಭಾಗವಾಗಿತ್ತು. ಕನ್ನಡ ರಂಗ ಪರಂಪರೆಯನ್ನು ಈ ಸಾಹಿತ್ಯ ಪರಂಪರೆ ಲಕ್ಷಿಸಲಿಲ್ಲವಾದ್ದರಿಂದ ನಮ್ಮ ಬಯಲಾಟಗಳು, ಕಂಪನಿ ನಾಟಕಗಳು ಆಧುನಿಕ ನಾಟಕ ಸಾಹಿತ್ಯದೊಂದಿಗೆ ಯಾವ ಬಗೆಯ ಅರ್ಥಪೂರ್ಣ ಸಂಬಂಧವನ್ನು ಹೊಂದಿಲ್ಲ. ಅಧ್ಯಯನದ ದೃಷ್ಟಿಯಿಂದ ಕನ್ನಡ ರಂಗಭೂಮಿಯನ್ನು ಜನಪದ ವೃತ್ತಿ ಮತ್ತು ವಿಲಾಸಿ

ರಂಗಭೂಮಿ ಎಂದು ವರ್ಗೀಕರಿಸಲಾಗಿದೆ. ಆಧುನಿಕ ಸಂದರ್ಭದಲ್ಲಿ ರಚಿತವಾದ ನಾಟಕಗಳ ವಸ್ತುವನ್ನಿರಿಸಿಕೊಂಡು ಆಧುನಿಕ ಕನ್ನಡ ನಾಟಕದ ಸ್ವರೂಪವನ್ನು ಗುರುತಿಸಬಹುದಾಗಿದೆ.

## ಆಧುನಿಕ ಕನ್ನಡ ನಾಟಕದ ಸ್ವರೂಪ

ಕನ್ನಡ ನಾಟಕ ಪರಂಪರೆಯಲ್ಲಿ ನಾವು ಆಧುನಿಕವೆಂದು ಗುರುತಿಸುವ ಕಾಲಮಾನ, ಕೇವಲ ನಾಟಕಗಳಿಗೆ ಮಾತ್ರ ಸೀಮಿತವಾಗಿರದೆ ಭಾವಗೀತೆ, ಕಾದಂಬರಿ, ಸಣ್ಣಕತೆ ಮುಂತಾದ ಎಲ್ಲ ಹೊಸಗನ್ನಡ ಪ್ರಕಾರಗಳಿಗೂ ಅನ್ವಯಿಸುತ್ತದೆ. ಕನ್ನಡದಲ್ಲಿ ನಾಟಕ ರಚನೆ ಆರಂಭವಾದದ್ದೇ ಹೊತ್ತಂಭತ್ತನೆಯ ಶತಮಾನದ ಬಳಿಕ. ನಮ್ಮ ಆಧುನಿಕ ರಂಗಭೂಮಿ ಪಾಶ್ಚಾತ್ಯ ರಂಗಭೂಮಿಯ ಪ್ರಭಾವವನ್ನು ಹೊಂದಿತ್ತಾದರೂ ಅದು ರಂಗಭೂಮಿಯ ಬಾಹ್ಯ ಸ್ವರೂಪಕ್ಕೆ ಸಂಬಂಧಿಸಿದ್ದಿತು. ಇಲ್ಲಿ ಪ್ರಯೋಗಿಸಲಾಗುತ್ತಿದ್ದ ನಾಟಕಗಳ ಸ್ವರೂಪವನ್ನು ನಮ್ಮ ಸಂಸ್ಕೃತ ನಾಟಕ ಮತ್ತು ಬಯಲಾಟ ಪರಂಪರೆ ನಿರ್ಣಯಿಸುತ್ತಿತ್ತು.

ಕನ್ನಡದಲ್ಲಿ ನಾಟಕ ರಚನೆಯಾಗಲು ಮುಖ್ಯ ಕಾರಣ ಮರಾಠಿ ಮತ್ತು ಪಾರ್ಸಿ ಕಂಪೆನಿಗಳು. ಕನ್ನಡನಾಡಿನಲ್ಲಿ ಮರಾಠಿ ಮತ್ತು ಪಾರ್ಸಿ ಕಂಪೆನಿಗಳ ಉತ್ಕರ್ಷದಿಂದಾಗಿ ಸಿಡಿದೆದ್ದ ವಿದ್ಯಾವಂತ ಜನತೆ, ಕನ್ನಡ ರಂಗಭೂಮಿಯ ಪುನರುಜ್ಜೀವನಕ್ಕೆ ತೊಡಗಿತು. ಈ ಮರಾಠಿ, ಪಾರ್ಸಿ ಕಂಪೆನಿಗಳ ಉದ್ದೇಶ ಮನರಂಜನೆಯಾಗಿತ್ತು. ಈ ಕಂಪೆನಿ ನಾಟಕಗಳು ಪುರಾಣದ ಕಥೆಯನ್ನಾಧರಿಸಿದ ನಾಟಕವನ್ನು ಪ್ರದರ್ಶಿಸುತ್ತಿತ್ತು. ಜನರು ಈ ಕಂಪೆನಿಗಳ ಪ್ರಭಾವಕ್ಕೆ ಒಳಗಾದದ್ದನ್ನು ಕಂಡು ಮೈಸೂರಿನ ಒಡೆಯರು 'ಚಾಮರಾಜೇಂದ್ರ ನಾಟಕ ಸಭಾ' ಎಂಬ ಸ್ವತಂತ್ರವಾದ ನಾಟಕ ಕಂಪನಿಯನ್ನು ಸ್ಥಾಪಿಸಿದರು. ಹೀಗಾಗಿ ಇಂತಹ ನಾಟಕ ಕಂಪೆನಿಗಳು ಅನಿವಾರ್ಯವಾಗಿ ಕೃತಿ ರಚಿಸಬೇಕಾಯಿತು. ಮೈಸೂರಿನ ಆಸ್ಥಾನದಲ್ಲಿ ಪಂಡಿತರು ಸಂಸ್ಕೃತದಿಂದ ನಾಟಕಗಳನ್ನು ಅನುವಾದ ಮಾಡಿದರು. ಹೀಗಾಗಿ 'ಶಾಕುಂತಲ' ದಂತಹ ನಾಟಕಗಳು ಕನ್ನಡದಲ್ಲಿ ಬಂದವು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಕನ್ನಡನಾಟಕಗಳು ಆರಂಭದ ಕಾಲದಲ್ಲೇ ಪುರಾಣ ಕೇಂದ್ರಿತವಾಗಿ ರಚಿಸಲ್ಪಟ್ಟಿತ್ತು. ಇದು ಆಧುನಿಕ ಕನ್ನಡ ನಾಟಕದ ಮೊತ್ತ ಮೊದಲ ಲಕ್ಷಣವಾಗಿದೆ.

ಆಧುನಿಕ ಕನ್ನಡ ನಾಟಕದ ನವೋದಯಕ್ಕೆ ಕಾರಣ ಪುರುಷರಾದವರಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಮೊದಲಿಗರು. ಇವರು 'ಗದಾಯುದ್ಧ', 'ಅಶ್ವತ್ಥಾಮ' ನಾಟಕಗಳನ್ನು ರಚಿಸಿರು. ನಮ್ಮಲ್ಲಿ ದುರಂತ ನಾಟಕಗಳೇ ಇಲ್ಲದಿದ್ದ ಕಾಲದಲ್ಲಿ ಅವರು ಗ್ರೀಕ್ ದುರಂತ ನಾಟಕಗಳ ರೂಪಾಂತರ ಅನುವಾದಗಳನ್ನು ಪ್ರಕಟಿಸಿದರು. ಈ ಮೂಲಕ ಆಧುನಿಕ ಕನ್ನಡ ನಾಟಕಗಳು ಅನುವಾದಗಳಿಂದಲೇ ಆರಂಭವಾಯಿತು ಎನ್ನಬಹುದು. ಮುಖ್ಯವಾಗಿ ನಾವು ನವೋದಯ, ನವ್ಯ ಕಾಲಘಟ್ಟದಲ್ಲಿ ರಚಿತವಾದ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ವಸ್ತುವನ್ನಿರಿಸಿಕೊಂಡ ನಾಟಕಗಳ ಮೂಲಕ ಆಧುನಿಕ ಕನ್ನಡ ನಾಟಕದ ಸ್ವರೂಪವನ್ನು ವಿವರಿಸಿಕೊಳ್ಳಬಹುದು.

## ಪೌರಾಣಿಕ ವಸ್ತುವನ್ನಿರಿಸಿಕೊಂಡು ರಚಿತವಾದ ನಾಟಕಗಳು

ಜಗತ್ತಿನ ಎಲ್ಲ ದೇಶದ ರಂಗಭೂಮಿಯ ಇತಿಹಾಸವೂ ಪುರಾಣ ವಸ್ತುವಿನಿಂದ ಮೊದಲಾಗಿ ಸಾಮಾಜಿಕ ವಸ್ತುಗಳತ್ತ ನಡೆದ ಹಾದಿಯನ್ನು ಪ್ರತಿಬಿಂಬಿಸುತ್ತದೆಯೆಂಬ ಸಂಗತಿಗೆ ಕನ್ನಡ ರಂಗಭೂಮಿಯ ವಿಕಾಸ ಹೊರತಾದುದಲ್ಲ. ಪುರಾಣ ಸಾಮಗ್ರಿಯನ್ನು ಬಳಸುವ ವೃತ್ತಿರಂಗಭೂಮಿಯ ಹಲವು ನಾಟಕಕಾರರ ಸಂಭಾಷಣಾ ವಿಧಾನದಲ್ಲಿ ಸಮಕಾಲೀನ ಸಮಾಜದ ಓರೆಕೋರೆಗಳು ಪ್ರತಿಬಿಂಬಿಸಿವೆ. ಪುರಾಣ ಸಾಮಗ್ರಿಯನ್ನು ವಿಶೇಷ ಮಾರ್ಪಾಡಿಗೆ ಒಳಪಡಿಸದೆ ನಾಟಕ ರಚಿಸಿದ ವೃತ್ತಿ ರಂಗಭೂಮಿಯ ನಾಟಕಕಾರರು ಪ್ರೇಕ್ಷಕರನ್ನು ರಂಜಿಸಲು ಸಂಗೀತ ನೃತ್ಯಗಳ ನೆರವನ್ನು ಪಡೆದರು. ಈ ನಾಟಕಗಳೆಲ್ಲ ಸಾಮಾನ್ಯವಾಗಿ ಯಾವುದಾದರೊಂದು ಆಸ್ಥಾನದಿಂದ ಆರಂಭವಾಗುತ್ತದೆ. ಅಥವಾ ಆಸ್ಥಾನವೇ ನಾಟಕದ ಘಟನೆಗಳಿಗೆ ಕೇಂದ್ರವಾಗಿರುತ್ತದೆ. ಬಿ. ಪುಟ್ಟಸ್ವಾಮಯ್ಯನವರು ವೃತ್ತಿರಂಗಭೂಮಿಯ ಪ್ರತಿಭಾವಂತ ನಾಟಕಕಾರರಲ್ಲಿ ಒಬ್ಬರಾಗಿದ್ದು ಹಲವು ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. ಉತ್ತರ ಕರ್ನಾಟಕದ ಶಾಂತ ಕವಿಗಳ ಪೌರಾಣಿಕ ನಾಟಕಗಳು ಸಂಸ್ಕೃತ ನಾಟಕಗಳಿಗಿಂತ ಬಯಲಾಟಕ್ಕೆ ಹತ್ತಿರವಾಗಿವೆ. ಶಾಂತಕವಿಗಳಂತೆ

ಕೆರೂರು ವಾಸುದೇವಾಚಾರ್ಯರೂ ಸಂಸ್ಕೃತ ನಾಟಕಗಳು ಮತ್ತು ವೃತ್ತಿ ರಂಗಭೂಮಿಯಿಂದ ಪ್ರಭಾವಿತರಾದರು. ವೃತ್ತಿ ರಂಗಭೂಮಿಯ ನಾಟಕಗಳ ರಚನೆ ಸರಳವಾದುದು. ಕಾಲಕ್ರಿಯೆ ಮತ್ತು ಸ್ಥಳಗಳಿಗೆ ಸಂಬಂಧಿಸಿದ ಐಕ್ಯತೆಗಳ ಕುರಿತು ಕಟ್ಟುನಿಟ್ಟಾದ ನಿಯಮವನ್ನು ಅವರು ಪಾಲಿಸುವುದಿಲ್ಲ. ಆದರೆ ಆಧುನಿಕ ನಾಟಕಕಾರನೊಬ್ಬ ಪುರಾಣ ವಸ್ತುವನ್ನು ಆಶ್ರಯಿಸಿದಾಗ ಇಷ್ಟೆಲ್ಲಾ ಸರಳ ಹಾದಿಯನ್ನು ಹಿಡಿಯುವಂತಿಲ್ಲ. ಎಲ್ಲ ಸನ್ನಿವೇಶ ಸಂದರ್ಭಗಳನ್ನು ರಂಗದ ಮೇಲೆ ರಚಿಸಿ ತೋರಿಸುವುದು ಆಧುನಿಕ ನಾಟಕದ ಗುರಿ. ಪುರಾಣ ವಸ್ತುವನ್ನೂ ಮಾಧ್ಯಮವನ್ನಾಗಿಸಿಕೊಂಡು ಆಧುನಿಕ ಪರಿಕಲ್ಪನೆಗಳನ್ನು ಪ್ರೇಕ್ಷಕರ ಮುಂದಿಡಲು ಪ್ರಯತ್ನಿಸುವುದು ಅದರ ಮತ್ತೊಂದು ಉದ್ದೇಶ. ಮುಂದೆ ಬಿ.ಎಂ. ಶ್ರೀಯವರು 'ಅಶ್ವತ್ಥಾಮನ್' ನಾಟಕದ ಮೂಲಕ ದುರಂತ ನಾಟಕದ ಪರಿಚಯ ಮಾಡಿದರು. ಇವರ ಪರಂಪರೆಯಲ್ಲಿ ಮುನ್ನಡೆದ ಕುವೆಂಪುರವರು ತಮ್ಮ ಎಲ್ಲ ನಾಟಕಗಳಲ್ಲಿಯೂ ಪೌರಾಣಿಕ ಆವರಣವೊಂದನ್ನು ಕಲ್ಪಿಸಿಕೊಂಡಿದ್ದಾರೆ. ದೇವುಡುರವರ 'ಯಾಜ್ಞವಲ್ಕ್ಯ' ಪ್ರಾಚೀನ ಮಹಾಪುರುಷನೊಬ್ಬನ ಧೀಮಂತ ವ್ಯಕ್ತಿತ್ವವನ್ನು ಪರಿಚಯಿಸುವ ಪ್ರಯತ್ನವಾಗಿದೆ. ವಿ. ಸೀತಾರಾಮಯ್ಯನವರ 'ಆಗ್ರಹ', ಜೆ.ಪಿ. ರಾಜರತ್ನಂರವರ 'ಬಾಹುಬಲಿ ವಿಜಯಂ' ಮತ್ತು 'ಗೊಮ್ಮಟ ಶಿಲ್ಪ', ಅ.ನ. ಕೃಷ್ಣರಾಯರ 'ಸ್ವರ್ಣಮೂರ್ತಿ' ಮತ್ತು 'ಹಿರಣ್ಯಕಶಿಪು' ಇವೆಲ್ಲ ಹೊಸ ಸಂವೇದನೆಯ ಪೌರಾಣಿಕ ನಾಟಕಗಳು.

### ಐತಿಹಾಸಿಕ ವಸ್ತುವನ್ನಿರಿಸಿಕೊಂಡು ರಚಿತವಾದ ನಾಟಕಗಳು

ಕನ್ನಡ ನಾಟಕ ಪರಂಪರೆಯ ಆರಂಭ ಕಾಲದಲ್ಲಿ ಪೌರಾಣಿಕ ವಸ್ತುವಿಗೆ ದೊರೆತ ಮಹತ್ವ ಐತಿಹಾಸಿಕ ವಸ್ತುವಿಗೆ ದೊರೆಯಲಿಲ್ಲ. ವಾಸ್ತವವಾಗಿ ಐತಿಹಾಸಿಕ ನಾಟಕಗಳು ಕಾಣಿಸಿಕೊಂಡದ್ದು ನವೋದಯದ ಸಂದರ್ಭದಲ್ಲಿ ಸಂಸರೇ ನಮ್ಮ ಮೊದಲ ಐತಿಹಾಸಿಕ ನಾಟಕಕಾರರೆಂದರೂ ತಪ್ಪಲ್ಲ. ಐತಿಹಾಸಿಕ ವಸ್ತುವಿಗೆ ತಕ್ಕ ಘನತೆ ಮತ್ತು ಕಲಾತ್ಮಕತೆಯನ್ನು ಒದಗಿಸಿಕೊಟ್ಟ ಮೊದಲ ನಾಟಕಕಾರರಾಗಿ ಸಂಸರನ್ನು ಸ್ಮರಿಸಬಹುದು. ಮೈಸೂರಿನ ಇತಿಹಾಸವನ್ನು ಆಧರಿಸಿ ಬರೆದರೆಂದು ಹೇಳಲಾಗಿರುವ 23 ನಾಟಕಗಳಲ್ಲಿ ಆರು ಮಾತ್ರ ಉಳಿದುಕೊಂಡಿವೆ. 'ಬೆಟ್ಟದ ಅರಸು', 'ವಿಗಡ ವಿಕ್ರಮರಾಯ', 'ವಿಜಯ ನರಸಿಂಹ' 'ಮಂತ್ರಶಕ್ತಿ' ಇವುಗಳಲ್ಲಿ ಪ್ರಮುಖವಾದವು.

ಎಂ.ಆರ್. ಶ್ರೀನಿವಾಸ ಮೂರ್ತಿಗಳ 'ಕಂಠೀರವ ವಿಜಯ'ವು ಸಂಸರು ತಮ್ಮ ಮೊದಲ ನಾಟಕವನ್ನು ಪ್ರಕಟಿಸಿದ ಸರಿ ಸುಮಾರಿಗೆ ಪ್ರಕಟವಾಯಿತು. ಎಂ.ಆರ್. ಶ್ರೀಯವರ 'ಧರ್ಮ ದುರಂತ' ವಸ್ತು ಕಲ್ಪನೆಯ ದೃಷ್ಟಿಯಿಂದ ವಿನೂತನ ಮಾದರಿಗೆ ಸೇರಬಹುದಾದ ಕೃತಿ. ಡಿ.ವಿ. ಗುಂಡಪ್ಪನವರ 'ವಿದ್ಯಾರಣ್ಯ ವಿಜಯ' ಬಹು ಹಿಂದೆಯೇ ರಚಿತವಾದ ನಾಟಕವಾಗಿದ್ದು ಅದಕ್ಕೆ ಇತಿಹಾಸ ಮಹತ್ವವಿದೆ. 'ಕಾಕನಕೋಟೆ' ಮಾಸ್ತಿಯವರ ಶ್ರೇಷ್ಠ ನಾಟಕವಾಗಿದ್ದು ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ರಾಜಕೀಯ ಇತಿಹಾಸದ ದಾಖಲೆಯಾಗಿ 'ಕಾಕನ ಕೋಟೆ' ಪಾಳೆಯಗಾರ ಪ್ರಭುತ್ವ ರಾಣಿಯಿಂದ ರಾಜ ಪ್ರಭುತ್ವಕ್ಕೆ ವರ್ಗಾಯಿಸಲ್ಪಡುವ ಸಂಸ್ಕೃತಿಯೊಂದರ ಸಂಕ್ರಮಣ ಕಾಲವನ್ನೂ ಚಿತ್ರಿಸುತ್ತಿದೆ. 'ಶಿವ ಛತ್ರಪತಿ' ಇವರ ಮತ್ತೊಂದು ಐತಿಹಾಸಿಕ ನಾಟಕವಾಗಿದೆ.

ಶ್ರೀರಂಗರ 'ಪುಲಿಕೇಶಿ' ಇತಿಹಾಸದ ಸಂಗತಿಗಳನ್ನು ವ್ಯಕ್ತಿಯ ಕಾಲಮಾನದಿಂದ ತಿಳಿದುಕೊಳ್ಳಲು ಯತ್ನಿಸುವ ನಾಟಕವಾಗಿದೆ. ಸುಮಾರು ಅರ್ಧ ಶತಮಾನದ ಹಿಂದೆ ರಚಿತವಾದ ಈ ನಾಟಕವು ಶ್ರೀರಂಗರು ರಂಗಭೂಮಿಯಲ್ಲಿ ನಡೆಸಿದ ಹಲವು ಪ್ರಯೋಗಗಳ ಒಂದು ಮಾದರಿಯಾಗಿ ಪ್ರಾತಿನಿಧಿಕವಾಗಿದೆ. 'ಹ್ಯಾಮ್ಲೆಟ್' ನಾಟಕದ ಪ್ರೇರಣೆಯಿಂದ ರಚಿತವಾದ ಕುವೆಂಪುರವರ 'ರಕ್ತಾಕ್ಷಿ' ಕನ್ನಡದ ಐತಿಹಾಸಿಕ ನಾಟಕಗಳಲ್ಲಿ ಗಣನೀಯವಾದುದು. ನಾಟಕವು ಕ್ರಿಯಾತ್ಮಕವಾಗಿದ್ದು ಸನ್ನಿವೇಶದಿಂದ ಸನ್ನಿವೇಶಕ್ಕೆ ವೇಗವಾಗಿ ಮುಂದುವರಿಯುತ್ತದೆ.

ಐತಿಹಾಸಿಕ ನಾಟಕಗಳನ್ನು ರಚಿಸಿದ ವೃತ್ತಿ ರಂಗಭೂಮಿಯ ನಾಟಕಕಾರರಲ್ಲಿ ಗರುಡ ಸದಾಶಿವ ರಾವ್, ಬಿ. ಪುಟ್ಟ ಸ್ವಾಮಯ್ಯ, ಕೆ. ಹಿರಣಯ್ಯ ಮತ್ತು ಆರ್.ಡಿ. ಕಾಮತರು ಗಣನೀಯವಾಗಿದ್ದಾರೆ.

ಸಂಸರ ಬಳಿಕ ಐತಿಹಾಸಿಕ ನಾಟಕಕ್ಕೆ ಒಂದು ಗಂಭೀರವಾದ ಸ್ಥಾನವನ್ನು ತಂದುಕೊಟ್ಟವರಿಲ್ಲ. ಗಿರೀಶ ಕಾರ್ನಾಡರು ಹೊಸದೊಂದು ಸಂಪ್ರದಾಯಕ್ಕೆ ಕಾರಣರಾದವರು. ನಮ್ಮ ನಾಟಕ ಸಂಪ್ರದಾಯ ಕನ್ನಡದಲ್ಲಿ ಹುಟ್ಟಲು ಕಾರಣವಾದ ಕೃತಿಗಳಲ್ಲಿ

ಅವರ 'ತುಘಲಕ್' ಅಗ್ರಗಣ್ಯವಾದುದು. ಐತಿಹಾಸಿಕ ಸಾಮಗ್ರಿಯ ಮೂಲಕ ಮನುಷ್ಯನ ಸಾರ್ವಕಾಲಿಕ ಅನುಭವಕ್ಕೆ ರೂಪು ಕೊಡಲು ಹವಣಿಸಿದ ಈ ನಾಟಕ ಆಧುನಿಕ ಕನ್ನಡ ರಂಗಭೂಮಿಯ ಪ್ರಗತಿಯಲ್ಲಿ ಒಂದು ಮಹತ್ವದ ಸಾಧನೆಯಾಗಿ ಪರಿಣಮಿಸಿದೆ. ತುಘಲಕನ ಕಥೆಯ ಐತಿಹಾಸಿಕ ಸಂದರ್ಭವನ್ನು ಆಧುನಿಕ ನೆಲೆಯಲ್ಲಿ ಪರಿಶೋಧಿಸುವ ಈ ಕೃತಿ ಮಾನವ ಸ್ವಭಾವದ ಸಂಕೀರ್ಣತೆಯನ್ನು ನಾಟಕೀಕರಿಸುವ ವಿಧಾನ ಅಸಾಧಾರಣವಾಗಿದೆ.

ಆಧುನಿಕ ಕನ್ನಡ ಐತಿಹಾಸಿಕ ನಾಟಕದಲ್ಲಿ ಲಂಕೇಶರ 'ಸಂಕ್ರಾಂತಿ' ವಿಶಿಷ್ಟ ಮಾದರಿಗೆ ಸೇರುವಂತಹದು. ಈ ನಾಟಕವನ್ನು ಐತಿಹಾಸಿಕವೆಂದು ಸರಳೀಕರಿಸುವಂತಿಲ್ಲವಾದರೂ ವಸ್ತುವಿನ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸದಿರುವಂತಿಲ್ಲ. ಕನ್ನಡ ನಾಡಿನ ಚಾರಿತ್ರಿಕ ವ್ಯಕ್ತಿಗಳಾದ ಬಸವಣ್ಣ, ಬಿಜ್ಜಳರು ಪಾತ್ರ ವರ್ಗದಲ್ಲಿರುವುದು, ಹನ್ನೆರಡನೆಯ ಶತಮಾನದ ವೀರಶೈವ ಚಳುವಳಿಯ ಪ್ರಭಾವ–ಪರಿಣಾಮಗಳು ನಾಟಕದಲ್ಲಿ ಚರ್ಚೆಗೆ ಗುರಿಯಾಗಿದೆ.

## ಸಾಮಾಜಿಕತೆಯನ್ನು ವಸ್ತುವನ್ನಾಗಿಸಿಕೊಂಡು ರಚಿತವಾದ ನಾಟಕಗಳು

ಸಮಕಾಲೀನ ವಸ್ತುಗಳನ್ನೊಳಗೊಂಡ ವಾಸ್ತವ ನಾಟಕಗಳು ಆಧುನಿಕ ಯುಗದ ಫಲವಾಗಿದ್ದು ಕನ್ನಡ ನಾಟಕದ ಇತಿಹಾಸವೂ ಇದಕ್ಕೆ ಹೊರತಲ್ಲ. ಕರ್ಕಿ ವೆಂಕಟ್ರಮಣ ಶಾಸ್ತ್ರಿ ಸೂರಿಗಳ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಮೊದಲ ಸ್ವತಂತ್ರ ಸಾಮಾಜಿಕ ನಾಟಕ. ಈ ನಾಟಕ ಪ್ರದರ್ಶನಗೊಂಡ ಬಗ್ಗೆ ದಾಖಲೆಗಳಿಲ್ಲ. ಹೀಗಾಗಿ ಟಿ.ಪಿ. ಕೈಲಾಸಂರವರೇ ಕನ್ನಡ ಸಾಮಾಜಿಕ ನಾಟಕಗಳ ಆದ್ಯ ಪ್ರವರ್ತಕರೆಂದು ಹೆಸರಾಗಿದ್ದಾರೆ. ಕೈಲಾಸಂರ ಮೊದಲ ನಾಟಕವಾದ 'ಟೊಳ್ಳುಗಟ್ಟಿ' ಸಮಕಾಲೀನ ಸಮಾಜ ಮತ್ತು ರಂಗಭೂಮಿಗೆ ಹಿಡಿದ ಕನ್ನಡಿಯಂತಿದೆ. ಪ್ರತಿಷ್ಠಿತ ನಾಟಕಕಾರರ ಆತ್ಮ ಪ್ರಶಂಸಾ ವಿಡಂಬನೆಯನ್ನು ಗುರಿಯಾಗಿಟ್ಟುಕೊಂಡು ಕೈಲಾಸಂ ತಮ್ಮನ್ನು ಈ ನಾಟಕದಲ್ಲಿ 'ಪ್ರಹಸನ ಪಿತಾಮಹ' ಎಂದು ಕರೆದುಕೊಂಡಿದ್ದಾರೆ. 'ತಾಳಿಕಟ್ಟೋ ಕ್ಕೂಲೀನೆ' ಇವರ ಇನ್ನೊಂದು ನಾಟಕ.

ಇವರ ಸಮಕಾಲೀನರಾದ ಶ್ರೀರಂಗರು ವಾಸ್ತವಾದಿ ನಾಟಕಕಾರರಾಗಿದ್ದು ಸಹಜವಾಗಿಯೇ ಅವರಿಗೆ ಸಮಕಾಲೀನ ವಸ್ತು ಮಹತ್ವದ್ದಾಗಿ ಕಂಡಿದೆ. ತಮ್ಮ ಸುತ್ತಣ ವಲಯದಲ್ಲಿ ಅತ್ಯಂತ ಎಚ್ಚರದಿಂದ ಪರಿಶೀಲಿಸಿದ ಇವರು ಮನುಷ್ಯನ ಅನುಭವದ ವಲಯದಲ್ಲಿ ಇಲ್ಲಿಯವರಿಗೆ ಸಾಹಿತಿಗಳು ಗಮನಿಸದಿದ್ದ ಹಲವಾರು ಹೊಸ ಸಂಗತಿಗಳನ್ನು ಗುರುತಿಸಿದರು. ಮಾನವನ ಲೈಂಗಿಕ ಸಮಸ್ಯೆಗಳು, ಪ್ರೇಮ ವಿವಾಹ, ಕೌಟುಂಬಿಕ ಸಂಬಂಧಗಳು, ಬಡತನ, ನಿರುದ್ಯೋಗ, ಇಂತಹ ಅನೇಕ ಜ್ವಲಂತ ಸಮಸ್ಯೆಗಳು ಶ್ರೀರಂಗರ ಹರಿತವಾದ ವಿಶ್ಲೇಷಣೆಗೆ ಗುರಿಯಾಗಿವೆ. ಇವರ 'ಹರಿಜನ್ವಾರ', 'ಸಂಧ್ಯಾಕಾಲ', 'ಸಂಸಾರಿಗ ಕಂಸ' ಇಂತಹ ನಾಟಕಗಳಲ್ಲಿ ಜಾತಿ ಸಮಸ್ಯೆ, ವರ್ಗ ಸಮಸ್ಯೆಗಳನ್ನು ವಿಶ್ಲೇಷಿಸಿರುವ ಎಚ್ಚರದಲ್ಲಿ ಪ್ರಗತಿಪರ ಒಲವುಗಳನ್ನು ಗುರುತಿಸಬಹುದು. 'ಶೋಕಚಕ್ರ' ಶ್ರೀರಂಗರ ಮಹತ್ವದ ನಾಟಕಗಳಲ್ಲಿ ಒಂದಾಗಿದ್ದು ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ದುರಂತವನ್ನು ಮಂಡಿಸುತ್ತದೆ.

ಶಿವರಾಮ ಕಾರಂತರ 'ಗರ್ಭಗುಡಿ' ಧರ್ಮದ ಅವನತಿಯನ್ನು ಸಾಂಕೇತಿಕವಾಗಿ ನಿರೂಪಿಸುವ ನಾಟಕ. ಅಸ್ಪೃಶ್ಯತೆಯನ್ನು ಕುರಿತ ಬೇಂದ್ರೆಯವರ ನಾಟಕವಾದ 'ಉದ್ಧಾರ'ದಲ್ಲಿ ಸಮಸ್ಯೆಗೆ ಪರಿಹಾರವಿಲ್ಲ. ಆದರೆ ಸಮಸ್ಯೆಯನ್ನು ಎಲ್ಲ ನಿಟ್ಟಿನಿಂದಲೂ ವಿವೇಚಿಸುವ ಪ್ರಯತ್ನವಿದೆ. ವಿ.ಕೃ. ಗೋಕಾಕರ 'ಜನನಾಯಕ' ವಸ್ತುವಿನ ದೃಷ್ಟಿಯಿಂದ ಬಗೆಗೆ ಸೇರುವ ನಾಟಕ. 'ಮೂಕಬಲಿ', ಜಿ.ಬಿ. ಜೋಷಿಯವರ ನಾಟಕವಾಗಿದ್ದು, ಇದು ನಾಗರಕೋಟೆ ಮತ್ತು ಹಾಲಳ್ಳಿಗಳ ಗ್ರಾಮೀಣ ಸಮಾಜದ ದುಷ್ಟ ಮತ್ತು ಶಿಷ್ಟ ಶಕ್ತಿಗಳನ್ನು ಪ್ರತಿನಿಧಿಸುವಂತದ್ದು, ಇವೆರಡರ ಸಂಘರ್ಷವೇ ನಾಟಕದ ಜೀವಾಳವಾಗಿದೆ. 'ಮೂಕಬಲಿ'ಯಂತೆ 'ಕದಡಿದ ನೀರು' ಸಹ ಉತ್ತರ ಕರ್ನಾಟಕದ ಗ್ರಾಮೀಣ ಜನಜೀವನದಿಂದ ಮೂಡಿಬಂದ ಕೃತಿ.

ಈ ಎಲ್ಲ ಸಾಮಾಜಿಕ ನಾಟಕಗಳ ವಸ್ತು.  ನಗರದ ಮಧ್ಯಮ ವರ್ಗದ ಸಮಸ್ಯೆಗಳನ್ನೇ ಪ್ರತಿಬಿಂಬಿಸುತ್ತಿರುವುದು. ಇದು ಮೊದಲು ಗಮನಿಸಬೇಕಾದ ವಿಚಾರವಾಗಿದೆ.

## ಜನಪದ ವಸ್ತುವನ್ನಿರಿಸಿಕೊಂಡು ರಚಿತವಾದ ನಾಟಕಗಳು

ಜನಪದ ರಂಗಗಳ ಜನಪದ ವಸ್ತುವನ್ನಾರಿಸಿಕೊಂಡು ರಚಿತವಾದ ನಾಟಕಗಳನ್ನು ವೃತ್ತಿ ರಂಗಭೂಮಿ ಮತ್ತು ನವೋದಯ ಪರಂಪರೆಯಲ್ಲಿಯೂ ಗುರುತಿಸಬಹುದಾದರೂ, ಜಾನಪದವನ್ನು ವ್ಯಾಪಕವಾಗಿ ಮೊದಲು ಬಳಸಿಕೊಂಡವರೆಂದರೆ ನವ್ಯ ನಾಟಕಕಾರರು. ಅಸಂಗತ ನಾಟಕಗಳ ಉಸುಕಿನ ಮಾರ್ಗದಲ್ಲಿ ಸಿಕ್ಕಿಬಿದ್ದಿದ್ದ ನವ್ಯ ನಾಟಕಕ್ಕೆ ಇದರಿಂದ ಒಂದು ಗಟ್ಟಿಯಾದ ನೆಲೆ ದೊರೆತಂತಾಯಿತು.

ಜನಪದ ವಸ್ತುವನ್ನು ಆಧರಿಸಿದ ನಾಟಕ ಪರಂಪರೆಯನ್ನು ಕನ್ನಡದಲ್ಲಿ ಆರಂಭಿಸಿದವರು ಪತ್ತಾರ ಮಾಸ್ತರ. ಇವರ ನಾಟಕ 'ಸಂಗ್ಯಾಬಾಳ್ಯ' ಜನಪದ ವಸ್ತುವನ್ನು ಹೊಂದಿದೆ. ಕಂಬಾರರ ಕೃತಿಗಳು ಆಧುನಿಕ ನಾಟಕ ಪರಂಪರೆಯಲ್ಲಿ ಜಾನಪದದ ಹಿನ್ನೆಲೆಯಿಂದಾಗಿ ಅನನ್ಯವಾಗಿದೆ. ತಮ್ಮ ನಾಟಕೀಯ ಅಭಿವ್ಯಕ್ತಿಗೆ ಕಂಬಾರರಂತೆ ಸಮಗ್ರವಾಗಿ ಜನಪದ ರಂಗಭೂಮಿಯನ್ನು ಬಳಸಿಕೊಂಡ ಆಧುನಿಕ ಕನ್ನಡ ನಾಟಕಕಾರ ಮತ್ತೊಬ್ಬರಿಲ್ಲವೆನ್ನಬಹುದು. ಜನಪದ ತಂತ್ರದಲ್ಲಿ ಕಂಬಾರರು ಬರೆದ ಮೊದಲ ನಾಟಕ 'ಋಷ್ಯಶೃಂಗ', 'ಹೇಳತೇನ ಕೇಳ' ಎಂಬ ಅವರ ಆಧುನಿಕ ಲಾವಣಿಯ ಮುಂದಿನ ಭಾಗವೇ 'ಋಷ್ಯಶೃಂಗ'ದ ಕಥಾವಸ್ತು. ಜನಪದ ತಂತ್ರವನ್ನು ಕಂಬಾರರು 'ಜೋಕುಮಾರ ಸ್ವಾಮಿ'ಯಲ್ಲಿ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ.

ಗಿರೀಶ ಕಾರ್ನಾಡರ 'ಹಯವದನ' ಅಪೂರ್ಣತೆಯ ಪುರಾಣಕತೆಯೊಂದತ ಕಥೆ ಕಾರ್ನಾಡರ ಸ್ವಂತ ಕಥೆಯಲ್ಲ.

ಲಂಕೇಶರ 'ಸಂಕ್ರಾಂತಿ'ಯಲ್ಲಿರುವ ಜಾನಪದ ಅಂಶಗಳು ವಸ್ತುವಿಗೆ ಅನಿವಾರ್ಯವಾಗಿದೆ. ಸಮೃದ್ಧ ಜಾನಪದ ಸಂಪತ್ತಿನ ಗಣಿಯಂತಿರುವ ಹೊಲೆಯರ ಜೀವನದಲ್ಲಿ ಏರ್ಪಟ್ಟ ಸಾಮಾಜಿಕ ಪರಿವರ್ತನೆಗಳನ್ನು ಐತಿಹಾಸಿಕವಾಗಿ ವಿವೇಚಿಸುವ ಈ ನಾಟಕದಲ್ಲಿ, ಹೊಲೆಯರ ಭಾಷೆ ಮತ್ತು ಬದುಕಿನ ಅವಿನಾ ಸಂಬಂಧವನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಜಾನಪದ ಅಂಶಗಳು ಆಧುನಿಕ ರಂಗಭೂಮಿಯಲ್ಲಿ ಹೇಗೆ ಬಳಕೆಯಾಗಬೇಕೆನ್ನಲು ಪಾಟೀಲರ 'ಟಿಂಗರ ಬುಡ್ಡಣ್ಣ' ಅತ್ಯುತ್ತಮ ನಿರ್ದೇಶನವನ್ನೊದಗಿಸುತ್ತದೆ.

ಜನಪದ ತಂತ್ರವನ್ನೂ ಪರಂಪರೆಯನ್ನು ಕುರಿತ ಶ್ರದ್ಧೆಯಿಂದ ಆಕ್ರಮಿಸುವುದು ಒಂದು ಬಗೆಯಾದರೆ, ವೈವಿಧ್ಯತೆಗಾಗಿ ಮನರಂಜನೆಗಾಗಿ ಆಶ್ರಯಿಸುವುದು ಮತ್ತೊಂದು ಬಗೆ. ಎರಡನೆಯ ಮಾದರಿಯ ನಾಟಕಗಳು ಚಿರಕಾಲ ನಿಲ್ಲಬಹುದಾದ ಪರಂಪರೆಯೊಂದಕ್ಕೆ ಕಾರಣವಾಗುತ್ತದೆಯೆಂಬುದು ಸಂದೇಹಾಸ್ಪದವಾದ ವಿಚಾರವೆನ್ನಬಹುದು. ಏಕೆಂದರೆ ನಗರದ ಪ್ರೇಕ್ಷಕರನ್ನೇ ಗುರಿಯಲ್ಲಿಟ್ಟುಕೊಂಡ ನಿರ್ದೇಶಕರು ಈ ಬಗೆಯ ನಾಟಕಗಳನ್ನು ಮೀರಿ ನಿಂತು ಬಿಡುತ್ತಾರೆ. ನಾಟಕಕಾರರನ್ನೂ ಹಿಂದೆ ಸರಿಸಿ ಏನಕೇನ ಪ್ರಕಾರೇಣ ಮನರಂಜನೆಗೆ ತೊಡಗಲು ಅವಕಾಶವಾದ ಅಪಾಯ ಜನಪದ ರಂಗಭೂಮಿಯ ತಂತ್ರದಲ್ಲಿದೆ.

## ಸಮಾರೋಪ

ಒಟ್ಟಿನಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದ ನಾಟಕಗಳು, ಉತ್ತಮ ಕಲಾ ಮಾಧ್ಯಮಗಳು. ಹಿಂದೆ ನೃತ್ಯ ಗಾನಗಳು ರಾಜರಿಗೆ ಹಾಗೂ ಶ್ರೀಮಂತರಿಗೆ ಮಾತ್ರವೇ ಸೀಮಿತವಾಗಿ ಅರಮನೆಯ ದರ್ಬಾರುಗಳಲ್ಲಿ ಏರ್ಪಡುತ್ತಿದ್ದರೆ, ನಾಟಕ ಅಥವಾ ರಂಗಭೂಮಿಯ ವೀಕ್ಷಣೆ ಜನಸಾಮಾನ್ಯರ ಕೈಗೂ ಎಟುಕುವಂತಾಯಿತು. ಆ ಮೂಲಕ ಪ್ರೇಕ್ಷಕರ ಹಾಗೂ ನಟರ ನಡುವೆ ಸಂಪರ್ಕವನ್ನೂ ಏರ್ಪಡಿಸಲಾಯಿತು.

ಹೊಸಗನ್ನಡ ಸಾಹಿತ್ಯದಲ್ಲಿ ಅರ್ಥಪೂರ್ಣವಾದ ಸಾಹಿತ್ಯ ನಿರ್ಮಿತಿಗೆ ಕಾರಣವಾದ ಸಾಹಿತ್ಯಿಕ ಚಳುವಳಿಗಳಲ್ಲಿ ನವೋದಯ, ಪ್ರಗತಿಶೀಲ ಮತ್ತು ನವ್ಯ ಸಂಪ್ರದಾಯಗಳಿಗೆ ಚಾರಿತ್ರಿಕ ಮಹತ್ವವಿದೆ. ಪ್ರಗತಿಶೀಲ ಚಳುವಳಿಯ ಪ್ರಭಾವ ಕನ್ನಡ ನಾಟಕ ಸಾಹಿತ್ಯವನ್ನು ಗಮನಾರ್ಹವಾಗಿ ವ್ಯಾಪಿಸಲಿಲ್ಲ. ಆದರೆ ನವೋದಯ, ನವ್ಯ ಪರಂಪರೆಗಳೆರಡೂ ಆಧುನಿಕ ಕನ್ನಡ ನಾಟಕವನ್ನು ರೂಪಿಸಿವೆ. ಆಧುನಿಕ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಕೆಲವು ಬೆಲೆಯುಳ್ಳ ಪ್ರಯೋಗಗಳಿಗೆ ಕಾರಣವಾದ ನವ್ಯ ನಾಟಕಗಳು ಕನ್ನಡ ನಾಟಕ ಸಾಹಿತ್ಯಕ್ಕೆ ಹೊಸ ಆಯಾಮವೊಂದರನ್ನು ಸೃಷ್ಟಿಸಿದವು.

ಅನಾಥಪ್ರಜ್ಞೆ, ಮೃತ್ಯುಪ್ರಜ್ಞೆಯ ಉತ್ಕಟತೆಯನ್ನು ನವ್ಯ ನಾಟಕಗಳಲ್ಲಿ ನಾವು ಗುರುತಿಸಬಹುದು.

ನವ್ಯ ನಾಟಕಗಳು ಅಸಂಗತ ರಂಗಭೂಮಿಯ ಪ್ರಭಾವಕ್ಕೆ ತೆರೆದುಕೊಂಡಿರುವುದನ್ನು ಕಾಣಬಹುದು. ಆದರೆ ವಸ್ತು,

ರಚನೆ, ಪಾತ್ರ ನಿರೂಪಣೆಯಲ್ಲಿ ಅವೆಲ್ಲ ಸಾಂಪ್ರದಾಯಿಕವೇ ಆಗಿದ್ದು ವೈಚಾರಿಕವಾಗಿ ಅಸಂಗತವಾದ ಪ್ರಭಾವವಿದೆ. ಅಸಂಗತವಾದಂತೆ ಅಸ್ತಿತ್ವವಾದವೂ ನವ್ಯ ನಾಟಕದ ತಾತ್ವಿಕತೆಯನ್ನು ರೂಪಿಸಿದೆ. ನವ್ಯ ನಾಟಕಕಾರರು ಜಾನಪದ ರಂಗಭೂಮಿಯನ್ನು ವ್ಯಾಪಕವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು.

ನವ್ಯ ನಾಟಕಗಳ ತಾತ್ವಿಕ ಹಿನ್ನೆಲೆಯನ್ನು ಕಾಮೂ, ಸಾರ್ತ್, ಬೆಕೆಟ್, ಅಯನೆಸ್ಕೊ, ಪಿಂಟರ್, ಜೀನೆ, ಬ್ರೆಕ್ಟ್ ಮುಂತಾದ ಪಾಶ್ಚಾತ್ಯ ನಾಟಕಕಾರರಲ್ಲಿ ಕಾಣಬಹುದು. ಕನ್ನಡ ನವ್ಯ ನಾಟಕಕ್ಕೆ ಅಸಂಗತ ರಂಗಭೂಮಿ ಮತ್ತು ಎಪಿಕ್ ರಂಗಭೂಮಿಗಳೆಂಬ ಎರಡು ಪಾಶ್ಚಾತ್ಯ ಮೂಲಗಳು ತುಂಬಾ ಪ್ರಭಾವ ಬೀರಿದೆ. ಕನ್ನಡದ ಉತ್ತಮ ನವ್ಯ ನಾಟಕಗಳು ಈ ಪಾಶ್ಚಾತ್ಯ ಪ್ರಭಾವಗಳಿಗೆ ತೆರೆದುಕೊಂಡಿದ್ದರೂ ಕನ್ನಡದ ಪರಿಸರದಲ್ಲಿಯೇ ಬೇರೂರಿದೆಯೆಂಬುದನ್ನು ಮರೆಯಬಾರದು. ವಸ್ತು, ರಚನೆ, ಪಾತ್ರ ನಿರೂಪಣೆಯಲ್ಲಿ ಅವೆಲ್ಲ ಸಾಂಪ್ರದಾಯಿಕವೇ ಆಗಿದ್ದು ವೈಚಾರಿಕವಾಗಿ ಅಸಂಗತವಾದ ಪ್ರಭಾವವಿದೆ. ಅಲ್ಲದೆ, ಅಸಂಗತವಾದಂತೆ ಅಸ್ತಿತ್ವವಾದವೂ ನವ್ಯ ನಾಟಕದ ತಾತ್ವಿಕತೆಯನ್ನು ರೂಪಿಸಿದೆ.

ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಲಂಕೇಶ್, ಚಂದ್ರಶೇಖರ ಪಾಟೀಲ, ಚಂದ್ರಕಾಂತ ಕುಸನೂರ, ಪೂರ್ಣಚಂದ್ರ ತೇಜಸ್ವಿ, ಎಚ್.ಎಂ. ಚನ್ನಯ್ಯ ಮೊದಲಾದವರು ನವ್ಯ ಕಾಲಘಟ್ಟದ ಪ್ರಮುಖ ನಾಟಕಕಾರರು. ಇವರಲ್ಲಿ ಚಂದ್ರಕಾಂತ ಕುಸನೂರ, ಎಚ್.ಎಂ. ಚನ್ನಯ್ಯ, ತೇಜಸ್ವಿ ಮೊದಲಾದವರು ಅಸಂಗತ ನಾಟಕಗಳ ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡವರು. ಹಾಗೆಯೇ ಕಂಬಾರರು, ಗಿರೀಶ್ ಕಾರ್ನಾಡರು ಜನಪದ ರಂಗಭೂಮಿಯಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

### ಗಿರೀಶ್ ಕಾರ್ನಾಡ್

ಗಿರೀಶ್ ಕಾರ್ನಾಡ್ ತಮ್ಮ ಅಪೂರ್ವ ನಾಟಕ ಕೃತಿಗಳ ಮೂಲಕ ತುಂಬ ಪ್ರಖ್ಯಾತರಾದ ಲೇಖಕರು. ನವ್ಯ ಪೀಳಿಗೆಯ ನಾಟಕಕಾರರಾದ ಕಾರ್ನಾಡರು ಪುರಾಣ, ಇತಿಹಾಸ, ಜಾಪನದ ವಸ್ತುಗಳನ್ನು ಕೇವಲ ಚೌಕಟ್ಟಿನ ಮಟ್ಟಿಗೆ ಬಳಸಿಕೊಂಡು, ಆ ಚೌಕಟ್ಟಿನ ಸಂದರ್ಭದಲ್ಲಿ ಸಮಕಾಲೀನ ಜಗತ್ತಿನ ಕಾಳಜಿಗಳನ್ನು ಗುರುತಿಸಿ, ಅದನ್ನು ಶೋಧಿಸಿ ನೋಡಿರುವುದು ಇವರ ನಾಟಕಗಳಲ್ಲಿ ಕಾಣುತ್ತದೆ.

**ಯಯಾತಿ :** ಇದು ಕಾರ್ನಾಡರ ಮೊದಲ ನಾಟಕವಾಗಿದ್ದು, ಇವರ ಕಥೆ ವೇದಕಾಲದಷ್ಟು ಪ್ರಾಚೀನವಾಗಿದೆ. ಆದರೆ ಅದರ ವಿಸ್ತಾರವಾದ ಆಖ್ಯಾನ ಮಹಾಭಾರತದ ಆದಿಪರ್ವದಲ್ಲಿ ದೊರೆಯುತ್ತದೆ. ಗಿರೀಶ್ ಕಾರ್ನಾಡರ 'ಯಯಾತಿ'ಯ ತಾತ್ವಿಕತೆಯು ಪುರುವಿನ ಪಾತ್ರ ಕಲ್ಪನೆಯಲ್ಲಿದ್ದು, ಆತನೊಬ್ಬನೆ ತನ್ನ ಕ್ರಿಯೆಗಳಿಗೆ ನಿಶ್ಚಿತವಾದ ಅರ್ಥವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುವನು. ಯಯಾತಿಯ ಮುಪ್ಪನ್ನು ಸ್ವೀಕರಿಸುವ ಪುರು ಮತ್ತು ದೃಢ ನಿಶ್ಚಯದಿಂದ ಆತ್ಮಹತ್ಯೆ ಮಾಡಿಕೊಂಡ ಚಿತ್ರಲೇಖೆ ಬದುಕನ್ನು ಜವಾಬ್ದಾರಿಯಿಂದ ಕ್ರಿಯೆಯ ಮೂಲಕವೇ ಅರ್ಥಪೂರ್ಣವಾಗಿಸುತ್ತಾರೆ. ವಂಶ ಪ್ರಜ್ಞೆಯಲ್ಲಿ ತನ್ನ ಅಸ್ತಿತ್ವದ ಬೇರನ್ನು ಕಾಣದೆ ಸ್ವಂತ ನಿಶ್ಚಯಗಳ ಮೂಲಕವೇ ಮುಕ್ತನಾಗುವ ಪುರು ಅಸ್ತಿತ್ವವಾದಿಗಳ ಗುಂಪಿಗೆ ಸೇರುತ್ತಾನೆ. ಈ ನಾಟಕದಲ್ಲಿ ಮನುಷ್ಯ ಸಾಹಸದ ದುರಂತ ಚಿತ್ರವೊಂದನ್ನು ರೂಪಿಸುವ ಹವಣಿಕೆ ಕಾಣುತ್ತದೆ. ಒಟ್ಟಾರೆಯಾಗಿ ಕಾರ್ನಾಡರ 'ಯಯಾತಿ' ನಾಟಕ ಕನ್ನಡದ ಶ್ರೇಷ್ಠ ನಾಟಕಗಳ ಸಾಲಿಗೆ ಸೇರಿಬಿಟ್ಟಿದೆ ಎಂದು ಹೇಳಬಹುದು.

**ತುಘಲಕ್ :** ಕಾರ್ನಾಡರ 'ತುಘಲಕ್' ಮನುಷ್ಯನಲ್ಲಿರುವ ಅಸಂಗತತೆಯನ್ನು ತುಂಬಾ ದುಡಿಸಿಕೊಂಡ ಸಫಲ ನಾಟಕವಾಗಿದೆ. ತುಘಲಕನ ವ್ಯಕ್ತಿತ್ವವೇ ದ್ವಂದ್ವದಿಂದ ಕೂಡಿದೆ. ಅವನ ಚಿತ್ರಣ ವಾಸ್ತವ ಒಂದು, ಅವನ ಆದರ್ಶ ಒಂದು, ಅವನ ಬಯಕೆ ಒಂದು ಈ ತುಮುಲದಲ್ಲಿ ಮತ್ತು ಎಡಬಿಡಂಗಿತನದಲ್ಲಿಯೇ ಸಜ್ಜನತೆ, ಕ್ರೌರ್ಯ, ಆಧ್ಯಾತ್ಮಿಕತೆ, ಹಿಂಸೆ, ರಾಜಕಾರಣ, ಧೂರ್ತತೆ, ಕಾವ್ಯಾತ್ಮಕತೆ, ತರ್ಕಬದ್ಧತೆ ಎಲ್ಲವನ್ನು ಒಂದರ ಮೇಲೊಂದನ್ನು ತೋರಿ ಅಚ್ಚರಿಗೊಳಿಸುವ ವ್ಯಕ್ತಿತ್ವ ಆತನದು.

**ಹಯವದನ :** ಗಿರೀಶ್ ಕಾರ್ನಾಡರ 'ಹಯವದನ' ಅಪೂರ್ಣತೆಯನ್ನು ಪುರಾಣ ಕಥೆಯೊಂದರ ನೆರವಿನಿಂದ ಜನಪದ ಶೈಲಿಯಲ್ಲಿ ವಿವೇಚಿಸುತ್ತದೆ. ಪರಿಪೂರ್ಣತೆಗಾಗಿ ಹಂಬಲಿಸುವ ಮನುಷ್ಯನ ನಿರಂತರ ಹೋರಾಟವನ್ನು ಪದ್ಮಿನಿಯ ಬದುಕು ಸಂಕೇತಿಸುತ್ತದೆ. ದೇವದತ್ತನ ಬುದ್ಧಿಶಕ್ತಿ ಮತ್ತು ಕಪಿಲನ ದೇಹಶಕ್ತಿಗಳೆರಡನ್ನೂ ಪ್ರೇಮಿಸಿ, ಬಯಸುವ ಪದ್ಮಿನಿಯ ಆಸೆ ಪ್ರಾತಿನಿಧಿಕವಾದದ್ದು. ದೇಹ, ಮನಸ್ಸುಗಳೆರಡನ್ನು ತುಂಬಿ ಪರಿಪೂರ್ಣಗೊಳಿಸುವ ಗಂಡಸಿಗಾಗಿ ಹಾರೈಸುವ ಹೆಣ್ಣಿನ ಚಿರಕಾಲದ ಹಂಬಲವನ್ನು ಆಕೆ ಪ್ರತಿನಿಧಿಸುತ್ತಿದ್ದಾಳೆ.

**ತಲೆದಂಡ :** ಈ ನಾಟಕದ ವಸ್ತು ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿ ಹಾಗೂ ಈ ಕ್ರಾಂತಿಯ ವೈಫಲ್ಯದ ಒಂದು ಸ್ಥಿತಿ. ತಲೆದಂಡದಲ್ಲಿ ಎರಡು ಪ್ರಬಲ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳ ಸಂಘರ್ಷವಿದೆ. ನಾಟಕದ ಪ್ರಾರಂಭದಲ್ಲಿ ತೆರೆಯ ಮರೆಯಲ್ಲಿ ನಡೆದಿರುವ ಈ ಸಂಘರ್ಷ ನಾಟಕದ ಕೊನೆಯಲ್ಲಿ ಬಹಿರಂಗ ಸ್ವರೂಪವನ್ನು ತಳೆದು ಪ್ರತಿಗಾಮೀ ಶಕ್ತಿಗಳ ವಿಜಯದಲ್ಲಿ ಕೊನೆಗೊಳ್ಳುತ್ತದೆ.

'ತಲೆದಂಡ'ದಲ್ಲಿ ಅತ್ಯಂತ ಸೂಕ್ಷ್ಮವಾಗಿ ಬೆಳೆದು ಬರುವ ಸಂಬಂಧವೆಂದರೆ ಬಿಜ್ಜಳ–ಬಸವಣ್ಣನ ಸಂಬಂಧ. ಬಸವಣ್ಣನ ಪಾತ್ರದಲ್ಲಿ ಸಂಘರ್ಷಕ್ಕೆ ಆಸ್ಪದವಿಲ್ಲ. ಆದರೆ ಒಂದು ರೀತಿಯಿಂದ ಅವನಿಗೆ ವಿರುದ್ಧವೆನಿಸುವ ಬಿಜ್ಜಳನ ಪಾತ್ರ ಸಂಘರ್ಷಪೂರ್ಣವಾದುದು. ಅಂತರಂಗ ಬಹಿರಂಗಗಳೆರಡರಲ್ಲೂ ಈ ಸಂಘರ್ಷ ನಡೆಯುತ್ತದೆ.

'ತಲೆದಂಡ' ಮೂರು ಅಂಕಗಳ, ಒಟ್ಟು 16 ದೃಶ್ಯಗಳನ್ನು ಹೊಂದಿರುವ ಒಂದು ಪರಿಪೂರ್ಣ ನಾಟಕ ಎಂದು ಹೇಳಬಹುದು. ಈ ನಾಟಕದಲ್ಲಿ ಕಾರ್ನಾಡರು ಕಥೆಯ ಘಟ್ಟಗಳನ್ನು ಮೂರು ಅಂಕಗಳ ಮಾದರಿಯಲ್ಲಿ ಹೆಣೆದಿದ್ದಾರೆ. ನಾಟಕದ ಕೇಂದ್ರ ಕಾಳಜಿಗಳು ಈ ಮೂರು ಘಟ್ಟಗಳಲ್ಲಿ ಬೆಳೆಯುತ್ತಾ, ಪರಸ್ಪರ ಘರ್ಷಿಸುತ್ತ ಒಂದು ಯುಗದ ದ್ವಂದ್ವಗಳನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ.

**ನಾಗಮಂಡಲ :** ಈ ನಾಟಕದ ಕೇಂದ್ರವಸ್ತು 'ರಾಣಿ'ಯನ್ನು ಲಗ್ನವಾಗಿರುವ ಅಪ್ಪಣ್ಣ ಆಕೆಯೊಂದಿಗೆ ಯಾವ ರೀತಿಯ ಪ್ರೀತಿ, ಪ್ರೇಮದ ಕುರುಹಾದ ದೈಹಿಕ ಸಂಬಂಧಗಳನ್ನು ಆತ ಇಟ್ಟುಕೊಂಡಿರುವುದಿಲ್ಲ. ಬದಲಾಗಿ ಆತ ತನ್ನ ದೇವದಾಸಿಯೊಂದಿಗೆ ಕಾಲ ಕಳೆಯಬಯಸುತ್ತಾನೆ. ಆತ ಮನೆಗೆ ಬರುವುದು ಊಟಕ್ಕೆ ಮಾತ್ರ. ಒಟ್ಟಾರೆ ಸಾಂಪ್ರದಾಯಿಕ ಮೌಲ್ಯಗಳ ವ್ಯವಸ್ಥೆಯ ಪ್ರಕಾರದಲ್ಲಿ ಎಲ್ಲವನ್ನೂ ಕ್ರೋಢೀಕರಿಸುವ ಪ್ರಯತ್ನವೆಂದರೆ ಇದೇ ಎನ್ನಬಹುದು. ಒಟ್ಟಾರೆ, ಜಾನಪದೀಯ ಚೌಕಟ್ಟನ್ನು ಹೊಂದಿದ 'ನಾಗಮಂಡಲ' ನಾಟಕದಲ್ಲಿ ನಾಟಕೀಯ ಅಂಶಗಳ ಕೊರತೆ ಸ್ಪಷ್ಟವಾಗಿ ಕಾಣಿಸುತ್ತದೆ.

**ಅಂಜುಮಲ್ಲಿಗೆ :** ಈ ನಾಟಕದ ಪ್ರಾರಂಭದಲ್ಲಿ ಋಗ್ವೇದ ಸಂಹಿತೆಯಲ್ಲ ಬರುವ ಯಮ–ಯಮೀಯರ ಸಂವಾದದ ಶ್ಲೋಕವನ್ನು ಕೊಡಲಾಗಿದೆ. ಇಲ್ಲಿ ಕಾರ್ನಾಡರು ಸಮಕಾಲೀನ ವಸ್ತುಗಳನ್ನು ಸ್ವೀಕರಿಸುವುದನ್ನು ನಾವು ಕಾಣಬಹುದು.

**ಹಿಟ್ಟಿನ ಹುಂಜ:** ಮನುಷ್ಯ ನಂಬಿದ ಮೌಲ್ಯ ಮತ್ತು ಪ್ರವೃತ್ತಿಗಳ ನಡುವಿನ ಮೌನ ಹೋರಾಟವೇ ಈ ನಾಟಕದ ವಸ್ತು. ನಾಲ್ಕೇ ಪಾತ್ರಗಳಲ್ಲಿ ಚಿಕ್ಕದಾಗಿ, ಚೊಕ್ಕದಾಗಿ ನಿರೂಪಿತವಾದ ಈ ನಾಟಕ, ಕಾರ್ನಾಡರ ಪ್ರತಿಭೆಯ ಕೈಗನ್ನಡಿ ಎನ್ನಬಹುದು.

ಒಟ್ಟಾರೆ ಕಾರ್ನಾಡರ ಈ ಎಲ್ಲಾ ನಾಟಕಗಳನ್ನು ಗಮನಿಸಿದಾಗ ಇತಿಹಾಸ ಮತ್ತು ಪುರಾಣದ ವಿಷಯವನ್ನು ತೆಗೆದುಕೊಂಡಾಗಲೂ ಅವರಲ್ಲಿ ಸಮಕಾಲೀನ ಪ್ರಜ್ಞೆ ಕೆಲಸ ಮಾಡಿರುವುದು ಸ್ಪಷ್ಟವಾಗುವುದು. ಮನುಷ್ಯ ಸ್ವಭಾವದ ಬಿರುಕುಗಳನ್ನು ಕಾರ್ನಾಡರು ಮತ್ತೆ ಮತ್ತೆ ತಮ್ಮ ನಾಟಕಗಳಲ್ಲಿ ಪ್ರಸ್ತಾವ ಮಾಡಿರುವುದಕ್ಕೆ ಅವರಿಗೆ ಅಸ್ತಿತ್ವವಾದದ ಹಿನ್ನೆಲೆ ಇರುವುದು ಗಮನಕ್ಕೆ ಬರುತ್ತದೆ. ಒಟ್ಟಾರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾಟಕ ಪ್ರಕಾರದಲ್ಲಿಯೇ ಮಿಂಚಿ, 'ಜ್ಞಾನಪೀಠ ಪ್ರಶಸ್ತಿ' ಪಡೆದ ಮಹಾನ್

ಲೇಖಕರು ಗಿರೀಶ್ ಕಾರ್ನಾಡರು.

**ಚಂದ್ರಶೇಖರ ಕಂಬಾರರು :** ಚಂದ್ರಶೇಖರ ಕಂಬಾರರು ಕವಿಯಾಗಿ, ಜಾನಪದ ವಿದ್ವಾಂಸರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಸಿನಿಮಾ ನಿರ್ದೇಶಕರಾಗಿ, ಸಂಗೀತಗಾರರಾಗಿ ಖ್ಯಾತರಾದವರು. ಎಲ್ಲ ನಾಟಕಕಾರರಿಗಿಂತ ಹೆಚ್ಚಾಗಿ ಜಾನಪದ ಕಥೆಗಳನ್ನು ಆಶ್ರಯಿಸುವ ನಾಟಕಕಾರರು ಚಂದ್ರಶೇಖರ ಕಂಬಾರರು. ಇಂದಿಗಿಂತ ಭಿನ್ನವಾದ ಸಾಮಾಜಿಕ ಪರಿಸರದಲ್ಲಿ ಹುಟ್ಟಿ ಬಂದ ಜಾನಪದ ಕಥೆಗಳ ಮೂಲಕ ಆಧುನಿಕ ಸಂವೇದನೆಯನ್ನು ವ್ಯಕ್ತಪಡಿಸುವ ಆಶಯ ಇವರ ನಾಟಕಗಳಲ್ಲಿವೆ.

ಕಂಬಾರರು, 'ಬೆಂಬತ್ತಿದ ಕಣ್ಣು', 'ಋಷ್ಯಶೃಂಗ', 'ಚಾಳೇಶ ಮತ್ತು ನಾರ್ಸಿಸಸ್', 'ಜೋಕುಮಾರ ಸ್ವಾಮಿ', 'ಜೈಸಿದ ನಾಯಕ', 'ಕಾಡುಕುದುರೆ', 'ಹರಕೆಯ ಕುರಿ', 'ನಾಯಿಕತೆ', 'ಸಿರಿಸಂಪಿಗೆ', 'ತುಕ್ರನ ಕನಸು', 'ಮಹಾಮಾಯಿ', 'ಸಾಂಗ್ಯಾಬಾಳ್ಯಾ' ಮೊದಲಾದ ನಾಟಕಗಳನ್ನು ಬರೆದಿದ್ದಾರೆ. 'ಚಕೋರಿ' ಇವರ ಮಹಾಕಾವ್ಯ, 'ಹೇಳತೇನ ಕೇಳ' ಸಾವಿರದ ನೆರಳು', 'ಬೆಳ್ಳಿಮೀನು' ಇತ್ಯಾದಿ ಕವನ ಸಂಕಲನಗಳು 'ಕರಿಮಾಯಿ', 'ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ', 'ಸಿಂಗಾರವ್ವ ಮತ್ತು ಅರಮನೆ' ಇವರ ಪ್ರಮುಖ ಕಾದಂಬರಿಗಳು. ಇವಲ್ಲದೆ ಸಿನಿಮಾರಂಗದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡ ಕಂಬಾರರ ಮೊದಲ ಸಿನೆಮಾ 'ಋಷ್ಯಶೃಂಗ'. ಇವರ 'ಕಾಡುಕುದುರೆ', 'ನಾಯಿಕಥೆ' (ಸಂಗೀತಾ), 'ಹರಕೆಯ ಕುರಿ' ಮೊದಲಾದ ಸಿನೆಮಾಗಳಿಗೆ ರಾಷ್ಟ್ರೀಯ ಪ್ರಶಸ್ತಿ ದೊರಕಿದೆ.

**ನಾರ್ಸಿಸಸ್ :** ಅಸಂಬದ್ಧವೆನಿಸುವಂಥ ಘಟನೆಗಳ ಜೋಡಣೆಯಾಗಿರುವ 'ನಾರ್ಸಿಸಸ್' ಎಂಬ ಅಸಂಗತ ನಾಟಕ ಹೊಸ ರೀತಿಯ ವಿಮರ್ಶೆಗೆ ದಾರಿ ಮಾಡಿಕೊಟ್ಟಿತು. ಈ ನಾಟಕದ ನಾಯಕನಾದ ನಾಣಿ ಆತ್ಮಾರಾಧಕ ಪ್ರವೃತ್ತಿಯ ವಿಕೃತ ಮನಸ್ಸಿನ ವ್ಯಕ್ತಿ. ನಾಟಕ ಆರಂಭವಾಗುವುದೇ ಅವನ ಆತ್ಮಾರಾಧನೆಗೆ ಬಲಿಯಾದ ಹೆಣ್ಣುಗಳ ಆಕ್ರಂದನದೊಂದಿಗೆ.

'ನಾರ್ಸಿಸಸ್' ನಾಟಕದ 'ನಾನು' ನಾಯಕನ ಬಾಲ್ಯದ ಮುಗ್ಧತೆಗೆ ಸಂಕೇತವಾಗಿದ್ದರೆ, ಪೊಲೀಸರು ಅವನ ಕರ್ಮವನ್ನು ಪ್ರತಿನಿಧಿಸುತ್ತಿದ್ದಾರೆ. ಮುಗ್ಧತೆಯನ್ನು ಕಳೆದುಕೊಂಡು ಬಾಲ್ಯದ ನೆನಪಿನಿಂದ ವಂಚಿತನಾದ ನಾಣಿ, ದೈವಿಕತೆಯನ್ನೂ ತಿರಸ್ಕರಿಸಿದಾಗ ದುರಂತಕ್ಕೆ ಈಡಾಗುತ್ತಾನೆ. ಇಲ್ಲಿ ಬರುವ ನಾಣಿಯ ಕತೆ ಮನುಕುಲದ ಇತಿಹಾಸವನ್ನೇ ಪ್ರತಿನಿಧಿಸುವಂತಿದೆ. ಪುರಾತನ ಯುಗದ ಮುಗ್ಧತೆಯನ್ನು ಮನುಷ್ಯ ಕಳೆದುಕೊಂಡಿದ್ದಾನೆ. ಒಟ್ಟಿನಲ್ಲಿ ಜಾನಪದವು ನಾಟಕದ ತಾಂತ್ರಿಕ ಅಗತ್ಯವಾಗಿರದೆ ಅಲ್ಲಿನ ಜೀವದ್ರವ್ಯವಾಗಿರುವ ಕೆಲವೇ ಶ್ರೇಷ್ಠ ಆಧುನಿಕ ಕನ್ನಡ ನಾಟಕಗಳಲ್ಲಿ 'ನಾರ್ಸಿಸಸ್' ಅಗ್ರಪಂಕ್ತಿಗೆ ಸೇರುತ್ತದೆ.

**ಚಾಳೇಶ :** ಚಾಳೇಶ ಅಸಂಗತ ನಾಟಕ, ಮಧ್ಯಮ ವರ್ಗದವರ ಪೀಕಲಾಟ ಆಸೆ–ಆಕಾಂಕ್ಷೆಗಳು ಸಂಕೇತಗಳ ಮೂಲಕ ಇಲ್ಲಿ ನಿರೂಪಿಸಲ್ಪಟ್ಟಿವೆ. ವಾಸ್ತವದಲ್ಲಿ ದಕ್ಕಲಾರದ್ದನ್ನು ಕಾಲ್ಪನಿಕ ಜಗತ್ತಿನಲ್ಲಿ ಲಭ್ಯವಾಗಿಸಿಕೊಂಡು ಸುಖಿಸುವ ವಿಚಿತ್ರ ಮನೋಭಾವದ ಜನರಿವರು.

**ಜೋಕುಮಾರ ಸ್ವಾಮಿ :** ಜೋಕುಮಾರ ಸ್ವಾಮಿ ಕನ್ನಡ ರಂಗಭೂಮಿಗೆ ಹೊಸ ಆಯಾಮ ನೀಡಿದ ನಾಟಕ. ಬಯಲಾಟದ ತಂತ್ರಗಳನ್ನು ಅಳವಡಿಸಿಕೊಂಡು ನಾಟಕ ರಚಿಸುವ ಪರಂಪರೆಯನ್ನು ಕನ್ನಡದಲ್ಲಿ ಉದ್ಘಾಟಿಸಿದ ಜೋಕುಮಾರ ಸ್ವಾಮಿ ಒಂದು ಅನನ್ಯ ಕೃತಿ. ಜನಪದ ತಂತ್ರವನ್ನು ಕಂಬಾರರು 'ಜೋಕುಮಾರ ಸ್ವಾಮಿ'ಯಲ್ಲಿ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಫಲವತ್ತಿನ ಸಂಕೇತವಾದ ಜೋಕುಮಾರ ಸ್ವಾಮಿಯ ಪುರಾಣ ಕಥೆಯೊಂದಿಗೆ 'ಉಳುವವನೇ ಭೂಮಿಯ ಒಡೆಯ' ಎಂಬ ಆಧುನಿಕ ಸಮಾಜವಾದವನ್ನೂ ಹೊಂದಿಸುವುದು ನಾಟಕದ ಆಶಯವಾಗಿದೆ.

**ಜೈಸಿದ ನಾಯ್ಕ :** ಊಳಿಗಮಾನ್ಯ ವ್ಯವಸ್ಥೆಯನ್ನು ನಾಶಗೊಳಿಸಿ ಸಮಾನತೆಯನ್ನಾಧರಿಸಿದ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸುವ ಒಂದು ಹಳ್ಳಿಯ ಕತೆ ಈ ನಾಟಕದ ವಸ್ತು. ಇಲ್ಲಿ ಕಂಬಾರರು ಸರ್ವಾಧಿಕಾರಿಯೊಬ್ಬನ ವಿರುದ್ಧ ನಡೆದ ಹೋರಾಟವನ್ನು ಪ್ರಧಾನವಾಗಿ ಚಿತ್ರಿಸಿದ್ದು, ವಾಸ್ತವದ ನಿರೂಪಣೆಗೆ ತುಂಬಾ ಮಹತ್ವ ಸಿಕ್ಕಿದೆ. ಜನಪದ ರಂಗಭೂಮಿಯತಂತ್ರ ಅಥವಾ ವಿಧ್ಯುಕ್ತ ಆಚರಣೆಗಳ ನೆರವನ್ನು ಆಶ್ರಯಿಸದೆ, ವಾತಾವರಣ ಸೃಷ್ಟಿಗೆ ಮಾತ್ರ ಜಾನಪದವನ್ನು ಇಲ್ಲಿ ಬಳಸಿದ್ದಾರೆ.

**ಹೇಳತೇನ ಕೇಳ :** ಜನಪದ, ತಂತ್ರದಲ್ಲಿ ಕಂಬಾರರು ಬರೆದ ನಾಟಕ 'ಹೇಳ್ತೇನ ಕೇಳ'. ಊರಿನ ದನಗಳನ್ನು ತಿಂದ, ಜನರನ್ನು ಕಾಡುತ್ತಿದ್ದ ಏಳು ಪಟ್ಟೆಹುಲಿಯನ್ನು ಊರ ಗೌಡ ಬೇಟೆಯಾಡಲು ಹೊರಟಿದ್ದು, ಬೇಟೆಗೆ ಹೋದ ಗೌಡನನ್ನು ಕೊಂದು ಊರ ಹೊರಗಿನ ಬಾವಿಯಲ್ಲಿ ಹಾಕಿ, ಅವನ ವೇಷ ಹೊತ್ತು ರಾಕ್ಷಸನೊಬ್ಬನು ಊರನ್ನು ಪ್ರವೇಶಿಸಿದ್ದು, ಗೌಡತಿಯನ್ನು ಕೂಡಿ ಬಾಳಗೊಂಡನೆಂಬ ಮಗನನ್ನು ಪಡೆದು ಊರನ್ನು ಆಳಿದ್ದು ಮುಂತಾದ ಕಥಾ ಹಿನ್ನೆಲೆಯನ್ನು ಪಡೆದಿರುವ ಈ ನಾಟಕದ ವಸ್ತುವೇ ಜಾನಪದವಾದದ್ದು.

**ಕಾಡುಕುದುರೆ :** ಉತ್ಕಟ ಕಾಮದ ಸಂಕೇತವಾಗಿರುವ ಕಾಡು ಕುದುರೆ ಮತ್ತು ಅದರ ಯಜಮಾನ ಹುಲಿಗೊಂಡ ಈ ನಾಟಕದ ಕೇಂದ್ರ ಬಿಂದುವಾಗಿದ್ದರೆ, ಮೇಲ್ನೋಟಕ್ಕೆ ಊಳಿಗಮಾನ್ಯ ಗೌಡಿತಿ ಕುಟುಂಬವೊಂದರ ನೈತಿಕ ಅಧಃಪತನದ ಚಿತ್ರಣವಾಗಿರುವ ಕಾಡುಕುದುರೆ ಜೀವಪರ ನಿಲುವನ್ನು ನಿಶ್ಚಯಿಸುವ, ಪೋಷಿಸುವ ನಾಟಕವಾಗಿದೆ.

**ಸಿರಿಸಂಪಿಗೆ :** ನವ್ಯ ಕಾಲಘಟ್ಟದ ಬರಹಗಾರರಾದ ಕಂಬಾರರು ನವ್ಯದವರಿಗಿಂತ ಹೇಗೆ ಭಿನ್ನ ಎಂಬುದನ್ನು 'ಸಿರಿಸಂಪಿಗೆ' ನಾಟಕದಲ್ಲಿ ಗುರುತಿಸುತ್ತಾರೆ. 'ಸಿರಿಸಂಪಿಗೆ'ಯಲ್ಲಿ ಅಪೂರ್ಣತೆ–ಸಂಪೂರ್ಣತೆ ಮತ್ತು ದೇಹ ಆತ್ಮ ಸಂಬಂಧದ ವಸ್ತು ಗಟ್ಟಿರೂಪವನ್ನು ಪಡೆದುಕೊಂಡಿದೆ. ಯಕ್ಷಗಾನದ ತಂತ್ರಗಳನ್ನು ಕ್ರಿಯಾಶೀಲವಾಗಿ ಅಳವಡಿಸಿಕೊಂಡ ಈ ಕೃತಿಯಲ್ಲಿ ಮೇಲ್ನೋಟಕ್ಕೆ ಎರಡು ಕತೆಗಳಿವೆ ಎಂದು ತೋರಿದರೂ ನಿಜಕ್ಕೂ ಅವೆರಡೂ ಒಂದೇ ಆಗಿವೆ. ಶಿವನಾಗದೇವ–ಕಾಳಿಂಗ–ಸಿರಿಸಂಪಿಗೆ ಇವರ ಬದುಕು ಗಂಭೀರವಾಗಿಯೂ, ಅವಳ ಜವಳಿ ಕಮಲೆ ಇವರ ಬದುಕು ಕೊಂಚ ಲಘುವಾಗಿಯೂ ಇಲ್ಲಿ ಪ್ರಕಾಶಗೊಂಡಿವೆ. ಅನುಕೂಲಕ್ಕೆ ಮಾಡುವ ಇಂತಹ ವಿಭಜನೆ ಸಾಧ್ಯವಾಗದಿರುವುದೇ ಈ ನಾಟಕದ ವಿಶೇಷ. ಪ್ರಧಾನ ಕತೆ ಉಪಕಥೆ ಒಂದಕ್ಕೊಂದು ಪೂರಕವಾಗುತ್ತಾ ಕೊನೆಗೆ ಒಂದೇ ಆಗಿ ಬಿಡುವ ಪರಿ ನಾಟಕದ ಸ್ವರೂಪದ, ವಿನ್ಯಾಸದ ಸಫಲತೆಯನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ, ಮನುಷ್ಯನ ಅಸ್ತಿತ್ವದ ಸಮಗ್ರತೆಯ ಪರಿಕಲ್ಪನೆ ಈ ನಾಟಕದಲ್ಲಿ ಮೂರ್ತವಾಗಿ ಮೂಡಿದೆ ಎನ್ನಬಹುದು. ಇದರ ಜೊತೆಗೆ ಸಿರಿಸಂಪಿಗೆ ಹಾಗೂ ಕಮಲೆಯರ ಜೀವನದ ದುರಂತವನ್ನು ನಾಟಕ ಸೂಕ್ಷ್ಮವಾಗಿ ದಾಖಲಿಸುತ್ತದೆ. ನಾಟಕಕಾರರ ತಾತ್ವಿಕತೆ, ಆಶಯಗಳಿಗೆ ತಕ್ಕುದಾದ ಬಂಧ ಭಾಷೆಗಳು ಲಭ್ಯವಾಗಿರುವ 'ಸಿರಿಸಂಪಿಗೆ' ಕಂಬಾರರ ಅತ್ಯುತ್ತಮ ನಾಟಕವಾಗಿದೆ.

**ಹರಕೆಯ ಕುರಿ :** ದೇಶದ ರಾಜಕೀಯ ಕ್ಷೇತ್ರದಲ್ಲಿ ಜೀವಭಯ ಮತ್ತು ಹಿಂಸೆಗಳು ತಮ್ಮ ಹಿಡಿತವನ್ನು ಭದ್ರಗೊಳಿಸುತ್ತಿರುವುದರ ಹಿನ್ನೆಲೆಯಲ್ಲಿ 'ಹರಕೆಯ ಕುರಿ' ನಾಟಕ ರಚನೆಗೊಂಡಿದೆ. ಮೇಲುಗೈ ಸಾಧಿಸುತ್ತಿರುವ ರಾಜಕೀಯ ಕುತಂತ್ರ. ಮುಗ್ಧ ಹಾಗೂ ನಿಷ್ಕ್ರಿಯ ನಾಗರಿಕರು, ಸ್ವಾರ್ಥ ಕೇಂದ್ರಿತ ಮಧ್ಯಮ ವರ್ಗದವರ ಧೋರಣೆ–ಇವೆಲ್ಲವುಗಳನ್ನೊಳಗೊಂಡ ಸಂಕೀರ್ಣ ವ್ಯವಸ್ಥೆ ಹೇಗೆ ಪ್ರಜಾಪ್ರಭುತ್ವದ ಅಣಕವಾಗಿದೆಯೆಂಬುದನ್ನು 'ಹರಕೆಯ ಕುರಿ' ವಿವರಿಸುತ್ತದೆ. ಸಾಮಾನ್ಯರ ಗ್ರಹಿಕೆಗೆ ನಿಲುಕದ ರಾಜಕೀಯ ರಂಗದ ಆಳದಲ್ಲಿರುವ ಕ್ರೌರ್ಯ ಕುತಂತ್ರಗಳ ಪರಿಚಯ ಈ ನಾಟಕದಲ್ಲಿದೆ.

**ಮಹಾಮಾಯಿ :** 'ಮಹಾಮಾಯಿ' ಮಾಯೆಯ ವಿರಾಟ್ ಸ್ವರೂಪವನ್ನು ಬೇರೊಂದು ದೃಷ್ಟಿಯಿಂದ ನಾಟಕದಲ್ಲಿ ವ್ಯಾಖ್ಯಾನಿಸಲಾಗಿದೆ.

ಶೆಟವಿ ಜಾನಪದ ದೇವತೆ. ಅವಳಿಗೆ ಶಿಷ್ಟದ ಪರಿಕಲ್ಪನೆಯ ಮಾಯೆಯ ಶಕ್ತಿ, ಸಾಮರ್ಥ್ಯ, ಪವಾಡಗಳನ್ನು ಆರೋಪಿಸಿ ವಿಜೃಂಭಿಸಲಾಗಿದೆ. ಸಾವು ಭೀಕರವಷ್ಟೇ ಅಲ್ಲ, ವಾತ್ಸಲ್ಯದ ತಂಪೂ ಅದರಲ್ಲಿದೆ. ಶೆಟವಿ ತನ್ನ ಸಾಕುಮಗನಾದ ಸಂಜೀವಶಿವನನ್ನು ಅಕ್ಕರೆಯಿಂದ ಬೆಳೆಸಿ ಅವನಿಗೆ ಅಪರೂಪದ ವೈದ್ಯ ವಿದ್ಯೆ ನೀಡಿದ್ದಾಳೆ. ಈ ವಿದ್ಯೆಯ ಯಶಸ್ಸಿಗಾಗಿ ಸ್ವತಃ ಸೂಚನೆ ನೀಡುವ ಪರಿಪಾಠ ಬೆಳೆಸಿಕೊಂಡಿದ್ದಾಳೆ. ಆದರೆ ಸಂಜೀವಶಿವ ಯಾವಾಗ ತನ್ನ ನಿಯತಿಯನ್ನು ವಿರೋಧಿಸುವನೋ ಆವಾಗ ತನ್ನ ಮೋಹ ಮಮಕಾರಗಳನ್ನು ಬದಿಗಿರಿಸಿ, ನಿಯತಿಯನ್ನು ಕಾರ್ಯಗತಗೊಳಿಸಲು ಮುಂದಾಗುತ್ತಾಳೆ. ಆದರೆ ಕೊನೆಗೆ ಸಂಜೀವ ಶಿವ ತನ್ನ ತಾಯಿ ಮಮತೆಯಿಂದ ಕಾಣಿಕೆ ನೀಡಿದ ಹೆಚ್ಚಿನ ಆಯುಷ್ಯದಲ್ಲಿ ಅರ್ಧವನ್ನು ರಾಜಕುಮಾರಿಗೆ ಧಾರೆಯೆರೆದು ಅವಳನ್ನು ಬದುಕಿಸುತ್ತಾನೆ. ತನ್ನ ಕನಸನ್ನು ಗೆಲ್ಲುತ್ತಾನೆ. ವಿಧಿಯ ನಿರ್ಣಯವನ್ನು ಮೀರಿ ಇಲ್ಲಿ ಮಾನವ ಸಹಜ ಪ್ರೇಮ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಸಾವನ್ನೂ ಗೆಲ್ಲುವ ಶಕ್ತಿ ಪ್ರೇಮಕ್ಕಿದೆ ಎಂಬುದನ್ನು ಸಮರ್ಥಿಸಲಾಗಿದೆ.

ಮಹಾಮಾಯಿ ಕಂಬಾರರ ಈ ಹಿಂದಿನ ಜಾನಪದ ಶೈಲಿಯ ನಾಟಕಗಳಿಗಿಂತ ಭಿನ್ನವಾಗಿ ತೋರುತ್ತದೆ. ಇದು ಕಂಬಾರರ ನಾಟಕಗಳಲ್ಲಿಯೇ ವಿಶೇಷವಾದುದು. ಅತ್ಯಂತ ಬುದ್ಧಿಪೂರ್ವಕವಾಗಿ, ತಾಳ್ಮೆಯಿಂದ ಸೂಕ್ಷ್ಮವಾಗಿ, ಗಾಢವಾಗಿ ಪಾತ್ರಗಳನ್ನು ನಿರ್ಮಿಸುತ್ತಾ ಗಂಭೀರ ನಾಟಕದ ಕ್ರಮದಲ್ಲಿ ಮನುಷ್ಯನ ಅನಂತ ಕಾಲದ ಸಾವು ಮತ್ತು ಬದುಕಿನ ಚೈತನ್ಯಗಳನ್ನು ಮಹಾಮಾಯಿ ಕೃತಿಯು ಬಿಂಬಿಸುತ್ತದೆ.

**ಅಲೀಬಾಬ ಮತ್ತು ನಲವತ್ತು ಮಕ್ಕಳು :** ಇದು ಕಂಬಾರರ ಪ್ರಸಿದ್ಧ ಮಕ್ಕಳ ನಾಟಕ. ಇದೊಂದು ಜನಪ್ರಿಯ ಕತೆಯ ನಾಟಕರೂಪ. ವಿದೇಶ ಜನಪದ ಕತೆಗೆ ಸ್ಥಳೀಯ ಆವರಣವನ್ನು ಕಲ್ಪಿಸಿ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಿರುವುದರಲ್ಲಿ ಕಂಬಾರರ ಜಾಣ್ಮೆಯಿದೆ. ಪೂರ್ವರಂಗದ ಗಣೇಶ ಸ್ತುತಿ ಪ್ರಸಂಗವನ್ನು ಗೊತ್ತಾಗದಂತೆಯೇ ನಾಟಕದ ವಸ್ತುವಿಗೆ ಜೋಡಿಸಿರುವ ಕುಶಲತೆ ಮೆಚ್ಚುವಂಥದು. ತಿಳಿಹಾಸ್ಯ, ಹಾಡು, ಕುಣಿತಗಳಿಂದೊಡಗೂಡಿದ ಅಲೀಬಾಬಾ ಮತ್ತು ನಲವತ್ತು ಕಳ್ಳರು ನಾಟಕ ಮಕ್ಕಳಿಗೆ ಮುದ ನೀಡುವ ಆಕರ್ಷಕ ಪ್ರಯೋಗವಾಗಿದೆ.

ಹೀಗೆ ಆಧುನಿಕ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಕಂಬಾರರು ನಾಟಕ ಪ್ರಕಾರದಲ್ಲಿ ತುಂಬಾ ಪ್ರಸಿದ್ಧಿಯಾಗಿದ್ದಾರೆ.

**ಚಂದ್ರಕಾಂತ ಕುಸನೂರ**

ಚಂದ್ರಕಾಂತ ಕುಸನೂರ ಅವರು ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ನಾಟಕ, ಸಾಹಿತ್ಯಕ್ಕೆ 'ಅಸಂಗತ ನಾಟಕ' ಹಾಗೂ 'ಜಪಾನಿನ ಹಾಯಿಕು' ಪ್ರಕಾರಗಳನ್ನು ಪರಿಚಯಿಸಿದ ಪ್ರಪ್ರಥಮರಲ್ಲೊಬ್ಬರು. ಅವರ ಅಸಂಗತ ನಾಟಕಗಳು ವಿಶಿಷ್ಟವಾದವುಗಳು.

ಕುಸನೂರರು 'ಮಹಾಪುರುಷ', 'ದಿಂಡಿ' (1992), 'ಮೂರು ಅಸಂಗತ ನಾಟಕಗಳು' (1971), 'ಹಳ್ಳಕೊಳ್ಳ ನೀರು'(1970), 'ವಿದೂಷಕ' (1971), 'ಇದಕೆ ಸಂಶಯವಿಲ್ಲ' (1972), 'ಆಂಟಿ ಆಂಟಿ ಚಾವಲ್ ಅಚಿಟ', 'ರತ್ತೋ ರತ್ತೋ ರಾಯನ ಮಗಳೆ', 'ಕನಸು', 'ಪಾರ್ಟಿ', 'ಮಹಾಸ್ವಾಮಿ', 'ಆನಿತಂಬಾನಿ', 'ಮನೆ', 'ರೆಕ್ಕೆ' (1971) ಎಂಬ ನಾಟಕಗಳನ್ನು, 'ಯಾತನಾ ಶಿಬಿರ', 'ಚರ್ಚ್‌ಗೇಟ್' ಮುಂತಾದ ಕಾದಂಬರಿಗಲನ್ನು, 'ನಂದೀಕೋಲು' (1967) ೆಂಬ ಕವನ ಸಂಕಲನವನ್ನು 'ರೇಶಮ್‌ಕಿ ಗುಡಿಯಾ' ಎಂಬ ಕಥಾ ಸಂಕಲನವನ್ನು ರಚಿಸಿದ್ದಾರೆ. ಅನಂತ ಮೂರ್ತಿಯವರ 'ಸಂಸ್ಕಾರ' ಮತ್ತು ಶ್ರೀಕೃಷ್ಣ ಆಲನಹಳ್ಳಿಯವರ 'ಕಾಡು' ಕಾದಂಬರಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ.

'ಯಾತನಾ ಶಿಬಿರ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಸಂಸ್ಕಾರ' ಕಾದಂಬರಿ ಅನುವಾದಕ್ಕಾಗಿ ಕೇಂದ್ರ ಸರ್ಕಾರದ ಹಾಗೂ ಉತ್ತರಪ್ರದೇಶ ಸರ್ಕಾರದ ಪ್ರಶಸ್ತಿಯನ್ನು ಇವರು ಪಡೆದುಕೊಂಡಿದ್ದಾರೆ.

**ವಿದೂಷಕ :** ಇದು ಚಂದ್ರಕಾಂತ ಕುಸನೂರ ಅವರ ಅಸಂಗತ ನಾಟಕ. ಈ ನಾಟಕದಲ್ಲಿ ಮೂರು ವ್ಯಕ್ತಿಗಳು ಕ್ರೂರ ಬರುತ್ತಾನೆಂದು ಕಾಯುತ್ತಿರುತ್ತಾರೆ. ಸಮಯ ಸಾಗಲು ಒಬ್ಬ ವ್ಯಕ್ತಿ ಯಾವುದೋ ರಾಜನ ಕತೆ ಹೇಳಲು ಪ್ರಾರಂಭಿಸುತ್ತಾನೆ.

ನಾಟಕದ ಮಧ್ಯ ಮಧ್ಯ ವಿದೂಷಕನ ಆಗಮನವಾಗುತ್ತದೆ. ಆತ ನಾಟಕದಲ್ಲಿ ನಗುವಿನ ಹೊಳೆ ಹರಿಸಲು ಬರುತ್ತಾನೆ. ಅಲ್ಲದೆ ಒಂದು ಹುಡುಗಿಯನ್ನು ಪ್ರೀತಿಸಿ ಮದುವೆಯಾಗಲು ಸಿದ್ಧನಾಗುತ್ತಾನೆ. ನಾಟಕದಲ್ಲಿ ಬರುವ ವ್ಯಕ್ತಿಗಳು, ಹೇಳುವ ಕತೆಗಳು ರಾಜನನ್ನು ಕುರಿತದ್ದಾದರೂ ಆ ಕಥೆಗಳು ಅಸಂಗತವಾಗಿವೆ.

ಇದಕ್ಕೆ ಸಂಶಯವಿಲ್ಲ. ಇದು ಸಹ ಅಸಂಗತ ನಾಟಕ, ತ.ಚ.ಪ. ಇವು ಈ ನಾಟಕದಲ್ಲಿ ಬರುವ ಮೂರು ಪಾತ್ರಗಳು. ನಾಟಕ ಪ್ರಾರಂಭವಾಗುವುದು ಒಂದು ಊರಿಗೆ ಹೋಗುವ ದಾರಿಯಿಂದ ತ.ಚ.ಪ ಅವರ ಪರಿಚಯ ದಾರಿಯ ಮೇಲೆಯೇ ಆಗುತ್ತದೆ.

ಈ ನಾಟಕದಲ್ಲಿ ಮೊದಲಿಗೆ ತ.ಚ. ದಾರಿಯಲ್ಲಿ ತಮ್ಮ ವೈಯಕ್ತಿಕ ವಿಚಾರಗಳನ್ನು ಚರ್ಚಿಸುತ್ತಾ ಹೋಗುತ್ತಿರುತ್ತಾರೆ. ಅಲ್ಲಿಗೆ 'ಪ' ಎಂಬುವವನು ಬಂದು ರಾಮ, ಹನುಮಂತ, ರಾವಣರ ವಿಷಯ ಹೇಳುತ್ತಾ ತ.ಚ. ತಲಿಮ್ಯಾಲಿನ ಮೂಗಲ ತೆಗೆದು ಕಿಸೆಗೆ ಹಾಕಿಕೊಂಡಾಗ ಇಬ್ಬರೂ ತಮ್ಮ ತಲಿಮ್ಯಾಗಲ ಮೂಗಲ ಕೊಡು ಎಂದು 'ಪ'ನನ್ನು ಹೊಡೆಯಲು ಹೋಗುತ್ತಾರೆ. ಮೂವರು ಒಬ್ಬರ ಕುತ್ತಿಗೆಯ ಮೇಲೆ ಇನ್ನೊಬ್ಬರು ಕತ್ತು ಹಿಚುಕುವಂತೆ ಕೈಯಿಟ್ಟು, ಕಲ್ಲಿನ ಮೂರ್ತಿಗಳಂತೆ ನಿರ್ಜೀವವಾಗಿ ಕಣ್ಣು ಮುಚ್ಚಿಕೊಂಡು ನಿಂತಿರುವ ಸನ್ನಿವೇಶಗಳು ಅಸಂಗತವಾಗಿ ಮೂಡಿಬಂದಿವೆ.

**ಅಂಟಿ ಅಂಟಿ ಚಾವಲ್ ಅಂಟಿ :** ಈ ಅಸಂಗತ ನಾಟಕದಲ್ಲಿ ರಂಗರಾಯ, ರಾಮ, ಶ್ಯಾಮ, ಭೀಮ, ಕಾವೇರಮ್ಮ ಎಂಬ ಐದು ಪಾತ್ರಗಳು ಬರುತ್ತವೆ. ನಾಟಕ ಪ್ರಾರಂಭವಾಗುವುದು ರಂಗರಾಯರ ಮನೆಯ ಒಂದು ರೂಮಿನಿಂದ,ರಾಮ, ಶ್ಯಾಮ, ಭೀಮ ರಂಗರಾಯರಿಗೆ ಪರಿಚಯವಿಲ್ಲದ ವ್ಯಕ್ತಿಗಳು, ನಾಟಕದ ಕೊನೆಯಲ್ಲಿ ರಂಗರಾಯ ರಾಮ, ಶ್ಯಾಮ, ಭೀಮರನ್ನು ಅಪ್ಪಿಕೊಳ್ಳುವಂತೆ ತೋಳು ಚಾಚುವುದು, ಕೂಗುವುದ, ಒಮ್ಮಿಂದೊಮ್ಮೆಲೆ ಮೌನ, ಪುನಃ ಕತ್ತಲೆ ಸ್ವಲ್ಪ ಹೊತ್ತಾದ ಮೇಲೆ ಬೆಳಕು, ಖಾಲಿಕೋಣೆ, ಖಾಲಿ ಕುರ್ಚಿಗಳು ಒಂದು ಕುರ್ಚಿಯ ಮೇಲೆ ರಂಗರಾಯನ ಕೋಲು ಬಿದ್ದಿರುವುದು. ಈ ಎಲ್ಲಾ ಸಂಗತಿಗಳು ನಾಟಕದಲ್ಲಿ ಅಸಂಗತವಾಗಿ ಕಂಡುಬರುತ್ತವೆ.

**ಹಳ್ಳಾ ಕೊಳ್ಳಾ ನೀರು :** ಇದು ಸಹ ಅಸಂಗತ ನಾಟಕ. ಇದರಲ್ಲಿ ಅ.ಬ.ಕ. ಎಂಬ ಮೂರು ಜನ ಕೆಲಸವಿಲ್ಲದ ಅತ್ಯಂತ ನಿರುದ್ಯೋಗಿಗಳ ಪಾತ್ರಗಳಿವೆ. ನಾಟಕ ಪ್ರಾರಂಭವಾಗುವುದು 'ಅ' ಸೊಳ್ಳೆ ಹೊಡೆಯುವುದರೊಂದಿಗೆ ನಾಟಕದ ಕೊನೆಯವರೆಗೂ ಬರೀ ಹರಟೆ ಹೊಡೆಯುವುದೇ ಇವರ ಮುಖ್ಯ ಕೆಲಸವಾಗುತ್ತದೆ.

**ದಿಂಡಿ :** ಈ ನಾಟಕದಲ್ಲಿ ಸೂತ್ರದಾರ, ರಾಮಭಟ್ಟ, ಗುಂಡಭಟ್ಟ, ವಸಂತರಾವ್, ರಾಧಾ ಗಂಗೂಬಾಯಿ ಈ ಆರು ಪಾತ್ರಗಳನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳ ಕೆಲಸ ಮೇಳದಲ್ಲಿದ್ದ ಕಲಾವಿದರಿಂದಲೇ ನಿರ್ವಹಿಸಲ್ಪಡುತ್ತವೆ.

ವಸಂತನ ತಂದೆ ವಿನಾಯಕರಾವ್‌ನ ಶವ ಸಂಸ್ಕಾರ ಮಾಡುವುದೇ ನಾಟಕದ ವಸ್ತುವಾಗಿದೆ. ವಸಂತ ತನ್ನ ತಂದೆಯ ಶವಸಂಸ್ಕಾರ ಮಾಡಲು ಅಣ್ಣ ಊರಿಂದ ಬರುವುದನ್ನು ಕಾಯುತ್ತಾನೆ. ಅವನು ಬರುವ ಸೂಚನೆಯೇ ಕಾಣುವುದಿಲ್ಲ ಎರಡು ದಿನದ ನಂತರ ವಿನಾಯಕ ರಾವ್ ಸತ್ತ ಸುದ್ದಿಯನ್ನು ಕೇಳಿ ಅವನನ್ನು ಗಣಪತಿ ರಾವ್, ವಿನಾಯಕ ರಾವ್ ಜೊತೆಗೆ ಹೆಣವಾಗಿ ಸಂಸ್ಕಾರಕ್ಕೆ ಬರುತ್ತಾನೆ. ನಾಟಕದ ಕೊನೆಗೆ ಇಬ್ಬರು ಪ್ರೇತಗಳಾಗಿ ಒಬ್ಬರಿಗೊಬ್ಬರು ಮಾತನಾಡುದ್ದ ರಂಗದ ಒಂದು ಮಗ್ಗುಲಿನಿಂದ ಇಳಿದು ಪ್ರೇಕ್ಷಕರು ಕುಳಿತ ಕಡೆಗೆ ನಡೆಯುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಒಟ್ಟಾರೆ ಚಂದ್ರಕಾಂತ ಕುಸನೂರ ಅವರು ಅಸಂಗತ ನಾಟಕಕಾರರಾಗಿ, ಅನುವಾದಕರಾಗಿ, ಕತೆಗಾರರಾಗಿ, ಕವಿಯಾಗಿ,

ಕಾದಂಬರಿಕಾರರಾಗಿ ಕನ್ನಡ ಸಾಹಿತ್ಯಕ್ಕೆ ಅವಿಸ್ಮರಣೀಯ ಸೇವೆ ಸಲ್ಲಿಸುತ್ತಿದ್ದಾರೆ.

ಎಚ್.ಎಂ. ಚೆನ್ನಯ್ಯ ಅವರು 'ಎಲ್ಲರಂಥವನಲ್ಲ ನನ್ನ ಗಂಡ' (1972), 'ಹುಯ್ಯಲವ್ರೋ ಡಂಗುರವ'(1981) ಎಂಬ ನಾಟಕಗಳನ್ನು ಬರೆದಿದ್ದಾರೆ. ಹಾಗೆಯೇ 'ಆಮೆ ಮತ್ತು ಕಾಮಿ' (1970) ಎಂಬ ಕವನ ಸಂಕಲನವನ್ನೂ, 'ಅಯಾಸ್' ಎಂಬ ಅನುವಾದವನ್ನೂ ಇವರು ರಚಿಸಿದ್ದಾರೆ.

**ಎಲ್ಲರಂಥವನಲ್ಲ ನನ್ನ ಗಂಡ :** ಇದು ಚನ್ನಯ್ಯ ಅವರ ಮೊದಲ ನಾಟಕ. ಬ್ರೆಕ್ಟ್‌ನ ಮುಕ್ತ ರಂಗಭೂಮಿಯ ತಂತ್ರ ಮತ್ತು ಆಶಯಗಳೆರಡನ್ನೂ ಒಳಗೊಂಡಿರುವ ಈ ನಾಟಕವನ್ನು ಚೆನ್ನಯ್ಯನವರು ಕಥಾನಾಟಕವೆಂದು ಕರೆದಿದ್ದಾರೆ. ಮಾನವೀಯ ಮೌಲ್ಯಗಳನ್ನು ತಿರಸ್ಕರಿಸಿದ ಷಂಡರಾದ, ಸ್ವಾರ್ಥಿಗಳಾದ ನಾಯಕರು ಪ್ರಜೆಗಳನ್ನು ಕುರಿಗಳಂತೆ ನಡೆಸಿಕೊಳ್ಳುವುದರ ಮೂಲಕ ಸಮಾಜದಲ್ಲಿ ಉಂಟು ಮಾಡುವ ಅರಾಜಕತೆಯ ಚಿತ್ರಣವನ್ನು ಈ ನಾಟಕದಲ್ಲಿ ಕಾಣಬಹುದು.

'ಒಂದಾನೊಂದು ಕಾಲದಾಗ' ನಡೆದ ಕಥೆಯನ್ನು ಸನ್ಯಾಸಿನಿಯೊಬ್ಬಳು ತನ್ನ ಸಂಗಡಿಗರಿಗೆ ಹೇಳುವ ಜನಪದ ತಂತ್ರವನ್ನು ಮಾತ್ರವಲ್ಲ, ತತ್ವದ ಪದಗಳು, ನಡಾವಳಿ, ಪಾತ್ರ ಸ್ವಭಾವ, ಪರಿಸರ ಮುಂತಾದುವೆಲ್ಲವನ್ನೂ ಜಾನಪದದ ಮೂಲದಿಂದಲೇ ಸ್ವೀಕರಿಸಿದ್ದಾರೆ. ಹಸಿದ ಹೊಟ್ಟೆಯ ಜನರ ಕ್ರಾಂತಿಯ ಮುನ್ಸೂಚನೆಯನ್ನು ಹೊತ್ತ, ಈ ನಾಟಕ ಸಮಕಾಲೀನ ರಾಜಕೀಯ ಸ್ಥಿತಿಯನ್ನು ವಿಡಂಬಿಸುವುದಿಲ್ಲದೆ ಧಾರ್ಮಿಕ, ನೈತಿಕ ಮೌಲ್ಯಗಳ ವಿಮರ್ಶೆಯನ್ನು ನಡೆಸಿದೆ.

**'ಹುಯ್ಯಲವ್ರೋ ಡಂಗುರವ'** : ಇದು ಚನ್ನಯ್ಯನವರ 2ನೆಯ ನಾಟಕ. ಇದರಲ್ಲಿ ಒಟ್ಟು 11 ದೃಶ್ಯಗಳಿವೆ. ಜನಪದ ಭಾಷೆ, ಹಾಡು, ಲಯಗಳನ್ನು ಬಳಸಿಕೊಂಡು ಜಂಗಮ ಪಾತ್ರವೊಂದನ್ನು ಕೇಂದ್ರವಾಗಿಟ್ಟುಕೊಂಡು ವಿಶಿಷ್ಟ ರಂಗತಂತ್ರದಿಂದ ಈ ನಾಟಕ ರಚಿತವಾಗಿದೆ. ನಾಟಕದಲ್ಲಿ ಬಳಸಲಾಗಿರುವ 'ಸಿಂಹಾವಲೋಕನ ತಂತ್ರ' ಅತ್ಯಂತ ಸೂಕ್ತವಾಗಿದ್ದು ನಾಟಕದ ಆಶಯವನ್ನು ಮನನ ಮಾಡಿಸುವಲ್ಲಿ ನೆರವಾಗಿದೆ. ಭ್ರಷ್ಟಗೊಂಡ ಸಮಾಜ ವ್ಯವಸ್ಥೆಯನ್ನು ಬದಲು ಮಾಡುವ ಆಶಯದಲ್ಲಿ ಮುಗಿಯುವ ನಾಟಕ ಖಚಿತವಾದ ಜನಪರ ನಿಲುವನ್ನು ನಾಟಕದುದ್ದಕ್ಕೂ ಪ್ರಕಟಿಸುತ್ತದೆ.

ಹೀಗೆ ಕಾವ್ಯ ಮತ್ತು ನಾಟಕಗಳನ್ನು ತಮ್ಮ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವಾಗಿ ಮಾಡಿಕೊಂಡು ಕನ್ನಡ ನವ್ಯ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಚನ್ನಯ್ಯ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮತ್ತು ಮೀಮಾಂಸೆಯಲ್ಲಿ ನಿಷ್ಣಾತರು.. ಕನ್ನಡವಿಮರ್ಶೆಗೆ ವಿಶಿಷ್ಟವೆನ್ನಬಹುದಾದ ರೀತಿಯಲ್ಲಿ ಶರಣರ ವಚನಗಳನ್ನು ತಮ್ಮ ಒಳನೋಟಗಳ ಮೂಲಕ ವ್ಯಾಖ್ಯಾನಿಸಿ, ಸಾಹಿತ್ಯ ಸಾಂಸ್ಕೃತಿಕ ಚರ್ಚೆಗಳನ್ನು ವಿಸ್ತೃತಗೊಳಿಸಿದ್ದಾರೆ.

### ಚಂದ್ರಶೇಖರ ಪಾಟೀಲ

ಆಧುನಿಕ ಕನ್ನಡ ನಾಟಕಕಾರರಲ್ಲಿ ಚಂ.ಪಾ. ಅವರ ಸ್ಥಾನ ವಿಶಿಷ್ಟವಾದದ್ದು. ಹರಿತವಾದ ಬುದ್ಧಿವಂತಿಕೆ ಮತ್ತು ಚಿಕಿತ್ಸಕ ಮನೋಧರ್ಮ ಎವರ ನಾಟಕಗಳಲ್ಲಿ ಎದ್ದು ಕಾಣುವ ಅಂಶ. ಜಾನಪದ ಸತ್ವಗಳನ್ನು ತಮ್ಮ ನಾಟಕಗಳಲ್ಲಿ ಅರ್ಥಪೂರ್ಣವಾಗಿ ಬಳಸಿಕೊಂಡಿರುವ ಚಂ.ಪಾ. ಸಮಕಾಲೀನ ಕನ್ನಡ ರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟ ಪ್ರಮುಖರಲ್ಲೊಬ್ಬರು.

'ಬಾನುಲಿ' ಕವನ ಸಂಕಲನದಿಂದ ಸಾಹಿತ್ಯ ಲೋಕಕ್ಕೆ ಪರಿಚಿತರಾದ ಪಾಟೀಲರು 'ಮಧ್ಯಬಿಂದು', 'ಹತ್ತೊಂಬತ್ತು ಕವನಗಳು'(1967), 'ಓ ಎನ್ನ ದೇಶಬಾಂಧವರೇ' (1977), 'ಹೂವು ಹಣ್ಣು ತಾರೆ'(1982), 'ಅರ್ಧ ಸತ್ಯದ ಹುಡುಗಿ', 'ಶಾಲ್ಮಲಾ ನನ್ನ ಶಾಲ್ಮಲಾ(1994) ಮುಂತಾದವು ಅವರ ಕವನ ಸಂಕಲನಗಳು. 'ಅಪ್ಪ', 'ಟಿಂಗರ ಬುಡ್ಡಣ್ಣ', 'ಕುಂಟಾ ಕುಂಟಾ ಕುರವತ್ತಿ', 'ಕೊಡೆಗಳು' ಅಸಂಗತ ನಾಟಕಗಳು. 'ಜಗದಂಬೆ' ಬೀದಿ ನಾಟಕ, ನಳಕವಿಯ 'ಮಸ್ತಕಾಭಿಷೇಕ' 'ಬುರಡಿ ಬಾಬಾನ ಲಕ್ಷಾಪಹರಣ ಪ್ರಸಂಗ' ಬೀದಿ ನಾಟಕಗಳು.

**ಕೊಡೆಗಳು :** 1968ರಲ್ಲಿ ರಚಿತವಾದ ಈ ನಾಟಕ ಕನ್ನಡದಲ್ಲಿ ಮೊಟ್ಟ ಮೊದಲಿಗೆ ಬಂದ ಅಸಂಗತ ನಾಟಕಗಳಲ್ಲಿ ಒಂದಾಗಿದೆ. ಹೆಸರಿಲ್ಲದ, ದೆಸೆಯಿಲ್ಲದ, ನೆಲೆಯಿಲ್ಲದ ಇಬ್ಬರು ವ್ಯಕ್ತಿಗಳು ನೆಲೆಯನ್ನು ಹುಡುಕಲೆಂದು ಒಬ್ಬರೊಳಗೆ ಒಬ್ಬರು ಹೊಕ್ಕು ಹೊರ ಬಂದರೂ ಅವರು ಅವರೇ ಆಗಿ ಉಳಿಯುತ್ತಾರೆ. ಒಂದು ಸಂಕೀರ್ಣ ಭಾವಗೀತೆ ಶಿಲ್ಪ ಹೊಂದಿರುವ ಈ ನಾಟಕ ತನ್ನ ಅರ್ಥ ರಹಸ್ಯವನ್ನು ಕಾಪಾಡಿಕೊಂಡು, ಜನಪ್ರಿಯತೆಯನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದೆ.

**ಅಪ್ಪ :** ಈ ನಾಟಕದಲ್ಲಿ ಬರುವುದು 2 ಪಾತ್ರಗಳು. ಅವ್ವ, ಬಸವ, ತಾಯಿ, ಮಗ. ಮಗನಿಗೆ ತನ್ನ ಅಪ್ಪ ಯಾರು ಎನ್ನುವುದು ಗೊತ್ತಿಲ್ಲ. ತಾಯಿ ಅದನ್ನು ಹೇಳಲಾರಳು. ಅದರ ಹುಡುಕುವಿಕೆಯೇ ಈ ನಾಟಕದ ಮುಖ್ಯ ಎಳೆ. ಕೊನೆಗೆ ಅವನಿಗೆ 'ಅಪ್ಪ ಯಾರು' ಎನ್ನುವುದು ಪ್ರಶ್ನೆಯಾಗಿಯೆ ಉಳಿದು, ದ್ವಂದ್ವದಲ್ಲಿಯೇ ತನ್ನ ಹುಟ್ಟನ್ನು ಅದರ ಸಾರ್ಥಕತೆಯನ್ನೂ, ಕನಸನ್ನೂ, ಕನಸು ಅಲ್ಲದನ್ನು ಕಾಣುವ ದುರಂತ ವ್ಯಕ್ತಿಯಾಗುತ್ತಾನೆ.

**ಕುಂಟಾ ಕುಂಟಾ ಕುರವತ್ತಿ :** ಈ ನಾಟಕದ ಕುಂಟ ಹಾಗೂ ಕೆಪ್ಪ ಅವರ ಹೆಸರೇ ಸೂಚಿಸುವಂತೆ ಊನ ವ್ಯಕ್ತಿಗಳು, ಈ ಮೂರು ಪಾತ್ರಗಳಲ್ಲಿ ಹುಟ್ಟನಿಂದಲೇ ಅಸಾಂಗತ್ಯವಿದೆ. ಆದರೆ ಎಲ್ಲಿಯೂ ಅವರಿಗೆ ಅವರ ಊನತೆಗಳು ಕಾಣುವುದಿಲ್ಲ. ನಾಟಕದ ಕೊನೆಗೆ ಕೋಲಿಗೆ ತೂಗು ಹಾಕಿದ ಬೋರ್ಡನ್ನು ಕಿತ್ತು, ಕೋಲನ್ನು ಊರುಗೋಲನ್ನಾಗಿ ಉಪಯೋಗಿಸುವ ಕುಂಟ 'ನಾ ಇಲ್ಲೇ ಕುಂತ– ಕುಂತಲ್ಲೇ ಹೋಗಾಂವ' ಎನ್ನುವ ವ್ಯಂಗ್ಯ ಮಾನವೀಯ ಅವಸ್ಥೆಯ ಸತ್ಯವನ್ನೇ ತೆರೆದು ತೋರುವ ಮೂಲಕ ಅರ್ಥಪೂರ್ಣವಾಗುತ್ತದೆ.

**ಟಿಂಗರ ಬುಡ್ಡಣ್ಣ :** ಈ ನಾಟಕದ ವಸ್ತು ಸಾವು. ವರಕೊಟ್ಟ ಶಿವನ ಮೇಲೆ ತಿರುಗಿ ಬಿದ್ದ ಭಸ್ಮಾಸುರನಂತೆ ಪಾಟೀಲರ ಬುಡ್ಡನೂ ತನ್ನ ಹುಟ್ಟಿಗೆ ಕಾರಣವಾದ ಮುದುಕ ಮುದುಕಿಯರನ್ನು ಸಿಟ್ಟಿನ ರಭಸದಲ್ಲಿ 'ಕಲಾಸ್' ಮಾಡುತ್ತಾನೆ. ಅವಿವೇಕದಿಂದ ತಾನೂ 'ಕಲಾಸ್' ಆಗುತ್ತಾನೆ. ಅವಿವೇಕಿಗಳ ಕೈಗೆ ಸಿಕ್ಕ ಅಧಿಕಾರ, ಅನೈಸರ್ಗಿಕ ಶಕ್ತಿಯಂತೆ ಸುತ್ತಲಿನವರಿಗೆ ಕಂಟಕ ಪ್ರಾಯವಾಗುವುದರೊಡನೆ ಸ್ವವಿನಾಶಕ್ಕೂ ಕಾರಣವಾಗುತ್ತದೆ. ದುರಂತವನ್ನು ವಿಡಂಬಿಸುವ ಈ ನಾಟಕ ಚಂಪಾ ಅವರ ಶ್ರೇಷ್ಠ ಕೃತಿ.

ಒಟ್ಟಿನಲ್ಲಿ ಕವಿ, ನಾಟಕಕಾರ, ನಟ, ಪ್ರಕಾಶಕ ಮುಂತಾದ ಹಲವು ಬಗೆಯ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲವಾಗಿರುವ ಪಾಟೀಲರದು ಬಹುಮುಖ ಪ್ರತಿಭೆ.

**ಪಿ. ಲಂಕೇಶ್ :** ಕನ್ನಡ ಸಾಹಿತ್ಯಕ್ಕೆ ಪಿ. ಲಂಕೇಶರ ಕೊಡುಗೆ ಅಪಾರ. ಅವರ 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕದ ನಾಯಕ ಜಗನ್ನಾಥ ತನ್ನ ತಂಗಿಯ ಬದುಕನ್ನು ಉತ್ತಮೀಕರಿಸಲು ಹೋರಾಡುವವನಂತೆ ಕಾಣಿಸಿಕೊಂಡು, ತನ್ನ ತಂದೆ–ತಾಯಿ, ರಾಮಣ್ಣ ಮುಂತಾದವರ ಮುಖವಾಡಗಳನ್ನು, ಟೊಳ್ಳುತನಗಳನ್ನು ಬಯಲಿಗೆಳೆಯುವ ಬಂಡಾಯಗಾರನಂತೆ ಕಂಡು, ಅನಂತರದಲ್ಲಿ ತಂಗಿ ಕಮಲಳ ಮನಸ್ಸಿನ ಧೋರಣೆಗಳನ್ನು ಗಮನಿಸದೆ, ಗೆಳೆಯ ರಂಗಣ್ಣನಿಗೆ ಅವಳನ್ನು ಮದುವೆ ಮಾಡಲು ಹೋಗಿ ತಂಗಿಯ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ.

**ತೆರೆಗಳು :** ಇದೊಂದು ನವ್ಯ ನಾಟಕ. ಆಧುನಿಕ ಕನ್ನಡ ನಾಟಕಗಳಲ್ಲಿ ಲಂಕೇಶರ 'ತೆರೆಗಳು' ನಾಟಕಕ್ಕೆ ಒಂದು ಪ್ರಮುಖ ಸ್ಥಾನವಿದೆ. ಸಾಹಿತ್ಯ ಕೃತಿಯಾಗಿ ಹಾಗೂ ರಂಗಕೃತಿಯಾಗಿ ಎರಡೂ ನೆಲೆಗಳಲ್ಲಿ ಈ ನಾಟಕ ಅಪಾರ ಯಶಸ್ಸು ಗಳಿಸುತ್ತದೆ. ಸಂವಿಧಾನ ಮತ್ತು ಆಶಯಗಳಲ್ಲಿ 'ತೆರೆಗಳು' ಪಿಂಟರ್‌ನ 'ದ ಬರ್ತ್‌ಡೆ ಪಾರ್ಟಿ'ಯನ್ನು ಹೋಲುತ್ತದೆ.

**ಸಂಕ್ರಾಂತಿ :** ಬಿಜ್ಜಳ ಬಸವಣ್ಣನ ಕಾಲದ 12ನೇ ಶತಮಾನದ ರಾಜಕೀಯ ಹಾಗೂ ಸಾಮಾಜಿಕ ಇತಿಹಾಸ ಸಂಕ್ರಾಂತಿ ನಾಟಕದ ವಸ್ತು. ಈ ನಾಟಕದಲ್ಲಿ ಎರಡು ರೀತಿಯ ಸಂಘರ್ಷವಿದೆ. ಒಂದು ವ್ಯವಸ್ಥೆ ಹಾಗೂ ಕ್ರಾಂತಿಗಳ ನಡುವೆ ನಡೆಯುವ ಸಂಘರ್ಷ,

ಬಿಜ್ಜಳ ಹಾಗೂ ಬಸವಣ್ಣ ಈ ಶಕ್ತಿಗಳ ಸಂಕೇತವಾಗುತ್ತಾರೆ. ಇನ್ನೊಂದು ಸವರ್ಣೀಯರ ಹಾಗೂ ದಲಿತರ ನಡುವೆ ಘಟಿಸುವ ಸಂಘರ್ಷ. ಬ್ರಾಹ್ಮಣ ಜಾತಿಗೆ ಸೇರಿದ ಉಷಾ ಹಾಗೂ ಹೊಲೆಯರಲ್ಲಿ ಹುಟ್ಟಿದ ರುದ್ರ ಈ 2ನೆಯ ಸಂಘರ್ಷವನ್ನು ಸಂಕೇತಿಸುವ ವ್ಯಕ್ತಿಗಳು. ಈ ಸಂಘರ್ಷದ ಸ್ವರೂಪ ನಾಟಕದಲ್ಲಿ ಅತ್ಯಂತ ಸಂಕೀರ್ಣವಾಗಿ ಮೂಡಿಬಂದಿದೆ.

**ಗುಣಮುಖ :** ಮೊಗಲ್ ಇತಿಹಾಸದ ನಾದಿರ್ ಷಾ ಜೀವನದಲ್ಲಿ ಎದುರಿಸಿದ ಸೋಲು, ದ್ವಂದ್ವಗಳು, ಮಾನಸಿಕ ಅಸ್ವಸ್ಥತೆಗಳನ್ನು ಈ ನಾಟಕ ಚಿತ್ರಿಸುತ್ತದೆ. ನಾದಿರ್ ಷಾ ನ ಸೋಲಿನಲ್ಲಿ ನನ್ನ ಮನಸ್ಸು ಸೆಳೆದದ್ದು ಆತನ ಅನುಮಾನ ನಿಷ್ಠುರತೆ ಮತ್ತು ಕಾಯಿಲೆ, ಘಟನಾವಳಿಗಳು ಮತ್ತು ಮನುಷ್ಯರ ದ್ವಂದ್ವಗಳು ನಾದಿರ್‌ನನ್ನು ರಸಾತಳಕ್ಕೆ ತಳ್ಳಿದರೂ ಆತ ಎದ್ದು ಬರುವ ರೀತಿ, ಸತ್ಯ ಮತ್ತು ಸುಳ್ಳು ಒಬ್ಬ ಸ್ವಪ್ರತಿಷ್ಠನನ್ನು ಸ್ಪರ್ಶಿಸುವ ಬಗೆ ಎಂದು ಲಂಕೇಶರೇ ಹೇಳಿದ್ದಾರೆ.

ಗಿಳಿಯು ಪಂಜರದೊಳಿಲ್ಲ : ಇದು ಒಂದು ಕಥೆಯ, ನಾಟಕ ರೂಪವಾಗಿದ್ದು ತಂತ್ರದ ದೃಷ್ಟಿಯಿಂದ ತುಂಬಾ ಸರಳವಾಗಿದೆ. ವ್ಯಕ್ತಿಗಳ ನಡುವಿನ ಸಂಬಂಧದ ತಳಹದಿಯನ್ನು ಸಮಸ್ಯೆಯನ್ನು ಈ ನಾಟಕದಲ್ಲಿ ಚರ್ಚಿಸಲಾಗಿದೆ. ನಾಯಕನಿಗೆ ತನ್ನ ಮನಸ್ಸಿನ ಆಳದಲ್ಲಿಯೇ ಇರುವ ಸಣ್ಣತನ, ಅಪನಂಬಿಕೆ, ಕ್ರೌರ್ಯಗಳ ಪರಿಚಯವೂ ಇರುವುದಿಲ್ಲ. ಈ ಸ್ಥಿತಿ ನಾಟಕದ ವ್ಯಂಗ್ಯವೂ ಆಗಿದ್ದು, ಬದುಕನ್ನು ಪ್ರತಿಬಿಂಬಿಸುತ್ತದೆ.

**ಸಿದ್ಧತೆ :** ಲಂಕೇಶರು ಅನೇಕ ವರ್ಷಗಳ ನಂತರ ಬರೆದ ನಾಟಕ. ಎಲ್ಲರ ಬದುಕಿನಲ್ಲಿರುವ ಅತೃಪ್ತಿಯೇ ಈ ನಾಟಕದ ವಸ್ತು. ರಂಗಣ್ಣ ಕನಸನ್ನು ಕಳೆದುಕೊಂಡು ವಾಸ್ತವವನ್ನು ಒಪ್ಪಿಕೊಳ್ಳದೇ ವೃದ್ಧನಾದರೆ, ಅವನ ಹೆಂಡತಿ ಲಲಿತ, ರಂಗಣ್ಣನೊಂದಿಗೆ ಹೊಂದಿ ಬಾಳುವುದಕ್ಕಾಗಿಯೇ ತನ್ನ ಆಸೆಗಳನ್ನು ಬಲಿಗೊಡುತ್ತಾಳೆ.

## ಕನ್ನಡ ವೃತ್ತಿರಂಗಭೂಮಿ ಮತ್ತು ಕಂಪೆನಿ ನಾಟಕಗಳು

ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ನಾಟಕವು ಪ್ರಮುಖವಾದುದು. ಕನ್ನಡ ರಂಗಭೂಮಿಯ ವಿಕಾಸಮಾರ್ಗದಲ್ಲಿ ಮೂರು ಪ್ರತ್ಯೇಕವಾದ ಪ್ರಮುಖ ಪರಂಪರೆಗಳನ್ನು ಗುರುತಿಸಬಹುದು. ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ.

ಕನ್ನಡ ವೃತ್ತಿರಂಗಭೂಮಿಯ ಉಗಮವು ಶತಮಾನಗಳಷ್ಟು ಪ್ರಾಚೀನತೆಯನ್ನು ಪಡೆದಿದೆ. ನಾಟಕವನ್ನಾಡುವವರು ಜೀವನೋಪಾಯಕ್ಕಾಗಿ ನಾಟಕ ಪ್ರದರ್ಶನವನ್ನೇ ವೃತ್ತಿಯಾಗಿಸಿಕೊಂಡು ರೂಪಿಸಿಕೊಂಡ ರಂಗಭೂಮಿಯ ಪ್ರಕಾರವು ಕಾಲಕ್ರಮೇಣ ವೃತ್ತಿರಂಗಭೂಮಿಯಾಯಿತು.ವೃತ್ತಿ ರಂಗಭೂಮಿಗೆ 'ವ್ಯವಸಾಯ ರಂಗಭೂಮಿ' ಎಂದು ಕರೆಯುತ್ತಾರೆ. ಈ ವೃತ್ತಿ ರಂಗಭೂಮಿ ಸಂಪೂರ್ಣವಾಗಿ ಪಾಶ್ಚಾತ್ಯರ ಪ್ರಭಾವದಿಂದ ಉದಯಿಸಿತು.

ಪಾರ್ಸಿ ಕಂಪೆನಿಯ ಪ್ರೇರಣೆಯಿಂದ ಹುಟ್ಟಿಕೊಂಡ ಕನ್ನಡ ವೃತ್ತಿ ಸಂಸ್ಥೆಗಳು ಆರಂಭ ಕಾಲದಲ್ಲಿ ಹಿಂದೂಸ್ಥಾನಿ ನಾಟಕಗಳ ಕನ್ನಡ ರೂಪಗಳನ್ನು ಆಡುತ್ತಿದ್ದು ಕ್ರಮೇಣ ಅವುಗಳ ಮಾದರಿಯನ್ನನುಸರಿಸಿ ಸಂಸ್ಕೃತ ಮತ್ತು ಜಾನಪದ ನಾಟಕ ಸಂಪ್ರದಾಯಗಳನ್ನು ಅಲ್ಲಿಗೆ ಮೇಳೈಸಿ, ನಾಟಕ ರಚನೆಯಾದವು. ಆದರೆ ಜನಪದ ರಂಗಭೂಮಿಗಿದ್ದ ಧಾರ್ಮಿಕ ಹಿನ್ನೆಲೆ, ವೃತ್ತಿ ರಂಗಭೂಮಿಗಿರಲಿಲ್ಲ. ಇವರು ಪುರಾಣಗಳನ್ನೇ ತಮ್ಮ ನಾಟಕಗಳಿಗೆ ವಸ್ತುಗಳನ್ನಾಗಿ ಆರಿಸಿಕೊಂಡಿದ್ದರು. ಒಟ್ಟಿನಲ್ಲಿ ಹಣ ಕೊಟ್ಟು ನಾಟಕ ನೋಡುವ ಪ್ರೇಕ್ಷಕರು ಮತ್ತು ಅವರು ತೆತ್ತ ಹಣಕ್ಕೆ ಪ್ರತಿಫಲವಾಗಿ ನಾಟಕವಾಡುವ ಕಲಾವಿದರು ಕರ್ನಾಟಕದಲ್ಲಿ ಮೊತ್ತ ಮೊದಲ ಬಾರಿಗೆ ಕಾಣಿಸಿಕೊಂಡರು.

ಪಾಶ್ಚಾತ್ಯ ನಾಟಕ ಕಂಪೆನಿಗಳ ಮಾದರಿಯನ್ನನುಸರಿಸಿ, ಕಲ್ಕತ್ತಾ, ಮುಂಬೈ ಮುಂತಾದ ನಗರಗಳಲ್ಲಿ ಆರಂಭವಾದ ವೃತ್ತಿ ರಂಗಭೂಮಿ ಕ್ರಮೇಣ ಭಾರತದ ಇತರ ಪ್ರದೇಶಗಳಿಗೂ ವ್ಯಾಪಿಸಿತು. ಆರಂಭ ಕಾಲದಲ್ಲಿ ಇಲ್ಲಿನ ದೊಡ್ಡ ಶ್ರೀಮಂತರು, ಜಮೀನ್ದಾರರು

ಮತ್ತು ರಾಜ ಮಹಾರಾಜರುಗಳೇ ವೃತ್ತಿ ರಂಗಭೂಮಿಗೆ ಆಶ್ರಯದಾತರಾಗಿದ್ದರು. ಮುಂದೆ ಮೇಲು ವರ್ಗದವರ ಹಿಡಿತದಿಂದಲೂ ಸ್ವತಂತ್ರಗೊಂಡ ವೃತ್ತಿ ರಂಗಭೂಮಿ ನಗರ ಹಾಗೂ ಪಟ್ಟಣವಾಸಿಗಳಾದ ಮಧ್ಯಮ ವರ್ಗವನ್ನು ಆಶ್ರಯಿಸಿ ಬೆಳೆಯಿತು. ಕ್ರಮೇಣ ನಗರ ಹಾಗೂ ಪಟ್ಟಣಗಳ ಸಮೀಪವಿದ್ದ ಗ್ರಾಮೀಣ ಜನತೆಯನ್ನು ಆಕರ್ಷಿಸಿ ಪಾಶ್ಚಾತ್ಯ ಪ್ರಭಾವವನ್ನು ಒಳಗೊಂಡು ತನಗಿಂದ ಪ್ರಾಚೀನವಾದ ಭಾರತೀಯ ಅಭಿಜಾತ ಮತ್ತು ಜಾನಪದ ರಂಗ ಪರಂಪರೆಗಳ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆಯಿತು. ಸುಮಾರು 1871 ರಿಂದ 1930ರ ನಡುವಿನ ಅರುವತ್ತು ವರ್ಷಗಳ ಅವಧಿ ಭಾರತದ ವೃತ್ತಿ ರಂಗಭೂಮಿಯ ಉತ್ತುಂಗದ ಕಾಲ ಎನ್ನಬಹುದು.

ಹತ್ತೊಂಭತ್ತನೆಯ ಶತಮಾನದ ಮಧ್ಯಕಾಲದಲ್ಲಿ ಉದಯವಾದ ಮರಾಠಿ ವೃತ್ತಿ ರಂಗಭೂಮಿ ಪಶ್ಚಿಮ ಭಾರತದಲ್ಲಿ ತುಂಬಾ ಪ್ರಭಾವಶಾಲಿಯಾಗಿ ರೂಪುಗೊಂಡಿತು. ಸಾಂಗ್ಲಿಯ ಮಹಾರಾಜರು ಕನ್ನಡ ಬಯಲಾಟವೊಂದನ್ನು ನೋಡಿ, ಅದರ ಮಾದರಿಯಲ್ಲಿ ಮರಾಠಿ ನಾಟಕ ರಚನೆ ಮತ್ತು ರಂಗಭೂಮಿಯ ವ್ಯವಸ್ಥೆಗೆ ಪ್ರೋತ್ಸಾಹ ಕೊಟ್ಟರಂತೆ, ಸಾಂಗ್ಲಿಯ ಆಸ್ಥಾನ ಕೀರ್ತನಕಾರರಾಗಿದ್ದ ವಿಷ್ಣುದಾಸಬಾವೆಯವರು ನಾಟಕ ರಚನೆ ಮತ್ತು ಪ್ರದರ್ಶನದ ಹೊಣೆ ಹೊತ್ತು ಒಂದು ಸಂಸ್ಥೆಯನ್ನು ಕಟ್ಟಿ, ಮುಂಬೈನಲ್ಲಿಯೂ ಕೆಲವು ಪ್ರದರ್ಶನಗಳನ್ನು ಏರ್ಪಡಿಸಿದರೆಂದು ತಿಳಿದು ಬರುತ್ತದೆ. ಮುಂದೆ ಹಲವಾರು ವೃತ್ತಿ ಸಂಸ್ಥೆಗಳು ತಲೆ ಎತ್ತಿ ಮಹಾರಾಷ್ಟ್ರದ ಉದ್ದಗಲಕ್ಕೂ ಪ್ರವಾಸ ಮಾಡಿ ನಾಟಕಗಳನ್ನು ಪ್ರದರ್ಶಿಸಿದವು. ಆಗ ಮುಂಬೈ ಪ್ರಾಂತದಲ್ಲಿದ್ದ ಉತ್ತರ ಕರ್ನಾಟಕದ ಪಟ್ಟಣಗಳಿಗೂ ಮಹಾರಾಷ್ಟ್ರದ ಕಂಪನಿಗಳು ಆಗಮಿಸಿ ಜನಪ್ರಿಯವಾದ ಪರಿಣಾಮವಾಗಿ ಕನ್ನಡ ನಾಟಕಗಳು ಮೂಲೆ ಸೇರಿದವು.

ಮರಾಠಿ ರಂಗಭೂಮಿಯ ಉತ್ಕರ್ಷ ಸ್ಥಿತಿ ಮುಂಬೈನ ಪಾರ್ಸಿ ಜನಾಂಗದ ಕಣ್ಣು ಕುಕ್ಕಿತು. ಸ್ವಭಾವತಃ ವ್ಯಾಪಾರಿ ಮನೋಧರ್ಮದ ಪಾರ್ಸಿಗಳಿಗೆ ತಮ್ಮದೆ ಆದ ಸಾಂಸ್ಕೃತಿಕ ಪರಂಪರೆ ಭಾರತದಲ್ಲಿ ಇರಲಿಲ್ಲವಾದುದರಿಂದ ಹಿಂದೂಸ್ಥಾನ ಮತ್ತು ಗುಜರಾತಿನ ರಂಗಭೂಮಿಯನ್ನು ಆಶ್ರಯಿಸಿ ಸುಮಾರು 50 ವರ್ಷಗಳ ಕಾಲ ಭಾರತದ ಸಾಂಸ್ಕೃತಿಕ ಕ್ಷೇತ್ರದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಿಕೊಂಡು ಮೆರೆದರು. ಪಾರ್ಸಿಗಳಿಂದ ಪ್ರಭಾವಿತರಾದ ಕೆಲವು ಮಂದಿ ಕನ್ನಡಿಗರು ಅವರು ಪ್ರದರ್ಶಿಸುತ್ತಿದ್ದ 'ಇಂದ್ರಸಭಾ', 'ಗುಲೇಬಕಾವಲಿ'ಯಂಥ ಜನಪ್ರಿಯ ನಾಟಕಗಳನ್ನು ಹಿಂದೂಸ್ಥಾನಿ ಭಾಷೆಯಲ್ಲಿಯೇ ಅಭಿನಯಿಸಲು ತೊಡಗಿದರು.

ಕನ್ನಡ ನಾಡಿನಲ್ಲಿ ಮರಾಠಿ (ಸಾಂಗ್ಲಿ) ಮತ್ತು ಪಾರ್ಸಿ ಕಂಪನಿಗಳ ಉತ್ಕರ್ಷದಿಂದಾಗಿ ಸಿಡಿದೆದ್ದ ವಿದ್ಯಾವಂತ ಜನತೆ, ಕನ್ನಡ ರಂಗಭೂಮಿ ಪುನರುಜ್ಜೀವನಕ್ಕೆ ತೊಡಗಿದರು. ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳು ಇದರ ಮುಂದಾಳುವಾಗಿ ನಿಂತರು. ಗದುಗಿನ ಶ್ರೀಮಂತ ಉಚ್ಚಂಗಿ ಲಚ್ಚಪ್ಪ ನಾಯಕ ಎನ್ನುವವರು ಶಾಂತ ಕವಿಗಳ ಪ್ರೋತ್ಸಾಹದಿಂದ 'ಗದುಗಿನ ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು. ಹಲವು ಯುವಕರ ನೆರವಿನಿಂದ ಸ್ಥಾಪನೆಯಾದ ಮಂಡಳಿಯೇ ಉತ್ತರ ಕರ್ನಾಟಕದ ಪ್ರಥಮ ವೃತ್ತಿ ನಾಟಕ ಸಂಸ್ಥೆಯಾಗಿದ್ದು, ಶಾಂತಕವಿಗಳು ಈ ಸಂಸ್ಥೆಗಾಗಿ ನಾಟಕಗಳನ್ನು ಬರೆಯತೊಡಗಿದರು. 'ಉಷಾಹರಣ' ಅವರ ಮೊದಲ ನಾಟಕ. ಅಲ್ಲದೆ 'ಕೀಚಕ ವಧಾ', 'ವತ್ಸಲಾಹರಣ', 'ಶ್ರೀಯಾಳ ಸತ್ವಪರೀಕ್ಷೆ' ಸುಂದೋಪ ಸುಂದ ವಧ', 'ಸುಧನ್ವ ವಧ', 'ಸೀತಾರಣ್ಯ ಪ್ರವೇಶ' ಮುಂತಾದ ನಾಟಕಗಳನ್ನು ಅವರಿಗಾಗಿ ಸಾಂತಕವಿಗಳು ರಚಿಸಿಕೊಟ್ಟರು. ಅಂದಿನ ಮರಾಠಿ ಮತ್ತು ಕನ್ನಡ ವೃತ್ತಪತ್ರಿಕೆಗಳು ಈ ನಾಟಕಗಳನ್ನು ವಿಶೇಷವಾಗಿ ಹೊಗಳಿ ಪ್ರಚಾರ ಮಾಡಿದವು.

ಶಾಂತ ಕವಿಗಳ ನೇತೃತ್ವದ 'ಕೃತಪುರ ಮಂಡಳಿ'ಯ ಆಧುನಿಕ ಪದ್ಧತಿಗನುಸಾರವಾಗಿ ಸುಧಾರಿತ ರಂಗಮಂದಿರ, ಉಡುಗೆ ತೊಡುಗೆಗಳನ್ನು ಮರಾಠಿ ಮತ್ತು ಪಾರ್ಸಿ ಕಂಪನಿಗಳಂತೆ ಅಳವಡಿಸಿಕೊಂಡಿತಾದರೂ ಹಿಂದಿನ ಕನ್ನಡ ಜಾನಪದ ಸಂಪ್ರದಾಯವನ್ನು ಪೂರ್ತಿಯಾಗಿ ಕೈಬಿಟ್ಟಿರಲಿಲ್ಲ ಅಭಿಜಾತ ಮತ್ತು ಜಾನಪದ ಪರಂಪರೆಗಳ ಸಮ್ಮಿಶ್ರ ಮಾದರಿಯೊಂದನ್ನು ಅವರು ರೂಪಿಸಿಕೊಂಡರು. ಇಪ್ಪತ್ತನೆಯ ಶತಮಾನದ ಪ್ರಾರಂಭ ಕಾಲವು ವೃತ್ತಿರಂಗಭೂಮಿಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಕಾಲ. ವೃತ್ತಿರಂಗಭೂಮಿಯ ಚೌಕಟ್ಟಿಗೆ ಒಳಪಟ್ಟಂತಹ ಪೂರ್ಣ ಪ್ರಮಾಣದ ನಾಟಕ ಮಂಡಳಿಗಳು, ಈ ಅವಧಿಯಲ್ಲಿಯೇ ಉಗಮಗೊಂಡವು. 1901ರಲ್ಲಿ ಪ್ರಾರಂಭವಾದ 'ಕೊಣ್ಣೂರ ಕಾಡಸಿದ್ಧೇಶ್ವರ ನಾಟಕ ಮಂಡಳಿ' ಹಾಗೂ 1903ರಲ್ಲಿ ಸ್ಥಾಪಿತವಾದ ಶಿರಹಟ್ಟಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಸಾದಿತ ನಾಟಕ ಮಂಡಳಿ'ಗಳು ಉತ್ತರ ಕರ್ನಾಟಕದ ಪೂರ್ಣಪ್ರಮಾಣದ ವೃತ್ತಿರಂಗಭೂಮಿಯ ನಾಟಕ ಮಂಡಳಿಗಳಾಗಿದ್ದವು.

ಶಿವಮೂರ್ತಿ ಸ್ವಾಮಿ ಕಣಬರ್ಗಿ ಮತ ಅವರ 'ಕೊಣ್ಣೂರು ಕಾಡಸಿದ್ಧೇಶ್ವರ ಕಂಪನಿ'ಯು ರಂಗಭೂಮಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸುವಂತೆ ಹಲವಾರು ತಂತ್ರಗಳನ್ನು ಬಳಸಿದ್ದು, ಸ್ತ್ರೀ ಪಾತ್ರಗಳಿಗೆ ನಟಿಯರನ್ನು ಮೊದಲ ಬಾರಿಗೆ ರಂಗದ ಮೇಲೆ ತಂದಿದ್ದು, ಪ್ರಥಮ ಬಾರಿಗೆ ರಂಗಮಂದಿರಕ್ಕೆ ವಿದ್ಯುದ್ದೀಪಗಳನ್ನು ಬಳಸಿದ್ದು, ವೈವಿಧ್ಯಮಯ ವೇಷಭೂಷಣಗಳನ್ನು ಅಳವಡಿಸಿಕೊಂಡಿದ್ದು, ನುರಿತ ನಟರನ್ನು ಒಳಗೊಂಡಿದ್ದುದು ದಾಖಲುಗೊಳಿಸುವ ಅಂಶಗಳಾಗಿವೆ. ಸುಮಾರು 32 ವರ್ಷಗಳ ಕಾಲ ಉತ್ತರ ಕರ್ನಾಟಕದ ವಿವಿಧೆಡೆಗಳಲ್ಲಿ ರಂಗಪ್ರದರ್ಶನಗಳನ್ನು ನೀಡಿತು.

ಶಿರಹಟ್ಟಿ ಕಂಪನಿಯ ವೆಂಕೋಬರಾಯರು ನಾಟಕ ಕಲೆಯ ದೃಷ್ಟಿಗೆ ಮಹತ್ವ ಕೊಟ್ಟರು. ಮೈಸೂರಿನ ಮಹಾರಾಜರ ಆಜ್ಞೆಯ ಮೇರೆಗೆ ಅರಮನೆಯಲ್ಲಿ 'ಕಾಳಿದಾಸ ಚರಿತ್ರೆ'ಯ ನಾಟಕವನ್ನು ಪ್ರದರ್ಶಿಸಿ ಮಹಾರಾಜರ ಕೃಪಾಶೀರ್ವಾದವನ್ನು ಪಡೆದ ಹೆಗ್ಗಳಿಕೆ ಉತ್ತರ ಕರ್ನಾಟಕದ ಕಂಪನಿಗಳಲ್ಲೇ ಈ ನಾಟಕ ಮಂಡಳಿಗೆ ಸಲ್ಲುತ್ತದೆ. ಹೀಗೆ ಸುಮಾರು 3 ದಶಕಗಳ ಕಾಲ ಇವೆರಡು ನಾಟಕ ಕಂಪನಿಗಳು ಉತ್ತರ ಕರ್ನಾಟಕದಾದ್ಯಂತ ಸಂಚರಿಸಿ ವೃತ್ತಿರಂಗಭೂಮಿಯ ಬೆಳವಣಿಗೆಗೆ ಪ್ರಚೋದನೆಯನ್ನು ನೀಡಿದವು.

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ಕನ್ನಡ ನಾಡನ್ನು ಪ್ರವೇಶಿಸಿದ ಮರಾಠಿ ಮತ್ತು ಪಾರ್ಸಿ ಕಂಪೆನಿಗಳು ಮೈಸೂರಿಗೂ ಬಂದು ನಾಟಕಗಳನ್ನು ಪ್ರದರ್ಶಿಸಿದರು. ಉತ್ತರ ಕರ್ನಾಟಕದಂತೆ ಇಲ್ಲಿಯೂ ಕನ್ನಡ ಜನತೆ ಅವರ ಪ್ರಭಾವಕ್ಕೆ ಸಿಕ್ಕಿ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿತ್ತು. ಕನ್ನಡದ ಮೇಲಿನ ಈ ಮಾರಕ ದಾಳಿಯ ಉಪಟಳವನ್ನು ತಡೆಗಟ್ಟಲು ಮೈಸೂರಿನ ತರುಣರಲ್ಲಿ ಕೆಲಮಂದಿ ಕಲಾವಿಲಾಸಿಗಳು ಸುಮಾರು ಕ್ರಿ.ಶ. 18/9–80ರಲ್ಲಿ ಸಿ.ಆರ್. ರಘುನಾಥರಾಯರ ನೇತೃತ್ವದಲ್ಲಿ ಒಂದು ಕನ್ನಡ ನಾಟಕ ಸಂಘವನ್ನು ಆರಂಭಿಸಿ, 'ಶ್ರೀ ಶಾಕುಂತ ಕರ್ನಾಟಕ ನಾಟಕ ಸಭಾ' ಎಂಬ ಹೆಸರಿಟ್ಟು ಕಾರ್ಯನಿರತರಾದರು. ಇದೇ ಸಮಯದಲ್ಲಿ ಮೈಸೂರಿನ ಅರಸರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರು ನಾಡಿನ ಸಿರಿ ಸಂಪತ್ತು ಸೂರೆಯಾಗುತ್ತಿರುವುದಷ್ಟೇ ಅಲ್ಲದೆ, ಕನ್ನಡದ ಸಾರಸ್ವತ ಸಂಪತ್ತು ಮರೆಯಾಗುತ್ತಿರುವುದನ್ನು ಗಮನಿಸಿ, ಕನ್ನಡ ಜನತೆಗೆ ನಾಟಕ ಕಲೆಯಲ್ಲಿರುವ ಉತ್ಸಾಹ ಆಸಕ್ತಿಗಳನನು ಮನಗಂಡು, 1880ರಲ್ಲಿ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಎಂಬ ಹೆಸರಿನ ನಾಟಕ ಮಂಡಳಿಯೊಂದನ್ನು ತಮ್ಮ ಆಶ್ರಯದಲ್ಲಿ ಸ್ಥಾಪಿಸಿ ಕನ್ನಡ ರಂಗಭೂಮಿಗೆ ಭದ್ರವಾದ ಬುನಾದಿಯನ್ನು ಹಾಕಿದರು.

ಹೀಗೆ ಮೈಸೂರಿನಲ್ಲಿ ವೃತ್ತಿ ರಂಗಭೂಮಿಯ ಉದಯಕ್ಕೆ ತಕ್ಕ ಹಿನ್ನೆಲೆಯನ್ನು ಕಲ್ಪಿಸಿದವರು ಮೈಸೂರಿನ ಅರಸರು. ಅರಮನೆಯ ನಾಟಕ ಮಂಡಳಿಯನ್ನು ಮುಂದೆ, ಮೈಸೂರಿನ 'ಶ್ರೀ ಶಾಕುಂತಲಾ ನಾಟಕ ಸಭಾ' ಸೇರಿಕೊಂಡಿತು. ಚಾಮರಾಜರು ತಮ್ಮ ಆಸ್ಥಾನದಲ್ಲಿದ್ದ ಉತ್ತಮ ಕಲಾವಿದರನ್ನೆಲ್ಲಾ ಬಳಸಿಕೊಂಡು ಅವರಲ್ಲಿ ಕೆಲವರನ್ನು ಮುಂಬೈಗೆ ಕಳಿಸಿ ಅಲ್ಲಿನ ರಂಗ ವಾಸ್ತುಶಿಲ್ಪ, ಪರದೆಗಳು, ವೇಷಭೂಷಣಗಳ ಕ್ಷೇತ್ರದಲ್ಲಿ ತರಬೇತಿ ಕೊಡಿಸಿದರು. ಕಾಳಿದಾಸನ 'ಶಕುಂತಲ'ವನ್ನು ಬಸವಪ್ಪ ಶಾಸ್ತ್ರಿಗಳಿಂದ ಅನುವಾದಿಸಿ 1883ರಲ್ಲಿ ಪ್ರದರ್ಶಿಸಲಾಯಿತು. ನಂತರ ಸೋಸಲೆ ಅಯಾಶಾಸ್ತ್ರಿಗಳು, ನಂಜನಗೂಡು ಸುಬ್ಬಾ ಶಾಸ್ತ್ರಿಗಳು ಜಯರಾಯಾಚಾರ್ಯರು ಮುಂತಾದ ವಿದ್ವಾಂಸರು ಹಲವು ಉತ್ತಮ ನಾಟಕಗಳನ್ನು ಅನುವಾದಿಸಿದರು. ಎಂ.ಡಿ. ಸುಬ್ಬಣ್ಣನವರು, ಲಕ್ಷ್ಮೀಪತಿ ಶಾಸ್ತ್ರಿಗಳು, ದೇವರಾಜ್ ಅರಸಿನವರು, ನಟನ್ ರಾಮರಾಯರು, ಬಾಳಾಜಿರಾಯರು ಮುಂತಾದವರು ಆಗ ಪಾತ್ರವಹಿಸುತ್ತಿದ್ದವರಲ್ಲಿ ಪ್ರಮುಖರು.

ಮುಂದೆ 1882 ರಲ್ಲಿ ಬೆಂಗಳೂರಿನಲ್ಲಿಯೂ, 1885ರಲ್ಲಿ ಧಾರವಾಡ, ಬೆಳಗಾಂ, ಬಳ್ಳಾರಿ ಪ್ರಾಂತಗಳಲ್ಲಿಯೂ ತಮ್ಮ ನಾಟಕಗಳನ್ನು ಪ್ರದರ್ಶಿಸಿದ ಈ ಕಂಪೆನಿಗೆ ಬಿಡಾರಂ ಕೃಷ್ಣಪ್ಪ, ಜಂಜೂಟಿ ಶೇಷಗಿರಿರಾಯರು, ಮಂಡ್ಯಂ ರಂಗಾಚಾರ್ಯರಂತಹ ಪ್ರತಿಭಾವಂತರ ಸೇರ್ಪಡೆಯಾಗಿತ್ತು. 1917ರ ಸುಮಾರಿಗೆ ಕಾರಣಾಂತರಗಳಿಂದ ರಾಜಾಶ್ರಯ ಕಳೆದುಕೊಂಡ ಈ ನಾಟಕ ಮಂಡಳಿಯ ನಟರು ತಮ್ಮದೇ ಆದ ಸ್ವತಂತ್ರ ಸಂಸ್ಥೆಗಳನ್ನು ಆರಂಭಿಸಿದರು. ಹೀಗೆ ಮೈಸೂರು ಪ್ರದೇಶದ ಕನ್ನಡ ನೆಲದಲ್ಲಿ ರಂಗಭೂಮಿಯ ಪುನರುಜ್ಜೀವನಕ್ಕೆ ಮತ್ತು ವೃತ್ತಿ ರಂಗಭೂಮಿಯ ಆರಂಭಕ್ಕೆ ಈ ನಾಟಕ ಮಂಡಳಿ ನಾಂದಿಯಾಗಿ ಪರಿಣಮಿಸಿತು.

'ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ವಿಸರ್ಜನೆಯಾದ ಮೇಲೆ ಅಲ್ಲಿನ ನಟರೇ ಸೇರಿ ಕಟ್ಟಿಕೊಂಡ 'ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ', ಮೈಸೂರು– ಈ ಸಂಸ್ಥೆ 1930ರಿಂದ ಮುಂದೆ ವಿಶೇಷವಾಗಿ ಅಭಿವೃದ್ಧಿ ಪಡೆಯಿತು. ಆರ್. ನಾಗೇಂದ್ರರಾವ್ ಮತ್ತು ಮಳವಳ್ಳಿ ಸುಂದರಮ್ಮನವರು ಬೇರೆ ಬೇರೆ ಕಾಲಗಳಲ್ಲಿ ಈ ಮಂಡಳಿಯ ಆಡಳಿತ ಸೂತ್ರ ಹೊಣೆ

ಹೊತ್ತು ಮುನ್ನಡೆಸಿದವರು. ಚಾಮುಂಡೇಶ್ವರಿ ಮಂಡಳಿಯ ಪ್ರಮುಖರು ನಟರು ಆರ್. ನಾಗೇಂದ್ರ ರಾವ್, ಮಳವಳ್ಳಿ ಸುಂದರಮ್ಮ, ಬಿ. ರಾಚಪ್ಪ, ಎಸ್. ಸುಬ್ಬಣ್ಣ, ಎಂ. ಕೃಷ್ಣಮೂರ್ತಿ, ಕಪಿನಿಪತಿ ರಾವ್, ಜಿ. ನಾಗೇಶರಾಯರು, ಕೊಟ್ಟೂರು ಬಸವಯ್ಯ ಮುಂತಾದವರು.

ಕನ್ನಡ ರಂಗಭೂಮಿಯ ಹಿರಿಯ ನಟರಲ್ಲಿ ಅಗ್ರಗಣ್ಯರಾದ ಮಂಡ್ಯ ರಂಗಾಚಾರ್ಯರು ಮತ್ತು ಅವರ ಗೆಳೆಯರು 1881ರಲ್ಲಿ ಸ್ಥಾಪಿಸಿದ 'ರಾಜಧಾನಿ ನಾಟಕ ಮಂಡಳಿ' ಮೊದಲಿಗೆ 'ಭಾಷಾಸುರೋಪಾಖ್ಯಾನ' ಎಂಬ ನಾಟಕಗಳನ್ನೂ ನಂತರ ಮುಂದಿನ ವರ್ಷಗಳಲ್ಲಿ 'ಇಂದ್ರಸಭಾ' ಮತ್ತು 'ಲೈಲಾ ಮಜನೂ' ಗಳೆಂಬ ಹಿಂದೂಸ್ಥಾನಿ ನಾಟಕಗಳನ್ನೂ ಪ್ರದರ್ಶಿಸಿ ಪ್ರೇಕ್ಷಕರಿಂದ ಮತ್ತು ಗಣ್ಯರಿಂದ ಮನ್ನಣೆ ಪಡೆದಿದ್ದವು. ಶ್ರೀನಿವಾಸ ಅಯ್ಯಂಗಾರರ 'ರತ್ನಾವಳಿ' ಅಂದು ಈ ಮಂಡಳಿಯಿಂದ ಜನಪ್ರಿಯಗೊಂಡ ಒಂದು ನಾಟಕ. ಇವರ 'ಸತ್ಯವರ್ಮ', 'ಹರಿಶ್ಚಂದ್ರ', ಎಸ್.ಜಿ ನರಸಿಂಹಾಚಾರ್ಯರ 'ಶಾಕುಂತಲ', 'ಚಂದ್ರಹಾಸ', 'ಕಾಮಪಾಲ ಚರಿತೆ', ಎ. ಆನಂದರಾಯರ 'ರಾಮವರ್ಮ ಲೀಲಾವತಿ', ಮಾದಪ್ಪ ಶಾಸ್ತ್ರಿಗಳ 'ಮಕರಂದಿಕಾ ಪರಿಣಯ' ಮೊದಲಾದವು ಈ ಮಂಡಳಿ ಅಭಿನಯಿಸುತ್ತಿದ್ದ ಕೆಲವು ನಾಟಕಗಳು (ಮಂಡ್ಯ ರಂಗಾಚಾರ್ಯರ ನಾಟಕ ಪಾತ್ರ ಮತ್ತು ಗೌರಿ ನರಸಿಂಹಯ್ಯನವರ ನಾಯಕಿ ಪಾತ್ರಗಳು ಅಂದು ಜನರ ಆಕರ್ಷಣೆಯಾಗಿದ್ದ ಸಂಗತಿಗಳು. ಅವರಲ್ಲದೆ ಚಕ್ರವರ್ತಿ ಶ್ರೀನಿವಾಸಯ್ಯಂಗಾರ್, ಚಕ್ರವರ್ತಿ ರಂಗಾಚಾರ್ಯ ಮುಂತಾದವರು ಉಳಿದ ಪಾತ್ರಗಳಲ್ಲಿ ಹೆಸರುವಾಸಿಯಾಗಿದ್ದವರು.

ಕನ್ನಡ ರಂಗಭೂಮಿಯ ಅಭಿವೃದ್ಧಿಗಾಗಿ ಮಂಡ್ಯಂ ರಂಗಾಚಾರ್ಯರ ಬಳಿಕ ಶ್ರಮಿಸಿದ ಪ್ರತಿಭಾವಂತ ನಟರಲ್ಲಿ ವರದಾಚಾರ್ಯರು ಪ್ರಮುಖರು. ಅವರು ರಂಗಭೂಮಿಯನ್ನು ಅನಿರೀಕ್ಷಿತವಾಗಿ ಪ್ರವೇಶಿಸಿದರೂ 20ನೆಯ ಶತಮಾನದ ಮೊದಲ ಕಾಲು ಶತಮಾನದಲ್ಲಿ ಕನ್ನಡ ರಂಗಭೂಮಿಯ ಅನಭಿಷಿಕ್ತ ಚಕ್ರವರ್ತಿಯಂತೆ ಮೆರೆದರು. ಅವರು 1902ನೆಯ ಫೆಬ್ರವರಿಯಲ್ಲಿ ತಮ್ಮ 'ರತ್ನಾವಳಿ ನಾಟಕ ಸಭಾ' ಸ್ಥಾಪಿಸಿದರು.

ರಂಗ ರಚನೆಯ ಕಾರ್ಯದಲ್ಲಿ ವರದಾಚಾರ್ಯರು ತೋರಿಸಿರುವ ಕೌಶಲ್ಯವು ಅತ್ಯಂತ ಶ್ಲಾಘ್ಯವಾಗಿರುವುದು. ನಯ ಸಹಿತವೂ, ಶಿಕ್ಷಿತವೂ, ವಾಸ್ತವವೂ ಆದ ಕ್ರಮವನ್ನು ಕನ್ನಡ ನಾಡಿನ ರಂಗಭೂಮಿಯಲ್ಲಿ ಮೊದಲು ಸ್ಥಾಪಿಸಿದವರು ವರದಾಚಾರ್ಯರು, ಬೊಂಬಾಯಿ ನಗರದ ಆಧುನಿಕ ಪಾರ್ಸಿ ಮತ್ತು ಹಿಂದೂ ನಾಟಕ ಸಂಘಗಳಲ್ಲಿ ಬಳಕೆಯಲ್ಲಿರುವ ದೃಶ್ಯ ಸಂಬಂಧವಾದ ಸಲಕರಣೆಗಳನ್ನು ವರದಾಚಾರ್ಯರು ಅನುಕರಣ ಮಾಡಿ ಕನ್ನಡ ನಾಟಕ ರಂಗಕ್ಕೆ ಒಂದು ಹೊಸ ಕಳೆಯನ್ನುಂಟುಮಾಡಿದವರು. ರಂಗಭೂಮಿಯ ಪಾತ್ರಗಳ ಉಡುಗೆ ತೊಡುಗೆಗಳಿಗೆ ಸಂಬಂಧಿಸಿದಂತೆ ಅವರು ಸುಪ್ರಸಿದ್ಧ ಕಲಾವಿದ ರವಿವರ್ಮನ ಚಿತ್ರಪಠಗಳನ್ನು ಆಳವಾಗಿ ಅಭ್ಯಸಿಸಿ ವಸ್ತ್ರಾಭರಣಗಳನ್ನು ಏರ್ಪಾಡು ಮಾಡುತ್ತಿದ್ದರಂತೆ. ಮೈಸೂರು ರಂಗಭೂಮಿಯಲ್ಲಿ ಮೊತ್ತ ಮೊದಲು ವಿದ್ಯುತ್ ಶಕ್ತಿಯ ಸಹಾಯದಿಂದ ದೀಪಾಲಂಕಾರವನ್ನೂ, ವರ್ಣಭೇದವನ್ನೂ ಮತ್ತು ಸಮಯೋಚಿತ ನೆಳಲು ಬೆಳಕುಗಳನ್ನು ಏರ್ಪಡಿಸಿದವರು ವರದಾಚಾರ್ಯರು.

ಇವರು ರಂಗಭೂಮಿಯಲ್ಲಿ ಪ್ರಸಿದ್ಧ ನಟರಾಗಿದ್ದಂತೆ ನಾಟಕಗಾರರೂ ಆಗಿದ್ದರು. 'ವಿಮಲಾ ವಿಜಯ', 'ಇಂದಿರಾನಂದ', 'ರಾಮವರ್ಮ ಲೀಲಾವತಿ', 'ಕಾಮಪಾಲ' ಮುಂತಾದ ಕೆಲವು ಸ್ವತಂತ್ರ ನಾಟಕಗಳನ್ನು ರಚಿಸಿದ್ದಾರೆ.

ಕನ್ನಡ ನಾಡಿನ ಆದರಾಭಿಮಾನಗಳನ್ನು ಕಾಲು ಶತಮಾನಗಳ ಕಾಲ ನಿರಂತರವಾಗಿ ಪಡೆದ 'ರತ್ನಾವಳಿ ಸಭಾ' 1917–18ರಲ್ಲಿ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡಿತು. ಕುಂಭಕೋಣ, ಮಧುರೆ, ತಿರುಚನಾಪಳ್ಳಿ, ಮಂಗಳೂರು ಮುಂತಾದ ಕಡೆ ಸಂಚರಿಸಿ, ಪ್ರೇಕ್ಷಕರ ಮನ್ನಣೆ ಮತ್ತು ಸನ್ಮಾನಗಳಿಗೆ ಪಾತ್ರರಾದರು. ತಿರುಚಿನಾಪಳ್ಳಿಯಲ್ಲಿ ಶ್ರೀಮತಿ ಅನಿಬೆಸೆಂಟರ ನೇತೃತ್ವದಲ್ಲಿ ವರದಾಚಾರ್ಯರಿಗೆ 'ನಾಟಕ ಶಿರೋಮಣಿ' ಎಂಬ ಬಿರುದು ದೊರಕಿದೆ. ನಂತರ 1926ರಲ್ಲಿ ಅವರು ದಿವಂಗತರಾಗುವುದರೊಂದಿಗೆ ಅವರ ನಾಟಕ ಮಂಡಳಿಯೂ ವಿಸರ್ಜಿಸಲ್ಪಟ್ಟಿತು.

ವೃತ್ತಿ ರಂಗಭೂಮಿಯ ಆರಂಭ ಕಾಲದಲ್ಲಿ ಚಾಮರಾಜ ಒಡೆಯರ ಪ್ರೋತ್ಸಾಹದಿಂದ ಮುಂದುವರಿದ ಹಲವು ಕಂಪೆನಿಗಳಲ್ಲಿ ಗುಬ್ಬಿ ಕಂಪನಿ ಇತಿಹಾಸವನ್ನು ನಿರ್ಮಿಸಿತು. 1884ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿಯ ಕಲಾಭಿಮಾನಿಗಳಾದ ಗುಬ್ಬಿಯ ಚಂದಣ್ಣ, ಅಬ್ದುಲ್ ಅಜೀಜ್ ಹಾಗೂ ಸಾಹುಕಾರ್ ನೀಲಕಂಠಪ್ಪನವರು 'ಗುಬ್ಬಿ ಶ್ರೀ ಚನ್ನ ಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ'ಯನ್ನು

ಸ್ಥಾಪಿಸಿದರು. ಆ ಕಾಲದಲ್ಲಿ ವೀರಪ್ಪ ಶಾಸ್ತ್ರಿಗಳೇ ಗುಬ್ಬಿ ಕಂಪನಿಯ ಪ್ರಧಾನ ನಾಟಕಕಾರರು.

ಗುಬ್ಬಿ ಕಂಪೆನಿಯ ಆಯಸ್ಸು ದೊಡ್ಡದು, ಅಷ್ಟೇ ದೊಡ್ಡದು ಅದರ ಸಾಧನೆ. ಇಷ್ಟು ದೀರ್ಘಕಾಲ ಒಬ್ಬ ವ್ಯಕ್ತಿಯ ನೇತೃತ್ವದಲ್ಲಿ ಬಾಳಿದ ವೃತ್ತಿ ಕಂಪನಿ ಭಾರತದಲ್ಲೇಕೆ, ಪ್ರಪಂಚದಲ್ಲೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.'

ಕನ್ನಡ ವೃತ್ತಿ ರಂಭೂಮಿಯಲ್ಲಿ ವರ್ಣಮಯವಾದ ವ್ಯಕ್ತಿತ್ವದಿಂದ ಹೆಸರಾಗಿರುವ ಗುಬ್ಬಿ ವೀರಣ್ಣನವರು ಈ ಕಂಪನಿಯನ್ನು 1896ರಲ್ಲಿ ಸೇರಿದರು. ಕರ್ತೃತ್ವಶಕ್ತಿ ಮತ್ತು ಸಾಹಸ ಪ್ರವೃತ್ತಿಯ ವೀರಣ್ಣನವರು ಉತ್ತಮ ನಟರೂ ಆಗಿದ್ದು, ಬಹುಬೇಗ ಕಂಪನಿಯ ಪ್ರಮುಖ ವ್ಯಕ್ತಿಗಳಲ್ಲೊಬ್ಬರಾದರು. 1917ರಲ್ಲಿ ಚಂದಣ್ಣನವರು ನಿಧನರಾದ ಮೇಲೆ ಜಂಟಿ ಮಾಲಿಕತ್ವದಲ್ಲಿ ಕಂಪನಿಯ ಆಡಳಿತ ಸೂತ್ರ ವಹಿಸಿಕೊಂಡರು. 1920ರ ಹೊತ್ತಿಗೆ ಕಂಪನಿಯ ಪೂರ್ಣ ಮಾಲಿಕತ್ವವನ್ನು ಪಡೆದ ವೀರಣ್ಣನವರು ಮುಂದೆ ಮೂರು ದಶಕಗಳ ಕಾಲ ಕನ್ನಡ ರಂಗಭೂಮಿಯ ಕೇಂದ್ರ ವ್ಯಕ್ತಿಯಾಗಿ, ಅದ್ವಿತೀಯ ಪ್ರಯೋಗ ಪಟುವಾಗಿ ಮೆರೆದರು.

1924ರಲ್ಲಿ ಈ ಮಂಡಳಿಯು ಬೆಂಗಳೂರಿನಲ್ಲಿ ತನ್ನದೇ ಆದ ಒಂದು ಸ್ವಂತ ಸುಸಜ್ಜಿತ ನಾಟಕ ಶಾಲೆಯನ್ನು ಹೊಂದಿತ್ತು. ಚಿಕ್ಕ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಒಂದು 'ಬಾಲ ಕಲಾವರ್ಧಿನಿ ನಾಟಕ ಸಂಘ' ವೆಂಬ ಮಂಡಲಿಯೊಂದನ್ನು ಗುಬ್ಬಿ ವೀರಣ್ಣನವರು ತಮ್ಮ ಕಂಪನಿಯ ಶಾಖೆಯಾಗಿ ಕಟ್ಟಿದ್ದರು. 1934ರಲ್ಲಿ ತನ್ನು ಸುವರ್ಣ ಮಹೋತ್ಸವವನ್ನು ಆಚರಿಸಿದ ಗುಬ್ಬಿ ಕಂಪನಿ ಅದರ ನೆನಪಿಗಾಗಿ ಬಿ. ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ'ವನ್ನು ಅದ್ದೂರಿಯಾಗಿ ಪ್ರದರ್ಶಿಸಿತು. ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಈ ನಾಟಕ ಪ್ರದರ್ಶನ ಒಂದು ವಿಶಿಷ್ಟ ದಾಖಲೆಯಾಗಿ ಉಳಿದಿದೆ. ಈ ನಾಟಕದ ಪ್ರಯೋಗಕ್ಕೆ ಅಳವಡಿಸಿದ ರಂಗಸಜ್ಜಿಕೆ ವೇಷಭೂಷಣ ಇತ್ಯಾದಿಗಳಿಗೆ ಆ ಕಾಲದಲ್ಲಿ 75000 ರೂಪಾಯಿಗಳನ್ನು ವ್ಯಯ ಮಾಡಿದ ವೀರಣ್ಣನವರ ಸಾಹಸ ಪ್ರವೃತ್ತಿಯನ್ನು ಆಶ್ಚರ್ಯದಿಂದ ಒಪ್ಪಬೇಕಾಗುತ್ತದೆ.

ನಂತರ ಗುಬ್ಬಿ ಕಂಪನಿಯಲ್ಲಿ ನೂರಾರು ನಟ ನಟಿಯರಲ್ಲದೆ ಆನೆ, ಕುದುರೆ, ಜಿಂಕೆ, ಗಿಳಿ, ನವಿಲು ಇತ್ಯಾದಿ ಹಲವು ಪ್ರಾಣಿ, ಪಕ್ಷಿ ನಟರೂ ಸೇರ್ಪಡೆಯಾಗಿದ್ದರು. ನೋಡುವವರಿಗೆ ಅದೊಂದು ಸರ್ಕಸ್ ಕಂಪನಿಯೆಂಬ ಭ್ರಮೆಯೂ ಉಂಟಾಗುತ್ತಿತ್ತು. ಈ ಕಂಪನಿಯ ವೈಭವದ ರಂಗಸಜ್ಜಿಕೆ, ಆಧುನಿಕ ರೀತಿಯ ಪ್ರೊಜೆಕ್ಟರುಗಳು ಅಂದು ದಂತಕಥೆಯಾದವು. 1983ರ ಹೊತ್ತಿಗೆ ಗುಬ್ಬಿ ಕಂಪೆನಿಯ ಸರಿ ಸಮಾನ ನಿಲ್ಲಬಲ್ಲ ಮತ್ತೊಂದು ವೃತ್ತಿ ನಾಟಕ ಸಂಸ್ಥೆ ಇಡೀ ದಕ್ಷಿಣ ಭಾರತದಲ್ಲಿಯೇ ಇರಲಿಲ್ಲ. 1948ರಲ್ಲಿ ಗುಬ್ಬಿ ಕಂಪೆನಿಯು ಆಚರಿಸಿದ ವಜ್ರಮಹೋತ್ಸವದ ಬಳಿಕ ಅದರ ವೈಭವ ಇಳಿಮುಖವಾಯಿತು. ಇಂದಿಗೂ ಜೀವಂತವಾಗಿರುವ ವೃತ್ತಿ ನಾಟಕ ಸಂಸ್ಥೆಗಳಲ್ಲಿ ಒಂದಾದ ಗುಬ್ಬಿ ಕಂಪೆನಿ ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಒಂದು ಉಜ್ವಲ ಇತಿಹಾಸವನ್ನು ನಿರ್ಮಿಸಿದೆ.

ಪೌರಾಣಿಕ ನಾಟಕಗಳನ್ನು ಹೆಚ್ಚಾಗಿ ಪ್ರಯೋಗಿಸುತ್ತಿದ್ದ ಗುಬ್ಬಿ ಕಂಪೆನಿಯಲ್ಲಿ ಮೊದಲು ವೀರಪ್ಪ ಶಾಸ್ತ್ರಿಗಳು, ಬಳಿಕ ಬೆಳ್ಳಾವೆ ನರಹರಿ ಶಾಸ್ತ್ರಿಗಳು, ಬಿ. ಪುಟ್ಟಸ್ವಾಮಯ್ಯನವರು ನಾಟಕಕಾರರಾಗಿ ಕಂಪೆನಿಯ ಕೀರ್ತಿಯನ್ನು ಹೆಚ್ಚಿಸಿದರು. 'ಸಾಹುಕಾರ', 'ಅಡ್ಡದಾರಿ', 'ಕಾಲಚಕ್ರ', 'ಅಣ್ಣತಮ್ಮ' ಮುಂತಾದ ಕೆಲವು ಸಾಮಾಜಿಕ ನಾಟಕಗಳನ್ನು ಗುಬ್ಬಿ ಕಂಪೆನಿ ಪ್ರದರ್ಶಿಸಿತಾದರೂ ಪೌರಾಣಿಕ ನಾಟಕಗಳೇ ಅವರ ವೈಶಿಷ್ಟ್ಯ. 'ಸದಾರಮೆ', 'ಗುಲೇಬಕಾವಲಿ ಯಂತಹ ಮನರಂಜನಾ ಪ್ರಧಾನ ನಾಟಕಗಳೂ, 'ಶ್ರೀಕೃಷ್ಣಲೀಲಾ', 'ಕಂಸವಧೆ', 'ಮಾರ್ಕಂಡೇಯ', 'ಕುರುಕ್ಷೇತ್ರ', 'ಉಷಾ ಸ್ವಯಂವರ', 'ದಶಾವತಾರ'ದಂತಹ ಪೌರಾಣಿಕ ನಾಟಕಗಳು 'ಕರ್ನಾಟಕ ಸಾಮ್ರಾಜ್ಯ', 'ಸ್ವಾಮಿನಿಷ್ಠೆ', 'ಮಹಾತ್ಮ ಕಬೀರ್', 'ಅಕ್ಕಮಹಾದೇವಿ'ಯಂತಹ ಐತಿಹಾಸಿಕ ನಾಟಕಗಳೂ ಈ ಕಂಪೆನಿಯ ಕೆಲವು ಜನಪ್ರಿಯ ನಾಟಕಗಳು.

ಮೂರು ತಲೆಮಾರುಗಳ ಆಡಳಿತ ವರ್ಗ ಮತ್ತು ನಟನಟಿಯರನ್ನು ಕಂಡ ಗುಬ್ಬಿ ಕಂಪೆನಿಯ ಕಲಾವಿದರು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಶಾಶ್ವತವಾದ ಹೆಸರು ಪಡೆದಿದ್ದಾರೆ. ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದ ನಟ–ನಟಿಯರಾದ ಸಿ.ಜಿ. ಮಲ್ಲಪ್ಪ, ಗಂಗಾಧರ ರಾವ್, ಸುಂದರಮ್ಮ, ಬಿ. ಜಯಮ್ಮ, ಎಂ.ವಿ. ಸುಬ್ಬಯ್ಯ ನಾಯ್ಡು, ಹಿರಣ್ಣಯ್ಯ, ಹೊನ್ನಪ್ಪ ಭಾಗವತರ್, ಬಿ.ವಿ. ಕಾರಂತ, ಎಂ.ವಿ. ವಾಸುದೇವರಾವ್, ಡಾ. ರಾಜಕುಮಾರ್ ಮುಂತಾದವರು ಈ ಗುಬ್ಬಿ ಕಂಪೆನಿಯಲ್ಲೇ ಇದ್ದವರು.

ಹೀಗೆ ಹಳೇ ಮೈಸೂರು ಭಾಗದಲ್ಲಿ ಪ್ರಥಮ ನಾಟಕ ಕಂಪೆನಿ ಹುಟ್ಟಿದ 4 ವರ್ಷಗಳ ನಂತರ ಜನ್ಮ ತಳೆದು ಈಗ ಚಟುವಟಿಕೆಗಳಲ್ಲಿ ಸಿಹಿಕಹಿಗಳ ಅಪಾರ ಅನುಭವ ಪಡೆದು ಕನ್ನಡ ರಂಗಮಂದಿರದ ಜೀವಜ್ಯೋತಿಯನ್ನು ಬೆಳಗಿಸುತ್ತಾ ನಾಟಕರತ್ನ ಡಾ. ಜಿ.ಎಚ್. ವೀರಣ್ಣನವರ ಸಾರಥ್ಯದಲ್ಲಿ ಮುನ್ನಡೆದು ಶತಾಯುಷಿಯಾಗಿ ಬಾಳಿ ಕನ್ನಡ ರಂಗಭೂಮಿಗೆ ಅವಿಚ್ಛಿನ್ನ ಪರಂಪರೆಯನ್ನು ಒದಗಿಸಿದ ಯಶಸ್ಸು ಗುಬ್ಬಿ ಕಂಪೆನಿಗೆ ಸಲ್ಲುತ್ತದೆ.

ಬೆಳಗಾವಿ ಜಿಲ್ಲೆಯ ಹಲಸಗಿಯಲ್ಲಿ ಕ್ರಿ.ಶ. 1874ರಲ್ಲಿ ಸ್ಥಾಪಿತವಾದ 'ಹಲಸಗಿ ನಾಟಕ ಮಂಡಳಿ'ಯು ಕನ್ನಡದ ಮೊದಲ ವೃತ್ತಿ ಸಂಸ್ಥೆಗಳಲ್ಲಿ ಪ್ರಮುಖವಾದುದು. ಈ ಮಂಡಳಿಯು ಬೆಳಗಾವಿಯಿಂದ ಬಳ್ಳಾರಿಯವರೆಗೆ ಪ್ರವಾಸ ಮಾಡಿ ತಮ್ಮ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ನಾಟಕ ಪ್ರದರ್ಶನವಿಲ್ಲದಿದ್ದ ಕಾಲದಲ್ಲಿ ಭಾರತ, ಭಾಗವತ, ಪುರಾಣ ಪ್ರವಚನಗಳಿಂದ ಜನರನ್ನು ಆಕರ್ಷಿಸುತ್ತಿದ್ದರು. 'ಶ್ರೀನಿವಾಸ' ಎಂಬ ಅಂಕಿತನಾಮದಿಂದ ನಾಟಕ ರಚಿಸುತ್ತಿದ್ದ ವೆಂಕಣ್ಣಾಚಾರ್ಯ ಅಗಳಗಟ್ಟಿ ಈ ಕಂಪೆನಿಯ ನಾಟಕಕಾರರು. ಅವರೇ ಬರೆದ 'ಶ್ರೀಮತಿ ಪರಿಣಯ', 'ಮದಲಸಾ ಪರಿಣಯ', 'ದ್ರೌಪದಿ ವಸ್ತ್ರಾಪಹರಣ', 'ಭೌಮಾಸುರ ವಧೆ' ಎಂಬ ನಾಟಕಗಳನ್ನು ಕಂಪೆನಿಯವರು ಪ್ರದರ್ಶಿಸುತ್ತಿದ್ದರು. ಕ್ಷಿಪ್ರ ಕಾಲದಲ್ಲಿ ಪ್ರಸಿದ್ಧಿಗೆ ಬಂದು ಮರೆಯಾದ ಈ ಕಂಪೆನಿಯವರ ಜನಪ್ರಿಯ ನಾಟಕವೆಂದರೆ 'ವಿರಾಟ ಪರ್ವ'.

ಶಿರಹಟ್ಟಿ ವೆಂಕೋಬರಾಯರು 1904ರಲ್ಲಿ ಸ್ಥಾಪಿಸಿದ ಮಹಾಲಕ್ಷ್ಮಿ ನಾಟಕ ಮಂಡಳಿ, ಮೂರು ದಶಕಗಳ ಕಾಲ ಕನ್ನಡ ರಂಗಭೂಮಿಯಲ್ಲಿ ನಡೆದ ಅವಸ್ಥಾಂತರಗಳಿಗೆ ತಕ್ಕಂತೆ ಹೊಂದಿಕೊಂಡು ಉತ್ತಮ ರೀತಿಯ ಸಂಪ್ರದಾಯವನ್ನು ಉಳಿಸಿಕೊಂಡಿತು. ಹೊಂಬಳದ ವಾಸುದೇವರಾಯರು ಮತ್ತು ವಾಮನರಾವ್‌ರಂತಹವರ ಸಂಗೀತದ ಆಕರ್ಷಣೆ, ಲಕ್ಷ್ಮಣರಾವ್ ಪುರಿಯಂತಹ ಪ್ರತಿಭಾವಂತ ವಿದೂಷಕರ ಮನರಂಜನೆ, ಈ ಕಂಪೆನಿಯ ವೈಶಿಷ್ಟ್ಯಗಳು. ಪದ್ಮಾವತಿ ಪರಿಣಯ', 'ಶಾಕುಂತಲ', 'ಪ್ರಹ್ಲಾದ ಚರಿತೆ', 'ಶನಿಪ್ರಭಾವ', 'ಕಾಳಿದಾಸ', 'ರಾಮಾಯಣ' ಮುಂತಾದವು ಅವರು ಪ್ರದರ್ಶಿಸುತ್ತಿದ್ದ ಕೆಲವು ನಾಟಕಗಳು. ಚುರಮುರಿಯವರ 'ಶಾಕುಂತಲ', ತೋರಣಗಲ್ಲು ರಾಮರಾಯರ 'ರಾಮಾಂಜನೇಯ ಯುದ್ಧ', ಮರಾಠಿ ನಾಟಕಕಾರ ಮಮದಾಪುರ ಗುರುರಾಯರ ಅನುವಾದಿತ ನಾಟಕವಾದ 'ಇಂದಿರಾ' ಶಿರಹಟ್ಟಿ ಕಂಪೆನಿಯ ಉತ್ತಮ ನಾಟಕಗಳೆಂದು ಹೆಸರು ಪಡೆದಿದ್ದವು. 1936ರಲ್ಲಿ ಶಿರಹಟ್ಟಿ ನಾಟಕ ಮಂಡಳಿ ವಿಸರ್ಜನೆ ಹೊಂದಿತು. ಆದಾದ ಕೆಲವು ಕಾಲದಲ್ಲಿಯೇ ವೆಂಕೋಬರಾಯರೂ ನಿಧನ ಹೊಂದಿದರು.

ಶಿರಹಟ್ಟಿ ನಾಟಕ ಮಂಡಳಿಯ ಪ್ರಸಿದ್ಧ ನಟರಾಗಿದ್ದ ವಾಮರಾವ್ ಮಾಸ್ತರರು 1914ರಲ್ಲಿ ರಾಣಿಬೆನ್ನೂರು ಮಲ್ಲಪ್ಪ ಮುಂತಾದವರ ಸಹಕಾರದಿಂದ 'ವಿಶ್ವಗುಣಾದರ್ಶ ನಾಟಕ ಮಂಡಳಿ'ಯನ್ನು ರಾಣಿಬೆನ್ನೂರಿನಲ್ಲಿ ಸ್ಥಾಪಿಸಿದರು. 'ಕವಿರತ್ನ ಕಾಳಿದಾಸ', 'ಶ್ರೀನಿವಾಸ ಕಲ್ಯಾಣ', 'ವಿವೇಕ ವಿಜಯ' ಮುಂತಾದ ನಾಟಕಗಳನ್ನು ಇವರು ಪ್ರದರ್ಶಿಸುತ್ತಿದ್ದರು. ನಂತರ ವಾಮರಾವ್ ಮಾಸ್ತರರು 'ವಿದ್ಯಾಸಾಧನ', 'ಸಂದೇಹ ಸಾಮ್ರಾಜ್ಯ', 'ಭಕ್ತ ಪುಂಡರೀಕ', 'ಬಾಜಿರಾವ್ ಪೇಶವೆ', 'ಪಾರ್ವತಿ' ಸತ್ವಪರೀಕ್ಷೆ' ಮೊದಲಾದ ನಾಟಕಗಳನ್ನು ಮರಾಠಿಯಿಂದ ಅನುವಾದಿಸಿದರು.

'ವಿಶ್ವಗುಣಾದರ್ಶ ನಾಟಕ ಮಂಡಳಿ'ಯ ವೈಶಿಷ್ಟ್ಯವೆಂದರೆ ಪ್ರಸಿದ್ಧ ಸಂಗೀತ ಪಟುಗಳಿಂದ ಕೂಡಿದ ನಟವರ್ಗ, ಶ್ರೀಮತಿ ಗಂಗೂಬಾಯಿ ಗುಳೇದಗುಡ್ಡ, ಬಸವರಾಜ ಮನ್ಸೂರ, ಮಲ್ಲಿಕಾರ್ಜುನ ಮನ್ಸೂರರಂತಹ ಪ್ರತಿಭಾವಂತ ಸಂಗೀತಗಾರ ನಟರಲ್ಲದೆ ರಾಣಿಬೆನ್ನೂರ ಮಲ್ಲಪ್ಪನವರ ವಿದೂಷಕ ಪಾತ್ರ, ಕೇಶವಭಟ್ಟ ಮೋಡಿಯವರ ಖಳನಾಯಕ ಪಾತ್ರ ಈ ಕಂಪೆನಿಯ ಪ್ರಸಿದ್ಧಿಗೆ ಕಾರಣವಾದವು. 1934ರಲ್ಲಿ ಅನಾರೋಗ್ಯದ ಕಾರಣ ಕಂಪೆನಿಯನ್ನು ಮುಕ್ತಾಯಗೊಳಿಸಿದ ವಾಮನರಾಯರು 1935ರಲ್ಲಿ ದಿವಂಗತರಾದರು.

ಕ್ರಿ.ಶ. 1911 ರಲ್ಲಿ ಲಿಂಗನಗೌಡ ಪಾಟೀಲ್ ಎಂಬುವರಿಂದ 'ಶ್ರೀ ಹಾಲಸಿದ್ಧೇಶ್ವರ ಪ್ರಸಾದಿತ ಸಂಗೀತ ನಾಟಕ ಸಭಾ', ನಾಟಕ ಮಂಡಳಿಯು ಹುಲಗೇರಿಯಲ್ಲಿ ಆರಂಭವಾಯಿತು. 'ಹುಲಗೇರಿಯವರು ಆಡುತ್ತಿದ್ದ ನಾಟಕಗಳು ಪಾತ್ರಸೃಷ್ಟಿಯಲ್ಲಾಗಲೀ, ಸನ್ನಿವೇಶಗಳ ಜೋಡಣೆಯಲ್ಲಾಗಲೀ, ರಸ ದೃಷ್ಟಿಯಿಂದಾಗಲೀ ಉನ್ನತ' ಮಟ್ಟಕ್ಕೇರದಿರಬಹುದು. ಜನರು ಆ ನಾಟಕಗಳಿಗೆ ಮಾರು ಹೋದುದು, ದೊಡ್ಡ ಜೆಟ್ಟಪ್ಪನವರ ಅಭಿನಯವನ್ನು, ಹೇಡಿಗಳನ್ನು ವೀರರನ್ನಾಗಿಸುವ ವೀರವಾಣಿಯನ್ನು ಕೇಳುವುದಕ್ಕಾಗಿ 'ಸ್ತ್ರೀ' ನಾಟಕಗಳಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡಿದ್ದ ದೇಶಭಕ್ತಿ, ಖಾದಿಪ್ರೇಮ ಮುಂತಾದ ಸದ್ಭಾವನೆಗಳನ್ನು

ತುಂಬಿಕೊಳ್ಳುವುದಕ್ಕಾಗಿ ಅದೇ ಮಂಡಳಿಯವರ 'ಪಠಾಣ ಪಾಶ' 'ಬ್ಲ್ಯಾಕ್ ಮಾರ್ಕೆಟ್' ಈ ನಾಟಕಗಳೂ ಸಮಾಜದಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸುತ್ತವೆ.

ಹುಲಗೇರಿ ಕಂಪೆನಿಯವರ ವೈಶಿಷ್ಟ್ಯವೆಂದರೆ ಅವರ ಸಾಮಾಜಿಕ ನಾಟಕಗಳು. ಅವರು ಪ್ರದರ್ಶಿಸುತ್ತಿದ್ದ ಐತಿಹಾಸಿಕ ನಾಟಕಗಳೂ ಸಮಕಾಲೀನ ರಾಷ್ಟ್ರೀಯ ಭಾವನೆಗೆ ಪ್ರಚೋದಕವಾಗಿರುತ್ತಿದ್ದವು. 'ಬಿ.ಎ.', 'ಸ್ತ್ರೀ', 'ಪಠಾಣ ಪಾಶ', 'ಕಾಲೇಜ್ ಗರ್ಲ್ಸ್', 'ಬ್ಲಾಕ್ ಮಾರ್ಕೆಟ್', 'ಚಲ್ತಿ ಧುನಿಯಾ', 'ಟಿಪ್ಪು ಸುಲ್ತಾನ್', 'ಚಿತ್ರಾಂಗದಾ', 'ವಿಷಮ ವಿವಾಹ', 'ಹೇಮರೆಡ್ಡಿ ಮಲ್ಲಮ್ಮ', 'ಸತಿ ವೃಂದ', 'ರಾಕ್ಷಸಿ ಮಹತ್ವಾಕಾಂಕ್ಷೆ' ಅವರು ಪ್ರದರ್ಶಿಸುತ್ತಿದ್ದ ಕೆಲವು ಪ್ರಸಿದ್ಧ ನಾಟಕಗಳು.

ಸುಪ್ರಸಿದ್ಧ ನಟ ಮತ್ತು ನಾಟಕಕಾರ ಗರೂಡ ಸದಾಶಿವರಾಯರು 1916ರಲ್ಲಿ 'ದತ್ತಾತ್ರೇಯ ನಾಟಕ ಮಂಡಳಿ'ಯನ್ನು ಗದಗದಲ್ಲಿ ಸ್ಥಾಪಿಸಿದರು. ಸುಮಾರು ಮೂರು ದಶಕಗಳ ಕಾಲ ಈ ಮಂಡಳಿಯ ಮೂಲಕ ಕನ್ನಡ ನಾಡಿನಲ್ಲಿ ಸಾಮಾಜಿಕ ಕಳಕಳಿಯಿಂದ ಕಲಾ ಸೇವೆ ಮಾಡಿದ ಗರೂಡ ಸದಾಶಿವರಾಯರು ಐವತ್ತಕ್ಕೂ ಮೇಲ್ಪಟ್ಟು ನಾಟಕಗಳನ್ನು ರಚಿಸಿದ್ದಾರೆ. 1925ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕರ್ನಾಟಕ ನಾಟಕಾಲಂಕಾರ' ಎಂಬ ಮನ್ನಣೆಗೆ ಪಾತ್ರರಾಗಿದ್ದಾರೆ.

ಉತ್ತರ ಕರ್ನಾಟಕ ರಂಗಭೂಮಿಯ ಮೊದಲ ನಾಟಕ ಮಂಡಳಿಗಳಲ್ಲಿ ಶಿರಹಟ್ಟಿ ವೆಂಕೋಬರಾಯರ ಮಂಡಳಿಯ ವೈಭವಪೂರ್ಣ ಪ್ರದರ್ಶನ ಪದ್ಧತಿಗೆ, ವಾಮನರಾಯರ ಮಂಡಳಿಯು ರಂಗ ಸಂಗೀತದ ಮೋಡಿಗೆ, ಹುಲಗೇರಿ ಜೆಟ್ಟೆಪ್ಪನವರ ಮಂಡಳಿಯ ಹಾಸ್ಯದ ಹಿರಿಮೆಗೆ ಹೆಸರಾಗಿದ್ದವು. ಆದರೆ, ಗರೂಡರ ದೃಷ್ಟಿ ಬೇರೆ. ಅವರ ಮತದಂತೆ ನಾಟಕದಲ್ಲಿ ಪ್ರಮುಖ ಸ್ಥಾನ ಪಡೆಯಬೇಕಾದುದು ಅಭಿನಯ, ಅದಕ್ಕೆ ಬೇಕಾದಷ್ಟು ಅನುವು ಕೊಡುವಂತಹ ಶಕ್ತಿಯುತ ಸಾಹಿತ್ಯದ ನೆಲೆಗಟ್ಟಿನ ಮೇಲೆ ರಚಿತವಾದ ನಾಟಕ. ಮೂರನೆಯದಾಗಿ, ಪರ್ಯಾಯವಾಗಿಯಾದರೂ ರಾಷ್ಟ್ರಪ್ರೇಮ, ರಾಷ್ಟ್ರಸೇವೆಯ ಭಾವನೆಯನ್ನು ಬಿತ್ತುವ ಉದ್ದೇಶ. ಉಳಿದ ರಂಗಸಂಗೀತ, ಹಾಸ್ಯ ದೃಶ್ಯಾವಳಿಗೆಲ್ಲ ಅವರಿಗೆ ಗೌಣ' ಎಂದು ಎಚ್.ಕೆ. ರಂಗನಾಥ್ ಅವರು 'ಬಣ್ಣ ಬೆಳಕು' ಕೃತಿಯಲ್ಲಿ ಹೇಳಿದ್ದಾರೆ.

ಈ ಮಂಡಳಿಯವರು ಪ್ರದರ್ಶಿಸುತ್ತಿದ್ದ 'ಎಚ್ಚಮನಾಯಕ', 'ಶರಣ ಬಸವ', 'ಕನ್ನಡ ಕಡುಗಲಿ'ಯಂತಹ ನಾಟಕಗಳಲ್ಲಿ ಮತ್ತು 'ಕಂಸವಧೆ', 'ಪಾದುಕಾ ಪಟ್ಟಾಭಿಷೇಕ', 'ಸುಧಾಮ ದೇವ', 'ಕೃಷ್ಣ ಲೀಲೆ'ಯಂತಹ ಪೌರಾಣಿಕ ನಾಟಕಗಳಲ್ಲಿ ತಮ್ಮ ಉದ್ದೇಶಕ್ಕೆ ಬದ್ಧರಾಗಿರುವುದನ್ನು ಕಾಣಬಹುದು. 'ಕಬೀರದಾಸ', 'ಪಶ್ಚಾತ್ತಾಪ', 'ಚವತಿಯ ಚಂದ್ರ' ಮುಂತಾದುವು ಗರೂಡರ ಕಂಪೆನಿಯ ಜನಪ್ರಿಯ ನಾಟಕಗಳು. ಗರೂಡರ ನಾಟಕ ಮಂಡಳಿಯ ಕಲಾವಿದರಲ್ಲಿದ್ದ ಅನ್ಯೋನ್ಯತೆ ಮತ್ತು ನೈತಿಕ ಸತ್ವಗಳು ಉಳಿದವರಿಗೆ ಮಾದರಿಯಾಗಿದ್ದವು.

19ನೇ ಶತಮಾನದ ಸುಪ್ರಸಿದ್ಧ ಕನ್ನಡ ನಾಟಕಕಾರ ಶ್ರೀಕಂಠೇಶಗೌಡರ ನೇತೃತ್ವದಲ್ಲಿ 1895ರಲ್ಲಿ ಪೂರ್ಣ ರಾಘವೇಂದ್ರ ರಾಯರು 'ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಭಾ' ಕಂಪೆನಿಯನ್ನು ಆರಂಭಿಸಿದರು. 'ಸೀತಾ ಸ್ವಯಂವರ', 'ಘೋಷಯಾತ್ರೆ' 'ಪ್ರಮೀಳಾರ್ಜುನೀಯ', 'ಹಿಂಸಾಪರ' ಮುಂತಾದುವು ಈ ಕಂಪೆನಿಯ ಪ್ರಸಿದ್ಧ ನಾಟಕಗಳು.

ವೃತ್ತಿ ರಂಗಭೂಮಿಯ ಬೆಳವಣಿಗೆಯಲ್ಲಿ ಗುರುತಿಸಬಹುದಾದ ಮತ್ತೊಂದು ನಾಟಕ ಮಂಡಳಿ ಎಂದರೆ ಕ್ರಿ.ಶ. 1930ರಲ್ಲಿ ಸ್ಥಾಪಿತವಾದ ಮಹಮ್ಮದ್ ಪೀರ್‌ರವರ 'ಚಂದ್ರಕಲಾ ನಾಟಕ ಮಂಡಳಿ' ನಾಟಕ ಕಲೆ, ರಂಗಸಜ್ಜಿಕೆ, ವೇಷಭೂಷಣ, ಅಭಿನಯ ಇತ್ಯಾದಿಗಳಲ್ಲಿ ನುರಿತರಾಗಿದ್ದ ಮಹಮ್ಮದ ಪೀರ್‌ರವರು ಕಲಾಭಿರುಚಿಯುಳ್ಳ ನಟವರ್ಗವನ್ನು ಕಲೆ ಹಾಕಿ, 'ಷಹಜಹಾನ' 'ಸಂಸಾರ ನೌಕೆ', 'ಗೌತಮ ಬುದ್ಧ' ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು.

1932ರಲ್ಲಿ ಸ್ಥಾಪಿತವಾದ, ಎಂ.ವಿ. ಸುಬ್ಬಯ್ಯ ನಾಯ್ಡುರವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ'ಯು 'ಭೂಕೈಲಾಸ' 'ರಾಜಭಕ್ತಿ'ಗಳಂತಹ ಉತ್ತಮ ನಾಟಕಗಳ ಪ್ರದರ್ಶನ ನೀಡಿತು.

ಕ್ರಿ.ಶ. 1940ರಲ್ಲಿ ಸ್ಥಾಪಿತವಾಗಿ ಈಗಲೂ ಮುಂದುವರಿಸಿಕೊಂಡು ಬರುತ್ತಿರುವ 'ಹಿರಣ್ಣಯ್ಯ ಮಿತ್ರ ಮಂಡಳಿ'ಯು ಸಾಮಾಜಿಕ ಸಮಸ್ಯೆಯನ್ನು ವಸ್ತುವಾಗುಳ್ಳ ನಾಟಕಗಳನ್ನು ಅಳವಡಿಸಿಕೊಂಡು ಸಂಭಾಷಣೆಯಲ್ಲೇ ನಗಿಸಿ ವೈಚಾರಿಕತೆಯನ್ನು ಬಿಂಬಿಸಿ ಪ್ರೇಕ್ಷಕರನ್ನು ಚಿಂತನಾಶೀಲರನ್ನಾಗಿ ಮಾಡಿದ ಯಶಸ್ಸಿಗೆ ಪಾತ್ರವಾಗಿದೆ. 'ದೇವದಾಸ', 'ಮಕ್ಮಲ್‌ಟೋಫಿ', 'ಲಂಚಾವತಾರ', 'ಅನಾಚಾರ',

‘ನಡುಬೀದಿ ನಾರಾಯಣ’ ಮುಂತಾದ ಸಾಮಾಜಿಕ ನಾಟಕಗಳನ್ನು ಈ ಮಂಡಳಿ ಪ್ರದರ್ಶಿಸಿದೆ.

ಮಳವಳ್ಳಿ ಸುಬ್ಬಣ್ಣನವರು 1900ರಲ್ಲಿ ‘ಯಳಂದೂರು ನಾಟಕ ಮಂಡಳಿ’ಯನ್ನು ಸ್ಥಾಪಿಸಿದ್ದರು. ‘ಪ್ರಭಾವತಿ ದರ್ಬಾರ್’, ‘ಸಾರಂಗಧರ’, ‘ದ್ರೌಪದೀ ಸ್ವಯಂವರ’, ‘ಹರಿಶ್ಚಂದ್ರ’, ‘ಪಾಂಡವ ವಿಜಯ’, ‘ಬಕಾವಲಿ’ ಮುಂತಾದ ನಾಟಕಗಳನ್ನು ಆಡುತ್ತಿದ್ದ ಈ ಕಂಪೆನಿಯ ಜನಪ್ರಿಯ ನಾಟಕ ‘ಸದಾರಮೆ’.

ಕನ್ನಡ  ವೃತ್ತಿ ರಂಗಭೂಮಿಯಲ್ಲಿ ಸ್ತ್ರೀ ನಾಟಕ ಮಂಡಳಿಗಳು ಈ ಶತಮಾನದ ಆದಿಭಾಗದಿಂದಲೂ ಹುಟ್ಟಿಕೊಂಡಿವೆ. ಮಹಿಳೆಯರೇ ನಾಟಕದಲ್ಲಿ ಎಲ್ಲ ಪಾತ್ರಗಳನ್ನು ಅಭಿನಯಿಸುತ್ತಿದ್ದ ಸಂಪ್ರದಾಯವಿದೆ. ಲಕ್ಷ್ಮೇಶ್ವರದ ಬಜ್ಜಾಸಾನಿಯವರ ‘ಸ್ತ್ರೀ ನಾಟಕ ಮಂಡಳಿ’ ಪಾಪಾಸಾನಿಯವರ ಸ್ತ್ರೀ ನಾಟಕ ಕಂಪೆನಿಗಳು, ಆರ್. ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿ ಇತ್ಯಾದಿ ಕೆಲವು ಈ ಕಾಲಘಟ್ಟದ ಸ್ತ್ರೀ ನಾಟಕ ಮಂಡಳಿಗಳಾಗಿವೆ.

ಹೀಗೆ ಆರೇಳು ದಶಕಗಳ ತನ್ನ ಸಾಹಸೀ ಬದುಕಿನಲ್ಲಿ ಕಂಪೆನಿ ನಾಟಕಗಳು ಸಾಕಷ್ಟು ಏಳುಬೀಳುಗಳನ್ನು ಕಂಡಿದೆ. ಹತ್ತಾರು ಪ್ರಭಾವಗಳಿಗೆ ಒಳಗಾಗಿ, ಅವುಗಳಲ್ಲಿ ಒಂದಿಷ್ಟನ್ನಾದರೂ ಅರಗಿಸಿಕೊಂಡು ತನ್ನದನ್ನಾಗಿಸಿಕೊಂಡಿದೆ.

ಕನ್ನಡದ ನಾಟಕ ಕಂಪೆನಿಗಳು ತಮ್ಮ ಶೈಶವಾವಸ್ಥೆಯಲ್ಲಿ ಒಂದು ತುದಿಗೆ, ಬ್ರಿಟಿಷರು ನಮ್ಮ ಮೇಲೆ ಹೇರಿಹೋದ ವಿಕ್ಟೋರಿಯನ್ ಯುಗದ ರಂಗಭೂಮಿಯ ಪ್ರಭಾವಕ್ಕೆ ಒಳಗಾಗಿದ್ದರೆ, ಮತ್ತೊಂದು ತುದಿಗೆ ದೇಸಿ ಗಾಯನ ನರ್ತನ ಹಾಗೂ ಜಾನಪದ ಯಕ್ಷಗಾನಗಳ ತಂತ್ರಗಳನ್ನು ಪಡೆದುಕೊಂಡಿತು.

ಪಾರ್ಸಿ ಕಂಪೆನಿಗಳ ಮೇಲೆ ವಿಕ್ಟೋರಿಯನ್ ರಂಗಭೂಮಿಯ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ‘ರುಸ್ತುಂ ಸೊಹ್ರಾಬ್’ ನಾಟಕ ಒಳ್ಳೆಯ ಉದಾಹರಣೆ.

ಕಂಪೆನಿ ನಾಟಕಗಳು ಈ ರೀತಿಯ ಭಿನ್ನ ಪ್ರಭಾವಗಳ ಕಲಸು ಮೇಲೋಗರ ಮಾತ್ರವೇ ಆಗಿ ಉಳಿಯದೆ ನಿಧಾನವಾಗಿ ಈ ಎಲ್ಲ ಪ್ರಭಾವಗಳನ್ನು ಜೀರ್ಣಿಸಿಕೊಂಡು ಹಳ್ಳಿಗಾಡಿನಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ನಾಟಕಗಳನ್ನಾಡತೊಡಗಿತು.

ಕಂಪೆನಿ ನಾಟಕಗಳಲ್ಲಿ ಹಾಡು ನರ್ತನಗಳ ಮೇಲೆ ವಿಪರೀತ ಒತ್ತು ಇದ್ದರೂ ನಿಧಾನವಾಗಿ ಸಂಭಾಷಣೆಯನ್ನು ಅಳವಡಿಸಿಕೊಂಡಿತು. ಪೌರಾಣಿಕಗಳಲ್ಲೇ ಹೆಚ್ಚಿನ ಕಾಲ ವ್ಯಯಿಸಿದರೂ ನಿಧಾನವಾಗಿ ಸಾಮಾಜಿಕಗಳನ್ನೂ ರೂಢಿಸಿಕೊಂಡಿತು. ಹಾಗೆಯೇ ಪಾತ್ರಪೋಷಣೆಯಲ್ಲಿ ವಾಸ್ತವಿಕ ವಿವರಗಳನ್ನು ಗ್ರಹಿಸುವ ಪ್ರಾರಂಭಿಕ ಪ್ರಯತ್ನಗಳನ್ನು ನಾವು ಕಾಣಬಹುದು. ಉತ್ತರ ಕರ್ನಾಟಕದಲ್ಲಿ ನಡೆದ ನಿಜ ಘಟನೆಯೊಂದನ್ನಾಧರಿಸಿ ಬರೆದ ‘ಕಡಪಟ್ಟ ಸ್ಟೇಷನ್ ಮಾಸ್ತರ’,  ಹಳೇ ಮೈಸೂರಿನ ‘ಸದಾರಮೆ’ ಇತ್ಯಾದಿ ನಾಟಕಗಳು ಕಂಪೆನಿ ನಾಟಕ ಸ್ವತಂತ್ರವಾಗಿ ಬೆಳೆಯುತ್ತಿರುವ ಮುನ್ಸೂಚನೆಯಂತೆ ಹೊರಬಂದವು.

**ಕನ್ನಡ ರಂಗಭೂಮಿಗೆ ಕಂಪೆನಿ ನಾಟಕಗಳ ಕೊಡುಗೆ ಗಮನಾರ್ಹವಾದುದು.**

1. ಕನ್ನಡದಲ್ಲಿ ಮೊತ್ತಮೊದಲ ಬಾರಿಗೆ ಪ್ರೊಸೀನಿಯಂ ಮಾದರಿಯ ರಂಗವಿನ್ಯಾಸ ಅಳವಡಿಸಿಕೊಂಡು, ನಾಟಕವನ್ನು ಸೂರಿನಡಿಯಲ್ಲಿ, ನಾಲ್ಕು ಗೋಡೆಗಳ ಮಧ್ಯೆ ತಂದದ್ದು ಕಂಪೆನಿ ನಾಟಕಗಳು.
2. ಸಂಭಾಷಣೆ ರೂಢಿಸಿಕೊಳ್ಳುವುದು, ಸಾಮಾಜಿಕ ವಿವರಗಳನ್ನು ಗ್ರಹಿಸುವುದು, ಆಡುಮಾತಿನ ಬಳಕೆ ಇತ್ಯಾದಿ ವಿವರಗಳಲ್ಲಿ ರಂಗ ಅಭಿನಯ ರೂಪುಗೊಂಡಿತು.
3. ನಿಂತುಕೊಂಡು, ಅಭಿನಯಿಸುತ್ತಲೇ ಹಾಡುವ ಹಾಗೂ ಸಂಭಾಷಣೆಯ ಜೊತೆಗೇ ಸಂಗೀತವನ್ನು ಹಾಸುಹೊಕ್ಕಾಗಿ ಅಳವಡಿಸಿಕೊಂಡ ಹೊಸ ಪರಿ ಹಾಗೂ ರಂಗಸಂಗೀತ ಪ್ರಾರಂಭವಾಯಿತು.
4. ಹಳ್ಳಿ ಹಳ್ಳಿಗೂ ನಾಟಕವನ್ನು ಕೊಂಡೊಯ್ದು ಮುಟ್ಟಿಸಿ ಮಾಧ್ಯಮಗಳನ್ನು ಜನಪ್ರಿಯಗೊಳಿಸಿತು.

ಹೀಗೆ ತಾಂತ್ರಿಕ ಮಟ್ಟದಲ್ಲಿ ಬೆಳವಣಿಗೆಗಳಾದರೂ ತಾತ್ವಿಕವಾಗಿ ಕಂಪೆನಿ ನಾಟಕಗಳು ತಮ್ಮ ಪುರಾತನರಿಗಿಂತ ಮುಂದೆ ಬರಲೇ ಇಲ್ಲ. ಅವೇ ಸವಕಲಾಗಿರುವ ಮೌಲ್ಯಗಳ ಪ್ರದರ್ಶನ, ಆದರ್ಶೀಕೃತ ಪಾತ್ರಗಳು, ಅದೇ ಅವಾಸ್ತವಿಕ ಪೌರಾಣಿಕ ಚೌಕಟ್ಟು

ಉಳಿದುಬಿಟ್ಟಿತು. ಹಾಗಾಗಿ ಸ್ವಲ್ಪ ಮಟ್ಟಿಗೆ ತಾಂತ್ರಿಕ ಭಾಷೆಯನ್ನು ರೂಪಿಸುವಲ್ಲಿ ಯಶಸ್ವಿಯಾದ ಕಂಪೆನಿ ನಾಟಕ ಒಟ್ಟು ಅಭಿವ್ಯಕ್ತಿಯಲ್ಲಿ ಸೋತು ಹೋಯಿತು.

ಕನ್ನಡದ ವೃತ್ತಿರಂಗಭೂಮಿಗೆ ಮತ್ತೊಂದು ಸಮಸ್ಯೆಯೂ ಇತ್ತು. ಕನ್ನಡ ಕಂಪೆನಿಗಳಿಗೆ ನಗರ ಸಂಸ್ಕೃತಿಯ ಸೋಂಕೇ ಇರಲಿಲ್ಲ. ಈ ಸಮಸ್ಯೆ ಬಂಗಾಲಿ ಹಾಗೂ ಮರಾಠಿ ಕಂಪೆನಿಗಳಿಗಿರಲಿಲ್ಲ. ಇಲ್ಲಿ ಕಲ್ಕತ್ತ, ಮುಂಬಯಿಗಳಂತಹ ಬೃಹತ್ ನಗರಗಳಿರಲಿಲ್ಲ. ಆ ಮೂಲಕ ಬರುವ ನಗರ ಸಂಸ್ಕೃತಿಯ ನೇರ ಸಂಪರ್ಕ ಇರಲಿಲ್ಲ. ಬೃಹತ್ ನಗರಗಳ ಒಡನಾಟದಿಂದಾಗಿ ಬಂಗಾಲಿ ಹಾಗೂ ಮರಾಠಿ ಸಾಹಿತ್ಯ ಸಂಸ್ಕೃತಿಗಳಿಗೆ  ಮೊದಲಿನಿಂದಲೂ ಕಾಸ್ಮೊಪಾಲಿಟನ್ ಸಂಸ್ಕೃತಿಯ ಜೊತೆ ಒಡನಾಟ ಸಾಧ್ಯವಾಗಿತ್ತು. ನಾವು ಪಾರ್ಸಿ ಕಂಪೆನಿಗಳ ಮಧ್ಯವರ್ತಿಯ ಮೂಲಕ ಕಲಿತ ಪಾಠವನ್ನು ಅವರು ನೇರವಾಗಿ ಬ್ರಿಟಿಷರಿಂದಲೇ ಕಲಿತರು. ನಮ್ಮಲ್ಲಿ ಹಳ್ಳಿಗಾಡುಗಳೇ ಹೆಚ್ಚಾಗಿ ಕಂಪೆನಿಯನ್ನು ಪೋಷಿಸಿದ್ದು, ಹಾಗಾಗಿ ಹಳ್ಳಿಗಾಡಿನ ಪ್ರೇಕ್ಷಕರನ್ನೇ ಉದ್ದೇಶಿಸಿ ನಾಟಕಗಳು ಬರುತ್ತಿದ್ದವು. ಇವು ಪ್ರೇಕ್ಷಕರನ್ನು ದಿಗ್ಭ್ರಮೆಗೊಳಿಸಬಲ್ಲ ತಾಂತ್ರಿಕ ಅನ್ವೇಷಣೆಯ ಮಟ್ಟದಲ್ಲೇ ಉಳಿದು ತೃಪ್ತಿಪಟ್ಟುಕೊಂಡವು. ಆದರೆ ಮುಂದೆ ಸಮಕಾಲೀನ ನಾಟಕಗಳ ಬರವಣಿಗೆ ಆರಂಭವಾದಾಗ ಅದು ನಗರ ಸಂಸ್ಕೃತಿಯ ಅಂಗವಾಗಿ ಬಂತು, ಹಾಗೂ ಕಂಪೆನಿ ನಾಟಕವನ್ನು ಪೂರ್ತಿಯಾಗಿ ಧಿಕ್ಕರಿಸಿ ಬಂತು. ಕೈಲಾಸಂ ಅವರ 'ನಂ ಕಂಪ್ನಿ', ಶ್ರೀರಂಗರ 'ಸಂಪುಷ್ಟ ರಾಮಾಯಣ', ಶಿವರಾಮ ಕಾರಂತರ 'ನಾಟಕದಲ್ಲಿ ನಾಟಕ' ಇತ್ಯಾದಿ ಇಂತಹ ಪ್ರಕ್ರಿಯೆಗೆ ಉದಾಹರಣೆಗಳು.

ಕಂಪೆನಿ ನಾಟಕಗಳು ಒದಗಿಸಿದ ವಿನ್ಯಾಸ ತೀರ ಸರಳವಾದದ್ದು ಹಾಗೂ ಇತ್ತೀಚಿನ ಪಾಶ್ಚಿಮಾತ್ಯ ಮಾದರಿಗಳಿಗೆ ಹೋಲಿಸಿದರೆ ಕಡಿಮೆ ಖರ್ಚಿನದ್ದು ಎನ್ನಿಸುವಂತಹದ್ದು, ಆದರೆ ಅದು ತನ್ನದೇ ಆದ ವ್ಯವಸ್ಥೆಯನ್ನು ರೂಢಿಸಿಕೊಂಡಿತ್ತು. ಅದು ಅಲ್ಲಿಯೇ ಲಭ್ಯವಿರುವ ಸ್ಥಳೀಯ ವಸ್ತುಗಳನ್ನು ಬಳಸಿಕೊಂಡು ಕಟ್ಟಿದ್ದಾದ್ದರಿಂದ (ಮಣ್ಣು, ಸರ್ವೆ ಕಂಬಗಳು, ಜಿಂಕ್ ಶೀಟುಗಳು ಇತ್ಯಾದಿ) ಎಲ್ಲ ಊರುಗಳಲ್ಲೂ ಸಾಧ್ಯವಾಗುವಂತಹದು. ಆ ಕಾರಣಕ್ಕಾಗಿಯೇ ಅವು ಇಂದಿಗೂ ಜನಪ್ರಿಯವಾಗಿ ಉಳಿದಿವೆ.

ಕಂಪನಿ ನಾಟಕಗಳಲ್ಲಿನ ರಂಗಸಜ್ಜಿಕೆಯ ಬದಲಾವಣೆ ಸರಳವಾದ ತಂತ್ರವೊಂದನ್ನು ರೂಢಿಸಿಕೊಂಡಿದೆ. ನಾಟಕವನ್ನು ಬರೆಯುವಾಗಲೇ ರಂಗಸಜ್ಜಿಕೆಯ ಬದಲಾವಣೆಗಿರುವ ಈ ಮಿತಿಯನ್ನು ಗಮನಿಸಿ ಬರೆಯಲಾಗುತ್ತದೆ. ಇಡೀ ರಂಗಸ್ಥಳವನ್ನು ಬಳಸಿಕೊಳ್ಳುವ ದೃಶ್ಯಗಳನ್ನು ಡೀಪ್‌ಸೀನ್ ಎಂದೂ, ಅದನ್ನು ಮುಚ್ಚಿ ಮುಂದಲ ಅರ್ಧವನ್ನು ಮಾತ್ರ ಬಳಸಿಕೊಂಡಾಗ ಫ್ರಂಟ್‌ಸೀನ್ ಎಂದೂ ಅಲ್ಲಿ ಕರೆಯಲಾಗುತ್ತದೆ. ರಂಗಸಜ್ಜಿಕೆ ಇರುವಂತಹ ದೃಶ್ಯಗಳು, ಹೆಚ್ಚು ಪಾತ್ರಗಳಿರುವ ಪ್ರಮುಖ ದೃಶ್ಯಗಳು ಡೀಪ್‌ಸೀನ್‌ನಲ್ಲಿ ನಡೆಯುತ್ತದೆ. ದೃಶ್ಯದ ತುದಿಯಲ್ಲಿ ಅಂಕದ ಪರದೆ ಜಾರಿಸುವ ಬದಲು, ಫ್ರಂಟ್ ಸೀನಿನ ಪರದೆಯನ್ನು ಮಧ್ಯಭಾಗದಲ್ಲಿ ರಂಗವನ್ನು ಮುಚ್ಚುವಂತೆ ಜಾರಿಸಲಾಗುತ್ತದೆ. ಹಿಂದೆ ಹೊಸ ರಂಗಸಜ್ಜಿಕೆ ನಡೆದಿರುತ್ತದೆ. ಮುಂದೆ ಫ್ರಂಟ್‌ಸೀನಿನಲ್ಲಿ ಮತ್ತೊಂದು ದೃಶ್ಯ ನಡೆದಿರುತ್ತದೆ. ಫ್ರಂಟ್‌ಸೀನ್ ಸಾಮಾನ್ಯವಾಗಿ ಕಿಷ್ಕಿಂಧದ ಜಾಗ, ಹಾಗಾಗಿ ನಾಟಕಗಳಲ್ಲಿ  ಈ ದೃಶ್ಯಗಳನ್ನು ಹಾಸ್ಯ ಸನ್ನಿವೇಶಗಳಿಗೆ, ಪೋಷಕ ಪಾತ್ರಗಳಿಗೆ ಬಳಸಿಕೊಳ್ಳಲಾಗುತ್ತದೆ.

ಈ ರೀತಿಯಾಗಿ ಕಂಪೆನಿ ನಾಟಕಗಳು ದೃಶ್ಯ ಬದಲಾವಣೆಯ ಈ ಸರಳ ತಂತ್ರದ ಮೂಲಕ ಪೂರ್ವ ಪಶ್ಚಿಮದ ಸಮನ್ವಯವನ್ನು ಸಾಧಿಸಿ ಹೊಸ ತಂತ್ರ ರೂಪಿಸಿದವು. ಈ ತಂತ್ರ, ವಿಕ್ಟೋರಿಯನ್ ರಂಗಕಲ್ಪನೆಯನ್ನೂ ಜಾನಪದ 'ಕಥನಕ್ಕೆ ಅನುವಾಗುವ ಗುಣವನ್ನು ಮೇಳವಿಸಿ ಬಳಸಿಕೊಳ್ಳುತ್ತದೆ. ಹೀಗೆ ರಂಗಸಜ್ಜಿಕೆಯ ಕಲ್ಪನೆಯೇ ಇಲ್ಲದ ರಂಗಪರಂಪರೆಯೊಂದಕ್ಕೆ ರಂಗಸಜ್ಜಿಕೆಯ ಪರಿಕಲ್ಪನೆ ಒದಗಿಸಿಕೊಟ್ಟದ್ದು ಕಂಪೆನಿ ನಾಟಕವೇ.

ಈ ರೀತಿ ಎಡವುತ್ತ ಮುಗ್ಗರಿಸುತ್ತ ರೂಪುಗೊಂಡ ಕನ್ನಡ ನಾಟಕದ ತಾಂತ್ರಿಕ ವಿನ್ಯಾಸ ನಿರ್ದಿಷ್ಟ ರೂಪ ತಾಳಿ ಸಮರ್ಥ ನಾಟಕ ರಚನೆಯೊಂದಕ್ಕೆ ಎಡೆಕೊಟ್ಟಿದ್ದು, ಮತ್ತೆ ಅರ್ಧ ಶತಮಾನದ ಕಂಪೆನಿ ನಾಟಕಗಳು ರೂಢಿಸಿಕೊಂಡಿದ್ದ ಎರಡು ಪ್ರದೇಶಗಳು, ಎರಡು ಭೂಮಿಕೆಗಳ ಸರಳ ತಂತ್ರದಿಂದಲೇ ಆರಂಭಿಸಿ ತುಘಲಕ್ ನಾಟಕದ ವಿನ್ಯಾಸವನ್ನು ರೂಪಿಸಿದ್ದಾರೆ ಕಾರ್ನಾಡರು.

ಆಧುನಿಕ ನಾಟಕ ಸಾಹಿತ್ಯದ ಉಗಮಕ್ಕೆ ಅಥವಾ ಬೆಳವಣಿಗೆಗೆ ಕನ್ನಡ ವೃತ್ತಿರಂಗಭೂಮಿ ಯಾವ ರೀತಿಯ ಪ್ರೋತ್ಸಾಹ ನೀಡಲಿಲ್ಲ. ಆಧುನಿಕ ನಾಟಕಗಳು ವೃತ್ತಿ ರಂಗಭೂಮಿಗೆ ಪ್ರತಿಕ್ರಿಯೆಯಾಗಿ ಹುಟ್ಟಿ, ಅಭಿವೃದ್ಧಿ ಹೊಂದಿ, ಹವ್ಯಾಸಿ ರಂಗಭೂಮಿಯ ಮೂಲಕವೇ ಪ್ರೇಕ್ಷಕರನ್ನು ಮುಟ್ಟಬೇಕಾಯಿತು. ಆದರೆ ವೃತ್ತಿ ರಂಗಭೂಮಿ ನಾಟಕ ಪರಂಪರೆಗೆ ತನ್ನದೇ ಕೊಡುಗೆ ನೀಡಿತು

ಎನ್ನಬಹುದು. ಇದು ನಾಟಕ ನೋಡುವ ಪ್ರವೃತ್ತಿಯನ್ನು ಕನ್ನಡ ನಾಡಿನಲ್ಲಿ ಜಾಗೃತಗೊಳಿಸುವ ಮತ್ತು ತೀವ್ರಗೊಳಿಸುವ ಮೂಲಕ ಆಧುನಿಕ ನಾಟಕಗಳಿಗೆ ಮತ್ತು ಹವ್ಯಾಸಿ ರಂಗಭೂಮಿಗೆ ಅಪ್ರತ್ಯಕ್ಷವಾಗಿ ಸಹಾಯ ಮಾಡಿತು ಎನ್ನಬಹುದು.

## ಕನ್ನಡ ನಾಟಕ ರಂಗಭೂಮಿ

ಆಧುನಿಕ ಕನ್ನಡ ನಾಟಕದ ಚರಿತ್ರೆ ಸುಮಾರು ಒಂದು ನೂರು ವರ್ಷಗಳದು. ಆದರೆ ಕಾದಂಬರಿ, ಸಣ್ಣ ಕತೆಗಳಿಗೆ ಲಭ್ಯವಿಲ್ಲದ ಸಂಸ್ಕೃತ ಸಾಹಿತ್ಯದ ಪರಂಪರೆ ಈ ಸಾಹಿತ್ಯರೂಪಕ್ಕೆ ಲಭ್ಯವಿತ್ತು. ಆದರೆ ಕನ್ನಡ ಕಾವ್ಯಕ್ಕೆ ಇರುವಷ್ಟು ದೀರ್ಘವಾದ ಪರಂಪರೆ ಕನ್ನಡ ನಾಟಕ ಸಾಹಿತ್ಯಕ್ಕೆ ಇಲ್ಲ. ಹಳೆಗನ್ನಡ ಕಾವ್ಯದಲ್ಲಿ ನಾಟಕೀಯವಾದ ಭಾಗಗಳು ಸಾಕಷ್ಟು ಪ್ರಮಾಣದಲ್ಲಿದ್ದರೂ, ಸಾಹಿತ್ಯದ ಒಂದು ಪ್ರಕಾರವಾಗಿ ನಾಟಕ ಬೆಳೆದು ಬರಲಿಲ್ಲ. ಕನ್ನಡದ ಮೊದಲ ನಾಟಕಕಾರನೆಂದು ಹೇಳಬಹುದಾದದ ಸಿಂಗರಾರ‍್ಯರ 'ಮಿತ್ರವಿಂದ ಗೋವಿಂದ' ಕನ್ನಡದ ಮೊದಲ ನಾಟಕ. ಒಟ್ಟಿನಲ್ಲಿ ಕನ್ನಡ ನಾಟಕದ ಅಧ್ಯಯನ 17ನೆಯ ಶತಮಾನದಲ್ಲಿದ್ದ ಈತನಿಂದಲೇ ಪ್ರಾರಂಭವಾದುದು ಅನಿವಾರ್ಯವಾಗಿದ್ದಿತು. ಮುಂದೆ ಸುಮಾರು 2 ಶತಮಾನಗಳ ದೀರ್ಘ ಮೌನದ ನಂತರ ಹುಟ್ಟಿದ ನಾಟಕ ಕರ್ಕಿ ವೆಂಕಟರಮಣ ಶಾಸ್ತ್ರಿಗಳ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'. ಈ ಸಂದರ್ಭದಲ್ಲ 'ಸಂಸರು' ಚಾರಿತ್ರಿಕ ವಸ್ತುವನ್ನಿಟ್ಟುಕೊಂಡು ಹಲವು ನಾಟಕಗಳನ್ನು ರಚಿಸಿದರು. ಇವರುಗಳಲ್ಲದೆ, ಕೈಲಾಸಂ, ಶ್ರೀರಂಗ, ಲಂಕೇಶ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಕುವೆಂಪು, ಬೇಂದ್ರೆ, ಕಾರಂತ, ಪು.ತಿ.ನ, ಮಾಸ್ತಿ, ಗೋವಿಂದ ಪೈ ಹೀಗೆ ಅನೇಕ ಮಂದಿ ನಾಟಕಗಳನ್ನು ರಚಿಸಿದರು.

ಕನ್ನಡ ರಂಗಭೂಮಿಯ ವಿಕಾಸ ಮಾರ್ಗದಲ್ಲಿ ಮೂರು ಪ್ರತ್ಯೇಕವಾದ ಪ್ರಮುಖ ಪರಂಪರೆಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ, ಜನಪದ ರಂಗಭೂಮಿ, ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ, ಈ ಮೂರು ಪರಂಪರೆಗಳಲ್ಲಿ ಹವ್ಯಾಸಿ ರಂಗಭೂಮಿಯೇ ಕೊನೆಯದು. ಹವ್ಯಾಸಿ ರಂಗಭೂಮಿಗೆ ಹಿನ್ನೆಲೆಯಾಗಿ ಜನಪದ ರಂಗಭೂಮಿ ಮತ್ತು ವೃತ್ತಿ ರಂಗಭೂಮಿಗಳಿವೆ. ಕನ್ನಡ ಹವ್ಯಾಸಿ ರಂಗಭೂಮಿಯು ಉಳಿದೆರಡು ಪರಂಪರೆಗಳಿಗಿಂತ ಭಿನ್ನವಾಗುವ ಪ್ರಮುಖ ಅಂಶವೆಂದರೆ, ಅಲ್ಲಿ ನಾಟಕಕಾರನಿಗಿರುವ ಮಹತ್ವೇ ಆಗಿದೆ.

ಕನ್ನಡ ಹವ್ಯಾಸಿ ರಂಗಭೂಮಿಯು, ಆಧುನಿಕ ಕನ್ನಡ ನಾಟಕಗಳ ಫಲವೇ ಆಗಿದೆ. ಹವ್ಯಾಸಿ ರಂಗಭೂಮಿಯ ನಾಟಕಗಳೇ ಎಲ್ಲ ಅರ್ಥದಲ್ಲಿಯೂ 'ಆಧುನಿಕ' ವೆಂಬ ವಿಶೇಷಣಕ್ಕೆ ಅರ್ಹವಾಗಬಲ್ಲ ಕೃತಿಗಳು. ಹವ್ಯಾಸಿ ರಂಗಭೂಮಿಯಲ್ಲಿ ನಾಟಕ ಮತ್ತು ನಾಟಕಕಾರನ ಸಾಧನೆ, ಸಿದ್ಧಿಗಳಿಗೆ ಅತ್ಯಂತ ಮಹತ್ವ ಸಿಕ್ಕ ಕಾರಣದಿಂದ, ಇಲ್ಲಿ ನಾಟಕ ಕೃತಿಗಳ ಅಧ್ಯಯವೇ, ರಂಗಭೂಮಿಯ ಅಧ್ಯಯನವೂ ಆಗುತ್ತದೆ. ಹವ್ಯಾಸಿ ರಂಗಭೂಮಿಯ ಇತಿಹಾಸ, ಆಧುನಿಕ ಕನ್ನಡ ನಾಟಕದ ಇತಿಹಾಸವೇ ಆಗಿದೆ. ಪ್ರಸ್ತುತ ಈ ಲೇಖನದಲ್ಲಿ ನಾಟಕ ಕೃತಿಗಳ ಕುರಿತು, ಅದರ ಸ್ವರೂಪ, ಲಕ್ಷಣಗಳ ಬಗ್ಗೆ ವಿವೇಚಿಸಲಾಗಿದೆ.

## ಹವ್ಯಾಸಿ ರಂಗಭೂಮಿ ಉಗಮ – ವಿಕಾಸ

'ಆಧುನಿಕ ಕನ್ನಡ ನಾಟಕ' ಮತ್ತು 'ಹವ್ಯಾಸಿ ರಂಗಭೂಮಿ' ಇವೆರಡೂ ವಿಭಿನ್ನವಾದುದು. ಆಧುನಿಕ ಕನ್ನಡ ನಾಟಕಕ್ಕೆ ಪ್ರಯೋಗದ ಮೂಲಕ ಸಾರ್ಥಕಾವಗಲು ಅವಕಾಶ ಕಲ್ಪಿಸಿದ ರಂಗಭೂಮಿಯೇ ಹವ್ಯಾಸಿ ರಂಗಭೂಮಿ. ವೃತ್ತಿ ರಂಗಭೂಮಿಯನ್ನು ಕುರಿತ ವಿದ್ಯಾವಂತ ಮಧ್ಯಮ ವರ್ಗದ ಅತೃಪ್ತಿಯೇ ಹವ್ಯಾಸಿ ರಂಗಭೂಮಿಯ ಉದಯಕ್ಕೆ ಕಾರಣವಾಯಿತು. ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮವಾಗಿ ಎಚ್ಚೆತ್ತಿದ್ದ ಮಧ್ಯಮವರ್ಗ, ತನ್ನ ಆಶೋತ್ತರಗಳನ್ನು ಪ್ರತಿಬಿಂಬಿಸಬಲ್ಲ ರಂಗಭೂಮಿಯೊಂದನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನವೇ ಹವ್ಯಾಸಿ ರಂಗಭೂಮಿಯಾಗಿ ಫಲಿಸಿತೆನ್ನಬಹುದು.

ಜೀವನೋಪಾಯಕ್ಕಾಗಿ ಆಶ್ರಯಿಸದೆ ಸಂತೋಷಕ್ಕಾಗಿ, ಹವ್ಯಾಸವಾಗಿ, ರಂಗಭೂಮಿಯನ್ನು ಆಶ್ರಯಿಸುವ ಜನಗಳಿಂದ ನಡೆಸಲ್ಪಡುವ ರಂಗ ಚಟುವಟಿಕೆಗಳೆಲ್ಲವೂ ಹವ್ಯಾಸಿ ರಂಗಭೂಮಿಯ ವ್ಯಾಪ್ತಿಗೆ ಸೇರುತ್ತದೆ. ವೃತ್ತಿ ರಂಗಭೂಮಿಯ ಕುರಿತು ಅತೃಪ್ತಿ 'ಹವ್ಯಾಸಿ ರಂಗಭೂಮಿ' ಹುಟ್ಟಲು ಕಾರಣವಾಯಿತೆಂಬುದು ವಾಸ್ತವ ಸಂಗತಿಯಾಗಿದೆ. ನಾಟಕವನ್ನು ಆಡುವ ಸಂತೋಷ, ಆಡಿಸುವ

ಸಂತೋಷ ಮತ್ತು ನೋಡುವ ಸಂತೋಷ – ಈ ಮೂರು ಅಂಶಗಳು ಹವ್ಯಾಸಿ ರಂಗಭೂಮಿಯಲ್ಲಿ ಪರಸ್ಪರ ಪೂರಕವಾಗಿ ಬೆಳೆದಿದೆ. 20ನೆಯ ಶತಮಾನದ ಆದಿ ಭಾಗದಿಂದಲೂ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳು ಕನ್ನಡದಲ್ಲಿ ಸಮಾನಾಂತರವಾಗಿ ಬೆಳೆದುಕೊಂಡು ಬಂದಿವೆ. ಪ್ರೇಕ್ಷಕರು, ರಂಗತಂತ್ರ, ನಾಟಕ ಸಾಹಿತ್ಯ ಈಎಲ್ಲ ದೃಷ್ಟಿಯಿಂದಲೂ ಭಿನ್ನ ಮಾರ್ಗದಲ್ಲಿ ನಡೆದಿರುವ ಈ ಎರಡೂ ಪರಂಪರೆಗಳು ಪರಸ್ಪರ ಸಂಧಿಸಲಿಲ್ಲ. ಒಡಂಬಡಿಯಾಗಲಿಲ್ಲ. ನಾಟಕಕಾರರು, ನಟರು, ಪ್ರೇಕ್ಷಕರು ಮತ್ತು ಆಶ್ರಯದಾತರು – ಹೀಗೆ ಹಲವು ನಿಟ್ಟಿನಿಂದ ಕನ್ನಡ ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳು ಭಿನ್ನ ಮನೋಧರ್ಮದವರಿಂದ ರೂಪಿತವಾಗಿದೆ.

ಹವ್ಯಾಸಿ ರಂಗಭೂಮಿಯ ಪ್ರೇಕ್ಷಕವರ್ಗ ಬಹುಪಾಲು ನಗರವಾಸಿಗಳು, ಪಟ್ಟಣಿಗರು, ವಿದ್ಯಾವಂತರು, ಮಧ್ಯಮವರ್ಗದವರಾಗಿರುತ್ತಾರೆ. ಹವ್ಯಾಸಿ ರಂಗಭೂಮಿಯನ್ನೇ ಅವಲಂಬಿಸಿ ಹುಟ್ಟಿದ ಆಧುನಿಕ ನಾಟಕದ ಸ್ವರೂಪವೂ ಅನಿವಾರ್ಯವಾಗಿ ಈ ಅಂಶದಿಂದ ಪ್ರಭಾವ ಹೊಂದಿದೆ. ವೃತ್ತಿರಂಗ ಮತ್ತು ಹವ್ಯಾಸಿ ರಂಗ ಪರಂಪರೆಗಳಿಗೆ ಆಶ್ರಯಕೊಟ್ಟ ಸಂಸ್ಥೆಗಳೂ ಭಿನ್ನವಾಗಿವೆ. ಇದು ಇಡೀ ಭರತಖಂಡಕ್ಕೆ ಅನ್ವಯಿಸುವ ವಿಚಾರವಾಗಿರುವುದು ವಿಶೇಷವಾಗಿದೆ. ದೇವಾಲಯಗಳು ಮತ್ತು ಅರಮನೆಗಳು ಕ್ಲಾಸಿಕಲ್ ಸಂಸ್ಕೃತ ನಾಟಕವನ್ನು ಪೋಷಿಸಿದರೆ, ಮಧ್ಯಕಾಲೀನ ಜಾನಪದ ಮತ್ತು ವೃತ್ತಿನಾಟಕಗಳನ್ನು ಸಾರ್ವಜನಿಕ ನಾಟಕ ಶಾಲೆಗಳು ಕಾಪಾಡಿದವು. ಆಧುನಿಕ ಹವ್ಯಾಸಿ ನಾಟಕಕ್ಕೆ ಆಧಾರ ದೊರೆತದ್ದು ಕಾಲೇಜು ನಾಟಕ ರಂಗಗಳಿಂದ, ಮೂರೂ ಅಖಿಲ ಭಾರತ ಮಟ್ಟದಲ್ಲಿಯೇ ನಡೆದವು. ಹೀಗೆ ಹವ್ಯಾಸಿ ರಂಗಭೂಮಿಗೆ ಶಾಲಾ ಕಾಲೇಜುಗಲೇ ಆಶ್ರಯ ಕೇಂದ್ರಗಳಾದವು. ಇಲ್ಲಿ ವಿದ್ಯಾರ್ಥಿಗಳೇ ನಟರಾಗಿದ್ದು, ಅಧ್ಯಾಪಕರೇ ನಿರ್ದೇಶಕರಾಗಿದ್ದರು. ಕನ್ನಡ ಹವ್ಯಾಸಿ ರಂಗಭೂಮಿಯ ಮತ್ತು ಆಧುನಿಕ ಕನ್ನಡ ನಾಟಕಗಳ ಪ್ರವರ್ತಕ, ಪೋಷಕರಿಬ್ಬರೂ ಕಾಲೇಜು ಅಧ್ಯಾಪಕ ಮತ್ತು ವಿದ್ಯಾರ್ಥಿಗಳೇ ಆಗಿದ್ದಾರೆ. ಕೈಲಾಸಂ, ಪರ್ವತವಾಣಿ, ಪು.ತಿ. ನರಸಿಂಹಾಚಾರ, ಶಿವರಾಮಕಾರಂತ ಮುಂತಾದ ತನಮ್ಮ ಕೆಲವೇ ನಾಟಕಕಾರರು ವೃತ್ತಿಯಿಂದ ಅಧ್ಯಾಪಕರಲ್ಲವಾದರೂ ಅವರ ನಾಟಕಗಳೆಲ್ಲ ಈ ಶತಮಾನದ ಆರು ಮತ್ತು ಏಳನೇ ದಶಕಗಳಿಂದ ಕಾಲೇಜು ರಂಗದ ಹವ್ಯಾಸಿ ಕಲಾವಿದರಿಂದ ಪ್ರಚಾರಕ್ಕೆ ಬಂದಿತು. ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಕೈಗಾರಿಕೆಗಳು ಮತ್ತು ಸರ್ಕಾರಿ ಕಚೇರಿಗಳ ನೌಕರರು ಹವ್ಯಾಸಿ ರಂಗ ಚಟುವಟಿಕೆಗಳಲ್ಲಿ ನಿರತರಾಗಿದ್ದು, ಮುಂದೆ ಹಲವು ಕ್ಷೇತ್ರಗಳಿಂದ ಹವ್ಯಾಸಿ ರಂಗಭೂಮಿ ಬಲ ಪಡೆಯಿತು.

ಪ್ರಯೋಗ ತಂತ್ರ, ನಾಟಕದ ವಸ್ತುವಿನ ದೃಷ್ಟಿಯಿಂದಲೂ ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗೆ ಅಗಾಧ ವ್ಯತ್ಯಾಸವಿದೆ.

1. ವೃತ್ತಿ ರಂಗಭೂಮಿಯಲ್ಲಿ ದೀರ್ಘಾವಧಿಯ ಪ್ರದರ್ಶನಕ್ಕೆ ಮಹತ್ವವಾದರೆ, ಹವ್ಯಾಸಿ ರಂಗಭೂಮಿ ಚಿಕ್ಕ ನಾಟಕಗಳನ್ನ ಕಡಿಮೆ ಅವಧಿಯ ಪ್ರದರ್ಶನಗಳನ್ನು ಜನಪ್ರಿಯಗೊಳಿಸಿತು. ಹೆಚ್ಚೆಂದರೆ ಎರಡು ತಾಸಿನ ಪ್ರದರ್ಶನಗಳಿಂದ ಕೂಡಿರುತ್ತದೆ.
2. ವೃತ್ತಿರಂಗಭೂಮಿಯಲ್ಲಿ ಮನರಂಜನೆಯೇ ಏಕಮೇವ ಗುರಿ, ಹವ್ಯಾಸಿ ರಂಗಭೂಮಿಯಲ್ಲಿ ಮನರಂಜನೆಗಿಂತ ಪ್ರೇಕ್ಷಕರ ಮನಸ್ಸನ್ನು ಪ್ರಚೋದಿಸುವ ಗುರಿ ಮುಖ್ಯವಾಯಿತು.
3. ಹಾಡು, ಕುಣಿತ, ಹಾಸ್ಯ, ಭಾವಾತಿರೇಕದ ಅಭಿನಯಗಳಿಗೆ ವೃತ್ತಿ ರಂಗಭೂಮಿಯಲ್ಲಿ ಆದ್ಯತೆ ದೊರೆಯಿತು. ಅಲ್ಲದೆ ಹಾಸ್ಯ, ವೀರ, ಕರುಣವೇ ಮುಂತಾದ ರಸ ಪ್ರತಿಪಾದನೆಗೆ ಅಗ್ರಪಟ್ಟ ದೊರೆಯಿತು. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ಹಾಡು, ಕುಣಿತಗಳಿಗೆ ಸಾಮಾನ್ಯವಾಗಿ ಅವಕಾಶವಿಲ್ಲ. ಪ್ರಹಸನಗಳಂಥ ಲಘು ನಾಟಕಗಳನ್ನು ಬಿಟ್ಟರೆ, ರಸ ಪ್ರತಿಪಾದನೆಯಲ್ಲಿ ಭಾವಾತಿರೇಕಕ್ಕೆ ಅವಕಾಶವಿಲ್ಲ.
4. ಪೌರಾಣಿಕ ವಸ್ತುವಿನಲ್ಲಿ ಇದೆಲ್ಲಕ್ಕೂ ಹೆಚ್ಚಿನ ಅವಕಾಶವಿರುವುದರಿಂದ, ವೃತ್ತಿ ರಂಗಭೂಮಿಯಲ್ಲಿ ಪೌರಾಣಿಕ ವಸ್ತುವನ್ನು ಬಹುತೇಕ ಅಂಗೀಕರಿಸಲಾಯಿತು. ಹವ್ಯಾಸಿ ರಂಗಭೂಮಿಯಲ್ಲಿ ಸಾಮಾಜಿಕವಾಗಿ ಸಮಕಾಲೀನ ಕಥಾವಸ್ತುವಿಗೇ ಆದ್ಯತೆ ಇದ್ದು, ಪೌರಾಣಿಕ, ಚಾರಿತ್ರಿಕ ವಸ್ತುವು, ಸಮಕಾಲೀನವಾಗಿ ಪ್ರಸಕ್ತವಾಗುವಂತೆ ರಚಿತವಾಗಿರಬೇಕು.
5. ವೃತ್ತಿರಂಗಭೂಮಿಯಲ್ಲಿ ನಾಟಕಕಾರನ ಸ್ಥಾನ, ಗೌಣವಾಗಿದ್ದು, ಅನುಕ್ರಮವಾಗಿ ಸಂಗೀತ, ಅಭಿನಯ, ರಂಗಸಜ್ಜಿಕೆಯೇ

ಮುಂತಾದ ಬಾಹ್ಯ ಅಲಂಕಾರಗಳಿಗೆ ಹವ್ಯಾಸಿ ರಂಗಭೂಮಿಯಲ್ಲಿ ನಾಟಕಕಾರನೇ ಕೇಂದ್ರ ವ್ಯಕ್ತಿ.

ಎಪ್ಪತ್ತರ ದಶಕದ ಬಳಿಕ ಹವ್ಯಾಸಿ ರಂಗಭೂಮಿಯಲ್ಲಿ ನಿರ್ದೇಶಕನು ನಾಟಕಕಾರನಿಗೆ ಸಮಸಮನಾದ ಮಹತ್ವ ಪಡೆದ. ವಾಸ್ತವ ಮಾರ್ಗದ ರಂಗಸಜ್ಜಿಕೆ ಮತ್ತು ಪ್ರಯೋಗ ವಿಧಾನಗಳನ್ನು ಅನುಸರಿಸಿದ ಹವ್ಯಾಸಿ ರಂಗಭೂಮಿಯ ಕಲಾವಿದರೆಲ್ಲ ಬದುಕಿ ವಿವಿಧ ನೆಲೆಯಿಂದ ಬಂದವರು. ವೃತತಿ ಕಲಾವಿದರಂತೆ ಜೀವನ ನಿರ್ವಹಣೆಗೆ ರಂಗಭೂಮಿಯನ್ನೇ ಆಶ್ರಯಿಸಿದವರಲ್ಲ. ಇದರಿಂದಾಗಿ ಹವ್ಯಾಸಿ ರಂಗಭೂಮಿಗೆ ನಿರಂತರವಾದ ಅವಿಚ್ಛಿನ್ನ ಪರಂಪರೆಯೊಂದು ಕಲ್ಪಿತವಾಗಲಿಲ್ಲ.

ಕನ್ನಡ ಹವ್ಯಾಸಿ ರಂಗಭೂಮಿಯ ಐತಿಹಾಸಿಕ ಸಮೀಕ್ಷೆಯ ಸ್ಥೂಲ ನೋಟ : 1905ರಲ್ಲಿ ಧಾರವಾಡದಲ್ಲಿ ಮುದ್‌ವೀಡು ಕೃಷ್ಣರಾಯರ ನೇತೃತ್ವದಲ್ಲಿ ಹುಟ್ಟಿಕೊಂಡ 'ಭರತ ಕಲೋತ್ತೇಜಕ ಸಂಗೀತ ಸಮಾಜ'ವು ಐತಿಹಾಸಿಕವಾಗಿ ಮೊದಲ ಹವ್ಯಾಸಿ ಮಂಡಳಿಯಾಗಿದ್ದು, ಚುರಮುರಿಯವರ 'ಶಾಕುಂತಲ'ದ ಅನುವಾದವೇ ಈ ಮಂಡಳಿಯ ಮೊದಲ ಪ್ರಯೋಗ. ಈ ಮಂಡಳಿಯಿಂದ, ಸ್ಫೂರ್ತಿಗೊಂಡು ಗದಗ, ಬಾಗಲಕೋಟೆ, ಬಿಜಾಪುರ ಮುಂತಾದ ಕಡೆ ಹವ್ಯಾಸಿ ತಂಡಗಳು ಹುಟ್ಟಿಕೊಂಡವೆನ್ನಲಾಗಿದೆ.

1909ರಲ್ಲಿ ಬೆಂಗಳೂರಿನ 'ಅಮೆಚೂರ್ ಡ್ರಮಾಟಿಕ್ ಅಸೋಸಿಯೇಶನ್ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ವರ್ಣಮಯವಾದ ಐತಿಹಾಸವನ್ನು ನಿರ್ಮಿಸಿದ ಮೊದಲ ಸಂಸ್ಥೆಯಾಗಿದೆ. ಈ ಸಂಸ್ಥೆ ಬೆಂಗಳೂರಿನ ಮಧ್ಯಮ ವರ್ಗದ ವಿದ್ಯಾವಂತ ತರುಣರು, ವಕೀಲರು, ಅಧ್ಯಾಪಕರು ಮತ್ತಿತರರ ಉತ್ಸಾಹದಿಂದ ಆರಂಭಗೊಂಡಿತು. ಈ ಮಂಡಳಿಯು ರಂಗಭೂಮಿಯ ಸಲುವಾಗಿಯೇ ಕನ್ನಡದಲ್ಲಿ 'ರಂಗಭೂಮಿ' ಎಂಬ ಸಚಿತ್ರ ಮಾಸ ಪತ್ರಿಕೆಯನ್ನೋ, ಇಂಗ್ಲಿಷ್‌ನ 'ಥಿಯೇಟರ್' ಎಂಬ ತ್ರೈಮಾಸಿಕೆಯನ್ನು ಆರಂಭಿಸಿತು. ಕನ್ನಡ, ತೆಲುಗು, ಹಿಂದಿ ನಾಟಕಗಳನ್ನಾಡುತ್ತಾ, ಈ ಮಂಡಳಿ ಮದರಾಸೆ, ಹೈದ್ರಾಬಾದ್, ಮುಂಬೈ, ಕಲ್ಕತ್ತ, ಸಿಮ್ಲಾ ಮುಂತಾದ ನಗರಗಳಲ್ಲಿ ಪ್ರವಾಸ ಮಾಡಿತು. ಇದರಲ್ಲಿ ಕೇಂದ್ರ ವ್ಯಕ್ತಿಗಳಾಗಿ ಬಳ್ಳಾರಿಯ ಟಿ. ರಾಘವಾಚಾರ್‍ಯರು, ಕೆ. ಭೀಮರಾವ್, ಪೃಥ್ವಿರಾಜ್, ಬಿ.ವಿ. ರಾಘವಾಚರ್, ಟಿ.ಪಿ. ಕೈಲಾಸಂ, ಕೆ.ಎಸ್. ವಾಸುದೇವರಾವ್, ಮುದ್ದುಕೃಷ್ಣ ಮೊದಲಾದವರಿದ್ದರು.

ಈ ಮಂಡಳಿಯ ಹವ್ಯಾಸಿ ರಂಗಭೂಮಿಗೆ ವಿಶೇಷ ಚಾಲನೆಯನ್ನು ಕೊಟ್ಟಿದೆ. ನಾಟಕ ಪ್ರದರ್ಶನ, ರಂಗಭೂಮಿಯ ಬೆಳವಣಿಗೆಗಾಗಿ ಪತ್ರಿಕಾ ಪ್ರಕಟಣೆ, ನಾಟಕ ರಚನಾ ಸ್ಪರ್ಧೆ, ಪ್ರದರ್ಶನಗಳ ಸ್ಪರ್ಧೆ, ವಿಚಾರ ಗೋಷ್ಠಿಗಳ ಏರ್ಪಾಡು, ನಾಟಕ ಸಮ್ಮೇಳನಗಳ ವ್ಯವಸ್ಥೆ, ಹೀಗೆ ಹತ್ತು ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿತು. ಈ ಸಂಘದ ಪ್ರೋತ್ಸಾಹದಿಂದ ಕನ್ನಡದಲ್ಲಿ ಹೆಸರಾಂತ ನಾಟಕಕಾರರು ಹುಟ್ಟಿಕೊಂಡರು. ಈ ಸಂಘವು ಏರ್ಪಡಿಸಿದ ಸ್ಪರ್ಧೆಗಾಗಿಯೇ ಕೈಲಾಸಂರವರ ಮೊತ್ತ ಮೊದಲ ನಾಟಕ 'ಟೊಳ್ಳುಗಟ್ಟಿ' ಹುಟ್ಟಿಕೊಂಡಿತು. ಮೂರು ದಶಕಗಳ ವೈಭವ ಪೂರ್ಣ ಇತಿಹಾಸದಲ್ಲಿ ಈ ಮಂಡಳಿಯಲ್ಲಿ ನಟರಾಗಿ, ನಾಟಕಕಾರರಾಗಿ, ಕಲಾವಿದರಾಗಿ, ಸಂಪಾದಕ–ವಿಮರ್ಶಕರಾಗಿ ದುಡಿದ ಕೆಲವೇ ಪ್ರಮುಖರೆಂದರೆ ಪಂಡಿತ, ತಾರಾನಾಥ್, ಸಿ.ಕೆ. ವೆಂಕಟರಾಮಯ್ಯ, ಅ.ನ.ಕೃ, ವಿ. ಭಾಸ್ಕರನ್, ಕೆ. ಸಂಪದ್ಗಿರಿರಾವ್, ದೇವುಡು ನರಸಿಂಹ ಶಾಸ್ತ್ರಿ, ಸರೋಜಿನಿ ದೇವಿ, ಕನಕಲಕ್ಷ್ಮಮ್ಮ, ಪದ್ಮಾವತಿ ಮೊದಲಾದವರನ್ನು ಇಲ್ಲಿ ಸ್ಮರಿಸಬಹುದು. ಈ ಮಂಡಳಿಯು ಬಿ.ಎಂ. ಶ್ರೀ, ಕುವೆಂಪು, ಮಾಸ್ತಿ, ಕೈಲಾಸಂ, ಸಂಸ, ಅ.ನ.ಕೃ ಮುಂತಾದ ನವೋದಯ ನಾಟಕಕಾರರ ಕೃತಿಗಳನ್ನು ಪ್ರದರ್ಶನ ಮಾಡುವ ಮೂಲಕ ಬೆಳಕಿಗೆ ತಂದಿತು.

ದಕ್ಷಿಣ ಕರ್ನಾಟಕದ ಮೊದಲ ಹವ್ಯಾಸಿ ಮಂಡಳಿಗಳಲ್ಲಿ ಮೈಸೂರಿನ ಸಾಹಿತ್ಯ ನಾಟಕ ಸಂಘ(1919)ವು ಪ್ರಮುಖವಾದುದಾಗಿದೆ. ಈ ಮಂಡಳಿಯು ಟಿ. ಲಕ್ಷ್ಮಯ್ಯನವರಿಂದ ಆರಂಭವಾಗಿ ಸಿ.ಆರ್. ಸುಬ್ಬರಾವ್, ಸಿ. ಆನಂದರಾವ್, ಎಂ.ಎಸ್. ನಂಜಪ್ಪ, ಡಿ. ಕಪನಿಪತಿರಾವ್ ಮುಂತಾದವರಿಂದ ಬೆಳೆಸಲ್ಪಟ್ಟಿತು. ಈ ಮಂಡಳಿ ನಾಟಕ ಪ್ರದರ್ಶನ, ಸ್ಪರ್ಧೆ, ಉತ್ಸವಗಳನ್ನು ಏರ್ಪಡಿಸಿ ಹವ್ಯಾಸಿ ಚಟುವಟಿಕೆಗಳಿಗೆ ಉತ್ಸಾಹವನ್ನು ಉಂಟುಮಾಡಿತು.

ಧಾರವಾಡದ 'ಭರತ ಕಲೋತ್ತೇಜಕ ಸಂಗೀತ ಸಮಾಜ'ದ ಪ್ರಭಾವದಿಂದಾಗಿ ಉತ್ತರ ಕರ್ನಾಟಕದಲ್ಲಿ ತಲೆ ಎತ್ತಿದ ಹವ್ಯಾಸಿ ಮಂಡಳಿಗಳಲ್ಲಿ 1914ರಲ್ಲಿ ಗದುಗಿನ 'ದಿ ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಅಸೋಸಿಯೇಶನ್'ಗೆ ಹುಯಿಲಗೋಳ ನಾರಾಯಣರಾಯರು ಕೇಂದ್ರ ವೃತ್ತಿಯಾಗಿದ್ದು ಇವರ ನಾಟಕಗಳ ಪ್ರದರ್ಶನವೇ ಈ ಮಂಡಳಿಯ ಮುಖ್ಯ ಉದ್ದೇಶವಾಗಿತ್ತು. ನಂತರ 1927ರಲ್ಲಿ ಬಾಗಲಕೋಟೆಯ 'ವಾಸುದೇವ ವಿನೋದಿನಿ ಸಭಾ' ಎಂಬ ಹವ್ಯಾಸಿ ಮಂಡಳಿಯೂ ಕೆರೂರು ವಾಸುದೇವಾಚಾರ್ಯರ ನಾಟಕಗಳಿಗಾಗಿಯೆ ಹುಟ್ಟಿಕೊಂಡಿತು. 1933ರಲ್ಲಿ ಸಾಮಾಜಿಕ ನಾಟಕಗಳಿಗೆ ಆದ್ಯತೆ ನೀಡುತ್ತಾ ಶ್ರೀರಂಗರು

ಧಾರವಾಡದಲ್ಲಿ ಆರಂಭಿಸಿದ 'ಕನ್ನಡ ನಾಟ್ಯ ವಿಲಾಸಿ ಸಂಘ'ವು ಆಧುನಿಕ ಕನ್ನಡ ಹವ್ಯಾಸಿ ರಂಗಭೂಮಿಯ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದೆ.

ಹವ್ಯಾಸಿ ರಂಗಭೂಮಿಯ ಅಧ್ಯಯನವನ್ನು ಎರಡು ಘಟ್ಟಗಳಲ್ಲಿ ವಿಂಗಡಿಸಬಹುದು. 1. ಸ್ವಾತಂತ್ರ್ಯ ಪೂರ್ವ ಕಾಲಘಟ್ಟ 2. ಸ್ವಾತಂತ್ರ್ಯೋತ್ತರ ಕಾಲಘಟ್ಟ.

**ಸ್ವಾತಂತ್ರ್ಯ ಪೂರ್ವ ಕಾಲಘಟ್ಟ :** ಈ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳು ಮುಖ್ಯವಾಗಿ ಯಾರಾದರೊಬ್ಬ ಪ್ರಮುಖ ನಾಟಕಕಾರನ ಸುತ್ತ ಹಬ್ಬುತ್ತಿದ್ದವು. ಈ ದೃಷ್ಟಿಯಿಂದಾಗಿ ಹಳೆಯ ಮೈಸೂರಿನ ಹವ್ಯಾಸಿ ರಂಗಭೂಮಿಯು ಹೆಚ್ಚು ವ್ಯಾಪಕವಾಗಿ ಕಂಡುಬರುತ್ತದೆ. ಈ ಕಾಲದಲ್ಲಿ ಹುಟ್ಟಿಕೊಂಡ ಹವ್ಯಾಸಿ ತಂಡಗಳಲ್ಲಿ ಬಿ.ಎಸ್. ವೆಂಕಟರಾವ್ ನೇತೃತ್ವದ ಛಾಯಾ ಕಲಾವಿದರು, ಸಿ.ಕೆ. ನಾಗರಾಜರಾಯರ ಯುನೈಟೆಡ್ ಆರ್ಟಿಸ್ಟ್ಸ್, ಉಲ್ಲೇಖಾರ್ಹವಾಗಿದೆ. ಬಿ.ಎನ್. ನಾರಾಯಣ್ ನೇತೃತ್ವದ ನ್ಯಾಷನಲ್ ಕಾಲೇಜ್ 'ಹಿಸ್ಟ್ರಿಯಾನಿಕ್ ಅಸೋಸಿಯೇಶನ್', ಕೆ.ವಿ. ಅಯ್ಯರ್‌ರವರ 'ರವಿ ಕಲಾವಿದರು', 'ಚಿತ್ರಕಲಾವಿದರು', 'ಶಶಿ ಕಲಾವಿದರು', ಇವರೆಲ್ಲ ಹವ್ಯಾಸಿ ರಂಗಭೂಮಿಯ ಮೊದಲ ಘಟ್ಟಕ್ಕೆ ಸೇರಿದವರು. ನವೋದಯದ ನಾಟಕಗಳೇ ಈ ಕಾಲದಲ್ಲಿ ಮಹತ್ವ ಪಡೆದಿದ್ದವು.

**ಸ್ವಾತಂತ್ರ್ಯೋತ್ತರ ಕಾಲಘಟ್ಟ :** ಹವ್ಯಾಸಿ ರಂಗಭೂಮಿಯ ಈ ಕಾಲಘಟ್ಟದಲ್ಲಿ ಪ್ರಾಯೋಗಿಕತೆಗೆ ರಂಗಭೂಮಿಯಲ್ಲಿ ಮಹತ್ವ ದೊರೆಯಿತು. ನಾಟಕಕಾರನಿಗೆ ಸರಿಸಮಾನವಾದ  ಮಹತ್ವ ನಿರ್ದೇಶಕನಿಗೆ ಪ್ರಾಪ್ತವಾಯಿತು. ಶ್ರೀರಂಗ, ಜೆ.ಬಿ. ಜೋಶಿ, ಗಿರೀಶ ಕಾರ್ನಾಡ, ಲಂಕೇಶ್, ಕಂಬಾರ, ಪಾಟೀಲ ಮತ್ತಿತರರ ನಾಟಕಗಳು ಈ ರಂಗಭೂಮಿಯ ಮುಂಚೂಣಿಯಲ್ಲಿದ್ದವು. ರಾ. ನಾಗೇಶರ 'ಕನ್ನಡ ಸಾಹಿತ್ಯ ಕಲಾಸಂಘ' ಮತ್ತು 'ರಂಗ ಸಂಪದ', ಪಿ. ಲಂಕೇಶ್ ಮತ್ತು ಗೆಳೆಯರ 'ಪ್ರತಿಮಾ ನಾಟಕ ರಂಗ', ಜಿ.ವಿ. ಶಿವಾನಂದರ 'ಕಲಾಕುಂಜ', ಜಿ. ಶ್ರೀನಿವಾಸ್ ಮತ್ತು ಗೆಳೆಯರ 'ನಟರಂಗ', 'ಗೆಳೆಯರ ಗುಂಪು', 'ಸಮುದಾಯ', 'ಬೆನಕ', 'ಕಲಾಗಂಗೋತ್ರಿ' ಮತ್ತಿತರ ಬೆಂಗಳೂರಿನ ಹವ್ಯಾಸಿ ತಂಡಗಳು ಈ ರಂಗಭೂಮಿಯ ಬೆಳವಣಿಗೆಗೆ ಕಾರಣರಾದವರು. ಮೈಸೂರಿನ ಸಿಂಧುವಳ್ಳಿ ಅನಂತಮೂರ್ತಿ ಸಂಗಡಿಗರ 'ಸಮತಂತೋ, ಧಾರವಾಡದ ತೋಂಟದಾರ್ಯರ 'ಅಂತರಂಗ', ಶ್ರೀರಂಗಂ ನಾಟಕಗಳ ಪ್ರದರ್ಶನಕ್ಕೆ ಹೆಸರಾದ ಸಾಗರದ ಎನ್.ಆರ್. ಮಾಸೂರ್ ನೇತೃತ್ವದ 'ಉದಯ ಕಲಾವಿದರು', ಕೆ.ವಿ. ಸುಬ್ಬಣ್ಣನವರ ಹೆಗ್ಗೋಡಿನ 'ನೀಲಕಂಠೇಶ್ವರ ನಾಟ್ಯ ಸೇವಾ ಸಂಘದಂತಹ ಕೆಲವು ಮಂಡಳಿಗಳು, ಬೆಂಗಳೂರಿನಿಂದ ಹೊರಗೆ ಪ್ರಾಯೋಗಿಕ ನಾಟಕ ಚಳುವಳಿಗೆ ಪ್ರೋತ್ಸಾಹ ಕೊಟ್ಟ ಪ್ರಮುಖ ಮಂಡಳಿಗಳು. ಇದೇ ಕಾಲದಲ್ಲಿ ನವೋದಯ ನಾಟಕಗಳ ಪ್ರದರ್ಶನಕ್ಕೆ ಹೆಚ್ಚಿನ ಮಹತ್ವ ಕೊಟ್ಟ ಬೆಂಗಳೂರಿನ 'ರಂಗ ಮಂಟಪ', ಕೈಗಾರಿಕ ಕ್ಷೇತ್ರದ ಕಲಾವಿದರ ಪ್ರತಿಭಾವಿಕಸನಕ್ಕೆ ಅವಕಾಶ ಕಲ್ಪಿಸಿತು.

ಕನ್ನಡ ಹವ್ಯಾಸಿ ರಂಗಭೂಮಿಯ ಇತಿಹಾಸದಲ್ಲಿ ಇತ್ತೀಚಿನ ಬೀದಿ ನಾಟಕಗಳ ಯಶಸ್ಸು ಗಮನಾರ್ಹವಾದ ಒಂದು ಸಂಗತಿ. ಈ ಬೀದಿ ನಾಟಕಗಳನ್ನು ಮೊದಲು ಪ್ರಚಾರಕ್ಕೆ ತಂದವರೇ 'ಗೆಳೆಯರ ಗುಂಪಿ'ನ ಎ.ಎಸ್. ಮೂರ್ತಿ ಮತ್ತು ವಿಜಯಾರವರು. 'ಸಮುದಾಯ'ದ ಪ್ರಸನ್ನ ಮತ್ತು ಸಿ.ಜಿ. ಕೃಷ್ಣಸ್ವಾಮಿಯವರು ಇದನ್ನೊಂದು ಅರ್ಥವತ್ತಾದ ರಂಗ ಚಳುವಳಿಯನ್ನಾಗಿ ಪರಿವರ್ತಿಸಿದರು. ಈ ಬೀದಿ ನಾಟಕದ ಮುಖ್ಯ ಉದ್ದೇಶವೇ ಸಾಮಾಜಿಕ ಪರಿವರ್ತನೆಯಾಗಿದ್ದು, ಇದನ್ನ ಸಾಂಪ್ರದಾಯಿಕ ರಂಗಭೂಮಿಯ ನಾಟಕಗಳಿಗೆ ಹೋಲಿಸುವಂತಿಲ್ಲ. ಪ್ರೇಕ್ಷಕರಿದ್ದಲ್ಲಿಗೇ ನಾಟಕವನ್ನು ಒಯ್ದು ಆಡಿಸುವುದು ಇದರ ವಿಶೇಷತೆಯಾಗಿದೆ.

ಇಲ್ಲಿನ ವಸ್ತು ತೀರ ಸಮಕಾಲೀನವಾಗಿದ್ದು, ಕೆಳವರ್ಗದ, ಕೂಲಿಕಾರರ ಮತ್ತು ದಲಿತರ ಶೋಷಣೆಯ ವಿರುದ್ಧ ಜಾಗೃತಿಯನ್ನುಂಟುಮಾಡುವ ಹೀಗೆ ಅನೇಕ ಜ್ವಲಂತ ಸಮಕಾಲೀನ ಸಮಸ್ಯೆಗಳನ್ನು, ನಡೆದ ಘಟನೆಗಳನ್ನು ಆಧರಿಸಿ ಬೀದಿ ನಾಟಕಗಳು ಸೃಷ್ಟಿಯಾಗಿವೆ. ಭಾರತದಂತಹ ಹಿಂದುಳಿದ ದೇಶದಲ್ಲಿ ರಂಗಭೂಮಿಯ ಮಾಧ್ಯಮವನ್ನು ಬಳಸಿಕೊಂಡು ಜನತೆಯನ್ನು ಎಚ್ಚರಿಸುವ, ಸಾಮಾಜಿಕ ಅನ್ಯಾಯಗಳ ಬಂಡೆಬ್ಬಿಸುವ ಕಾರ್ಯವನ್ನು ಈ ಬೀದಿ ನಾಟಕಗಳು ಮಾಡಿವೆ.

ಬೀದಿನಾಟಕ ನಿರ್ಮಿತಿ, ಸರಳವಾದದ್ದು, ಇದು ರಂಗಭೂಮಿಯ ಭವ್ಯವಾದ ಸಲಕರಣೆಗಳು, ಸುಸಜ್ಜಿತರಂಗಮಂದಿರ, ಬೆಳಕಿನ ವಿನ್ಯಾಸ, ವೇಷಭೂಷಣಗಳನ್ನು ಅಪೇಕ್ಷಿಸದೆ, ನಾಲ್ಕು ರಸ್ತೆಗಳು ಸೇರುವ ಯಾವುದೇ ಜಾಗವೇ ಬೀದಿನಾಟಕಕ್ಕೆ ರಂಗಸ್ಥಳವಾಗಿರುತ್ತದೆ. ನಟರು ಬೀದಿಯ ನಡುವೆ ತಾವೇ ನಿರ್ಮಿಸಿದ ಚೌಕಟ್ಟಿನಲ್ಲಿ ಕುಳಿತಿರುತ್ತಾರೆ. ತಮ್ಮ ಸರದಿ ಬಂದಾಗ ಎದ್ದು ನಟಿಸುತ್ತಾರೆ. ನಾಲ್ಕು ಕಡೆಯು ಬೀದಿಯ ಜನರೇ ಪ್ರೇಕ್ಷಕರಾಗಿರುತ್ತಾರೆ. ಹಾಡುಗಳು, ಭಾಷಣ, ಪತ್ರಿಕಾ ವರದಿಗಳು. ಹೀಗೆ ಅನೇಕ ಬಗೆಯ ತಂತ್ರಗಳ ನೆರವಿನಿಂದ ವಸ್ತುವನ್ನು, ಪ್ರತಿಪಾದಿಸಲಾಗುತ್ತದೆ. ಹರ್ಮನ್ ನಾಟಕಕಾರ ಬ್ರೆಕ್ಟ್‌ನ ಮುಕ್ತ ರಂಗಭೂಮಿ' ಮತ್ತು ಬಂಗಾಳಿ ನಾಟಕಕಾರ ಬಾದಲ್ ಸರ್ಕಾರದ ಜೀವಂತ ಪ್ರದರ್ಶನದ ತತ್ವವನ್ನು ಹಿನ್ನೆಲೆಯಾಗಿರಿಸಿಕೊಂಡು ಕನ್ನಡದ ಬೀದಿನಾಟಕಗಳು ರೂಪುಗೊಂಡಿದೆ ಎಂದು ಕೆ. ಮರುಳಸಿದ್ದಪ್ಪನವರು ಅಭಿಪ್ರಾಯಪಟ್ಟಿದ್ದಾರೆ. 'ಉಳ್ಳವರ ನೆರಳು', 'ಧನ್ವಂತರಿ ಚಿಕಿತ್ಸೆ', 'ಜಗದಂಬೆಯ ಬೀದಿನಾಟಕ', 'ದಲಿತರು ಬರುವರು ದಾರಿ ಬಿಡಿ' ಇವೆ ಮೊದಲಾದವುಗಳು ಹೆಸರಿಸಬೇಕಾದ ಬೀದಿ ನಾಟಕಗಳು.

ಇತ್ತೀಚಿನ ದಿನಗಳಲ್ಲಿ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಒಂದು ಹೊಸ ಬಗೆ ತಲೆದೋರಿದೆ. ನಾಟಕ ನಿರ್ದೇಶನವನ್ನೇ ಪೂರ್ಣಾವಧಿ ವೃತ್ತಿಯನ್ನಾಗಿ ಮಾಡಿಕೊಂಡಿರುವ ಪ್ರತಿಭಾವಂತರಾದ ಒಬ್ಬೊಬ್ಬ ನಿರ್ದೇಶಕರು ಈ ಹೊಸ ಬಗೆಯ ರಂಗಭೂಮಿಗೆ ಕಾರಣರಾಗಿದ್ದಾರೆ. ಬಿ.ವಿ. ಕಾರಂತ ಮತ್ತು ಪ್ರಸನ್ನರವರು ಈ ಹೊಸ ರಂಗಭೂಮಿಯ ನೇತಾರರು. ಹವ್ಯಾಸಿ ನಟರು ಮತ್ತು ವೃತ್ತಿ ನಿರ್ದೇಶಕರು ಸೇರಿ ನಿರ್ಮಾಣಗೊಳ್ಳುತ್ತಿರುವ ರಂಗಭೂಮಿ ಇದಾಗಿದೆ. ಕನ್ನಡ ನಾಡಿನ ವಿಶ್ವವಿದ್ಯಾಲಯಗಳ ನಾಟಕ ವಿಭಾಗದ ಅಧ್ಯಾಪಕರು, ಸರ್ಕಾರದ ಸಂಗೀತ ನಾಟಕ ಇಲಾಖೆಯ ಕಲಾವಿದರೂ ಈ ರಂಗಭೂಮಿಯ ಬೆಳವಣಿಗೆಗೆ ಪೂರಕವಾಗಿ, ಕೆಲಸ ಮಾಡಿದರು. ನಾಟಕವೊಂದರ ರಂಗ ಪ್ರಯೋಗವು ನಾಟಕ ರಚನೆಯಷ್ಟೇ ಗುರುತರವಾದ ಹೊಣೆಗಾರಿಕೆಯನ್ನು ಬಿ.ಎ. ಕಾರಂತ ಮತ್ತು ಪ್ರಸನ್ನರಂತಹ ಪ್ರತಿಭಾವಂತ ನಿರ್ದೇಶಕರು ಹವ್ಯಾಸಿ ರಂಗಭೂಮಿಗೆ ತೋರಿಸಿಕೊಟ್ಟರು.

ಅಖಿಲ ಭಾರತ ಮಟ್ಟದಲ್ಲಿ ಕನ್ನಡ ಹವ್ಯಾಸಿ ರಂಗಭೂಮಿಯ ಬೆಳವಣಿಗೆಗೆ ಭಾರತೀ ನಾಟ್ಯ ಸಂಘ ಮತ್ತು ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕಾಡೆಮಿಗಳು ಕೊಟ್ಟ ಪ್ರೋತ್ಸಾಹ ಉಲ್ಲೇಖಾರ್ಹವಾದುದು. ರಂಗಭೂಮಿಯ ಅಭ್ಯುದಯಕ್ಕೆ ಕಾರಣರಾದ ಪ್ರಮುಖರು.

**ಬಿ.ವಿ. ಕಾರಂತ :** ಕನ್ನಡ ಪ್ರಾಯೋಗಿಕ ರಂಗಭೂಮಿಯ ಅಭ್ಯುದಯಕ್ಕೆ ಕಾರಣರಾದವರಲ್ಲಿ ಬಿ.ವಿ. ಕಾರಂತರು ಮುಖ್ಯರಾದವರು. ವೃತ್ತಿರಂಗಭೂಮಿ, ಜನಪದ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳ ಸಂಮಿಶ್ರಮಾದರಿಯ ನೂತನ ಸಂಪ್ರದಾಯ ಮತ್ತು ರಂಗತಂತ್ರವೊಂದನ್ನು ಕಾರಂತರು ಪ್ರಚುರಪಡಿಸಿದರು. ಆಧುನಿಕ ಹವ್ಯಾಸಿ ರಂಗಭೂಮಿಯಲ್ಲಿ ಮನರಂಜನೆಗೂ ಮಹತ್ವವಿದೆ ಎಂಬುದನ್ನು ಕಾರಂತರು ಪ್ರತಿಪಾದಿಸಿದರು. ಕಾರಂತರು ನಿರ್ದೇಶಿಸಿದ ಹಲವಾರು ನಾಟಕಗಳಲ್ಲಿ 'ದೊರೆ ಈಡಿಪಸ್', ಹಯವದನ', 'ಜೋಕುಮಾರಸ್ವಾಮಿ', 'ಸತ್ತವರ ನೆರಳು', ಅದ್ವಿತೀಯ ಯಶಸ್ಸನ್ನು ಸಂಪಾದಿಸಿದವು. ನಾಟಕ ನಿರ್ದೇಶನದಷ್ಟೇ ಮಹತ್ವದ ಅವರ ಮತ್ತೊಂದು ಸಾಧನ ಹವ್ಯಾಸಿ ಚಳುವಳಿಯನ್ನು ಕ್ರೋಢೀಕರಿಸಿದ್ದು, ಈ ಹವ್ಯಾಸಿ ಚಳುವಳಿಯನ್ನು 'ಅಲೆವೃತ್ತಿ'ಯನ್ನಾಗಿ ಮಾಡಿಕೊಳ್ಳುವ ಹೊಸ ಸಂಪ್ರದಾಯವೊಂದರ ಪ್ರವರ್ತಕರನ್ನಾಗಿ ಇವರನ್ನು ಗುರುತಿಸಬಹುದು. ಅಖಿಲ ಭಾರತ ಮಟ್ಟದಲ್ಲಿ ಮನ್ನಣೆ ಪಡೆದ ಕೆಲವೇ ಪ್ರತಿಭಾವಂತ ನಿರ್ದೇಶಕರಲ್ಲಿ ಇವರನ್ನು ಗುರುತಿಸಬಹುದಾಗಿದೆ.

ಇವರಲ್ಲದೆ ಪ್ರಾಯೋಗಿಕ ರಂಗಭೂಮಿಯಲ್ಲಿ ಇನ್ನೂ ಹೆಸರಿಸಲೇಬೇಕಾದ ಪ್ರತಿಭಾವಂತ ನಿರ್ದೇಶಕರಲ್ಲಿ ಬೆಂಗಳೂರಿನ ಪ್ರೊ. ಬಿ. ಚಂದ್ರಶೇಖರ್, ಪ್ರಸನ್ನ, ರಾ. ನಾಗೇಶ್, ಕ.ವೆಂ. ರಾಜಗೋಪಾಲ್, ನರಸಿಂಹನ್, ವೆಂಕಟರಾವ್, ಮೈಸೂರಿನ ಸಿಂಧುವಳ್ಳಿ ಅನಂತಮೂರ್ತಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ರಾಮಮೂರ್ತಿ, ಬೆಂಗಳೂರಿನ ಜಿ. ಶ್ರೀನಿವಾಸ್‌ರಂತವರು ರಂಗದ ಹಿನ್ನೆಲೆಯಲ್ಲಿ ಅದರ ಯಶಸ್ವಿಗಾಗಿ ದುಡಿದಿದ್ದಾರೆ. ಬೆಂಗಳೂರಿನ ಪರ್ವತವಾಣಿ, ಕಂಬಾರ, ಜಯಶ್ರೀ, ಪ್ರೇಮಾಕಾರಂತ, ಕೃಷ್ಣಪ್ಪ, ಲೋಕೇಶ್, ಲೋಕನಾಥ್, ವೈಕುಂಠರಾಜು, ವಿಶ್ವನಾಥ ಮಿರ್ಲೆ, ಚೆನ್ನಯ್ಯ, ಜಿ.ಬಿ. ಜೋಷಿ ಹೀಗೆ ಪಟ್ಟಿಯನ್ನು ಬೆಳೆಸುತ್ತಾ ಮೊದಲಾದ ಕಲಾವಿದರು ರಂಗದ ಯಶಸ್ವಿಗೆ ದುಡಿದಿದ್ದಾರೆ.

**ಚಟುವಟಿಕೆಗಳು**

- ಕನ್ನಡ ನಾಟಕ ಸಾಹಿತ್ಯದ ಘಟ್ಟಗಳು ಮತ್ತು ಸ್ವರೂಪವನ್ನು ಬರೆಯಿರಿ.
- ಆಲೀಬಾಬಾ ಮತ್ತು 40 ಜನ ಮಕ್ಕಳು – ಚಂದ್ರಶೇಖರ ಕಂಬಾರರ ಪ್ರಸಿದ್ಧ ಮಕ್ಕಳ ನಾಟಕವನ್ನು ರಂಗದಲ್ಲಿ ಪ್ರಯೋಗಿಸಿರಿ.
- ಕನ್ನಡ ರಂಗಭೂಮಿಗೆ ವೃತ್ತಿ ರಂಗಭೂಮಿ ಮತ್ತು ಕಂಪೆನಿ ನಾಟಕದ ಕೊಡುಗೆಗಳನ್ನು ವಿವೇಚಿಸಿರಿ.
- ಹವ್ಯಾಸಿ ರಂಗಭೂಮಿಯ ವೈಶಿಷ್ಟ್ಯಗಳನ್ನು ತಿಳಿಸಿ ಮತ್ತು ವೃತ್ತಿರಂಗಭೂಮಿಗೂ ಇವುಗಳಿಗೂ ಇರುವ ವ್ಯತ್ಯಾಸವೇನು?

* * * * *

# ಯಕ್ಷಗಾನ

ಯಕ್ಷಗಾನವು ಪಶ್ಚಿಮ ಕರ್ನಾಟಕ ಮತ್ತು ಕಾಸರಗೋಡು ಪ್ರದೇಶದ ಒಂದು ಪ್ರಸಿದ್ಧ ಕಲೆಯಾಗಿದೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಯಕ್ಷಗಾನಕ್ಕೆ ಸಮಾನವಾಗಿ ಬಯಲಾಟ, ದೊಡ್ಡಾಟ, ಸಣ್ಣಾಟ, ಭಾಗವತರಾಟ ಮೊದಲಾದ ಕಲಾಪ್ರಕಾರಗಳು ಪ್ರಚಾರದಲ್ಲಿವೆ. ಹೀಗಿದ್ದರೂ ಯಕ್ಷಗಾನದ ಮೂಲಸ್ವರೂಪ ಮತ್ತು ಅದು ಬೆಳೆದು ಬಂದ ಬಗೆ ವಿಶಿಷ್ಟವಾಗಿಯೇ ಇದೆ. ಯಕ್ಷಗಾನದಲ್ಲಿ ಮುಖ್ಯವಾಗಿ ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂಬ ಎರಡು ಪ್ರಭೇದಗಳಿವೆ.

ಯಕ್ಷಗಾನ ಬಯಲಾಟಗಳಿಗೆ ಒಂದು ಶಾಸ್ತ್ರೀಯ ವಿಧಿವಿಧಾನಗಳನ್ನು ರೂಪಿಸಿ ರಾಗ, ತಾಳ, ಇತ್ಯಾದಿಗಳನ್ನು ವಿಶ್ಲೇಷಿಸಿ ಪಾತ್ರ, ವೇಷಭೂಷಣ, ರಂಗಸಜ್ಜಿಕೆಗಳ ಲಕ್ಷಣದ ವಿವರಗಳನ್ನು ನೀಡಿದವನು ಯಕ್ಷಗಾನಾಚಾರ್ಯ ಪಾರ್ತಿಸುಬ್ಬ ಎಂಬ ಹೇಳಿಕೆಯಿದೆ. ಈತನು ಯಕ್ಷಗಾನ ಬಯಲಾಟದ ಬಗೆಗೆ 'ಸಭಾಲಕ್ಷಣ' ಎನ್ನುವ ಆಕರಗ್ರಂಥವೊಂದನ್ನು ರಚಿಸಿ, ಈ ಕಲೆಯ ಮುನ್ನಡೆಗೆ ದಾರಿ ತೋರಿದ್ದಾನೆ.

ಯಕ್ಷಗಾನ ಕಲೆಗೆ ಸುಮಾರು ನಾಲ್ಕು ಶತಮಾನಗಳಿಗೂ ಹಿಂದಿನ ಇತಿಹಾಸವಿದೆ. ಇದು ಮನೋರಂಜನೆಗಾಗಿ ಇರುವ ಕಲೆಯಾದರೂ ಇದಕ್ಕೆ ಭಕ್ತಿ ಭಾವದ ಹಿನ್ನೆಲೆಯಿದೆ. ಯಕ್ಷಗಾನವು ಹಿಂದಿನ ಕಾಲದಲ್ಲಿ 'ದಶಾವತಾರ ಆಟ'ವೆಂದು ಕರೆಯಲ್ಪಡುತ್ತಿತ್ತು. 'ದಶಾವತಾರ ಮೇಳ'ಗಳು ಆಯಾ ಊರಿನ ಗ್ರಾಮದ ದೇವಸ್ಥಾನಗಳ ಪೋಷಣೆಯಲ್ಲಿ ಬೆಳೆದು ಬಂದವುಗಳಾಗಿದ್ದುವು.

ಭಾಗವತರು, ಶ್ರುತಿ–ಚೆಂಡೆ–ಮದ್ದಳೆ ವಾದಕರು, ವೇಷಧಾರಿಗಳು ಮತ್ತು ಸಹಾಯಕರೆಲ್ಲರ ಕೂಟವನ್ನು 'ಮೇಳ' ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಯಾವುದೇ ಒಂದು ಯಕ್ಷಗಾನ ಮೇಳವು ಪ್ರದರ್ಶನ ಸ್ಥಳ ತಲಪಿದೊಡನೆ, ದೇವಾಲಯದಲ್ಲಾಗಲಿ ಊರಿನ ಪ್ರಮುಖರ ಮನೆಯಲ್ಲಾಗಲಿ 'ತಾಳಮದ್ದಳೆ' ನಡೆಸುವ ಪದ್ಧತಿಯಿದ್ದಿತು. ತಾಳಮದ್ದಳೆಯೆಂದರೆ ತಾಳ ಮತ್ತು ಮದ್ದಳೆಯಿಂದ ಒಡಗೂಡಿದ ಹಾಡು ಎಂದು ಅರ್ಥ. ಮೇಳದವರು ಕಲಾಪ್ರದರ್ಶನಕ್ಕಾಗಿ ಆ ಊರಿಗೆ ಬಂದಿದ್ದಾರೆ ಎಂಬುದನ್ನು 'ದೇವತಾಸ್ತುತಿ'ಯೊಂದಿಗೆ ಜನರಿಗೆ ತಿಳಿಯಪಡಿಸುವುದೇ ಇದರ ಉದ್ದೇಶ.

ಯಕ್ಷಗಾನಕ್ಕೆ 'ಬಯಲಾಟ' ಎಂಬ ಹೆಸರೂ ಇದೆ. ವಿಶಾಲವಾದ ಬಯಲಿನಲ್ಲಿ ನೂರಾರು ಜನ ಕುಳಿತು ನೋಡಲು ಸಾಧ್ಯವಾಗುವಂತೆ, ರಂಗವೇದಿಕೆಯನ್ನು ನಿರ್ಮಿಸಿ ಪ್ರದರ್ಶನ ನಡೆಸುತ್ತಿದ್ದರು. ಬಯಲಲ್ಲಿ ಆಡುವ ಆಟವಾದುದರಿಂದ ಇದಕ್ಕೆ ಬಯಲಾಟ ಎಂಬ ಹೆಸರು ಬಂದಿದೆ. ರಂಗಸ್ಥಳದ ಪಕ್ಕದಲ್ಲಿಯೇ 'ಚೌಕಿ' ಇರುತ್ತದೆ. ಇಲ್ಲಿ ವೇಷಧಾರಿಗಳು ತಂತಮ್ಮ ವೇಷಗಳನ್ನು ಹಾಕಿಕೊಳ್ಳುತ್ತಾರೆ. ಬಣ್ಣದ ಪೆಟ್ಟಿಗೆಗಳು, ದೇವರ ಪೆಟ್ಟಿಗೆ, ವೇಷ–ಭೂಷಣಗಳೆಲ್ಲ ಚೌಕಿಯಲ್ಲೇ ಇರುತ್ತವೆ. ಹಿಂದಿನ ದಿನಗಳಲ್ಲಿ, ಆಟವಾಡುವ ದಿನ ಸಂಜೆಯಾದೊಡನೆ ಊರಿನ ಎಲ್ಲರಿಗೂ ಕೇಳಿಸುವ ಸಲುವಾಗಿ 'ಕೇಳಿ' ಬಾರಿಸುವ ರೂಢಿ ಇದ್ದಿತು. ಧ್ವನಿವರ್ಧಕ, ಕರಪತ್ರ ಮುಂತಾದ ಪ್ರಚಾರಸಾಧನಗಳು ಇಲ್ಲದಿದ್ದ ಕಾಲದಲ್ಲಿ ಈ ಕೇಳಿಯೇ ಪ್ರಚಾರದ ಕೆಲಸ ಮಾಡುತ್ತಿತ್ತು.

ಬಯಲಾಟದ ಆರಂಭದಲ್ಲಿ, ಚೌಕಿಯಲ್ಲಿ ಭಾಗವತರು ಇತರ 'ಹಿಮ್ಮೇಳ' ದವರ ಜತೆಗೂಡಿ 'ದೇವತಾಸ್ತುತಿ' ಮಾಡುತ್ತಾರೆ. ಆ ಬಳಿಕ ಹಿಮ್ಮೇಳದವರು ರಂಗಸ್ಥಳಕ್ಕೆ ಬಂದು ಪ್ರದರ್ಶನಕ್ಕೆ ಅಣಿಯಾಗುತ್ತಾರೆ. ಶ್ರುತಿ ಹಿಡಿಯುವವ, ಭಾಗವತ, ಮದ್ದಳೆಗಾರ,

ಚೆಂಡೆವಾದಕ ಮತ್ತು ಚಕ್ರತಾಳ ಬಾರಿಸುವವ–ಇವರೇ ಹಿಮ್ಮೇಳದವರು. ಶ್ರುತಿ ಹಿಡಿಯುವವ, ಭಾಗವತ ಮತ್ತು ಮದ್ದಳೆಗಾರರು ಬಯಲಾಟದ ಪ್ರಾರಂಭದಿಂದ ಕೊನೆಯ ವರೆಗೆ ಇರಬೇಕಾದ ವ್ಯಕ್ತಿಗಳು : ಅಂತೆಯೇ ಸ್ತ್ರೀವೇಷ ಮತ್ತು ಹಾಸ್ಯಗಾರನ ವೇಷ – ಇವುಗಳು ಕೂಡಾ ಕೊನೆಯ ವರೆಗೆ ಇರಬೇಕಾಗುತ್ತದೆ.

ಬಯಲಾಟವು 'ಕೋಡಂಗಿ ಕುಣಿತ' ದಿಂದ ಆರಂಭವಾಗುತ್ತದೆ. ತರುವಾಯ ಬಾಲಗೋಪಾಲ, ಸ್ತ್ರೀವೇಷಗಳ ಕುಣಿತ ನಡೆಯುತ್ತದೆ. ಸ್ತ್ರೀವೇಷದ ಕುಣಿತ ನಡೆಯುತ್ತಿರುವಾಗಲೇ ಹಾಸ್ಯಗಾರನ ಪ್ರವೇಶವಾಗುತ್ತದೆ. ಇವೆಲ್ಲ ಮುಗಿದ ಬಳಿಕ, 'ಪ್ರಸಂಗ' ಆರಂಭವಾಗುವ ಮುನ್ನ ಪೀಠಿಕೆ ಬಾರಿಸಲಾಗುತ್ತದೆ. ಇದನ್ನು 'ಪ್ರಸಂಗ ಪೀಠಿಕೆ' ಎನ್ನುತ್ತಾರೆ. ಪ್ರಸಂಗ ಪೀಠಿಕಯ ಬಳಿಕ ಪ್ರಸಂಗ ಆರಂಭವಾಗಿ ಬೆಳಗಿನ ವರೆಗೂ ಜನರಿಗೆ ಮನೋರಂಜನೆ ಮತ್ತು ಪುರಾಣದರ್ಶನದ ಔತಣವಾಗುತ್ತದೆ. ರಂಗದಲ್ಲಿ ಪ್ರಸಂಗ ಆರಂಭವಾಗುವ ಹಂತದ ವರೆಗಿನ ಭಾಗವನ್ನು 'ಪೂರ್ವರಂಗ' ಎಂದು ಕರೆಯುತ್ತಾರೆ.

ಹಿಂದಿನ ಕಾಲದಲ್ಲಿ ದೊಂದಿಯ ಬೆಳಕಿನಲ್ಲಿಯೇ ಬಯಲಾಟ ನಡೆಯುತ್ತಿತ್ತು. ರಂಗಸ್ಥಳದಲ್ಲಿ 'ದೇವರ ದೀಪ'ವನ್ನು ಬೆಳಗಿನ ತನಕವೂ ಉರಿಸಿಡುತ್ತಿದ್ದರು. ಕಾಲಕ್ರಮೇಣ ದೊಂದಿ ಬೆಳಕಿನ ಬದಲಾಗಿ ಗ್ಯಾಸ್‌ಲೈಟ್ – ವಿದ್ಯುದ್ದೀಪಗಳು ಬಳಕೆಯಾಗತೊಡಗಿದವು. ಟೆಂಟಿನಾಟಗಳು ಬರುತ್ತಲೆ, ಬಿದಿರು ಮತ್ತು ತೆಂಗಿನ ಮಡಲುಗಳಿಂದ ನಿರ್ಮಿಸಲಾಗುತ್ತಿದ್ದ ರಂಗಸ್ಥಳ ಮತ್ತು ಚೌಕಿಗಳ ರೂಪದಲ್ಲಿ ಪರಿಷ್ಕಾರ ಉಂಟಾಯಿತು. ಪ್ರೇಕ್ಷಕರಿಗಾಗಿ ಆಸನಗಳ ವ್ಯವಸ್ಥೆಯೂ ಆರಂಭವಾಯಿತು.

ಭಾಗವತನೇ ಯಕ್ಷಗಾನ ಪ್ರದರ್ಶನದ ಸೂತ್ರಧಾರ. ಯಕ್ಷಗಾನ ಮೇಳದಲ್ಲಿ ಸಾಮಾನ್ಯವಾಗಿ ಇಬ್ಬರು ಭಾಗವತರಿರುತ್ತಾರೆ. ಪ್ರಸಂಗ ಆರಂಭವಾಗುವ ಮೊದಲು ರಂಗಕ್ಕೆ ಬರುವ ಭಾಗವತನನ್ನು 'ಸಂಗೀತ ಭಾಗವತ' ಎಂದೂ ಅನಂತರ ಬರುವ ಭಾಗವತನನ್ನು 'ಪ್ರಧಾನ ಭಾಗವತ' ಎಂದೂ ಕರೆಯುತ್ತಾರೆ. ಸಂಗೀತ ಭಾಗವತನು ದೇವತಾಸ್ತುತಿಯಿಂದ ತೊಡಗಿ ಪ್ರಸಂಗದ ಆರಂಭದ ವರೆಗೆ ರಂಗದಲ್ಲಿರುತ್ತಾನೆ. ಪ್ರಸಂಗದ ಆರಂಭದಿಂದ ಮಂಗಳದ ವರೆಗೂ ಪ್ರಧಾನ ಭಾಗವತನೇ ರಂಗದಲ್ಲಿರುತ್ತಾನೆ.

ಯಕ್ಷಗಾನ ಬಯಲಾಟಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತದ ಕಥೆಗಳು ಒಳಗೊಂಡಿರುವ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ. ವಾಲಿವಧೆ, ಇಂದ್ರಜಿತು ಕಾಳಗ, ಮೈರಾವಣ ಕಾಳಗ, ಕರ್ಣಾರ್ಜುನ ಕಾಳಗ, ದುಶ್ಯಾಸನವಧೆ, ಕೃಷ್ಣಲೀಲೆ–ಕಂಸವಧೆ, ನರಕಾಸುರವಧೆ, ದಕ್ಷಾಧ್ವರ, ವೀರಮಣಿ ಕಾಳಗ, ತಾಮ್ರಧ್ವಜ ಕಾಳಗ ಮೊದಲಾದವುಗಳು ಯಕ್ಷಗಾನದ ಕೆಲವು ಪ್ರಸಿದ್ಧ ಪೌರಾಣಿಕ ಪ್ರಸಂಗಗಳಾಗಿವೆ. ಭಾಗವತರ ಹಾಡಿಗೆ ಅನುಗುಣವಾಗಿ ವೇಷಧಾರಿಗಳು ಅಭಿನಯ ಮಾಡುತ್ತಾರೆ. ಹಾಡು ಮುಗಿದ ಬಳಿಕ ಅದರ ಅರ್ಥವನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾರೆ.

ಯಕ್ಷಗಾನದಲ್ಲಿ ವಿವಿಧ ರೀತಿಯ ರಾಗ ಮತ್ತು ತಾಳಗಳ ಬಳಕೆಯಾಗುತ್ತದೆ. ಆನಂದ ಭೈರವಿ, ಕಲ್ಯಾಣಿ, ಕಾಂಬೋಧಿ, ಶಂಕರಾಭರಣ, ಮೋಹನ ಮೊದಲಾದುವು ಪ್ರಧಾನವಾಗಿ ಬಳಕೆಯಾಗುವ ರಾಗಗಳು. ಮಟ್ಟೆ, ತ್ರಿವುಡೆ, ಆದಿ, ಅಷ್ಟ, ಝಂಪೆ ಮೊದಲಾದುವು ಮುಖ್ಯವಾಗಿ ಬಳಕೆಯಾಗುವ ತಾಳಗಳು.

ಯಕ್ಷಗಾನದಲ್ಲಿ ಹಲವು ವಿಧದ ವೇಷಗಳಿರುತ್ತವೆ. ಪೀಠಿಕೆ ವೇಷ, ಇದಿರುವೇಷ, ಪುಂಡುವೇಷ, ರಾಕ್ಷಸವೇಷ, ಬಣ್ಣದ ವೇಷ ಮೊದಲಾದುವುಗಳೆಲ್ಲ ತಮ್ಮ ಮುಖವರ್ಣಿಕೆ, ಉಡುಗೆ–ತೊಡುಗೆಗಳಿಂದ ರಂಗದಲ್ಲಿ ಮೆರೆಯುತ್ತವೆ. ಪ್ರಸಂಗ ಪೀಠಿಕೆ ಮುಗಿದ ತತ್‌ಕ್ಷಣ ರಂಗಸ್ಥಳಕ್ಕೆ ಬರುವ ಪಾತ್ರವೇ 'ಪೀಠಿಕೆ ವೇಷ'. ಕಥಾಭಾಗಗಳನ್ನು ಅನುಸರಿಸಿ, ಹೆಚ್ಚಾಗಿ ದೇವೇಂದ್ರನೋ, ಧರ್ಮರಾಯನೋ, ದೇವತಾ ಪಾತ್ರಗಳೋ ಪೀಠಿಕೆ ವೇಷಗಳಾಗಿ ಇರುವುದು ಸಂಪ್ರದಾಯ. ಪೀಠಿಕೆವೇಷಕ್ಕೆ ಇದಿರಾಗಿ ಪುರಾಣೇತಿಹಾಸಗಳ ಸಂದೇಶ ಸಾರಲು ಪೂರಕವಾಗಿರುವ ಪಾತ್ರವನ್ನು 'ಇದಿರುವೇಷ' ಎನ್ನುತ್ತಾರೆ. 'ಕರ್ಣಾರ್ಜುನ ಕಾಳಗ' ಪ್ರಸಂಗದ ಕರ್ಣನ ಪಾತ್ರವು ಇದಿರುವೇಷಕ್ಕೆ ಒಂದು ಉದಾಹರಣೆಯಾಗಿದೆ. ಅಭಿಮನ್ಯು, ಪ್ರದ್ಯುಮ್ನ ಮೊದಲಾದ ವೇಷಗಳು ಪುಂಡುವೇಷಗಳು. ಚಂಡ–ಮುಂಡ, ಮಧು–ಕೈಟಭ, ಖರತ್ರಿಶಿರ, ರಾವಣ, ಕುಂಭಕರ್ಣ ಇವೆಲ್ಲ ರಾಕ್ಷಸ ವೇಷಗಳು. ರುದ್ರಭೀಮ, ವೀರಭದ್ರ, ಮಹಿಷಾಸುರ ಮೊದಲಾದವುಗಳು ಬಣ್ಣದ ವೇಷಗಳು. ಅಕ್ಕಿಹಿಟ್ಟಿನ ಚುಟ್ಟಿ, ಹತ್ತಿಯ ಉಂಡೆ, ಕೆಂಪು–ಕೆಂಪಿನ ಬಣ್ಣಗಾರಿಕೆ ಇವೆಲ್ಲವೂ ಭಯಾನಕ ಮುಖವರ್ಣಿಕೆಯ ವೈಶಿಷ್ಟ್ಯಗಳಾಗಿವೆ. ಹಾಗೆಯೇ ವೇಷಗಳು ಧರಿಸುವ ಕಿರೀಟಗಳೂ ವೈವಿಧ್ಯಪೂರ್ಣವಾಗಿವೆ. ರಾವಣ, ಮೈರಾವಣ ಮುಂತಾದ ರಾಕ್ಷಸಪಾತ್ರಗಳಿಗೆ 'ಕೇಶಭಾರ ಕಿರೀಟ' ವನ್ನು ಇಡುವುದು ಸಂಪ್ರದಾಯ. ಇವುಗಳನ್ನು ಕೇಶವಾರಿ

ಕಿರೀಟ, ಕೇಸರಿ ತಟ್ಟೆ, ತಡ್ಪೆ ಕಿರೀಟ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಬಯಲಾಟದ ಹುಟ್ಟಿನ ಕಾಲದಲ್ಲಿ ಹಗುರವಾದ ಮರದ ಸಲಕರಣೆಗಳ ಮುಖವಾಡ ಧರಿಸಿಯೇ ವೇಷಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅನಂತರ ಬಂದ ಪರಿಷ್ಕಾರದ ಹಂತಗಳಲ್ಲಿ ಮುಖವಾಡಗಳಿಗೆ ಬದಲಾಗಿ ಬಣ್ಣಗಾರಿಕೆ(ಮುಖವರ್ಣಿಕೆ) ಹುಟ್ಟಿಕೊಂಡಿತು. ಹಾಗೆಯೇ ಕಿರೀಟ, ಕರ್ಣಾಭರಣ, ತೋಳ್ಕಟ್ಟು, ಕೈಕಟ್ಟು, ಡಾಬುಗಳ ತಯಾರಿಯಲ್ಲಿ ಈಗ ಮಣಿ ಸಾಮಗ್ರಿಗಳನ್ನು ಬಳಸುತ್ತಾರೆ.

ಯಕ್ಷಗಾನದಲ್ಲಿ ಸ್ತ್ರೀವೇಷಗಳು ವಿಶೇಷ ವರ್ಣಾಲಂಕಾರದ ಉಡುಗೆ–ತೊಡುಗೆ, ಆಭರಣಗಳನ್ನು ಧರಿಸಿ ರಂಗದಲ್ಲಿ ಕಾಣಿಸಿಕೊಳ್ಳುತ್ತವೆ. ತಲೆಯ ಮೇಲೆ ಕಿರಣ ಸೂಸುವ ಎಲೆಯಾಕಾರದ ಕಿರೀಟಗಳನ್ನು ಸ್ತ್ರೀ ಪಾತ್ರಗಳು ಧರಿಸುತ್ತವೆ. ಪುರುಷ ವೇಷಗಳ ಕೇದಿಗೆ ಮುಂಡಾಸು, ತುರಾಯಿ ಕಿರೀಟ ಮುಂತಾದ ಶಿರೋಲಂಕಾರಗಳಲ್ಲಿ ವ್ಯತ್ಯಾಸವಿದೆ. ನಾರದ, ಸನ್ಯಾಸಿ ಮೊದಲಾದ ವೇಷಗಳು ಪ್ರತ್ಯೇಕ ರೀತಿಯದ್ದಾಗಿವೆ.

ಯಕ್ಷಗಾನ ಬಯಲಾಟದ ಪ್ರದರ್ಶನಗಳಲ್ಲಿ ವಿಭಿನ್ನ ರಸಪ್ರಧಾನವಾದ ವಿಪುಲ ಸನ್ನಿವೇಶಗಳಿರುತ್ತವೆ. ವಿವಿಧ ರಸಭಾವಗಳು, ಸಂಗೀತ, ನೃತ್ಯ, ಅಭಿನಯ, ಚಿತ್ರ ಮತ್ತು ಸಾಹಿತ್ಯದ ಮೂಲಕ ಹೃದಯಸ್ಪರ್ಶಿಯಾಗಿ ಪ್ರದರ್ಶಿಸಲ್ಪಡುವುದರಿಂದಲೇ ಯಕ್ಷಗಾನವು ದೇಶ ವಿದೇಶಗಳಲ್ಲಿ ಮನ್ನಣೆ ಪಡೆಯುವಂತಾಗಿದೆ. ರಾತ್ರಿ ದೇವತಾಸ್ತುತಿಯಿಂದ ಮೊದಲ್ಗೊಂಡು, ಬೆಳಗಿನ ವರೆಗೆ ನಡೆಯುವ ಯಕ್ಷಗಾನ ಬಯಲಾಟವು ರಂಗಸ್ಥಳದಲ್ಲಿ ಮಂಗಳ ಹಾಡಿದ ಬಳಿಕ  ಚೌಕಿಯಲ್ಲಿ ದೇವರಿಗೆ ಆರತಿ ಬೆಳಗುವುದರೊಂದಿಗೆ ಪರಿಸಮಾಪ್ತಿಗೊಳ್ಳುತ್ತದೆ.

## ತಾಳಮದ್ದಳೆ

ಭಾಗವತರು, ಇತರ ಹಿಮ್ಮೇಳದವರು ಮತ್ತು ಪಾತ್ರಧಾರಿಗಳು ಒಂದೇ ಕಡೆ ಕುಳಿತು, ಆಯ್ದುಕೊಂಡಿರುವ ಪ್ರಸಂಗವನ್ನು ಆಡುವ ಕ್ರಮವೇ ಈಗಿನ 'ತಾಳಮದ್ದಳೆ'. ಇಲ್ಲಿ ಮಾತುಗಾರಿಕೆಯೇ ಮುಖ್ಯ.  ವೇಷ, ಕುಣಿತಗಳಿಗೆ ಅವಕಾಶವಿಲ್ಲ. ಭಾಗವತರು ಹಾಡಿದ ಹಾಡಿಗೆ, ಪಾತ್ರಧಾರಿಗಳು ಆಶುರೂಪದಲ್ಲಿ ಅರ್ಥಹೇಳುವುದೇ ತಾಳಮದ್ದಳೆಯ ವೈಶಿಷ್ಟ್ಯವಾಗಿದೆ. ಈ ತಾಳಮದ್ದಳೆಯನ್ನು 'ಯಕ್ಷಗಾನ ಕೂಟ' ಎಂದೂ ಕರೆಯುತ್ತಾರೆ.

## ಚಟುವಟಿಕೆ

- ಇಂದಿನ ದಿನಗಳಲ್ಲಿ ಯಕ್ಷಗಾನದ ಕುರಿತಾದ ಜನರ ಮನೋಭಾವ, ಏಳಿಗೆ, ಬೀಳು ಇವುಗಳ ಕಾರಣಗಳನ್ನು ವಿಶ್ಲೇಷಿಸಿ 'ಇಂದು ಯಕ್ಷಗಾನದ ಸ್ಥಿತಿಗತಿ – ಕಾರಣಗಳು ಮತ್ತು ಪರಿಹಾರಗಳು' ಎನ್ನುವ ವಿಷಯದ ಕುರಿತು ವಿಚಾರಗೋಷ್ಠಿಯಲ್ಲಿ ಮಂಡಿಸಲು ಒಂದು ಪ್ರಬಂಧ ಬರೆಯಿರಿ.

* * *